
START

START


START

MICRO FILMED
BY

KARNATAKA STATE
ARCHIVES

1991

ದೂರಸಂಪರ್ಕ ತಂತ್ರಜ್ಞಾನ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು

ಅಧ್ಯಾಯ - 8

ಸ್ಥಾಪನೆ : ೧೮೭೫

1875

ಜೀವನ ಶಿಕ್ಷಣ ಪಬ್ಲಿಕೇಷನ್ಸ್

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರಕಾರ್ಯ ೧೯೮೯



ಶತಮಾನೋತ್ತರ ಬೆಳ್ಳಿ ಸಮ್ಮ

(ಅಖಿಲ ಕರ್ನಾಟಕ ಬಂದ್)

ಕೆ.ಚೆನ್ನಬಸಪ್ಪನವರ

ಅಧ್ಯಕ್ಷರು ಗುರುಕುಲ

ವರ್ಷ 1875 10-11 ನೇಯ ಸಂಪುಟ

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂಪುಟ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಚೆಪ್ಪಾಟಿ ಚನ್ನಬಸಪ್ಪ ವೈದ್ಯ. ರೂಪದರಸ್ತೆ. ಧಾರವಾಡ

ಕನ್ನಡ ಶಾಲಾಪತ್ರಿಕೆ
CANARESE
SCHOOL PAPER.

ಪುಸ್ತಕ ೧೦] [ಸಂಚಿಕೆ ೧೦.

ಬೆಳಗಾವಿ, ಮಾಹೆ ಜಾನೇವಾರೀ ೧೮೭೫.

ಅನುಕ್ರಮಣಿಕೆಯು.

ವಿಷಯಗಳು.....ಪುಟ.

ಶಾಲಾ ಸುಧಾರಣಾ ಸಂಬಂಧದ ವೃತ್ತಾಂತಗಳು.....೨೧೭
ಕನ್ನಡ ತಾನೇ ನೆರವಾಗುವದು.....೨೨೧
ಪಟ್ಟಾಭ್ಯುದಯ ಗುರುಬಸವಪಕವಿ—ಮನೋವಿಜಯ ಕುಸುಮ
ಷಟ್ಪದಿ.....೨೨೩
ನೋಟೀಸುಗಳು.....೨೨೫
ಪತ್ರವ್ಯವಹಾರವು.....೨೩೭

CONTENTS.....Page.
Educational News.....217
Self Help.....221
POET—Shtkaya Gurubasva Meter Manovijaya Kusumashatpadi.....923
Notices.....225
Correspondence.....237

ಸಿದ್ಧನಾಥ ವಾಚನಮಂದಿರ
ಮೊರಬ. ಜಿ. ಧಾರವಾಡ.

BELGAUM.
Printed at the Belgaum Samachar Press.

ಶಾಲಾಪತ್ರಕವ್ಯ.

ಪುಸ್ತಕ ೫೦] [ಸಂಚಿಕೆ ೧೧

ಬೆಳಗಾವಿ, ಮಾಹೆ ಜಾನೇವಾರೀ ೧೮೭೫.

EDUCATIONAL NEWS.

ವಿದ್ಯಾ ಸುಧಾರಣೆಯ ಸಂಬಂಧವಾದ ವೃತ್ತಾಂತಗಳು.

ಮುಂಬೈನ ಇನಸ್ಪೆಕ್ಟರ ಸಾಹೇಬರು ಈ ತಿಂಗಳ ಸಂಕ್ರಮಣಾರ್ಧವಾಗಿ ಬೇಗ ಹೊರಡತಕ್ಕವರಿರುತ್ತಾರೆ. ಪಲು ಕಲಾದಗೀ ಜಿಲ್ಲೆಗೆ ಹೋಗುತ್ತಾರೆಂತ ಕೇಳು ವೆ. ಬೆಳಗಾಂವೀ ಧಾರವಾಡಗಳ ಡೆಪುಟೀ ಇನಸ್ಪೆ ಕರು ಇದೇ ತಿಂಗಳಲ್ಲಿ ತಮ್ಮ ತಮ್ಮ ಪ್ರಾಂತಗಳಲ್ಲಿ ಗಲಿಕ್ಕೆ ಬೇಗ ಹೊರಡುವರು.

ಬೆಳಗಾಂವಿಯ ಹಾಯಸ್ಕೂಲಿನ ಹೆಡ್‌ಮಾಸ್ತರರಾದ ಗವರ್ಡ ಸಾಹೇಬರು ಮೂರು ತಿಂಗಳ ರಜೆಯನ್ನು ತ ಂಡಿರುತ್ತಾರೆ. ಅವರ ಸ್ಥಳದಲ್ಲಿ ಪುಣೆಯ ಹಾಯ ಲಿನ ಮೊದಲನೇ ಅಸಿಸ್ಟಾಂಟ ಮಾಸ್ತರರಾದ ನಾರಾ ಣ ವಿನಾಯಕ ಸಾಠೆ ಯೆಂಬವರು ಸದ್ಯಕ್ಕೆ ಸೇವಿಸ ಟ್ಟಿರುತ್ತಾರೆ.

ಕನ್ನಡ ತ್ರಾನ್ಸ್ಲೇಟರರ ಆಫೀಸು ಕಲವು ದಿವಸಗಳ ಮೇಲೆ ಪುನಃ ಬೆಳಗಾಂವಿಗೆ ಹೋಗುವದೆಂದು ತೋರುತ್ತದೆ. ಅಸಿಷ್ಟಾಂಟ ತ್ರಾನ್ಸ್ಲೇಟರರಾದ ಗಂಗಾಧರ ಮಹಾಳೇಶ್ವರ ತೂರ್ಮರಿ ಇವರು ಹುಗ ಬೆಳಗಾಂವಿಯಲ್ಲಿ ಇರುತ್ತಾರೆ. ಇವರು ತಮ್ಮ ಭಾಷಾಂತರದ ಕೆಲಸವನ್ನು ಮಾಡಿಕೊಂಡು ಅಲ್ಲಿಯ ಹಾಯಸ್ಕೂಲಿನಲ್ಲಿ ಕನ್ನಡ ಕಲಿಸುವ ಕೆಲಸವನ್ನು ಸಹ ಮಾಡಬೇಕೆಂತ ಮಿ. ಇನಸ್ಪೆಕ್ಟರ ಹೊರೆಗಳ ಅಪ್ಪಣೆಯಾಗಿರುತ್ತದೆ. ಆ ಸಂಬಂಧವಾಗಿ ಅವರಿಗೆ ತಿಂಗಳಿಗೆ ೫೦ ರೂಪಾಯಿ ಸಂಬಳ ಶಿಕ್ಕುವದು.

ಸವಣೂರ ನವಾಬ ಸಾಹೇಬರಿಗೆ ವಿದ್ಯಾಭ್ಯಾಸ ಮಾಡಿಸುವದಕ್ಕೋಸ್ಕರವಾಗಿ ತಿಂಗಳಿಗೆ ೬೦೦ ರೂಪಾಯಿ ಸಂಬಳ ಗೊತ್ತು ಮಾಡಿ, ಬಿ. ಏ. ಪರೀಕ್ಷೆಯಲ್ಲಿ ಪಾಸ್ ಆದಂಥ ಶಿಕ್ಷಕನೊಬ್ಬನನ್ನು ಬೇಗ ನೇಮಿಸುವರೆಂತ ಕೇಳುತ್ತೇವೆ. ಈಗಿದ್ದ ಶಿಕ್ಷಕನಿಗೆ ೫೦ ರೂಪಾಯಿ ಸಂಬಳ ನಿಕ್ಕುತ್ತದೆ.

ಕೊಲ್ಲಾಪುರದ ಛತ್ರಪತಿ ಮಹಾರಾಜರು, ಮುಧೋಳದ ರಾಜೇಸಾಹೇಬರು, ಸಾವಂತವಾಡಿ ರಾಜೆಸಾಹೇಬರು ಇವರು ಮೂವರು ಅಲ್ಪ ವಯಸ್ಕರಾದ ಸಂಸ್ಥಾನಿಕರು ಈಗ ಕೊಲ್ಲಾಪುರದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಇವರು ಮೂವರು ಗೋಕಾವಿಯ ತಹಸಲ ನೋಡುವದಕ್ಕೋಸ್ಕರವಾಗಿ ಹೋದ ತಿಂಗಳಲ್ಲಿ ಹೊರಟಿರುತಾ

ಕ್ಕಿರಿಗಿ ಬರುವಾಗ ಬೆಳಗಾಂವಿಗೆ ಬಂದು ಕೊಲ್ಲಾಪುರಕ್ಕೆ ಹೋಗುವರೆಂತ ಕೇಳುತ್ತೇವೆ.

ಹೋದ ವರ್ಷ ಈ ದಕ್ಷಿಣಭಾಗದ ಇನಸ್ಪೆಕ್ಟರರಾಗಿದ್ದ ಮೆ. ಫ್ಲೀಟ ಧೋರಗಳು ದಕ್ಷಿಣ ಮಹಾರಾಷ್ಟ್ರದ ಅಭಿಪ್ಪಾಟಿ ಪೋಲಿಟಿಕಲ್ ಏಜೇಂಟರಾಗಿ ಅಕ್ಟಿಂಗ ಪ್ರಕಾರ ನೇಮಿಸಲ್ಪಟ್ಟರು.

ಈ ವರ್ಷದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಡೋಬ ಇಡಿಡಿ ಜನ ಉಮೇದವಾರರಲ್ಲಿ ೨೬೦ ಮಂದಿ ಮಾತ್ರ ಪಾಸ್ ಆದರು. ಅಷ್ಟು ಸ್ವಲ್ಪ ಜನರು ಇಳಿದ ಬಗ್ಗೆ ವರ್ತಮಾನಪತ್ರಗಳಲ್ಲಿ ಬಹಳ ಚರ್ಚೆಯು ನಡಿದೆ.

ಮುಂದಿನ ಕೀಗಳಲ್ಲಿ ಮುಂಬ್ರಾದಲ್ಲಿ ಆಗತಕ್ಕ 'ಜನರಲ್ ಪ್ರೊಫ್ಟ ಎಗ್ಜಾಮಿನೇಶನ್' ಯೆಂಬ ಪರೀಕ್ಷೆಗೆ ೫೦೦೦ ಜನ ಉಮೇದವಾರರು ಹೋಗತಕ್ಕವರಿರುತ್ತಾರಂತೆ! ಅಷ್ಟು ಮಂದಿ ಉಮೇದವಾರರು ಜೇನಾ ದೇಶಮೊತ್ತಾಗಿ ಭೂಮಿಯಲ್ಲಿ ಯಾವ ದೇಶದಲ್ಲಿಯೂ ಯೆಂದೂ ಪರೀಕ್ಷೆಗೆ ಹೋದದ್ದು ಕೇಳಲ್ಲವೆಂತ ಟೈಮ್ಸ ಆಫ್ ಇಂಡಿಯಾ ಪತ್ರಕರ್ತರು ಬರಿಯುತ್ತಾರೆ.

ಮಹಾರಾಷ್ಟ್ರ ಪ್ರಾಂತದಲ್ಲಿ ಮೂವತ್ತರ ಜನರು ತಮ್ಮ ತಮ್ಮ ಎರಡು ಸುಧಾರಿಸಬೇಕೆಂದು ಸಕ್ಕರ್ಗಲ್ಲರು ಆಗಿರುತ್ತದೆ.

ಡಾಕ್ಕಾ ಪಟ್ಟಣದ ಜಗನ್ನಾಥ ಸ್ಕೂಲೆಂಬ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಕೊಡುವ ಸಮಯದಲ್ಲಿ ಲಿಫ್ವಿಂಗಸ್ತನ್ನೆಂಬ ವಿದ್ವಾಂಸರು ಅಂದದ್ದೇನಂದರೆ– ಬಂಗಾಲ ಪ್ರಾಂತದಲ್ಲಿ ವಿದ್ಯಾದ ಪ್ರಸಾರವು ಬಹು ವೇಗದಿಂದ ನಡಿದಿರುತ್ತದೆ. ಈ ಪ್ರಾಂತವು ವಿದ್ಯಾದಲ್ಲಿ ಸ್ವಲ್ಪ ದಿವಸದೊಳಗೆ ಇಂಗ್ಲಂಡದೊಳಗಿನ ಆಕ್ಸ್‌ಫರ್ಡ, ಕೇಂಬ್ರಿಜ್ಜೆಂಬಲ್ಲಿಯ ಪ್ರಖ್ಯಾತವಾದ ಯುನಿವರ್ಸಿಟಿಗಳಿಗೆ ಸರಿ ಯಾಗುವದು.

ಸೊಲ್ಲಾಪುರದವನೊಬ್ಬ ಅತಿ ಚತುರನಾದ ಸಿದ್ಧರಾವಪ್ಪನೆಂಬ ಶಿಲ್ಪಿಯು ಮೇಲಾದ ಚೂರಿಗಳನ್ನೂ, ಪಟಾಕೆಗಳ ದಸ್ತುಗಳನ್ನೂ ಬಂಗಾರದ ಬಣ್ಣದ ಮುಶಿಯನ್ನೂ ಮಾಡಿಕೊಂಡು ಪುಣೆಯೊಳಗಿನ ವಿದ್ವಜ್ಜನರಿಗೆ ತೋರಿಸಲಿಕ್ಕೆ ಜೋಗಿರುತ್ತಾನೆ. ಇವನು ಮಾಡಿದ ಪದಾರ್ಥಗಳಿಗೂ ಬಾಜಾರಿನಲ್ಲಿ ಬರುವ ಚೆನಯೀ ಪದಾರ್ಥಗಳಿಗೂ ಯೇನು ಹೆಚ್ಚು ಕಡಿಮೆ ಯಿಲ್ಲ.

ಪಾರಿಸ ಪಟ್ಟಣದವನೊಬ್ಬ ರಸಾಯನ ಶಾಸ್ತ್ರಜ್ಞನು ಬೆಣ್ಣೆಯ ಪೃಥಕ್ಕರಣ ಮಾಡಿ ಅದರೊಳಗಿನ ಮೂಲತತ್ವಗಳನ್ನು ಮೊದಲು ಗೊತ್ತು ಹಚ್ಚಿದನು. ಆ ಮೇಲೆ ಅವನು ಆ ಮೂಲತತ್ವಗಳನ್ನು ಕೂಡಿಸಿ ರಸಾಯನ ಕ್ರಿಯೆಯಿಂದ ಮೊಸ ಬೆಣ್ಣೆಯನ್ನು ಮಾಡಿದನು. ಈ ಬೆಣ್ಣೆಯು ಯೆಲ್ಲ ಬಗೆಯಿಂದ ಸ್ವಾಭಾವಿಕ ಬೆಣ್ಣೆಯ ಹಾಗೇ ಇದ್ದದ್ದಲ್ಲದೆ, ಇದು ಹೆಚ್ಚು ದಿವಸ ತಾಳುತ್ತದೆ;

SELF HELF.
ತನಗೆ ತಾನೇ ನೆರವಾಗುವದು.

ತಪ್ಪದೆ ನಿಯಮದಿಂದ ಕೆಲಸ ಮಾಡುವದು ಅವನು ಬ
ಶ ಜಾಗ್ರತೆಯಿಂದ ಕಲಿತುಕೊಂಡ ಗುಣಗಳಲ್ಲಿ ಒಂದಾ
ಗಿತ್ತು; ಹೀಗೆ ಮಾಡದಿದ್ದರೆ ಅವನಿಂದ ಅಷ್ಟು ದೊಡ್ಡ
ದೊಡ್ಡ ಕೆಲಸಗಳು ಆಗುತ್ತಿದ್ದಿಲ್ಲ. ಹೊರಗಿಂದ ಪತ್ರಗ
ಳು ಬಂದವೆಂದರೆ, ಯೇನಾದರೂ ವಿಚಾರದ, ಅಥವಾ,
ಕೋಷದ ಮೂಲಕವಾಗಿ ಅವುಗಳ ಉತ್ತರಗಳನ್ನು ಬರೆ
ಯುವದು ಮರುದಿವಸಕ್ಕೆ ಮಾಡುವದು ಅವಶ್ಯಕವಿಲ್ಲದಿದ್ದರೆ,
ಅವುಗಳನ್ನು ಬಂದ ದಿವಸವೇ ಬರೆದು ಬಿಡುತ್ತಿದ್ದನು.
ಈ ವ್ಯವಸ್ಥೆಯನ್ನು ಇಡದೆ ಹೋಗಿದ್ದರೆ, ಇಷ್ಟು ದೊ
ಡ್ಡ ಪತ್ರವ್ಯವಹಾರವನ್ನು ನಡಿಸುವದು ಅವನಿಂದಾಗುತ್ತಿದ್ದಿ
ಲ್ಲ; ಅವನು ಬಹು ಒಳ್ಳೇ ಸ್ವಭಾವದವನಾದಾಗ್ಯೂ ಒಮ್ಮೊ
ಮ್ಮೆ ಪತ್ರವ್ಯವಹಾರದಲ್ಲಿ ಬಹಳ ಸಂತ್ರಾಪ ಪಡುತ್ತಿದ್ದನು.
ಅವನು ಪ್ರತಿ ದಿವಸ ಬೆಳಗಿನ ಐದು ಬಡಿಯುವಾಗ ಹಾಸಿ
ಗೆಯಿಂದೆದ್ದು ತಾನು ಕಾಯಿಸಿಕೊಳ್ಳುವ ಬೆಂಕಿಯನ್ನು ತಾ
ನೇ ಹೊತ್ತಿಸುತ್ತಿದ್ದನು. ಆ ಮೇಲೆ ಸಾವಕಾಶವಾಗಿ
ಮೇಜಿಯ ಮೇಲೆ ಕತ್ತಿಯು ಅಡ್ಡಿಸಿಕೊಂಡು ಹೊಸ ವ
ರ್ತ್ರಗಳನ್ನು ಧರಿಸಿ ಆರು ಬಡಿಯುವದರೊಳಗ ಟೇಬಲಿ
ನ ಹತ್ತರ ಬಂದು ಕೂತು, ತನ್ನ ಕಾಗದಗಳನ್ನು ತನ್ನ
ಮುಂದೆ ತಕ್ಕ ಕ್ರಮದಿಂದ ಇಟ್ಟುಕೊಂಡು ಆಗಾಗ್ಗೆ ತನ್ನ
ಕೆಲಸದಲ್ಲಿ ಬೇಕಾಗುವ ಪುಸ್ತಕಗಳನ್ನು ನೆಲದ ಮೇಲೆ
ತನ್ನ ಸುತ್ತಮುತ್ತು ರಚಿಸಿ ಇಟ್ಟುಕೊಳ್ಳುತ್ತಿದ್ದನು. ಆಗ
ಅವನ ಪ್ರೀತಿಯುಳ್ಳ ನಾಯಿಯು ಆ ಪುಸ್ತಗಳ ಹೊರಬ

ದಿಯಲ್ಲಿ ಅವನ ಕಣ್ಣುಗಳನ್ನೇ ಏಕಾಗ್ರತೆಯಿಂದ ನೋ
ಡುತ್ತ ಕೂಡುವದು. ಈ ಮೇರೆಗೆ ಕೆಲಸಕ್ಕೆ ಕೂತು
ಒಂಭತ್ತು ಬಡೆದನಂತರ ಅವನ ಕುಟುಂಬದವರು ನೆಹರೆ
ಗೆ ಕೂಡುವ ಪೂರ್ವದಲ್ಲಿ ಅವನು ತನ್ನ ಕೆಲಸವನ್ನೆಲ್ಲ
ಬಹುಶಃ ಒಳಗಡಹುತ್ತಿದ್ದನು; ಉಗಲವನು "ಈ ಹೊತ್ತಿನ
ಕೆಲಸದ ಕುತ್ತಿಗೆಯು ಮುರಿದೆನೆಂದು" ಒಮ್ಮೊಮ್ಮೆ ನಗು
ಯಿಂದ ನುಡಿಯುತ್ತಿದ್ದನು. ಆದರೆ ಸ್ಕಾಟನು ಇಷ್ಟು
ಏಕಾಗ್ರತೆಯಿಂದ ದಣುವಿಲ್ಲದೆ ಉದ್ಯೋಗ ಮಾಡಿದ
ಗ್ಯೂ, ಬಹು ವರ್ಷ ತಾಳ್ಮೆಯಿಂದ ಶ್ರಮ ಮಾಡಿ ಘನವಾ
ದ ಜ್ಞಾನವನ್ನು ಸಂಪಾದಿಸಿಕೊಂಡಾಗ್ಯೂ, ತನ್ನ ಸ್ವಂತ ಬು
ದ್ಧಿಯ ಬಗ್ಗೆ ಬಹು ಸಂಶಯದಿಂದ ಯಾವಾಗಲೂ ಮಾತಾ
ಡುತ್ತಿದ್ದನು. ಒಂದು ಸಮಯದಲ್ಲಿ ಇವನು ಅಂದದ್ದೇ
ನಂದರೆ, "ನಾನು ಮಾಡಿದ ಕೆಲಸಗಳಲ್ಲೆಲ್ಲ * ನನ್ನ ಸ್ವಂ
ತ ಅಜ್ಞಾನದಿಂದ ಬಹಳ ವ್ಯಥೆಪಟ್ಟೆನು."

ನಿಜವಾದ ಜ್ಞಾನವೂ, ನಮ್ರತ್ವವೂ ಹೀಗಿರುತ್ತದೆ. ಮ
ನುಷ್ಯನು ಹೆಚ್ಚು ಹೆಚ್ಚು ನಿಜವಾಗಿ ಜ್ಞಾನ ಸಂಪನ್ನನಾಗು
ತ್ತ ಹೋದಹಾಗೆ, ಹೆಚ್ಚು ಹೆಚ್ಚು ಅಹಂಕಾರ ಬಿಡುತ್ತ ಹೋ
ಗುತ್ತಾನೆ. ಕ್ರಿನಿತೀಕಾಲೇಜಿನೆಂಬ ಮುಖ್ಯ ವಿದ್ಯಾಲಯ
ದಲ್ಲಿ ಒಬ್ಬ ವಿದ್ಯಾರ್ಥಿಯು ತನ್ನ ಗುರುವಿನ ಹತ್ತಿರ ಹೋ
ಗಿ, ಇನ್ನು ನನ್ನ ಅಭ್ಯಾಸವು ಪ್ರಮಾಣವಾಯಿತು, ಮನೆಗೆ
ಹೋಗುವದಕ್ಕೆ ಅಪ್ಪಣೆಯು ಕೊಡಿರೆಂದು ಕೇಳಲಾಗಿ,
ಗುರುವು, "ಸರಿ! ನಾನಂತು ನನ್ನ ವಿದ್ಯಾಭ್ಯಾಸವನ್ನು ಈ

---

* ಇವನು ರಚಿಸಿದ ಅತಿ ಸುರನವಾದ "ನಾಪಲ್ಲೆಂಬ" ಕಲ್ಪಿತ
ಕಥೆಗಳನ್ನು ಇಂಗ್ಲಿಷರು ಅತಿ ಪ್ರೀತಿಯಿಂದ ಓದುತ್ತಾರೆ.

ಗ ಆರಂಭ ಮಾಡುತ್ತೇನೆ, "ಯೆಂದು ಉತ್ತರ ಹೇಳಿ, ಆ
ವನ ಉಪಹಾಸ ಮಾಡಿದ್ದು ಯಥಾಯೋಗ್ಯವಾಗಿರುತ್ತದೆ.
ತ್ರೋರಿಕೆಯ ವಿದ್ವಾಂಸನು ಹಲವು ಸಂಗತಿಗಳನ್ನು ಸ್ವ
ಲ್ಪ ಸ್ವಲ್ಪ ಕಲಿತುಕೊಂಡು, ಯಾವದನ್ನು ನಿಜವಾಗಿ
ಅರಿಯದೆ, ನಾನು ಒಳ್ಳೇ ಬುದ್ಧಿವಂತನೆಂದು ಅಭಿಮಾನ
ಪಡಿಸಲಿ; ಆದರೆ ಜ್ಞಾನಿಯಾದವನು ಲೀನತೆಯಿಂದ ಬಿಟ್ಟು
ಕೊಳ್ಳುವದು ಯೇನಂದರೆ, "ನಾನು ಯೇನೂ ಅರಿಯ
ನೆಂಬದೊಂದನ್ನೇ ನಾನು ಬಲ್ಲೆನು." ಅಥವಾ ಅಂಥಾ ಸ
ತ್ಪುರುಷನು ನ್ಯೂಟನ್ನನು ನುಡಿದಂತೆ ನುಡಿಯುವನು;
ಅವನು ನುಡಿದದ್ದೇನಂದರೆ, "ಸತ್ಯವೆಂಬ ಅಪಾರ ಸಾಗರ
ದ ತೀರದಲ್ಲಿ ನಾನು ಶಿಂಪುಗಳನ್ನು ಮಾತ್ರ ಆರಿಸಿಕೊ
ಳ್ಳುವದರಲ್ಲಿ ತೊಡಗಿದ್ದೇನೆ; ಆ ಸಾಗರವೆಲ್ಲ ಇನ್ನೂ ಶೋ
ಧಿಸಲ್ಪಡದೆ ನನ್ನ ಮುಂದೆ ಹಾಗೇ ಬಿದ್ದುಕೊಂಡಿರುತ್ತದೆ.

POET.

SHATKAYA GURUBASAVA METER. MANOVIJAYA KUSUMASHATPADI

ಷಟ್ಕಾವ್ಯದ ಗುರುಬಸವಕವಿ–ಮನೋವಿ
ಜಯ ಕುಸುಮಷಟ್ಪದಿ

ವ್ಯಾಕುಲದ ಮನಪಿಡೆನ।
ಗೇಕಾದುಸೆಂದು ಸುವಿ।
ವೇಕಮಾಳೋಚಿಸುತ ತನ್ನೊಳಾಗ॥
ವಿಕಾಂತಗೊಂಡಿದರ।
ಜೋಕೆಯಿಂದೊಳಗರಿದು।
ನಾ ಕಾಣ್ಬೆನಿದಕುಪಾಯವನೆನುತ್ತ॥ ೧॥

ವಿಷಯಂಗಳಿದರ ಕೈ।
ವಳವಾದ ವಿಂದ್ರಿಯಗ।
ಳಸುತ್ತಾನೆ ಕರಣವವು ತನ್ನ ರೂಪು ॥
ದಶ ವಾಯುಗಳ ಕೂಡಿ।
ದೆಸೆವರಿದು ಮುಂಮುಲಗ।
ಳಿಸಕದಿಂ ತನುದುರ್ಗಮಂ ಬಲಿದುದು ॥ ೨ ॥
ವ್ಯಸನವಾಜಿಗಳು ಮದ।
ವೆಸೆವ ಗಜವರಿಗಳು।
ಬ್ಬಸದ ಸಪ್ತರಥರು ಸಂಸೃತಿಪದಾತಿ ॥
ಪ್ರಸಿಯ ಬಂಡಾರಬೊ।
ಕ್ಕಸಕುಟಿಲತಂತ್ರದಿಂ।
ದೊಸೆದು ಮನವಾರರಂ ಲೆಕ್ಕಿಸದಿಪ್ಪುದು ॥ ೩ ॥
ಜಗ ತನ್ನದೆಂಬ ಹೆಂ।
ಬಿಗೆ ತಾನು ಹಕ್ಕಳಿಸಿ।
ಮುಗಿಲುದ್ದವಾಗಿ ಮುಕ್ತಾರಿತ್ರಮುಂ ॥
ಸೊಗಸಿ ದುಸ್ಸಂಗಜ್ಞೇ।
ಳಿಗೆಗಳಸಿ ಮನ ನಲಿವ।
ಬಗೆಯ ಭಾವನೆಯನವನೇನೆಂಬೆನು ॥ ೪ ॥
ಪಿಸುಣತಿಗೆ ಹಿಗ್ಗಿ ಬಿಗೆ।
ಕೆಸುಕುಳದೊಳೊಗ್ಗಿ ಸಂ।
ತಸವಟ್ಟು ಕಳವು ಡಾದರ ಹಿಂಸಿಗೆ ॥
ಬೆಸಗೆಯ್ದು ನಿಂದೆ ತಾ।
ಮಸಕುಟಿಲಕುಹಕದೊಳ।

೧ ಹಿಗ್ಗಿ, ೨ ಚಾಡಿಗೆ.

ಗಸಿದು ಮನವಿನಿಸರೋಳ್ಬೆ ಪದಿಪ್ಪುದು ॥ ೫ ॥
ತಪಗಡಿಸಿ ತಪಸಿಗಳ ।
ನಪಹರಿಸಿ ಯೋಗಿಗಳ ।
ಜಪಿಗಳಂ ಜೋಂಪಿಸುತ ಸಡಸಿಗಳನು ॥
ಅಪವಾದಕಿಕ್ಕ ಮನ ।
ಕಪಿಚೇಷ್ಟಿಯಂ ಮಾಣಿ ।
ವಿಪರೀತ ವೃತ್ತಿಯಿಂ ಕಾಡುತಿಹುದು ॥ ೬ ॥

NOTICES.

ನೋಟೀಸುಗಳು.

ಬೆಳಗಾಂವೀ ಜಿಲ್ಹೇ ದೊಳಗಿನ ಯಾವತ್ತು ಸ್ಕೂಲಮಾಸ್ತರ ಮತ್ತು ಅ. ಸ್ಕೂಲಮಾಸ್ತರರಿಗೆ.—

ಬೆಳಗಾಂವ ಜಿಲ್ಹೇದ ಡಿ. ಎ. ಇನಸ್ಪೆಕ್ಟರರ ಕಡೆಂದ ತಿಳಿಯು ಪಡಿಸುವದೇನಂದರೆ—ಅಥಣೀ ಬ್ರ್ಯಾಂಚ ಸಾಲಿಯ ಇಂಚಾರ್ಜ ಮಾಸ್ತರರಾದ ಶ್ರೀನಿವಾಸ ಅಂಣ್ಣಾಜಿ ಇವರು ಪರಭಾರೆ ಮಾ. ಎ. ಇನಸ್ಪೆಕ್ಟರ ಸಾಹೇಬ ಬಸಾದರ್ಡರ ದಪ್ತ್ರೀಣಭಾಗ ಇವರಕಡೆಗೆ ಅರ್ಜಿ ಘಾಡಿಕೊಂಡದ್ದರಿಂದ ಸಾಹೇಬ ಬಹಾದ್ದರವರು ಸಪರಿಯವರಿಗೆ ಒಂದು ಇ ರೂಪಾಯಿ ದಂಡ ನೂಡಿದ್ದಾರೆ ಆದಕಾರಣಾ ಮಾಸ್ತರ ಮುಂತಾದವರು ಇದರಕಡೆಗೆ ಚಂನಾಗಿ ಲಕ್ಷ್ಯ ಕೊಟ್ಟು ಪರಭಾರೆ ಅರ್ಜ ಮಾಡಬಾರದು. ತಾರೀಖು ೩೦ ಮಾಹೆ ಡಿಸೆಂಬರ ಸನ್ ೧೮೮೭ಳಿ ಇ.

P. V. Chintamanpetkar.

ಡಿ. ಎ. ಇ. ಜಿಲ್ಹಾ ಬೆಳಗಾಂವ.

ಬೆಳಗಾವೀ ಜಿಲ್ಲೆದೊಳಗೆ ಸನ್ನ ೧೯೨೪ನೇ ಇಸವಿ ನವಂಬರ ಪತ್ತೂ ಡಿಸಂಬರತಿಂಗಳಗಳಲ್ಲಿ ಆದ.

ನೇಮಣೂಕು ಮುಂತಾದವು

ಅಕ್ಕೊಳ್ಳಿ—ಇಲ್ಲಿಯ ಮಾಸ್ತರರಾದ ನಾಗಯ್ಯಾ ವಲಿಂಗಯ್ಯಾ ಇವರನ್ನು ಕಾಗವಾಡ ಸಾಲಿಯ ಮಾಸ್ತರಾದ ಎಶವಂತ ಸಖಾರಾಮ ಇವರು ತಮ್ಮ ಕೆಲಸಕ್ಕೆ ರಾ ಜೀನಾಮೆಯನ್ನು ಕೊಟ್ಟ್ಯದರಿಂದ ಸದರ ಸಾಲಿಯ ಮಾಸ್ತರರ ಕೆಲಸಕ್ಕೆ ನೇಮಿಸಿರುತ್ತದೆ. ಸಂಬಳ ರೂ. ೩೨

ಈ ಮುನವಳ್ಳಿ,—ಈ ಸಾಲಿಯ ಎರಡನೆ ಅಶಿಷ್ಟಂಟ ರಾದ ವಿಠ್ಠಲ ನಾರಾಯಣ ಕಣಗಲಿ ಇವರು ಟ್ರೈಂಡರಿ ರುವ ಕಾರಣ ಅಕ್ಕೊಳ್ಳಿ ಸಾಲಿಯ ಹೆಡ್ಡಮಾಸ್ತರರ ಜಲಸಕ್ಕೆ ಬಡತಿ ಮೇಲೆ ವರ್ಗಮಾಡಿ(ಸಂಬಳ ರೂ. ೩೨) ಮುನವಳ್ಳಿಯ ೪ರು. ಅಶಿಷ್ಟಂಟಿ ಜಾಗಾಕ್ಕೆ ಅಥಣೀ ಪೈ ನೇ ಅ. ರಾದ ಮಾಸೋ ಗೋವಿಂದ ಇವರನ್ನು ಬಡತೀ ಮೇಲೆ ವರ್ಗಮಾಡಿರುತ್ತದೆ.

ಈ ಬೆಳಗಾವೀ—ಇನೇ ನಂಬರ ಆರೆ ಸಾಲಿಯ ಇನೇ ಅ. ಚಿದಾಂಬರ ರುದ್ರೋ ಇವರಿಗೆ ತಾ. ೩೦ನೇ ನವಂ ಬರದಿಂದ ೬ತಿಂಗಳ ಸಂಬಳವಿಲ್ಲದ ರಜಾ ಕೊಟ್ಟಿರು ತ್ತದೆ.

ಈ ಸದರ ಸಾಲಿಯ ೨ ನೇ ಅ. ರಾದ ನಾರಾಯಣ ಶೀವಾಜಿ ಇವರಿಗೆ ತಾ. ೫ ನೇ ನವೆಂಬರದಿಂದ ೧ ತಿಂಗ ಳಹತ್ತಿನ ರಜಾ ಕೊಟ್ಟಿರುತ್ತದೆ.

೧ ಎಸಪುಕನನುರ್ದಿಮಾಸ್ತರರಾದ ಭಾಷ್ಯಕರ ಬಾಳಾ ಜಿ ಇವರಿಗೆ ತಾ. ೨೭ನೇ ನವಂಬರದಿಂದ ೧ ತಿಂಗಳ ಹಕ್ಕಿನ ರಜಾ ಕೊಟ್ಟಿರುತ್ತದೆ.

೧ ಚಂದಗಡ ಸಾಲಿಯ ಮಾಸ್ತರರಾದ ಕೃಷ್ಣಾಜಿ ಹರಿ ಇವರಿಗೆ ತಾ. ೧೨ ನೇ ನವಂಬರದಿಂದ ೧ ತಿಂಗಳ ಹಕ್ಕಿನ ರಜಾ ಕೊಟ್ಟಿರುತ್ತದೆ.

೧ ಗಳತಗೆಯ ಮಾಸ್ತರಾದ ವೀರಪ್ಪಾ ಫಕೀರಪ್ಪಾ ಇವರಿಗೆ ತಾ. ೧೨ನೇ ನವಂಬರದಿಂದ ೧ ತಿಂಗಳ ಸಂಬಳವಿಲ್ಲದೆ ರಜಾಕೊಟ್ಟಿರುತ್ತದೆ.

೧ ಕಿತ್ತೂರ ಬಂದನೇ ಸಾಲಿಯ ಮಾಸ್ತರರಾದ ಅಂಣಾಜಿ ಭೀಮಾಜಿ ಇವರಿಗೆ ತಾ. ೫ನೇ ಡಿಶಂಬರದಿಂದ ೧ ತಿಂಗಳ ಶೀಕ ರಜಾ ಕೊಟ್ಟಿರುತ್ತದೆ.

೧ ಹಂಚಿನಾಳ ಸಾಲಿಯಮಾಸ್ತರರಾದ ರಾಘವೇಂದ್ರ ಅಪ್ಪಾಜಿ ಇವರು ತಮ್ಮ ಕೆಲಸಕ್ಕೆ ತಾ. ೧೪ನೇ ನವಂಬರಕ್ಕೆ ರಾಜೀನಾಮೆಯನ್ನು ಕೊಟ್ಟರು.

P. V. Chintamanpetkar.

ಡಿ. ಎ. ಇ. ಜಿಲ್ಲಾ ಬೆಳಗಾಂವ.

ಕಲಾದಗಿ ಜಿಲ್ಲೆಯೊಳಗಿನ ದಿಸಂಬರ ತಿಂಗಳಲ್ಲಿಯ ಮಾಸ್ತರ ಮುಂತಾದವರ ವರ್ಗಾವರ್ಗಿ ವ ನೇಮಣೂಕ ಮುಂತಾದವುಗಳು.

೧ ಪುರುಷೋತ್ತಮ ಗೋವಿಂದ ಪಳಸುಳೆ ಸ್ಕೂಲ ಮಾಸ್ತರ ಬ್ರಾಂಚಸಾಲಿ ಹರಕಲ್ಲ ಇವರಿಗೆ ಈಗ್ಗೆ ಇರುವ ಪ್ಲಸ್ V ರೂ. ಸಂಬಳಕ್ಕೆ ಬಾಗಲಕೋಟೆ ಪ್ಲೇಕ ನಾಗ

ರಾಳ ಬ್ರಾಂಚಸಾಲಿಯು ಮಾಸ್ತರ ಕೆಲಸಕ್ಕೆ ಬದಲಿ ಮಾಡಿದೆ

೨ ಗುರರಾವ ಜೀವಾಜಿ ಮಾಳವೆಕರ ಬ್ರಾಂಚ ಸ್ಕೂಲ ಮಾಸ್ತರ ನಾಗರಾಳ ಇವರಿಗ ಈಗ್ಗೆ ಇರುವಷ್ಟು ೪ ರೂ. ಸಂಬಳಕ್ಕೆ ಬಾಗಲಕೋಟ ತಾಲೂಕ ಮೈಕಿ ಹೆರಕಲ್ಲ ಬ್ರಾಂಚಸಾಲಿಯು ಮಾಸ್ತರ ಕೆಲಸಕ್ಕೆ ಬದಲಿಮಾಡಿದೆ.

೩ ಬಾಳಾಜಿ ವೆಂಕಟೇಶ ಮುದಗಲ್ಲಕರ ಹೆಡ್ಡ ಮಾಸ್ತರ ಕಾಳಾ ಗಜೆಂದ್ರಗಂಡ ಇವರಿಗೆ ತಾ. ೩೦ ಡಿಸಂಬರ ೧೮೭೪ ಳಿ ಹಿಡಿದು ಒಂದು ತ್ರಿಂಗಳ ಹಕ್ಕಿನ ರಜಾಕೊಟ್ಟಿದೆ.

ಮು. ಕಲಾದಗಿ ತಾ. ೯ ಜಾನೇವಾರಿ ೧೮೭೫ } *Ramchandra A. Sawanoor.*
ಹಿ. ಇ. ಇ. ಜಿಲ್ಲಾ ಕಲಾದಗಿ.

ಪ್ರೀನಿಂಗಕಾಲೇಜಿನ ಪ್ರವೇಶಪರೀಕ್ಷಾ.

ಕಳೆದ ಸಪಟಂಬರ ತಿಂಗಳ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಗುಣಗಳ ಕ್ರಮವನ್ನು ಅನುಸರಿಸಿ ಪಾಸಾದವರ ಹೆಸರುಗಳ ಪಟ್ಟೀ.

ಸಂ.	ಉತ್ತೀರ್ಣರಾದವರು ಹೆಸರು.	ಜಿ.ಗಾ.	ಊರು, ಜಿಲ್ಲೆ ಮತ್ತು ರಾಷ್ಟ್ರ	ಶೇಕಡಾವಾರು ಪಡೆದ ಗುಣಗಳು
೧	ಶ್ರೀಮಾನ್ ಬಿಷಪ್ಪ ಬಿಸಿಎಂ.	ಬಿಎಸ್ಸಿ.	ಬಿಎಸ್ಸಿ, ಉ. ಕ.	೧೧೦ ೧/೧
೨	ಸಿದರಾಯಪ್ಪ ಹರಿ ಶುಲಪಣ್ಣ.	ಬಿಎಸ್ಸಿ.	ಅಥಣಿ, ಬೆಳಗಾವಿ	೧೬೦ ೧/೧
೩	ನಿಂಗಪ್ಪ ಹೆಳ್ಳಿ ಬಾಗಲಕೋಟೆ.	ಬಿಎಸ್ಸಿ.	ಹುಬ್ಬಳ್ಳಿ, ಧಾ.	೧೬೦ ೧/೧
೪	ನಿಂಗಪ್ಪ ಸಿದ್ದಪ್ಪ.	ಬಿಎಸ್ಸಿ.	ಹುಬ್ಬಳ್ಳಿ, ಧಾರ.	೧೬೦ ೧/೧
೫	ಸಿದ್ದಪ್ಪ ರಾಮಪ್ಪ ಕಿಲ್ಲೇದಾರ.	ಬಿಎಸ್ಸಿ.	ಹುಬ್ಬಳ್ಳಿ, ಧಾರ.	೧೬೫ ೧/೧
೬	ಭೀಮಪ್ಪ ಬಾಪುಜಿಂಗ್ರ ಬಜಂಬೇ.	ಬಿಎಸ್ಸಿ.	ಬಜಂಬೇ ಬ್ಯಾರಿಕ್ಸ್, ಜಿ.	೧೬೫
೭	ಜೀವಪ್ಪ ಶ್ರೀಮಣ್ಣ ನರಗುಂದ.	ಬಿಎಸ್ಸಿ.	ಲಕ್ಷ್ಮೇಶ್ವರ ಜಿ. ಹಾ.	೧೬೨
೮	ಬೀಂಡಪ್ಪ ಭೀಂಡಪ್ಪ ಪಲಿನ.	ಬಿಎಸ್ಸಿ.	ಹುಂಚಿಕೇರಿ, ಹಾ.	೧೦೬ ೧/೧
೯	ಸುಬ್ಬಾ ಜೀ ಶ್ರೀನಿವಾಸ ಬಿಡ್ಡೂರ್.	ಬಿಎಸ್ಸಿ.	ಧಾರವಾಡ.	೧೬೪
೧೦	ಗಂಗಪ್ಪ ಬಸಪ್ಪ ಮುಚಖಂಡ್.	ಬಿಎಸ್ಸಿ.	ಹುಬ್ಬಳ್ಳಿ, ಧಾ.	೧೬೨
೧೧	ವಿಶ್ವನಾಥ ನಾರಾಯಣ ನಾಯಕ.	ಬಿಎಸ್ಸಿ.	ಬೆಳಗಾವಿ ಜಿಲ್ಲೆ.	೧೬೦

೨೮	[illegible] ತಿಮ್ಮಚಂದ್ರ ಪೂರ್ಣಪ್ರಜ್ಞ.	ಹುಬ್ಬಳ್ಳಿ.	ಹುಬ್ಬಳ್ಳಿಧಾರವಾಡ	೧೮೯೨
೨೯	ಶೇಷಗಿರ ಬಾಳಾಜಿ ನಾನವಟೀ.	ಹಿಪ್ಪರಗೀ.	ಶಿಂದಗಿ, ಕಲಾದಗಿ.	೧೮೯೬
೩೦	ಭಕೀರಪ್ಪ ಲಿಂಗಬಸಪ್ಪ.	ಸಲ್ಲಾ.		೧೮೯೯
೩೧	ಬಸಪ್ಪ ಸಂಗಪ್ಪ ಗುಡಗೀ.	ನರಗುಂದ.	ನವಲಗುಂದ ಧಾ.	೧೮೯೯
೩೨	ಗದಿಗಪ್ಪ ಬಿಂನ ಚನಬಸಪ್ಪ ಗವ್ವಡ.	ಶಿರಕೊಳ್ಳ.	ನವಲಗುಂದ ಧಾ.	೧೮೯೯
೩೩	ಸಂಗಪ್ಪ ಪರಪ್ಪ ಧಾವಳಗೀ.	ಧಾವಳಗೀ.	ಮುದ್ದೇಬಿಹಾ. ಕ.	೧೮೯೯
೩೪	ಲಷ್ಮಣ ಪುಳಜೋರಾವ.	ವಿಶ್ರಿಕೋಟಿ.	ಕಲಘಟಗಿ, ಧಾ.	೧೮೯೯
೩೫	ನಾರಾಯಣ ಗುಂಡೋ ಹಬ್ಬು.	ಗಲಗಲೀ.	ಬಾಗಲಕೋಟಿ, ಕ.	೧೮೯೯
೩೬	ಭಕೀರಪ್ಪ ಶಿವಲಿಂಗಪ್ಪ.	ಲಕ್ಷ್ಮೇಶ್ವರ.	ಇ.ಪಟವರ್ಧನ.	೧೮೯೯
೩೭	ತಂಮಾಜಿ ರಾಮಚಂದ್ರ ಕಟ್ಟೀ.	ಬೆಟಗೇರಿ.	ಧಾರವಾಡ.	೧೮೯೯
೩೮	ನಾರಾಯಣ ವಿಠಲ ಪುಲಕರ್ಣ.	ಅಲಮೇಲೆ.	ಶಿಂದಗಿ, ಕಲಾದಗಿ.	೧೮೯೯
೩೯	ಗೋವಿಂಳ ಕೇಶವ ಲಪಕರೀ.	ಕಲಘಟಗಿ.	ಕಲಘಟಗಿ, ಧಾ.	೧೮೯೯
೪೦	ಶಿವನಗೌಡ ತಿಂಮನಗೌಡ.	ನಿಡಗುಂದಿ.	ಬಾಗೇವಾಡೀ, ಕ.	೧೮೯೯

೭೫	ರುದ್ರಪ್ಪ ಮಾನಪ್ಪ ಹುಲಕೊಪ್ಪ.	ಹುಲಕೊಪ್ಪ.	ಕೆಲಸಗಟಿಗಿ, ಧಾ.	೧೬೫
೭೬	ಅಂಣಾಜಿ ಭೀಕ್ಕಾಗಿ ತ್ರೇರಗಾಂವಿ.	ಕರವಡೀ.	ರೋಣ, ಧಾ.	೧೬೪
೭೭	ಗಂಗಾಧರ ಗಣೇಶ ಜಾಧವ.	ಮಿಶ್ರಿಕೋಟಿ.	ಕೆಲಸಗಟಿಗಿ, ಧಾ.	೧೫೪
೭೮	ಬಾಳಕೃಷ್ಣ ಶ್ರೀನಿವಾಸ ಪತಕೀ.	ಲಹುಲೀಶ್ವರ.	ಇ. ಪಟವರ್ಧನ.	೧೫೪
೭೯	ತಂಪುನಗೌಡ ಬಸನಗೌಡ.	ಶಿರೂರ.	ನವಲಗುಂದ, ಧಾ.	೧೫೪

ಬೆಳಗಾವಿ ಟ್ರೇನಿಂಗಕಾಲೇಜ
ತಾ. ೨೧ನೆಯಾಹೆ ಡಿಜಂಬರಱV೭೪. }

Bhoojungrao Y. Hoolgoal.
ಪ್ರಿನ್ಸಿಪಾಲ್ ಟ್ರೇ. ಕಾ. ಬೆಳಗಾವ.

ಟ್ರೇನಿಂಗಕಾಲೇಜಿದ ಸರಟೀಫಿಕೇಟ ಪರೀಕ್ಷೆ.

ದಕ್ಷಿಣಭಾಗದ ಟ್ರೇನಿಂಗಕಾಲೇಜದಲ್ಲಿ ಕಳೆದ ಅಗಟೋಬರ ತಿಂಗಳ ಸರಟೀಫಿಕೇಟ ಪರೀಕ್ಷೆಯಲ್ಲಿ ಪಡೆದ ಗುಣಗಳ ಕ್ರಮವನ್ನು ಅನುಸರಿಸಿ ಪಾಸಾದವರ ಹೆಸರುಗಳ ಪಟ್ಟೀ.

ನಂಬರು.	ಹೆಸರುಗಳು.	ಪ್ರಶ್ನೆಗಳಲ್ಲಿ ಪಡೆದ ಗುಣಗಳು.	ಒಟ್ಟಿಗೆ ಪಡೆದ ಗುಣಗಳು.	ಸ್ಕೂಲಿನಲ್ಲಿ ಮಾಡಿದ ಕೆಲಸ.
	ಎರಡನೇ ಪರೀಕ್ಷೆಯ ಅಭ್ಯಾಸದವರು ಫಸ್ಟ್‌ಕ್ಲಾಸ ಸರಟೀಫಿಕೇಟು ಪಡಕೊಂಡವರು.			
೧	ಶಿಖರೋ ಪರ್ವತ ತಟ್ಟೀ.	೬೫೦ ೭೦೦	೪೪ ೬೦೦	೨೫
೨	ಅಡವಯ್ಯಾ ರುದ್ರಯ್ಯಾ ಹಿಕ್ಕನುಮ.	೬೫೦ ೭೦೦	೪೪ ೬೦೦	,,
೩	ವೀರಪ್ಪ ಶಿವಲಿಂಗಪ್ಪಾ ಮುರಗೋಡ.	೫೮೨ ೭೦೦	೪೦ ೬೦೦	,,
೪	ಅಡಿವೆಪ್ಪಾ ಮಲ್ಲಪ್ಪಾ ನಿರಡೇ.	೫೭೪ ೭೦೦	೪೨ ೬೦೦	,,
೫	ಹಣಮಂತ ವೆಂಕಟೇಶ ಹೊದಲೂರ.	೫೫೧ ೭೦೦	೪೨ ೬೦೦	,,
೬	ವೆಂಕಟೇಶ ಗೋವಾಳ ಕಣಬರಗೀ.	೫೫೧ ೭೦೦	೪೦ ೬೦೦	,,

೭	ಗೋವಿಂದ ಭಾವುನಾಯಿಕ ಶಿವನೊಗ್ಗ.	೪೯೫	೬೪	೨೦
೪	ಬಾಳಾಜೀ ರಘುನಾಥ ಸವದೀ.	೪೪೯ ೫/೬	೬೨ ೧/೨	,,
೯	ಲಕ್ಷ್ಮಣ ಧೊಂಡದೇವ ದಾತೆ.	೪೪೦	೬೬ ೧/೨	,,
೧೦	ಭೀಮಾಜಿ ಶ್ರೀನಿವಾಸ ಗಾಡೀ ಕೊಪ್ಪ.	೪೪೬	೬೧ ೧/೨	,,
೧೧	ಧರ್ಮಾ ತವನಪ್ಪ ಗುಲಾಲಗಾರ.	೪೨೩	೫೪ ೧/೨	,,
೧೨	ಗುರನಾಥ ನಾರಾಯಣ ಕೊಲಂಗಡೀ.	೪೨೫ ೧/೨	೫೧ ೫/೬	,,
	ಮೊದಲನೇ ವರುಷದ ಅಭ್ಯಾಸದವರು ಶೇಕಂಡಕ್ಲಾಸ ಪರಟೆಫಿಕೇಟ ಪಡದವರು.			
೧	ಶ್ರೀನಿವಾಸ ಮಹಾದೇವ ನಾಡಗೇರ.	೫೪೫ ೫/೬	೮೦ ೧/೨	೨೫
೨	ಜನ್ನಬಸಪ್ಪ ತಂನುಪ್ಪ ಅಪ್ಪಟಗೀ.	೫೪೬ ೧/೨	೭೫ ೧/೨	,,
೩	ಸ್ವಾಮಿಗಿ ತಿಮ್ಮಾಜಿ ಕಿರಣೇ.	೫೪೬ ೧/೨	೭೫ ೧/೨	,,
೪	ಪರಮೇಶ್ವರ ವಿಶ್ವೇಶ್ವರಪ್ಪ ತಕಿಕಾಲ.	೫೪೬ ೫/೬	೭೫ ೧/೨	,,
೫	ರಾಯಪ್ಪ. ಸೋಮಪ್ಪ ವಂಟಮುರಿ.	೫೪೬ ೫/೬	೭೫ ೧/೨	,,
೬	ಮಡಮ್ಮದ ಅಕಬರ ವ. ಅಬದುಲ್ ಮಡಮೂದಸಾಬ ಉ			

	ಸ್ಯಾದ.	೫೪೩ $\frac{೧}{೪}$	೭೪ $\frac{೨}{೨೯}$	೫
೭	ತುಕ್ಕೋಜೀ ಗೋವಿಂದ ಕುಲ ಕರ್ಣ.	೫೪೩ $\frac{೧}{೪}$	೭೪ $\frac{೧೯}{೨೯}$	,,
೮	ಶ್ರೀನಿವಾಸ ಭೀಮಾಜಿ ಹಿರೇ ಕೆರೂರ.	೫೪೦ $\frac{೨}{೮}$	೭೪ $\frac{೬}{೨೯}$	,,
೯	ಅಡಿವೆಪ್ಪಾ ಸಂಗನಬಸಪ್ಪಾ ಧಾರವಾಡ.	೫೩೪ $\frac{೨}{೪}$	೭೩ $\frac{೧೯}{೨೯}$	,,
೧೦	ಅಂಸ್ಯಾಜಿ ರಾಮುಕೃಷ್ಣ ಜಕ್ರಪಾಣಿ.	೫೩೪ $\frac{೧}{೮}$	೭೩ $\frac{೧೦}{೨೯}$	,,
೧೧	ಸಿದ್ದಪ್ಪಾ ಸಂಗವ್ವಾ ಸಾಣೇಕೊಪ್ಪ.	೬೭೪ $\frac{೧}{೮}$	೭೩ $\frac{೬}{೨೯}$	,,
೧೨	ಚನಬಸಪ್ಪಾ ದುಂಡಪ್ಪಾ ಪ್ರಡಕಲಕಟ್ಟೀ.	೫೩೦ $\frac{೧}{೪}$	೭೩ $\frac{೧೨}{೨೯}$	,,
೧೩	ರಂಗೋ ಕೃಷ್ಣ ಕಳಸ.	೫೦೩ $\frac{೨}{೪}$	೭೩ $\frac{೧೯}{೨೯}$	,,
೧೪	ಲಿಂಗಪ್ಪಾ ಕರಿಬಸಪ್ಪಾ ಭದ್ರಶೆಟ್ಟೀ,	೫೩೬	೭೩ $\frac{೫}{೨೯}$	,,
೧೫	ರಾಘವೆಂದ್ರ ಅಪ್ಪಾಜಿ ಛಬ್ಬೀ	೫೩೩ $\frac{೧}{೮}$	೭೦ $\frac{೨೦}{೨೯}$	,,
೧೬	ಬಾಳೂಜೀ ಗೋಪಾಳ ಸಕ್ಕರಿ.	೫೦೭	೬೯ $\frac{೧೯}{೨೯}$	೫
೧೭	ಹಜರತ ರಹಿಮಾನ ಮೊರಬ.	೫೦೩ $\frac{೨}{೪}$	೬೯ $\frac{೧೦}{೨೯}$	,,
೧೮	ಪಾಂಡುರಂಗ ಭೀಮಾಜಿ ಮುರಗೋಡ.	೫೦೩ $\frac{೧}{೮}$	೬೯ $\frac{೯}{೨೯}$	,,
೧೯	ಬಾಬೂಜೀ ರಾಮಚಂದ್ರ ಕಣಕಾಲ.	೫೦೫ $\frac{೨}{೪}$	೬೯ $\frac{೬}{೨೯}$	,,
೨೧	ಬಾಜೀನಾರಾಯಣ ಸೊಹನೇ	೫೦೫	೬೯ $\frac{೨}{೨೯}$	,,

೧	ಗದಿಗೆಯ್ಯಾ ಗುರವಯ್ಯಾ ಪ ಶ್ರಿಮಠ.	೪೯೬	೬೪	೧೨
೨	ರಾಮಚಂದ್ರ ಶ್ರೀನಿವಾಸ ವಾ ಢೇ.	೪೯೭	೬೪	,,
೩	ಗೋಪಾಳಮುಡಾದೇವಜೋಸಿ	೪೯೪	೬೩	,,
೪	ರಾಯಪ್ಪಾ ಸಕ್ರೆಪ್ಪಾ ಚಿಕ್ಕೋಡಿ	೪೯೪	೬೬	,,
೫	ರಾಮಚಂದ್ರ ಶಾಮರಾವ ರಾ ಯಬಾಗ.	೪೯೪	೬೬	,,
೬	ಭೋಂಡೋ ಗಂಗಾಧರ ಲಿಮ ಯೋ.	೪೯೮	೬೬	,,
೭	ಬಾಳಪ್ಪಾ ಮೂಸಪ್ಪಾ ಮು ಲ್ಲಾಪುರ.	೪೯೦	೬೬	,,
೮	ನರಸೋಜೀ ವಾಜಿಕಲಬುರ್ಗಿ.	೪೩೪	೬೬	,,
೯	ವೆಂಕಟೇಶಸುಬಯ್ಯಾ ಭೋಂ ಕಾರ.	೪೩೮	೬೪	,,
೧೦	ರಾಮಚಂದ್ರ ನರಸೋ ಸಾಲೀ.	೪೪೩	೬೪	,,
೧೧	ರಾಮಚಂದ್ರ ಭೀಮಾಜೀ ಸ ತಕೀ.	೪೩೬	೬೪	,,
೧೨	ಕೇದಾರಜೀ ಬಾಳಾಜೀ ಖಾ ಟೋಕರ.	೪೩೪	೬೪	,,
೧೩	ವಿಠಲರಾಮಚಂದ್ರ ಬೆಟಗೇರಿ.	೪೩೭	೬೪	,,
೧೪	ಶಿವಬಸಯ್ಯಾ ರಾಚಯ್ಯಾ ಸಾ ಲೀ.	೪೬೦	೬೭	,,
೧೫	ನೀಲಕಂಠಚಿಕ್ಕೋಡಿ ಕುಲಕರ್ಣಿ	೪೪೭	೬೭	,,

೪೯	ಮಲ್ಲಿಕಾರ್ಜುನ ಸಟವಾಜೀ ನಾಮದೇವ.	೪೫೦	೬೮ ೧೯	೬೮
೪೯	ಮಲಕಪ್ಪಾ ಬಸಲಿಂಗಪ್ಪಾ ನಾಗಲಾಪುರ.	೪೪೯	೬೮ ೧೯	,,
೪೮	ಅಬದುಲ್ ಮಜೀದ ವ. ಮುಡವಮ್ಮದ ಕಾಸಿವರ್.	೪೪೯	೬೦ ೧೯	,,
೪೭	ಗೋವಿಂದ ಕೇಶವ ಮುಡಾಲಿಂಗಪುರ.	೪೪೮	೬೦ ೧೯	,,
೪೦	ನಾರಾಯಣ ಭೀಮಾಜಿ ಕುಲಕರ್ಣಿ.	೪೪೭	೬೦ ೧೯	,,
೪೬	ಕೃಷ್ಣಾಜಿನಾಗೋಸಾವಿ ಪರಗೀ.	೪೪೬	೬೦ ೧೯	,,
೪೫	ವೆಂಕಾಜಿ ಲಕ್ಷ್ಮಣ ಅಸಗೀ.	೪೪೫	೬೦ ೧೯	,,
೪೪	ವೆಂಕಾಜಿಗೋವಿಂದ ಶಿರಗುಪ್ಪಿ.	೪೪೪	೫೮ ೧೯	,,
೪೩	ಜೀವಾಜಿ ಸ್ವಾಮಿರಾವ ಹಿರೇಬಿದರಿ.	೪೪೩	೫೫ ೧೯	,,
೪೨	ಶಾಮೂಜಿ ರಾಮಚಂದ್ರ ಕುಲಕರ್ಣಿ.	೪೪೨	೫೪ ೧೯	,,
೪೧	ರಾಘುಚಂದ್ರ ಸುಬರಾವ ಸತ್ತಿ.	೪೪೧	೫೪ ೧೯	,,
೪೦	ಗುರನಾಥ ಭೀಮರಾವ ದೇಸಾಯಿ.	೪೪೦	೫೩ ೧೯	
೪೯	ಮುಡಾದೇವ ಮೋರೇಶ್ವರ ಕೇಳಕರ.	೪೩೯	೫೦ ೧೯	

ಬೆಳಗಾವಿ ಟ್ರೇನಿಂಗ ಕಾಲೇಜಿನ ಪ್ರಾಂಶುಪಾಲರು ಇವರೇ ದಿಢಂಬರಪಟ್ಟಿಯನ್ನು ತಯಾರಿಸಿಕೊಟ್ಟಿಹರು.

Bhonjungrao K. Hoolgoul.
ಪ್ರಿನ್ಸಿಪಾಲ ಟ್ರೇ. ಕಾ. ಬೆಳಗಾವಿ.

Cresondence.

ಪತ್ರ ವ್ಯವಹಾರವು.

--ಪ್ರಕಟನೆಯು;--

ವಿದ್ಯಾಭಿವೃದ್ಧಿಯು ಸುಖಿಲಭಿಸಲಭಿಲಾಷಿ ಸಜ್ಜನರಿಗೂ
ೀರಿಸುವದೇನಂದರೆ--ಕಳೆದ ಮೆ, ಎಪ್ರಿಲ್, ಜೂನ, ಈ
ಗಳ ಶಾಲಾಪತ್ರಿಕೆಗಳಲ್ಲಿ ಪ್ರಸಿದ್ಧಂಗ್ಯೆದಂತೆ; ರಾಜಕೀ
ರ ವಿಲಾಸದ ಲಿ ನೇ ಅಧ್ಯಾಯವನ್ನು ಅತಿ ಶ್ರಮೆಯೊ
ು (೬ ತೆರದಿಂ) ಟೀಕೆಸಿ; ಬೆಂಗಳೂರಲ್ಲು ಪ್ರಿಂಟ್ ಮಾ
ಸಿದ ಅವ್ವಲ್, ದುಯ್ಯಂ, ಸಿಯ್ಯಂ ಪ್ರತಿಯೊಂದೊಂದ
ರೂ ೨।೦. ೧।।।೦. ೧।।೦. ರೂಪಾಯಿ. ಆದರೆ ಈ
ಾಸಲೇ ಬುಕ್ಕುಗಳ ಬೈಂಡ್ ಕಾಗದ ವನ್ನೈರೆ ಬೇರೇ
ಲ್ಲದೆ; ಅರ್ಧಮಾತ್ರ ಓಂದೇ ಇರುತ್ತೆ. ಕಾರಣ, ಟಪಾ
ಟಿಕ್ಕೀಟಿಗಳ ನಂಮ ಹೆಸರಿಲೆ ಕಳುಹಿಸ ಫಳಿಗ್ಗೆ-- ಪ್ರ
ಕ ರವಾನಿಸುತ್ತೇವೆ.

ಮುಕ್ತಾಂ ಮುಂಡರಗಿ). } ಅನ್ನದಾನಿ ಬಸವಲಿಂಗಾರ್ಯ
ರಿ೦ಬು ೭೦ ನೇ ಮಾಹೆ } ಮುಂಗಳೂರ ಅರಳೆಲೆ ಮತ
ಕಂಬರ ಸಂನ್ ೧೮೮೫ಳಿ } ದ, ಮು—ಮುಂಡರಗಿ, ತು.
ಸವಿ. } ಗದಗ, ಜಿ—ಧಾರವಾಡ.

ಕನ್ನಡ ಶಾಲಾಪತ್ರ ಕರ್ತರಿಗೆ—

ವಿ. ವಿ. ಕೆಳಗೆ ಬರೆದ ವಿನಂತಿಗೆ ತಮ್ಮ ಸುಂದರವಾ
ಪತ್ರವಲ್ಲಿ ಸ್ಥಳ ಕೊಡಿಯಬೇಕೆಂದು ಮತ್ತು ಈ ವಿ
ಂತಿಯನ್ನು ದಕ್ಷಿಣ ಭಾಗದ ಎ. ಇ. ಮೆ. ರಸೆಲ್
ರರಿಗಳಿಗೆ ಅರ್ಪಿಸಬೇಕೆಂದು ಇಚ್ಛಿಸುತ್ತೇನೆ.

"ಅಂಟ್ರೆಂಡ ಮಾಸ್ತರರು ಟ್ರೇನಿಂಗ ಕಾಲೇಜಕ್ಕೆ ಹೋಗಿ ಕಲಿಯಲಿಕ್ಕೇ ಬೇಕು. ಅಥವಾ ಕಾಲೇಜದ ಲ್ಲಿ ದರವರ್ಷ ಆಗುವ ಸರಟೇಫೀಕೇಟ ಪರೀಕ್ಷೆಯುಂ ನು ಕೊಟ್ಟು ಸರಟೇಫಿಕೇಟವನ್ನು ಸಂಪಾದಿಸಲಿಕ್ಕೇ ಬೇ ಕೆಂದು ವಿದ್ಯಾಖಾತೆಯ ಮುಖ್ಯಾಧಿಕಾರಿಗಳು ಸರಕ್ಯೂಲ ರಗಳನ್ನು ಕೊಟ್ಟಿದ್ದಾರೆ ಮತ್ತು ಈ ವಿಷಯದಲ್ಲಿ ಮು ಖ್ಯ ಭಾಗದ ಎ. ಆ. ಧೊರೆಗಳು ಪುಣೆಶಾಲಾ ಪತ್ರಕೆ ಪ್ರ ಸ್ತಕೆ, ಇ೩ ಸಂಚಿಕೆ, ೪ ಪಾನು ೬೨ರಲ್ಲಿ ಅಂಟ್ರೆಂಡಮಾ ಸ್ತರರು ಟ್ರೇನಿಂಗ ಕಾಲೇಜದ ಸರಟೇಫಿಕೇಟನ್ನಾಗಲಿ, ೬ನೇ ಷ್ಟ್ಯಾಂಡರ್ಡಿನಂತೆ ಕಮಿಟಿ ಸಮಕ್ಷ ಪರೀಕ್ಷೆಯ ನ್ನು ಕೊಟ್ಟು ಸರಟೇಫಿಕೇಟನ್ನಾಗಲಿ, ಸಂಪಾದಿಸಿದರೆ ಆ ವರಿಗೆ ಟ್ರೆಂಡರೆಂತೆ ತಿಳಿಯುವೆವು. ಯೆಂದು ಸರಕ್ಯೂಲರ ನ್ನು ಕೊಟ್ಟಿದ್ದಾರೆ. ಈ ಸರಕ್ಯೂಲರವು ದಕ್ಷಿಣಭಾಗದ ಅಂಟ್ರೆಂಡ ಮಾಸ್ತರರಿಗೆ ಸಂಬಂಧಿಸುವದೋ? ಇಲ್ಲೋ? ಯೆಂಬು ಚಿಂತಿಸುತ್ತೇನೆ. ಒಂದು ವೇಳೆ ಸಂಬಂಧಿಸಿದ್ದರೆ ನಮ್ಮ ದಯಾನಿಧಿಗಳಾದ ಮೆ. ರಸೆಲ್ ಧೊರೆಗಳು ಕನ್ನ ಡ ಶಾಲಾಪತ್ರಿಕೆಯಲ್ಲಿ ಪ್ರಕಟಿಸುವರೆಂದು ಕೋರುತ್ತೇ ನೆ. ಇಂತಿಬಿನ್ನಹ

ಅಂಟ್ರೆಂಡ ಮಾಸ್ತರರ
ಸ್ನೇಹಿತನು

ಕನ್ನಡ ಶಾಲಾಪತ್ರ ಕರ್ತರಿಗೆ—

ವಿ. ವಿ. ವಿದ್ಯಾರ್ಥಿಗಳ ವಿಜ್ಞಾಪನೆ ಏನಂದರೆ ಸಾಲಿ ಗಳಲ್ಲಿ ಬರುವಾಗ್ಗೆ ನಿಮ್ಮ ಕಡಿಗೆ ಹಿಡುವ ಪುಸ್ತಕಗಳೂ

ೀಟ ಮುಂತ್ತಾದ ಸಾಮಾನುಗಳೂ ಇರಬೇಕೆಂದು ಜಾ
ೀರ ನೋಟೀಸುಗಳನ್ನು ನೋಡಿದ್ದೇವೆ. ಆದರೆ ಕ
ಡ ಮೊಬಲನೇ ಪುಸ್ತಕ ಸಹ ಎಷ್ಟೋ ದಿವಸದಿಂದ ಡಿ
ೊಕ್ಕ ಕ್ರಯ ಕೊಟ್ಟು ಕಳುಹಿಸಿದಾಗ್ಯೂ ಶಿಗುವದಿಲ್ಲ.
ಇದರಂತೆ ಕೆಲವು ಪುಸ್ತಕಗಳ ಕೊರ್ತೆ ಇರುತ್ತವೆ. ಆ
ರಿಂದ ಪುಸ್ತಕ ಕರ್ತರಿಗೂ ಅಧಿಕಾರಸ್ಥರಿಗೂ ಈ ತಂ
ಪತ್ರಮಾರ್ಗದಿಂದ ಪ್ರಾರ್ಥಿಸಿದ್ದೇವೆ.

ಈ ಪುಸ್ತಕ ಕರ್ತರಿಂದ ಕೆಲವು ಶಾಲಾ ಉಪಯೋಗ
ವಳ್ಳ ಪುಸ್ತಕಗಳು ತಯಾರಾದ ಬಗ್ಗೆ ಜಾಹೀರಾತು ಪ್ರ
ಗಟವಾಗುತ್ತವೆ. ಅವುಗಳನ್ನು ತರಸಿ ಕೊಳ್ಳಬೇಕಾದರೆ
ಪುಸ್ತಕದ ಕ್ರಯದಷ್ಟಂತಲು ಅದರ ರಜಿಷ್ಟ್ರರವು ಮುಂ
ತಾದ ಹಾಸಲು ಹೆಚ್ಚಾಗೆಯಾಗಿ ತೊಂದರೆ ಉಂಟಾಗುತ್ತ
ದೆ. ಈಗ ಉಳಕೆ ಪುಸ್ತಕಗಳು ಶಿಗುವಂತೆ ಬೇಕಾದ ಪು
ಸ್ತಕಗಳ ಕ್ರಯವು ತಾಲೂಕ ಡಿಪೊಕ್ಕ ಕಳುಹಿಸಿದರೆ
ಶಿಗುವಂತೆ ತಜವೀಜು ಸರಕಾರದಿಂದಾಗಲಿ ಅಥವಾ ಪು
ಸ್ತಕ ಕರ್ತರಿಂದಾಗಲಿ ಆವಲ್ಲಿ ನಮಗೆ ತಿಳಿದುಕೊಳ್ಳ
ಲಿಕ್ಕೆ ಚಸ್ಮಾಗಿ ಆಗುವದು ತಾರೀಖು ನೇ ನವೆಂಬರ
ಸನ್ನು ಮಿಷಲಿಗೆ ಇಸವಿ. ಇಂತಿ ವಿದ್ಯಾರ್ಥಿಗಳ ವಿಜ್ಞಾಪನೆ.

ರಾಜಮಾನ್ಯ ರಾಜಶ್ರೀ ಕನ್ನಡ ಶಾಲಾಪತ್ರ ಕರ್ತ
ಇವರಿಗೆ—

ಕೆಳಗೆ ಬರವ ಎರಡು ವಂಗ್ತಿಗಳನ್ನು ಶಾಲಾಪತ್ರಿಕದಲ್ಲಿ
ಹಾಕಿಸಿ ಪ್ರಗಟ ಮಾಡರಿ—

ಏಶಿಯಾ, ಯುರೋಪ ಮುಂತ್ತಾದ ಖಂಡಗಳ ನಕಾಶ

ದ ಕೆಳಭಾಗದಲ್ಲಿ ಒಂದೊಂದು ದೇಶದ ಪರ್ವತಗಳ
ಕೃತಿಯನ್ನು ತೋರಿಸಿರುತ್ತಾರೆ ಆದರೆ ಅವುಗಳಲ್ಲಿ ಕೆ
ವು ಕಪ್ಪು ಬಿಳದು ಬಣ್ಣಗಳುಂಟು ಕೆಲವು ಬರೇ ಬಂ
ದನೇ ಇರುತ್ತವೆ. ಹೀಗಿರುವದಕ್ಕೆ ಕಾರಣವ್ಯಾವದಾ
ದು ಬರದು ತಿಳಿಸಿದಲ್ಲಿ ಅವರ ಆಭಾರಿ ಆದೇನು. ಇಂ
ಬಿನ್ನಹ.

ಶೇಷಗಿರಿರಾವ ಪರವತಿ ವಿದ್ಯಾರ್ಥಿ ಶಾಲಾ ಗೂಳೆ
ದಗುಡ್ಡ ನಂಬರ ೬

ಶಾಲಾಪತ್ರಿಕೆಯು.

ಪುಸ್ತಕ ೧೦] [ಸಂಚಿಕೆ ೧೧

ಬೆಳಗಾವಿ, ಮಾಹೆ ಫೇಬ್ರುವಾರೀ ೧೮೭೫.

EDUCATIONAL NEWS.

ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ಮೆ. ಇನಸ್ಪೆಕ್ಟರ ಧೊರೆಗಳು ಈಗ ಕಲಾದಗಿ ಜಿಲ್ಲೆ, ಯುಲ್ಲಿರುತ್ತಾರೆ—ಮುಂದಿನ ತಿಂಗಳಲ್ಲಿ ಧಾರವಾಡಕ್ಕೆ ಮಿ ನನ್ ಕಾಲೆಯು ಪರೀಕ್ಷೆಯನ್ನು ವಾಗಿ ಬರತಕ್ಕವರಿರು ಶ್ಯಾರೆಂತ ಕೇಳುತ್ತೇವೆ.

ಈ ವರ್ಷದ B. A. ಪರೀಕ್ಷೆಯಲ್ಲಿ ೪೦ ಜನರು ಪಾಸ್ ಆದರು—ಮೊದಲನೇ ವರ್ಗದಲ್ಲಿ ೫ ಮಂದಿ, ಎರ ನೇ ವರ್ಗದಲ್ಲಿ ೭೫ ಮಂದಿ.

ಈ ವರ್ಷದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸ್ ಆದ ವಿದ್ಯಾರ್ಥಿಗಳಿಗೆ ಇನಾಮುಗಳು ದೊರೆದದ್ದು ಕ್ಯಾಗಂದರೆ— ಸಾತಾರೆಯ ಹಾಯಸ್ಕೂಲಿನವನೊಬ್ಬ ವಿ ದ್ಯಾರ್ಥಿಗೆ, ಜಗನ್ನಾಥ ಶಂಕರಶೇಟ ಇವರ ಮೊದಲನೇ ಸಂಸ್ಕೃತ ಸ್ಕಾಲರಶಿಪ್— ಶೊಲ್ಲಾಪುರದ ಹಾಯಸ್ಕೂಲಿನ

ವನೊಬ್ಬ ವಿದ್ಯಾರ್ಥಿಗೆ, ಪದರೀ ಅಪರ ಯಿರಪನೇ ಸ್ಮಾ ರಕಿಪ್, ಮುಂಬಯಿಯೊಳಗಿನ ಸೇಂಟ ಮೇರೀಜ್ ಇನ ಸ್ಟಿಟ್ಯೂಶನ್ನೆಂಬ ಶಾಲೆಯವನೊಬ್ಬ ವಿದ್ಯಾರ್ಥಿಗೆ, ಕಾವನ ಜೀ ಹವಾನಗೀನ ಇವರ ಲ್ಯಾಟಿನ ಸ್ಮಾರಕಿಪ್; ಕರಾಚಿ ಯ ಹಾಯುಸ್ಕೂಲಿನವನೊಬ್ಬ ವಿದ್ಯಾರ್ಥಿಗೆ, ಇಲಿಸ ಸಾಹೇ ಬರ ಇನಾಮು (ಹಿಂದುಸ್ಥಾನೀ ಭಾಷೆಯನುವಾದಕ್ಕಾಗಿ); ಬೆಳಗಾವಿಯ ಹಾಯುಸ್ಕೂಲಿನವನೊಬ್ಬ ವಿದ್ಯಾರ್ಥಿಗೆ, ಬಾ ಯಿ ಪೂರ್ಣಕಬಾಯಿ ಬೈರಾನುಜೀ ಜೀಜೀಭಾಯಿ ಯೆಂ ಬುವರ ಇನಾಮು--ಆದರೆ ಧಾರವಾಡದ ವಿದ್ಯಾರ್ಥಿಗಳಿಗೆ ಯೇನೂ ಪೊರೆಯಲಿಲ್ಲವೇ?—

ವಿಲಾಯತಿಯೊಳಗಿನ ಆಕ್ಸಫರ್ಡ, ಕೇಂಬ್ರಿಜ್, ಈ ಯಿರಪು ಪ್ರಖ್ಯಾತ ಯುನಿವರ್ಸಿಟಿಗಳ ಪೈಕ ವಲುವಂಗಿ ಸನ್ನ ಆ೮೫೫ ನೇ ವರ್ಷದಲ್ಲಿ ಗಿಲ್ಲಿಯು ಸರಕಾರದಿಂದ ೫೫೦೦೦ ರೂಪಾಯಿಗಳು ಪೊಡಲ್ಪಟ್ಟವು. ಇದು ಮುಂಬಯಿ ಇಲಾಖೆಯೊಳಗಿನ ಯಾವನೇ ವಿದ್ಯಾರ್ಥಿಗೆ ಸಲ್ಲುವ ಪೂರ್ಣದ ಮೂರು ಮಾತಿಗಿಂತ ಬಿಲ್ಲು ಎಮ್ಮು.

ವಿಲಾಯತಿಯೊಳಗಿನ ಸ್ಟೇಟಿನ ಸೆಕ್ರೆಟರಿಯವರು ಪಚೇರಿಗೆ ಇಂಡಿಯಾ ಆಫೀಸೆಂಬೆನ್ನುತ್ತಾರೆ-- ಅಲ್ಲಿಯು ಲಾಯ ಬ್ರರಿಯಲ್ಲಿ ಈ ದೇಶದಿಂದ ಪೂರ್ಯಲ್ಪಟ್ಟ ಅಸಂಖ್ಯ ಬೆ ಲೆಯುಳ್ಳ ಪ್ರಾಚೀನ ಗ್ರಂಥಗಳುಂಟು. ಆ ಪುಸ್ತಕಗಳ ಲ್ಲಿ ಇತ್ತೆಕಡೆಯಲ್ಲಿ ಪ್ರೊಂದ-- ಪಳೆ ಪುಸ್ತಕವನ್ನು ಸಿಕ್ಕರು ತ್ತದೆ—ಅದು ಬೇದಾಕ್ಕೀಯೆಂಬುವನೊಬ್ಬ ಚಿಸಾಟ ಮಹ

ಪ ಪಾದ್ರಿಯಿಂದ ಬರೆಯಲ್ಪಟ್ಟದ್ದು—ಅವನು ಹಿಂದಿನ ಕತ
ಮಾನದ ಆರಂಭದಲ್ಲಿ ಗೋವಾ ಪಟ್ಟಣದಲ್ಲಿ ಇರುತ್ತಿದ್ದ
ನು—ಅವನು ಈ ದೇಶಕ್ಕೆ ಬಂದಬಳಿಕ ತನ್ನ ಸ್ವದೇಶದ
ನಡನುಡಿವಳಿಗಳನ್ನೆಲ್ಲ ಬಿಟ್ಟು, ಬ್ರಾಹ್ಮಣರ ಹಾಗೆ ವರ್ತಿ
ಸುತ್ತಿದ್ದನು— ಕಂದ ಮೂಲಗಳನ್ನು ತಿಂದು ಇರುವನು;
ಋಷಿಗಳ ಹಾಗೆ ವಸ್ತ್ರ ಧರಿಸಿ, ಕಿವಿಗಳೊಳಗೆ ಕುಂಡಲಗ
ಳನ್ನು ಹಾಕಿಕೊಂಡು, ವ್ಯಾಘ್ರಚರ್ಮದ ಮೇಲೆ ಕೂಡುವ
ನು; ನಡೆಯುವಾಗ ಕಾಲಿಗೆ ಪಾದುಕೆಗಳನ್ನು ಹಾಕುವ
ನು; ಈ ಪ್ರಕಾರ ಅವನು ಋಷಿಗಳ ಹಾಗೆ ಕಾಲಕ್ಷೇಪ
ಮಾಡುತ್ತಿದ್ದನಂತೆ—ಇವನು ತನ್ನ ಗ್ರಂಥದಲ್ಲಿ ಯೇಸುಕ್ರಿ
ಸ್ತನ ಪರಾಕ್ರಮಕ್ಕೂ ರಾಮಚಂದ್ರನ ಪರಾಕ್ರಮಕ್ಕೂ
ತುಲನೆಯ ಮಾಡುತ್ತಾನೆ!

ನಾವೆಲ್ಲಾ ದೇಶದೊಳಗಿನ ಒಕ್ಕಲಿಗರ ಮುಖ್ಯ ಆಹಾರ
ವು ರಾಗಿಯ ಬಕ್ಕರಿ, ಹಾಲು, ಇಪ್ಪರ ಹೊರತು ಬೇರೆ
ಯೇನು ಅಲ್ಲ. ಆದರ ಅವರು ಹಿಡುವ ಬಂಡಿಗಳ ಸಂ
ಗಡ ಯಿಡೆಣಿಡದೆ ಐದ್ಯೆದು ಮೈಲು ಹಿಡುತ್ತ ಹೋಗು
ತ್ತಾರೆ. ಮದ್ಯಮಾಂಸಗಳ ಆಹಾರಕ್ಕಿಂತ ಧಾನ್ಯಗಳ ಆ
ಹಾರದಲ್ಲಿ ಆರೋಗ್ಯವು ಹೆಚ್ಚಾಗಿರುವುದೆಂಬ ಸಂಗತಿಯು ಇ
ತ್ತಿತ್ತಲಾಗಿ ಯುರೋಪದ ಜನರಿಗೆ ತಿಳಿಯುತ್ತ ನಡಿದಿದೆ.

ನಾರಾಯಣ ಅನಂತಶಾಸ್ತ್ರೀ ಹೋಂಗರೇ ಯೆಂಬವ
ಮೊಬ್ಬ ಕೊಂಕಣಸ್ಥ ಬ್ರಾಹ್ಮಣನು ಇಬ್ಬರು ತಂಗೆಂದಿ
ರೊಡನೆ ಬೆಳಗಾವಿಗೆ ಬಂದಿರುತ್ತಾನೆ. ಇವನು ಸ್ವಣೆ

ಯಲ್ಲಿ ಮೊದಲು ಇರುತ್ತಿದ್ದ, ಕಾಶಿಗೆ ಹೋಗಿ ವಿದ್ಯಾ
ಭ್ಯಾಸ ಮಾಡಿದನು—ಈತನೂ ಈತನ ಇಬ್ಬರೂ ತಂಗಿಂ
ರೂ ಬಹು ಸುರಸವಾಗಿ ಪುರಾಣ ಹೇಳುತ್ತಾರೆ—ಈ ಸ್ತ್ರೀ
ಯರ ಅಸ್ಖಲಿತವಾಣಿಯುಳ್ಳ ಪುರಾಣ ಕೇಳಿ ಜನರು ಬಹು
ಳ ಸಂತೋಷ ಪಟ್ಟರು.

ಬಂಗಾಲ ಇಲಾಖೆಯೊಳಗಿನದೊಂದು ಜಿಲ್ಲೆಯ ಸಬ್
ಇನಸ್ಪೆಕ್ಟರನು ರಾಜಕುಮಾರೀ ಯೆಂಬ ಸ್ತ್ರೀಯಳ ವಿ
ಗಳಿಗೆ ಬಲಾತ್ಕಾರ ಮಾಡಿದರಿಂದ ಆ ಇನಸ್ಪೆಕ್ಟರನಿ
ಯಿರಡು ವರ್ಷದ ಸಕ್ತ ಮಜೂರಿಯ ಶಿಕ್ಷೆಯಾಯಿತು.

ಅತಿ ಗೌರವದ ರಾಜಕೀಯ ವೃತ್ತಾಂತಗಳು.

ಬಡೋದೆಯ ಮಲ್ಹಾರರಾವ ಮಹಾರಾಜ ಗಾಯಕ
ವಾಡ ಇವರು ಅಲ್ಲಿಯ ರೆಸಿಡೆಂಟರಾದ ಕರ್ನಲ್ ಫೇ
ಯರ ಯೆಂಬ ಘೋರಿಗಳಿಗೆ ವಿಷ ಹಾಕಿಸಿದರೆಂದು ಇವರ
ಮೇಲೆ ಆರೋಪವು ಬಂದವೆ. ಈ ಕಾರಣದಿಂದ ಈ
ಮಹಾರಾಜರು ಈಗ ಇಂಗ್ಲಿಷ ಸರಕಾರದವರ ಕೈಯಲ್ಲಿ
ಇರುತ್ತಾರೆ. ಹಾಯಲ್ ಕವಿಕನ್ನೆಂಬದೊಂದು ಪಂಚರ
ಸಭೆಯು ನೇವಿಸಲ್ಪಟ್ಟು ಈ ತಿಂಗಳಿನ ೨೭ ನೇ ತಾ
ರೀಖಿನಲ್ಲಿ ಇವನ ಅಪರಾಧವ ವಿಚಾರಣೆಯು ಸುರುವಾಗಿ
ತಕ್ಕದ್ದುಂಟು. ಈ ಕವಿಕನ್ನಿನಲ್ಲಿ ಮೂವರು ಯು
ರೋಪಿಯನ್ ಪ್ರಖ್ಯಾತ ಜಡಜರೂ, ಸಂಸ್ಕೃ ಪೊಲ್ಲಿಟರ್,
ಜಯಪುರದ ಮಹಾರಾಜರು, ಈ ಪ್ರಕಾರ ೬ ಜನರು
ಕೂಡ್ರುವರೆಂದು ವಾರ್ತೆಯುಂಟು.

ನೇಪಾಳ ಸಂಸ್ಥಾನದ ಮುಖ್ಯ ಪ್ರಧಾನರಾದ ಸರ್ ಜಂ
ಬಾಹಾದೂರೆಂಬವರು ವಿಲಾಯತಿಗೆ ಹೋಗುವದಕ್ಕೋಸ್ಕರ
ರವಾಗಿ ಮುಂಬಯಿಗೆ ಬಂದಿರುತ್ತಾರೆ. ಅದರೆ ಈ
ವೃದ್ಧ ಮಂತ್ರಿಗಳು ಮೊಂದು ದಿವಸ ಕುದುರೆಯ ಮೇ
ಕೂತು ಹೊರಗೆ ಹೋದಾಗ ಕುದುರೆಯು ಬೆದರಿ ಬಿ
ದರಿಂದ ಇವರಿಗೆ ಒಹಳ ಪೆಟ್ಟು ತಾಗಿತು. ಆ ವ್ಯಾಧಿ
ಯಿಲ್ಲ ಈಗ ಪರಿಹಾರವಾದಾಗ್ಯೂ, ಇದು ದೊಡ್ಡ ಅಪಶ
ಯನವಾಯಿತೆಂದು ತಿಳಿದು, ಬಾಹಾದೂರವರು ವಿಲಾಯತಿ
ಹೋಗದೆ ತಿರಿಗಿ ಸ್ವದೇಶಕ್ಕೆ ಹೋಗುತ್ತಾರೆಂದು ಕೇ
ಳುತ್ತೀವೆ. ಇವರು ನಾಶಿಕಕ್ಕೆ ಹೋದಾಗ ಬಹಳ ದಾ
ನಧರ್ಮಗಳನ್ನು ಮಾಡಿದ್ದಲ್ಲದೆ, ೪೦೦೦೦ ರೂಪಾಯಿ
ಕಿಚ್ಚ ಮಾಡಿ ಹಾಯಸ್ಕೂಲಿಗಾಗಿ ಕೊಂಡು ಮನೆಯನ್ನು
ಕಟ್ಟಿಸಿ ಕೊಡಲೊಡಂಬಟ್ಟಿರುತ್ತಾರಂತೆ.

ಇಂಗ್ಲಿಷ ಸರಕಾರದವರಿಗೆ ನಿಜಾಮು ಸರಕಾರದವರು
ಬರಾಡ ಪ್ರಾಂತವನ್ನು ಹಿಂದಕ್ಕೆ ಜೇಡುತ್ತಾರೆ. ಬ
ಗ್ಗೆ ಪಾರ್ಲಿಮೆಂಟ ಸಭೆಯಲ್ಲಿ ಬೇಗ ಮಾಡಬೇಕಾಗಳು
ನಡಿಯು ತಕ್ಕನ್ನುಗಳುಂಟು.

SELF HELP.

ತನಗೆ ತಾನೇ ನೆರವಾಗುವದು.

ಯೋರಡನೇ ಪ್ರತಿಯು ವಿಶ್ವಾಂಸರ ಚರಿತ್ರೆಗಳಲ್ಲಿ ಸಹ
ವೇ ತರದ ದೃಢನಿಶ್ಚಯದ ಉದಾಹರಣೆಗಳು ಸಿಕ್ಕುತ್ತ

ತ್ತಿಪೆ. ಸ್ವಲ್ಪಕಾಲದ ಹಿಂದೆ ಜಾನ್‌ಬ್ರಿಟನೆಂಬವ
ಬ್ಬನು ಅಗಿ ಹೋದನು. ಅವನು "ಇಂಗ್ಲಂಡ, ವೇ
ಳ್ ಸೌಂದರ್ಯಗಳು," ಯೆಂಬ ಪುಸ್ತಕವನ್ನು, ಬೆ
ಅನೇಕ ಇಪೂರತುಗಳ ಸಂಬಂಧದ ಬೆಲೆಯುಳ್ಳ ಪು
ಕಗಳನ್ನು ರಚಿಸಿದನು. ಅವನು ನಿಲ್ಟಶಾಯರಹೊ
ಕಿಂಗೆಸ್ಟನ್ನೆಂಬ ಗ್ರಾಮದಲ್ಲಿ ಒಂದು ದರಿದ್ರಾಷ್ಟ ಗು
ಕುಲದಲ್ಲಿ ಹುಟ್ಟಿದನು. ಅವನ ತಂದೆಯು ಬೊಟ್ಟ್ಯಿ
ನ್ನು, ಮೊಲ್ಟೆಂಬ ಅಂಬಲಿಯನ್ನು ಮಾಡಿ ಮಾರಿ
ಜೀವಿಸುತ್ತಿದ್ದನು. ಆದರೆ ಆ ವ್ಯಾಪಾರದಲ್ಲಿ ಅವನಿ
ಕೇಡು ಬಂದು, ಬ್ರಿಟನ್ನನು ಚಿಕ್ಕವನಿದ್ದಾಗಲೇ ಅವನಿ
ಮೃಜ್ಯು ಹತ್ತಿತು. ಬ್ರಿಟನ್ನನು ಶಾಲೆಯಲ್ಲಿ ಸ್ವಲ್ಪ ಕಾ
ಮಾತ್ರ ವಿದ್ಯಾಭ್ಯಾಸ ಮಾಡಿದನು; ಆದರೆ ಅವನಿಗೆ ಪ್ರ
ನಡತೆಯುಳ್ಳ ಸಹವಾಸವು ಬಹಳ ವಿದ್ಯಾಗಳ್ತಿ, ಅವನ
ಅದರಿಂದ ಕೆಡಲಿಲ್ಲ. ಚಿಕ್ಕಂದಿನಲ್ಲಿಯೇ ಅವನು ತನ್ನ
ಬಿಬ್ಬ ಕಕ್ಕನ ಸಂಗಡ ಉಪಕ್ಕೀಗಕ್ಕೆ ಹತ್ತಿದನು.
ಕಕ್ಕನು ಕ್ಲಿಕರ್‌ವೆಲ್ಲೆಂಬಲ್ಲಿ ಭೋಧಿಸ ಶಾಲೆಯನ್ನು
ಇಟ್ಟಿದ್ದನು. ಅವನ ಕೈ ಕೆಳಗೆ ಬ್ರಿಟನ್ನನು ಹಡ್ಡ ನ
ಹಿಮೆ ಐದು ವರ್ಷ ನಿಂತು, ದ್ರಾಹ್ಮಾಮ್ಯವನ್ನು ಕುಲ್ಲ
ಯಲ್ಲಿ ಹಾಕಿಡುವದೂ, ಕುಪ್ಪಿಗಳಿಗೆ ಬೆಣ್ಣೆಯನ್ನು ಕೂಡಿ
ಸುವದೂ, ಅವುಗಳನ್ನು ವೈಯ್ದು ಪಿಪ್ಪಿಗೆಯಲ್ಲಿಡುವ
ದೂ ಮುಂತಾದ ಕೆಲಸಗಳನ್ನು ಮಾಡುತ್ತಿದ್ದನು. ಆ
ದರೆ ಅವನು ಮುಂಜೆ ಅಶಕ್ತನಾದದರಿಂದ ಕಕ್ಕನು ಅವನ
ಕೈಯಲ್ಲಿ ಐದು ವರ್ಷಗಳ ಸಂಬಳವೆಂದು ಯಿಪ್ಪತ್ತು ಗಿ
ನಿಗಳನ್ನು ಕೊಟ್ಟು ಹೊರಗೆ ಹಾಕಿದನು. ಮುಂಜೆ ಏ

೪ ವರ್ಷಗಳವರಗೆ ಅವನು ಬಹಳ ಕ್ಷಾಮಕ್ಲೇಶಗಳನ್ನು ಅನುಭವಿಸಿದನು; ಯಾವತ್ತೂ ಗರ್ವವೂ ಇಲ್ಲದವನಾಗಿ ತಿರುಗಿದನು; ಆದರೂ ಅವನು ತನ್ನ ಚರಿತ್ರೆಯಲ್ಲಿ ಬರೆದಿಟ್ಟಿದ್ದೇನಂದರೆ, "ನಾನು ಮಾಡಕ್ಕೆ ಯೋಗ್ಯವಲ್ಲದ ಕೆಲಸಗಳನ್ನು ಕೊಟ್ಟು ಬಡತನದಿಂದ ಒಂದು ಮೂಲೆಯಲ್ಲಿ ಹಾಸಿಸಿದ್ದಾಗ್ಯೂ, ನನಗೆ ಅಭ್ಯಾಸದಲ್ಲಿ ಪ್ರೀತಿ ಇತ್ತು. ಚಳಿಗಾಲದಲ್ಲಿ ಬೆಳ್ಳಿಗ್ಗೆ ಡಾಸಿಗೆಮೇಲೆ ಮಲಗಿಕೊಂಡು ಓದಬೇಕಾಗುತಿತ್ತು; ಯಾಕಂದರೆ ಕಾಯಿಸಿಕೊಳ್ಳುವದಕ್ಕೆ ಬೆಂಕಿಯು ಸಲುವಾಗಿ ಹಣವೇಜಿ ಮಹಾಜನ ತ್ರಾಣವೆಯು ನನ್ನಲ್ಲಿ ಇದ್ದಿಲ್ಲ." ಇವನು ಬಾಥಯೊಂಬಲ್ಲಿಗೆ ನಡಿದು ಹೋಗಿ, ಅಲ್ಲಿ ಒಂದು ಮನೆಯಲ್ಲಿ ಕೋಚಿಯ ಕೆಲಸವನ್ನು ಸಂಪಾದಿಸಿಕೊಂಡನು. ಆದರೆ ಸ್ವಲ್ಪ ಕಾಲ ಮೊಳಗೇ ಅವನ ಕತ್ತರ ಒಂದು ಕಾಸಾದರೂ ಇಲ್ಲದೆ, ಕಾಲಲ್ಲಿ ಜೋಡುಸದ ಇಲ್ಲದೆ, ಮೈಮೇಲೆ ಅಂಗಿಯಿಲ್ಲದೆ ಲಂಡನಕ್ಕೆ ಪುನಃ ತಿರುಗಿ ಬಂದನು. ಆದರೆ ಲಂಡನ ಟೂವರ್ನ್ ಎಂಬ ಭೋಜನ ಶಾಲೆಯಲ್ಲಿ ಅವನಿಗೆ ಕೋಚಿಯ ಕೆಲಸವೇ ಸಿಕ್ಕಿತು. ಅಲ್ಲಿ ಬೆಳಗಿನ ಏಳು ಘಂಟೆಯಿಂದ ರಾತ್ರಿಯು ಹನ್ನೊಂದು ಬಡಿಯುವ ವರೆಗೂ ಅವನು ಇರಬೇಕಾಗುತಿತ್ತು. ಈ ವಿಧವಾಗಿ ಕತ್ತರಿಯಲ್ಲಿ ಇಟ್ಟುಕೊಂಡು ಸರ್ವ ಕಾಲವೂ ಕೆಲಸ ಮಾಡಬೇಕಾದದರಿಂದ ಅವನ ಪ್ರಕೃತಿಯಲ್ಲಿ ಅಕಸ್ಮಾತ್ತಾಗಿ ಅವನು ಆ ಕೆಲಸ ಬಿಟ್ಟು ಒಬ್ಬ ವಕೀಲನ ಕೈಕೆಳಗೆ ಪಾರಕ್ಕೆ ಪದವೀಧರ ಬಿಲ್ಲಿಂಗುಗಳಂತೆ ಸಂಬಳ ಗೊತ್ತು ಮಾಡಿಸಿಕೊಂಡು ನಿಂತನು. ಅನಂತರ ಕೋಚಿಯ ಕೆಲಸ ಮಾಡು

ತ್ತಿದ್ದಾಗ ತನಗೆ ಯಾವಾಗಾದರೂ ಸ್ವಲ್ಪ ವಿನಿಟುಗಳ ಅವಕಾಶ ಸಿಕ್ಕಾಗ ಕೈಬರಹವನ್ನು ತಿದ್ದಿಕೊಳ್ಳುವ ಅಭ್ಯಾಸ ಮಾಡುತ್ತಿದ್ದನು. ಈ ಕೆಲಸದಲ್ಲಿರುವಾಗ ಅವನು ತನಗೆ ಅವಕಾಶ ಸಿಕ್ಕಾಗ ಮಾರುವ ಪುಸ್ತಕಗಳನ್ನು ಇಟ್ಟು ಅಂಗಡಿಯೊಳಗೆ ಅಡ್ಡಾಡುತ್ತಾ ತಾನು ಕೊಳ್ಳಲಾರದಂಥ ಪುಸ್ತಕಗಳನ್ನು ತೆಗತೆಗೆದು ಸ್ವಲ್ಪ ಸ್ವಲ್ಪ ಓದುತ್ತಾ, ಕೆಲಮಟ್ಟಿಗೆ ಶಿಥಿಲವಾದ ಜ್ಞಾನವನ್ನು ಸಂಪಾದಿಸಿಕೊಂಡನು. ಆ ಮೇಲೆ ಆ ಕೆಲಸ ಬಿಟ್ಟು ಅವನು ವಾರಕ್ಕೆ ಇಪ್ಪತ್ತು ಶಿಲ್ಲಿಂಗುಗಳ ಸಂಬಳವುಳ್ಳ ಮತ್ತೊಂದು ಕೆಲಸವನ್ನು ಸಂಪಾದಿಸಿದನು. ಅಲ್ಲಿ ಸಹ ಪುಸ್ತಕಗಳನ್ನು ಓದುತ್ತಾ ಅಭ್ಯಾಸ ಮಾಡುತ್ತಾ ಕಾಲ ಕಳೆಯುತ್ತಿದ್ದನು. ಇಪ್ಪತ್ತೇಳನೇ ವರ್ಷದ ವಯಸ್ಸಿನಲ್ಲಿ ಅವನಲ್ಲಿ ಒಂದು ಹೊಸ ಪುಸ್ತಕವನ್ನು ರಚಿಸುವಷ್ಟು ಶಕ್ತಿಯುಂಟಾಗಿತ್ತು. ಆದದರಿಂದ "ಬಯೂಫೋರ್ಟ್‌ಯೆಂಬವನ ಸಾಹಸ ಕೃತ್ಯಗಳು" ಯೆಂಬ ಹೆಸರಿನದೊಂದು ಪುಸ್ತಕವನ್ನು ಬರೆದು ಪ್ರಸಿದ್ಧ ಮಾಡಿದನು. ಆ ಕಾಲದಿಂದ ಮುಂದೆ ಮರಣದವರೆಗೂ, ಅಂದರೆ ಮುಮ್ಮೂರು ಐವತ್ತೈದು ವರ್ಷಗಳ ಮಟ್ಟಿಗೂ ಪ್ರತಿವರ್ಷವು ಒಳ್ಳೆ ಕ್ರಮ ಪಟ್ಟು ಪುಸ್ತಕಗಳನ್ನು ರಚಿಸುವುದರಲ್ಲಿಯೇ ಕಾಲಕ್ಷೇಪ ಮಾಡಿದನು. ಅವನು ಪ್ರಸಿದ್ಧ ಮಾಡಿದ ಗ್ರಂಥಗಳು ಯೆಂಬತ್ತೇಳಕ್ಕಿಂತ ಕಡಿಮೆಯಿಲ್ಲಿಕ್ಕಿಲ್ಲ. ಅವುಗಳಲ್ಲಿ "ಇಂಗ್ಲಂಡಿನೊಳಗೆ ಪುರಾತನವಾದ ದೊಡ್ಡ ಗುಡಿಗಳು" ಯೆಂಬ ಪುಸ್ತಕವು ಶ್ರೇಷ್ಠವಾದದ್ದು; ಅದು ಹದಿನಾಲ್ಕು ದೊಡ್ಡ ದೊಡ್ಡ ಭಾಗಗಳುಳ್ಳ ದ್ದಾಗಿಯೂ, ಬಹು ಮನೋಹರವಾ

ಯೂ, ಇದ್ದು, ಜಾನ ಬ್ರಿಟನ್ನನು ದಣಿಯದೆ ನಡಿಸಿದ
ಬ್ಯೋಗದ ಅತ್ಯುತ್ತಮವಾದ ಸ್ಮಾರಕ ಕೃತ್ಯವಾಗಿ
ತ್ತದೆ.

WISE SAYINGS.

ಸರ್ವಜ್ಞಗಳು.

ಮುಂಡಿಬೋಳಾದವರ ಕಂಡು ನಂಬಲು ಬೇಡ ಖಂಡಿ
ವಪ್ಪ ಪರತತ್ವವುಳ್ಳವರ ಕಂಡರೇ ನಂಬು ಸರ್ವಜ್ಞ ॥೧॥

ಕಾಸೆಕಚ್ಚಟೆವ್ಯಾಕೆ ಅಸುರದೆ ಜಗಳವಾಕೆ ಕ್ಲೇಶ
ನು ಕಿತ್ತುಕೊಳಲ್ಯಾಕೆ ಮನಸಿನ ಆಸೆ ಬಿಡದನಕ ಸರ್ವ
ಜ್ಞ ॥೨॥

ನಿತ್ಯನೇಮಗಳ್ಯಾಕೆ ಮತ್ತೆ ಪೂಜೆಗಳ್ಯಾಕೆ ನೆತ್ತಿಬೋ
ಳ್ಯಾಕೆ ಜಡಿಯಾಕೆ ವದನದಿ ಸತ್ಯವುಳ್ಳವಗೆ ಸರ್ವಜ್ಞ ॥೩॥

ಜೆಡೆಯ ಕಟ್ಟಲುಬಹ್ರದು ಕಡಾಸನುಡಲುಬಹ್ರದು ಬಿ
ಜಿ ದೇಗುಲದಿ ಯಿರಬಹ್ರದು ಕರಣಂಗಳ ತಡೆಯುವದು
ಕಷ್ಟ ಸರ್ವಜ್ಞ ॥೪॥

ಅರವಟ್ಟಳಿಯನ್ನು ಪೂರರ ಕಂಟಕವನ್ನೆ ಯೀ
ದಹವ್ವನವ ತಡವರೆ ಶಿವ ತಾನು ಬೇರೆಯಿಲ್ಲೆಂದ ಸರ್ವ
ಜ್ಞ ॥೫॥

ಮನೆಯೊಳಾನು ಮನೆಯೀನು ನೆನಹಲ್ಲಿ ಯಿದ್ದರೆ ಸಾಕು ನೆ

೧ ತಲೆ, ೨ ಕಾವೀಅರವಿ, ೩ ಲಂಗಟ, ೪ ರಾಷ್ಟ್ರಸರಯಾನ, ೫ ಲುಂ
ಟ, ೬ ಕಾವುಕೊಳ್ಳೋಧಿಂಗಳ ಉಪಕಾರವನ್ನು, ೭ ಎಂತಾನ್ನಪೊಂಣು
ವುಣ್ಣು ಇಪ್ಪುಗಳ ತೊಂದರೆಯನ್ನು

ಸಯುವೆ ಶಿವನ ಮರತು ತಾ ಪರ್ವತದ ಕೊನೆಯಲ್ಲಿ ಬ್ಲಿ
ನು ಸರ್ವಜ್ಞ ॥೩
ಹಿಡಿ ಬೂದಿಯು ಪೂಸಿ ತೋದ ಕಾನಿಯ ಹೊದ್ದು ಮೈ
ಬಿಸಿಯ ಮೇಲೆ ವಿಷಯಕ್ಕೆ ತಿರುಗುವ ಪೂದಿಗರ ನೂ
ತು ಸರ್ವಜ್ಞ ॥೩
ಬಿನ್ನೊ ಬಿಂಕಿಯ ನಡುವೆ ತಣ್ಣಗಾಗಿರಬಹುದೆ ಜಗ
ದ್ದ ಬಳಿಯ ಒಡನಾಡಿ ಯೋಗಿಯು ಮಣ್ಣು ಕೂಡುವನ
ಸರ್ವಜ್ಞ ॥೪
ವಜನದಲ್ಲಿಲ್ಲಾರು ಕುಜಿ ಯೋಗಿ ಸುವೀರರು ಕುಜ
ಹೇಮಕಸ್ತ್ರೀ ಸೊಂಕಲು ಲೋಕದೊಳಗಜಲದಪರಾರು
ಸರ್ವಜ್ಞ ॥೫
ಕುರಿ ಕಬ್ಬಿನೊಳು ಹೊಕ್ಕು ಅರಿಯುವವೆ ತನಿರಸವ
ಹೊರಗಣ ಸೋಗಿಯು ಪುಲಿದಂತೆ ತತ್ವದ ಕುರುಹಿಲ್ಲದ
ವಗೆ ಸರ್ವಜ್ಞ ॥೬॥
ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ ಜಾತಿ
ವಿಜಾತಿ ಯೆನಬೇಡ ಶಿವನೊಲಿದಾತನೇ ಜಾತ ಸರ್ವಜ್ಞ
॥೭॥
ಮುಟ್ಟವನು ಕಂಡವರು ಮುಟ್ಟಲಂಜುವರು ನೋಡಿ
ಮುಟ್ಟವೇ ತಡದು ತಾನಾದ ದೇಹವ ಮುಟ್ಟಕ್ಕೆ ಸ
ಜ್ಞ ॥೮॥
ಯತಿಗ್ಯಾಕೆ ಕೋಪ ದುರ್ಮತಿಗ್ಯಾಕೆ ಪರತತ್ವ ಪತಿ
ವ್ರತಿಗ್ಯಾಕೆ ವರನೋಟ ಜ್ಞಾನಿಗೆ ಸ್ತುತಿನಿಂದೆಯಕ್ಕೆ ಸರ್ವ
ಜ್ಞ ॥೯॥

ಇ ಗ್ರಂಥದ

(ಮುಂದೆ ನೋಡಿರಿ

NOTICES.

ನಂಬರು ೭೫೪೦.

ಸಕ್ಯೂರ್ಲ್ಲರು.

ಟ್ರೇನಿಂಗಕಾಲೇಕ್ಕೆ ಹೋಗುವ ಬಗ್ಗೆ ಅಪ್ಪಣೆ ಹೊಂ
ದಂಥ ಅನ್‌ಟ್ರೇನ್‌ಡ ಮಾಸ್ತರರು, ತಮ್ಮ್ ಶಾಲೆಯ
ಆಜಗವನ್ನು ತಕ್ಕೊಳ್ಳಲಿಕ್ಕೆ ಟ್ರೇನ್‌ಡ್ ಮಾಸ್ತರರು
ಂದ ಹೊರಟಲೇ ಆ ಕಾಲೇಜಿಕ್ಕೆ ಹೋಗುವದಿಲ್ಲ ವೆಂದು
ಮುಗೆ ತಿಳಿಸಬೆ. ಇದು ಬಹಳ ಪೋಷಾರ್ಥವಾದ ನಡ
ವಳು. ಅದರಿಂದ ಟ್ರೇನಿಂಗಕಾಲೇಜಿಕ್ಕೆ ಹೋಗಲಪ್ಪ
ಣೆ ಹೊಂದಿದ ಅನ್‌ಟ್ರೇನ್‌ಡ್ ಮಾಸ್ತರ ಜಾಗೆಲ್ಲರು ತ
ಮ್ಮ ಶಾಲೆಯ ಆಜಗವನ್ನು ಹೊಸಮಾಸ್ತರನಿಗೆ ಹೊಪ್ಪ
ಸಲೆ ತಮಮಾಡಬೆ ಬೇಕಾಗಿರುವ ಹೊಸ್ತಿಗೆ ಕಾಪು ಹಾಕ
ವದ ಬಗ್ಗೆ ಟ್ರೇನಿಂಗಕಾಲೇಜಿನ ಪ್ರಿನ್ಸಿಪಾಲರಿಗೆ ರಿ
ಪೋರ್ಟು ಮಾಡತಕ್ಕದ್ದು. ಯಾವನಾದರೂ ಅನ್‌ಟ್ರೇನ್
ಡ ಮಾಸ್ತರನು ಈ ಪ್ರಕಟಣೆಯು ಅಮಲ್ದಾರಾಗದಿದರೆ, ಅವ
ನು ಈ ಜಾತಿಯೊಳಗಿಂದ ಬಿಡಲ್ಪಟ್ಟಂತಾಗುವನು.

ಶೋಕಾಕ ತಾ. ೭೧ } (Signed) W. A. Russell.
ಜನವರಿ ೧೮೯೫ಇ. } ಇ. ಅನಸ್ಟೆಂಟ ಪಬ್ಲಿಕ ಇನ್ಸಾಗ.

ನಂಬರು ೭೬೫೫.

ಶಾಲೆಗಳಲ್ಲಿ ಮೈಕ್ರಾಲಿ ತೆಗಿಸುವ ಬಗ್ಗೆ ಹುಕುಮು.

ನನ್ನು ಆಫೀಸಿನ ನಂಬರು೪೬೫೬ತಾರೀಖು ೧೮ನೇ
ಸೀಬ್ರುವಾರಿ ಸನ್ನ ೧೮೭೪ನೇ ಇಸವಿಯ ಸರ್ಕ್ಯೂಲ

ರಿಗೂ, ಸನ್ಮಾನಿತರಿಗೂ ಇನಸ್ಪೆಕ್ಟರು ಮಾರ್ಚ ತಿಂಗಳ
ಕನ್ನಡ ಶಾಲಾಪತ್ರಕದ ಎಳ್ಳಿಂಬಳ್ಳಿ ಈ ಪುಟಗಳಲ್ಲಿ
ಪ್ರಕಟಿಸಲ್ಪಟ್ಟ ಸರಕ್ಯೂಲರಿಗೂ ದಕ್ಷಿಣ ಭಾಗದೊಳಗ
ನ ಹಿಪ್ಪೂಟೀ ಇನಸ್ಪೆಕ್ಟರರು ಲಕ್ಷಕೊಡತಕ್ಕದ್ದೆಂದು ಪ
ನಃ ಸೂಚಿಸುತ್ತೇವೆ; ಮತ್ತು ಯಾರಾದರೂ ಸ್ಕೂಲಮಾ
ಸ್ತರರು ಈ ಬಗ್ಗೆ ದುರ್ಲಕ್ಷ್ಯ ಮಾಡಿದ ಉದಾಹರಣೆ
ಯು ಕಂಡು ಬಂದಲ್ಲಿ ಅದನ್ನು ಆ ಹಿಪ್ಪುಟೀ ಇನಸ್ಪೆಕ್ಟ
ರರು ತತ್ಕಾಲವೇ ನಮಗೆ ತಿಳಿಸತಕ್ಕದ್ದು. ಈ ಪ್ರಕ
ಮು ಅಮಾನ್ಯ ಮಾಡಿದವರಿಗೆ ದಂಡವಾಗಲಿ ಬರತರ್ಫಾ
ಗಲಿ ಆಗುವದು. ಈ ಪ್ರಕಾರವು ಸರಿಯಾಗಿ ನಡಿಸಲ್ಪ
ಡುತ್ತದೆಯೋ ಇಲ್ಲವೋ, ಯೆಂಬದನ್ನು ಹಿಪ್ಪುಟೀ ಇನ
ಸ್ಪೆಕ್ಟರರು ನೋಡತಕ್ಕದ್ದು. ಈ ಪ್ರಕಾರವು ಅಸಾಮಾನ್ಯ
ಮಾಡುವದು, ಶಾಲೆಯ ಕೆಲಸದಲ್ಲಿ ಆಗುವ ದುರ್ಲಕ್ಷ್ಯ
ಕ್ಕೆ ಇಲ್ಲವೆ ರಜಿಷ್ಟ್ರರುಗಳನ್ನು ಸುಳ್ಳು ತುಂಬುವದಕ್ಕೆ
ಸರಿಯಾದ ತಪ್ಪುಂಟು. ಯಾವನಾದರೂ ಮೈಲೆ ತ್ರಿಗೆಯು
ವವನು ಶಾಲೆಗೆ ಬಂದ ಕೂಡಲೆ ಸ್ಕೂಲಮಾಸ್ತರನು ಅವನಿ
ಗೆ ಅನಕ್ಯಕವಾಗಿದ್ದ ಪಟ್ಟಿಯನ್ನು ಸಿದ್ಧ ಮಾಡಿಕೊಂಟ್ಟು
ಯೆಲ್ಲ ಹುಡುಗರನ್ನು ಕೂಡಿಸಿ, ಆ ಮೈಲೇ ತ್ರಿಗೆಯುವ
ವನು ಕೇಳಿದ ಸಂಗತಿಗಳನ್ನೆಲ್ಲ ಅವನಿಗೆ ತಿಳಿಸಿಸಲಾಯಿ
ಮಾಡತಕ್ಕದ್ದು. ಮೈಲೇ ತ್ರಿಗೆಯುವವನು ಶಾಲೆಗೆ ಬಂ
ದ ದಿವಸ ಮೈಲೇ ತ್ರಿಗೆಯುವ ಕೆಲಸಕ್ಕೆ ಬೇಕಾಗುವಷ್ಟು
ಹೊತ್ತಿನ ವರಿಗೆ ಶಾಲೆಯ ಕೆಲಸವು ನಿಲ್ಲಿಸಲ್ಪಡತಕ್ಕದ್ದು.
"ಶಾಲೆಯ ಕೆಲಸಕ್ಕೆ ಅಡ್ಡಿಯಾಯಿತೆಂಬ" ಸಬಬು ಕೇ
ಳಲ್ಪಡಲಿಕ್ಕಿಲ್ಲ.

ಸಮುಖಂಡಿ. ತಾ. ೭೦ನೇ ಜನವರಿ ೧೮೭೫ ಇಸವಿ. } (Signed) W. A. Russell. ಇ. ಇನಸ್ಪೆಕ್ಟರ ದಕ್ಷಿಣ ಭಾಗ.

ಬೆಳಗಾಂವೀ ಜಿಲ್ಹೆದೊಳಗಿನ ಯೂವತ್ತೂ ಸ್ಕೂಲಮಾಸ್ತರರಿಗೆ—

ಕೆಳಗೆ ಸಹಿ ಮಾಡುವವರ ಕಡಿಂಡ ತಿಳಿಯಪಡಿಸುವದೇನಂದರೆ—ಈ ನೋಟೀಸು ಮುಟ್ಟಿದಂದಿನಿಂದ ಸರವೀಸ ಟಿಕೀನ ಜಪ್ತಾಖರ್ಚಿಸ ಬುಕ್ಕು ಇಟ್ಟು ನಮ್ಮ ಸ್ವಾರೀ ಬಂದ್ಯಾಗ್ಯೆ ತೋರಿಸುತ್ತಾ ಇರಬೇಕು ತಾ॥ ೨೪ ನೇ ಜಾನೇವಾರಿ ಸನ ೧೮೭೫ ಇಸ್ವಿ.

P. V. Chintamanpetkar.

ಹಿ. ಎ. ಇನಸ್ಪೆಕ್ಟರ ಜಿಲ್ಹಾ ಬೆಳಗಾಂವಿ.

ಸನ ೧೮೭೫ ಇ॥ ಜನವರಿ ತಿಂಗಳದಲ್ಲಿ ಬೆಳಗಾಂವಿ ಜಿಲ್ಹೆಯೊಳಗೆ ಮಾಸ್ತರ ಜನರ ನೇಮಣೂಕು ಮುಂತಾದ ವಿವರ ಕೆಳಗೆ ಬರೆದ ಪ್ರಕಾರ—

೧ ಸಂಪಗಾಂವ ತಾಲೂಕ ಪ್ರಣಶೀಕಟ್ಟೆ — ಇಲ್ಲಿಯ ಮಾಸ್ತರರಾದ ಮುಲ್ಲಪ್ಪಾ ಕೆಂಚಪ್ಪಾ ಕವದಿ ಇವರಂನು ಇವು ಸಂಬಳದ ಮೇಲೆ ಸಂವದತ್ತಿ ತಾ॥ ಹೂಲಿ ನೂಲಿಯು ಪೆಡ್ಡಿ ಮಾಸ್ತರರ ಕೆಲಸಕ್ಕೆ ನೆಗ್ಗಿಮಾಡಿರುತ್ತದೆ ಸಂಬಳ ರೂಪಾಯಿ ೧೫.

೧ ಸಂಪಗಾಂವ ತಾ॥ ಸಂಗೊಳ್ಳಿ—ಇಲ್ಲಿಯ ಮಾಸ್ತರರಾದ ಮಹಲಿಂಗ ನಿರಂಜನಯ್ಯಾ ಇವರಂನು ಬಡತಿ ಮಾ

ಡಿ (೫ ರೂ॥) ಪ್ರಣಾಶೀಕಟ್ಟಿ ಸಾಲಿಯ ಹೆಡ್ಡ ಮಾಸ್ತ
ಕೆಲಸಕ್ಕೆ ವರ್ಗ ಮಾಡಿರುತ್ತದೆ—ಸಂಬಳ ರೂ॥ ೩೫.

೩ ಸಂವದತ್ತೀ ತಾ॥ ಹೂಲಿ—ಇಲ್ಲಿಯ ಮಾಸ್ತರ
ದ ಕೃಷ್ಣಾಜಿ ಸರಸೂ ಇವರು ತಮ್ಮ ಕೆಲಸಕ್ಕೆ ರಾ
ನಾಮೆಯನ್ನು ಕೊಟ್ಟದ್ದು ಮಂಜೂರು ಮಾಡಿರುತ್ತದೆ

೩ ಚಂದಗಡ ತಾ॥ ಬೆಳಗಾಂವ— ಇಲ್ಲಿಯ ಮಾಸ್ತ
ರಾದ ಕೃಷ್ಣಾಜಿ ಹರೀ ಇವರಿಗೆ ತಾ॥ ೧ ನೇ ಜನವ
೧೮೭೫ ರಿಂದ ೩ ತಿಂಗಳದ ಬಿಂನ ಸಂಬಳದ ರಜಾ ಕೊ
ಟ್ಟಿರುತ್ತದೆ.

೩ ಬೆಳಗಾಂವಿ ೨ ನೇ ನಂಬರದ ಅರೇ ಸಾಲಿಯ
ಹೆಡ್ಡ ಮಾಸ್ತರ ದಾಜೀ ಸಖಾರಾಮ ತುಳಪುಳೆ ಇವರಿಗೆ ವೆ
ಲಿನ ಕಲವಿನಲ್ಲಿ ಬರದಂತೆ ೩ ತಿಂಗಳದ ರಜಾ ಕೊಟ್ಟ
ರುತ್ತದೆ.

೩ ನಿಪ್ಪಾಣೆ ತಾ॥ ಚಿಕ್ಕೋಡಿ— ಇಲ್ಲಿಯ ಮಾಸ್ತ
ರಾದ ಆತ್ಮಾರಾಮ ಲಕ್ಷ್ಮಣ ಬಾವಟೆ ಇವರಿಗೆ ತಾ॥ ೧
ನೇ ಜನವರಿಯಿಂದ ೩ ತಿಂಗಳದ ಹಕ್ಕಿನ ರಜಾ ಕೊಟ್ಟ
ರುತ್ತದೆ.

ತಾ॥ ೨೪ನೇ ಮಾಹ ಜಾನೇವಾರಿ ಸಂನ ೧೮೭೫ ಇಸ್ವಿ

P. V. Chintamanpetkar.

ಡಿ. ಎ. ಇ. ಜಿಲ್ಹಾ ಬೆಳಗಾಂವ.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂ
ಮಾಸ್ತರರಿಗೆ—

ತಿಳಿಯ ಪಡಿಸುವದೇನಂದರೆ ತಿಂಗಳ ತಿಂಗಳಿಗೆ ಫೀ ಭರಣ

ಾಡಲಿಕ್ಕೆ ಪುಕ್ಕುಮು ಹೋಗಿದ್ದು ಇನ್ನು ವರಿಗೆ ಯೇ
ಕೆ ಮಾಸ್ತರರು ತಿಂಗತಿಂಗಳಿಗೆ ಭರಣಾ ಮಾಡೋಣಲ್ಲಾ
ನ್ನ ಮೇಲೆ ಈ ಪ್ರಕಾರ ಆದಲ್ಲಿ ಅವರ ಸಬು ಕೇಳ
ದಂಡ ಅಗರ ಯೋಗ್ಯ ತಜವೀಜ ಮಾಡಲಾದೀತು.

ಕದಾಚಿತ ಯೇನಾದರೂ ಯೋಗ್ಯಕಾರಣದಿಂದ ಭರ
ಾ ಮಾಡಲಿಕ್ಕೆ ಹರಕತು ಆದಲ್ಲಿ ಯೋಗ್ಯಕಾರಣ ತಾ
ೂಕ ಮುಸ್ತರ ಕಡಿಗೆ ಬರದು ಕಳಸುತ್ತಿರಬೇಕು.

ತಾಲೂಕ ಮಾಸ್ತರರು ಫೀ ಭರಣಾದ ಪಾವತಿ ಕಳಸು
ಾಗ್ಗೆ ಯಾವ ಸಾಲಿಯು ಫೀ ಭರಣಾ ಆಗಿರುವದಿಲ್ಲಾ ಅ
ರ ಯೋಗ್ಯ ಕಾರಣ ಜವಾಬ ಬಂದದ್ದು ಪಾವತಿಯ ಲ
ತ ಕಳಸುತ್ತಿರಬೇಕು.

ಈ ಪ್ರಕಾರ ವಹಿವಾಟ ಇಡುವಲ್ಲಿ ಯಾರು ತಪ್ಪು
ರು ಅವರಿಗೆ ದಂಡಮಾಡಲಾದೀತು ತಿಳಯುವದು ತಾ
ೀಖು ಏಪ್ರಿ ಮಾಹೆ ಜಾನೇವಾರಿ ಇ೮೭೫ಇಸವಿ.

Ramchandra A. Sawanoor.

ಡಿ. ಇ. ಇ. ಜಿಲ್ಲಾ ಕಲಾದಗಿ.

ಮೆ. ಇ. ಇನಸ್ಪೆಕ್ಟರ ಸಾಹೇಬ ಬಹಾದ್ದುರವರ ಮಂ
ಜೂರಿಯಿಂದ ಕಲಾದಗಿ ಜಿಲ್ಹೆಯೊಳಗಿನ ಮಾಸ್ತರ ಜನರ
ಸಗಾರವಗಿ ತಾರೀಖು೧೫ನೇ ಜಾನೇವಾರಿ ಇ೮೭೫ ಇಸ
ವಿ ಹಿಡದು ಮಾಡಿದ ವಿವರಾ--

ಇ ಗುರರಾವ ಸ್ವಾಮಿರಾವ ಅಶಿಪ್ಟೆಂಟ ಅಂಗ್ಲೊ ಹ್ವರ
ನಾಕ್ಯೂಲರ ಸ್ಕೂಲ ವಿಜಾಪೂರ ಇವರಿಗೆ ಇಗ್ಗೆ ಇರುವ

ಷ್ಟು ೧೨ ರು. ಸಂಬಳಕ್ಕೆ ಕನ್ನುರ ಸಾಲಿಯ ಹೆಡ್ಡ ಮಾ
ಸ್ತರ ಕೆಲಸಕ್ಕೆ ವರ್ಗಮಾಡಿದೆ.

೨ ಕೇಷೋ ರಾಮಚಂದ್ರ ಸ್ಕೂಲಮಾಸ್ತರ ಕನ್ನುರ
ಇವರಿಗೆ ಇಗ್ಗೆ ಇರುವಷ್ಟು ೧೨ ರು. ಸಂಬಳಕ್ಕೆ ಮು
ತ್ತಗಿ ಸಾಲಿಯ ಹೆಡ್ಡಮಾಸ್ತರ ಕೆಲಸಕ್ಕೆ ವರ್ಗಮಾಡಿದೆ-

೩ ಶ್ರೀಧರ ಗೋವಿಂದನಾತು ಸ್ಕೂಲಮಾಸ್ತರ ಮು
ತ್ತಗಿ ಇವರನ್ನು ಒಂದು ರುಪಾಯಿ ಸಂಬಳ ಕಡಮಿಮಾ
ಡಿ ೧೨ ರುಪಾಯಿ ಸಂಬಳಕ್ಕೆ ಸಂಗಮ ಸ್ಕೂಲಮಾಸ್ತರ
ಕೆಲಸಕ್ಕೆ ವರ್ಗಮಾಡಿದೆ.

೪ ರಾಮಚಂದ್ರ ದಾದಾಬಾಯ್ಯ ಸ್ಕೂಲಮಾಸ್ತರ ಸಂ
ಗಮ ಇವರಿಗೆ ಇಗ್ಗೆ ಇರುವಷ್ಟು ೧೨ ರು. ಸಂಬಳಕ್ಕೆ
ವಿಜಾಪೂರ ಆಂಗ್ಲೋಹ್ವರನ್ಯಾಕ್ಯೂಲರ ಸಾಲಿಯಲ್ಲಿ ಅಶಿ
ಷ್ಟಣ ಕೆಲಸಕ್ಕೆ ವರ್ಗಮಾಡಿದೆ.

೫ ವಿಂಡುರಂಗ ಬಾಳಕೃಷ್ಣ ಸ್ಕೂಲಮಾಸ್ತರ ಕಲ
ಕೇರಿ ಇವರಿಗೆ ಇಗ್ಗೆ ಇರುವಷ್ಟು ೧೪ ರು. ಸಂಬಳಕ್ಕೆ
ಕೇಲೂರ ಸಾಲಿಯ ಹೆಡ್ಡಮಾಸ್ತರ ಕೆಲಸಕ್ಕೆ ವರ್ಗಮಾ
ಡಿದೆ.

೬ ಗೋವಾಳ ವ್ಯೆಂಕಟೇಶ ಸ್ಕೂಲಮಾಸ್ತರ ಕೇಲೂ
ರ ಇವರಿಗೆ ಇಗ್ಗೆ ಇರುವಷ್ಟು ೧೪ರೂ. ಸಂಬಳಕ್ಕೆ ಮು
ದಕವಿ ಸಾಲಿಯ ಹೆಡ್ಡಮಾಸ್ತರ ಕೆಲಸಕ್ಕೆ ವರ್ಗಮಾಡಿದೆ.

೭ ಗೋವಾಳ ನಾರಾಯಣ ಸ್ಕೂಲಮಾಸ್ತರ ಮುದಕ
ವಿ ಇವರಿಗೆ ಇಗ್ಗೆ ಇರುವಷ್ಟು ೧೪ ರು. ಸಂಬಳಕ್ಕೆ ಕ
ಲಕೇರಿ ಸಾಲಿಯ ಮಾಸ್ತರ ಕೆಲಸಕ್ಕೆ ವರ್ಗಮಾಡಿದೆ.

೮ ನಾರಾಯಣ ಬಾಳಕೃಷ್ಣ ಸ್ಕೂಲಮಾಸ್ತರ ಹಗ

ವನಿ ಇವರಿಗೆ ಅದೇ ಜಾಗೇದ ಸಂಬಳಾ ತಂಗೊಂಡು
ಾತಲಗಾವಿಯಲ್ಲಿ ಮಾಸ್ತರ ಕೆಲಸಾ ನೋಡುವದಕ್ಕೆ ವ
ರ್ಗ ಮಾಡಿದೆ.

ಕ್ಕೇಷೋ ಮುಚಪರ ಸ್ಕೂಲಮಾಸ್ತರ ಸಾತಲಗಾ
ಇವರಿಗೆ ಅವೇ ಜಾಗೇವ ಸಂಬಳಾ ತಗೊಂಡು ಜಗಜಿ
ನಿ ಸಾಲಿಯ ಮಾಸ್ತರ ಕೆಲಸಾ ನೋಡುವದಕ್ಕೆ ವರ್ಗ
ಮಾಡಿದೆ.

೧೦ ರಾಘವೇಂದ್ರ ರಾಮಚಂದ್ರ ಮಾಜಿ ಮಾಸ್ತರಜಾ
ಹಾಳ ಇವರನ್ನು ಹುನಗುಂದ ಅಶಿಷ್ಟ್ಯಣ ಕೆಲಸಕ್ಕೆ ನೇ
ಮಿಸಿದೆ ಸಂಬಳ ರು. ೧೫

ರಜಾ.

೧ ಶ್ರೀಪಾದ ಕೃಷ್ಣ ಸ್ಕೂಲಮಾಸ್ತರ ಕಲಾದಗಿ ನಂ
ರ ೨ ಇವರಿಗೆ ತಾ. ೨೬ ಜೆನೇವಾರಿ ೧೮೭೫ ಹಿಡಿ
ು ಒಂದು ತಿಂಗಳ ಹಕ್ಕಿನ ರಜಾ ಕೊಟ್ಟಿದೆ.

೨ ವಿಷ್ಣು ಕೃಷ್ಣ ಸ್ಕೂಲಮಾಸ್ತರ ಬಾದಾಮಿ ಇವರಿ
ಒಂದು ತಿಂಗಳ ಹಕ್ಕಿನ ರಜಾ ಕೊಟ್ಟಿದೆ.

೪ ನೀಲಪ್ಪ ಬಿನ್ನ ಗುರಲಿಂಗಪ್ಪ ಸ್ಕೂಲಮಾಸ್ತರ
ಂಬಗಿ ಇವರಿಗೆ ಒಂದು ತಿಂಗಳ ಪೂರಾ ಸಂಬಳಾ ಕೊ
ುದು ರಜಾ ಕೊಟ್ಟಿದೆ.

ು. ಚಡಚಣ ತಾ. ೬ ಡಿಸರವಾರಿ ೧೮೭೫ಇ.

Ramchandra A.
Sawanoor.
ಬ. ಇ. ಆ. ಜಿಲ್ಲಾ ಕಲಾದಗಿ.

Crresondence.

ಪತ್ರವ್ಯವಹಾರವು.

ಮೆ॥ ರಾ॥ ರಾ॥ ಪ್ರಚುರ ಕಾಲಾವತ್ರಕದ ಪ್ರವ
ಖರಿಗೆ—

ತಮ್ಮ ಪ್ರಪ್ಯೈನವ್ರಣಾವುವು — ವ್ರಸ್ತುತದಲ್ಲಿ ಪ್ರಕಟ
ವಾಗಿ ಜ್ಞಾನಪ್ರಭೆಯನ್ನು ಉಂಟು ಮಾಡುವಂಥಾ ತವ
ಪತ್ರಿಕೆಯಲ್ಲಿ ಪ್ರಸಿದ್ಧಿಸುವದಕ್ಕೆ ಸ್ವಲ್ಪ ಪ್ರತಿಶ್ರಯ ಪ
ಗ್ರಹವಾಗದೆ ಪ್ರೀತಿಯಿಂದ ಕೊಡುವಿರೆಂದು ವಾಜ್ಯಕ
ಕಾರವಾಗಿ ನಂಬುತ್ತೇನೆ—

ಮಯೂರ ಪುಚ್ಛದ ಅಗ್ರಭಾಗವನ್ನು (ಕಂಣೆನಹಾ
ಇದ್ದದ್ದು) ತೆಗೆದುಕೊಂಡು ಅದಕ್ಕೆ ಒತ್ತಿ ತೀಡುತ್ತಾ ಕ
ಯಿಂಪ ಬಡಿಯಲಾಗಿ ಅದರಲ್ಲಿ ಒಂದು ವಿಲಕ್ಷಣವಾದ
ಕ್ತಿ ಬಂದು, ಕೂಡಲೇ ಇದು ಬಹಳಾದರೆ ಯಿರಡು ಅ
ಗುಲ ಅಂತರದ ಮೇಲೆ ಇದ್ದ ಸಂಣ ಪದಾರ್ಥವನ್ನು
(ಕುಂಕುಮಪಂಥಾದ್ದು) ತನ್ನ ಕಡೆಗೆ ಎಳಕೊಳ್ಳೋಣ
ರಿಂದ ಆ ಪದಾರ್ಥವು ಅದಕ್ಕೆ ಹತ್ತುವದು (ಲೋಹಚು
ಬಕದಂತೆ) ದೊಡ್ಡ ಪದಾರ್ಥವಿದ್ದರೆ ಅದಕ್ಕೆ ಒಂದು ಸ
ಣ ಹತ್ತುವದು.

ಮತ್ತು ಮೇಲೆ ಬರದಂತೆ ಎರಡು ಗರಿಗಳಿಗೆ ಕೈಯಿ
ದ ಒಡಿದು, ಒಂದರ ಸವೀಪ ಒಂದು ಒಯಿದರೆ ಜೀ
ವವುಳ್ಳ ಪ್ರಾಣಿಗಳ ಹಾಗೆ ಒಂದರ ವಿರುದ್ಧ ಒಂದು (ವ
ನುಷ್ಯರು ತಲೆದೂಗುವಂತೆ) ಒಲದಾಡುವವು ಇದು ಪ್ರತ್ಯ
ಷ ತೋರುತ್ತದೆ.

ಇತ್ತಕಡಿಗೆ ಪದಾರ್ಥದ ಗುಣಕ್ರಿಯಾದಿ ಲಕ್ಷಣಗಳ

ನು ತಿಳದು ಹನರು ಅನೇಕ ಚಮತ್ಕಾರವಾದ ಕೃತಿಗಳ
ನ್ನು ಮಾಡಿ ಮಹತ್ತಾದ ಲಾಭಗಳನ್ನು ಪಡಕೊಳ್ಳಲೆಸಗಿ
ದ್ದಾರೆ. ಆದರೆ ಮೇಲೆ ಬರದ ಪದಾರ್ಥದಲ್ಲಿ ಇಂಥಾ
ಶಕ್ತಿ ಹ್ಯಾಗೆ ಬಂದಿರ ಬಹುದು—ಇದು ದಯಮಾಡಿ ಪದಾ
ರ್ಥವಿಜ್ಞಾನದಲಭಿಜ್ಞರು ತಿಳಿಸುವರು ಎಂದು ಪೂರ್ಣವಾಗಿ
ನಂಬುತ್ತೇನೆ. ಇಂತಿಬಿನ್ನಹ

ತಾರೀಖು ೭ಳಿ ಮಾ
ಹ ಜೂನೆವಾರಿ ಸಂನ
೧೮೭೫ನೆ ಇಸವಿ.

ಗೋವಾಳ ಗೋವಿಂದ ವೈದಕರ
ಸ್ಕೂ. ಮಾ. ಬಬಲೇಶ್ವರ ತಾ॥
ವಿಜಾಪೂರ ಜಿಲ್ಲಾ ಕಲಾದಗಿ.

ಮಹಾರಾಜ ರಾಜಮಾನ್ಯ ರಾಜಶ್ರೀ ಕನ್ನಡ ಶಾ
ಖಾಸತ್ರಕದ ಎಡಿಟರರಿಗೆ—

ವಿನಂತಿಪೂರ್ವಕ ವಿಜ್ಞಾಪನಃ ತಮ್ಮ ಕಡಿಗೆ ಒಳಗಡೆ
ತಾರೀಖು ೭ ಮಾಹೆ ಸಪಟಂಬರ ಸನ್ನ ೧೮೭೪ಳಿ ಇಸವಿ
ನವಸ ಳಳಗಹುವದ ಕವಿತೆಯಲ್ಲಿ ಎರಡನೇ ಕವಿತೆಯ ಮೊ
ದಲನೇ ಅಥವಾ ರುಚಿಯು ತಪ್ಪಿ ನಜರಚೂಕೆಯಿಂದ ಎರಡ
ನೇವರದ್ದು ಬರದಿರುತ್ತೇನೆ ಕಾರಣಾ ಆ ಶ್ಲೋಕವು ಎರ
ಡನೇ ಬಾರಿ ಈ ಶ್ಲೋಕಗಳ ಸಂಗಡಾ ಕಳುಹಿಸಿರುತ್ತೇನೆ.
ದಯ ಮಾಡಿ ಕ್ಷಮಿಸಿ ಆಕ್ರಯ ಕೊಡುವಿರೆಂದು ಪೂರ್ಣ
ವಾಗಿ ನಂಬುತ್ತೇನೆ ಇಂತಿಬಿನ್ನಹ

।ಭಾ॥ ಜಠರಲಂಬಿತಮಸ್ತಕದುರೆವು।
ಕುಟಿಸುಶೋಭಿತಮಬ್ಜಲೋಚನಂ।
ಕಟಕರತ್ನಾಂಕಿತವಹಸ್ತಗಳಂಕುಶಂಪಾಶಂ॥
ದಟಿತಹಾರದವಟಲದಿಂದಲಿ।

ವಿಟವಹಾನದಮೇಲಪರಿದ।
ಪಟುತರಾಧವನೂಳ್ಪ ಪೆಮಗ್ಯೆವಿಘ್ನೆ ರಹಿತವನು॥೩॥
ವಿನುತಲಧರಾಮ್ಯತಬಿಶೌಷ್ಯ್ಯವ।
ಜನವಿಲಾಸವನಂತಸವರತ।
ಭಿನವಪೂರಕ್ರಪಂಕಜಾಸನೆನಭಗವನಿವಾಣೇ!
ಕನಕಮಯಮುಖಭೂಷಣಂಗಳ।
ದಿನಪಪ್ರೀತಿಯುಮುಳ್ಳವನುಮತಿ।
ಯಿನಗೆಪ್ರೀತಿಯೊಳತ್ತುಸಲಹಲಿಬೇಕುನೀತಾಯೇ॥೪॥
ಅಂಧಕಾನುಬಂಧುಬಂಧಸಂಸೃತಿ।
ಸಂದಣಿಯುಂಬಿತ್ತಾವಶಾಳದೆ।
ನಿಂ[illegible]ಪೂರ್ಗನೀಹ್ಸೆಸಿಂದತಿತ್ವರದೀ॥
ವಂದಿತುಪಣ್ಯೋಕವೆನುಸಂದಿಸಿ।
ಪಂದುಗಂಪ್ರೀಡಿಸಲುನಿನ್ನುರು।
ಮುಂದಕಾರಿಚ್ಚಾಗಡಿಗಳಂತ್ರೋರಿಸಿದೆಗುರುರಾಯಾ॥೫॥
ಮೊದಲೊಂಧರದಕ್ಷೃತಿನಿಖಿಳಚದುರದಿ।
ಬುಧರಿಗಾಸೆಬಿಮೆಚ್ಚಿ ಮೆಣ್ಕೊ ೀ।
ವಿದಪ್ರಬಾಣಂಗಳನುಪ್ರಸ್ತುತದೆಲ್ಲ ಕವಿಗಳೇ॥
ಮುವಬಡಂಬಿಸಿಅಲ್ಪಮತಿಯಿವಿ।
ನಿದಿದುಮೇಣಾಗೀತಪೇಳ್ವದು।
ಪಥಿಯೊಳಡುಗದಿಗದಿಪದುರ್ಬಿಸಕೇಳ್ವುದುರುಜನರು॥೫॥

ಮುಂದಕ್ಕೆ ಸಾಗುವದು.

ತಾರೀಖು ೨೪ ಮಾ } ಗೋವಿಂದ ಗೋವಿಂದ ವೃ. ಸ್ವ
ಪೆಜಾನೇವಾರಿ ಸಂನ } ಮಾ. ಖಬಲೇಶ್ವರ ತಾಂ ವಿಜ
೧೮೭೫ ಇಂ } ಪೂರ ಜಿಲ್ಲಾ ಕಲಾದಗಿ.

मालिनि

क्वचिदपिसिततायामुद्भवेदंकइन्थं ।
मनसिसमनुमन्यांगीकृतंश्यामलत्वं ॥
दनुजकुलहरेणबलयापीतिकृष्णे।
पुलिनसलिलयोःकाम्यं सुविभ्राजते ते॥ १५॥

हे कृष्णे त्वं सर्वाशुभध्वंसिनीदर्शनादेवनिर्मुक्तिप्रदामंगलोद
ति जगद्विश्रुतासि.

मधुमाधवीवृत्त.

चिंताव्यथाचदुरितंक्षुदवद्यतृष्णा
तापत्रयंसहिवतान्यनशन्ममारं॥
त्वद्दर्शनप्रकटितार्धनिमेषमात्रे॥
सन्मंगलंसमुदितंनदिते प्रसादात्॥ १६॥

आर्यावृत्त.

ा संध्यात्वा ध्यात्वा ध्यात्वापिमनो ममाक्षिणीच सदा ॥
ष्ट्वादृष्ट्वापि पुन र्दृष्ट्वातृप्ति नचापुरायि कृष्णे ॥ १७ ॥
ात्वा स्नात्वा स्नात्वा पीत्वा पीत्वा पुनश्च पीत्वापि ॥
लिलमृत कल्पं तव गंतुंत्यक्त्वा नमेमतिः कृष्णे ॥ १८ ॥

ಪದವು॥ ಕಂಡೆತಿರುಪತಿ ವೆಂಕಟೇಶನು ಕಾರುಂಣ್ಯ
ುಕಸಾರ್ವಭೌಮನು॥ ಎಂಟು ಪಾಹಿನಂತೆ॥

ತೊರೆದಕಟಿನಾಂ ಪೋಗಲಾರೆನು।
ರಮುಖನೆ ಕೃಷ್ಣನಿಂತನು।
ರೆದು ತೀರವಿಹಾರಸುಖನನು।
ರದು ಮನಸನುಸರಿಸಿ ನಂತನು॥ ಧ್ರುವದ॥

ಅಡಿಗಳತ್ತ್ಯುತ್ತರವ್ರತಂಗಳು।
ಬಿಡವು ನಿಂನನು ನೋಡುವಾಟವಾ॥
ಒಡಲಿದೆಲೆ ತಾಯೆ ನಿನ್ನನಿರಹವ॥
ತಪೆಯುಮೊಂದರೆಘಳಿಗೆಯಾಡರು॥೪॥
ಯೀನುಧನ್ಯರೊ ನಿನ್ನತೀರದಿ।
ಸ್ನಾನದಾನಾದಿ ಕ್ರಿಯೆಗಳನು॥
ಸಾನುರಾಗದೆ ಮಾಡುತನುದಿನ।
ಶ್ರೀನಿವಾಸಾರ್ಪಣೆಯ ಮಾಳ್ಪರು॥೫॥
ಈವ್ರದೀನಂನೀಪ್ಸಿತಾರ್ಥವ।
ದೇವಿತವತಟನಿಕಟವಾಸದಿ॥
ಸೇವಿಸುತ್ತಿರುವಂತೆ ನಿಂನನು।
ದಾವಜನ್ಮಾಂತರದೊಳಾದರು॥೬॥೬೯॥

शार्दूलविक्रीडित

धुन्यैस्वाप्तजनोरुतापशमदायिन्यैसुफेनोर्मिणो-
भिन्यै भूसुरधर्मकर्मपरिपालिन्यैनुतायै सदा-॥
पुण्यैर्दुष्कलि कल्मषापदपहारिण्ये तु विश्वोपका-
रिण्यैविष्णुपदी समागमयुजे श्रीकृष्णवेण्यैनमः॥२०॥

आर्या

कृष्णांतर्गतगंगे विष्णुपदिनमोनमोस्तुतेऽयिसदा॥
त्वमनादिपुण्यकारिणि भुवनत्रयविश्रुतास्तुतासि सदा॥२१॥
हे मंदाकिनि त्वं स्वर्गिसेव्या लोकांतरवासिनितस्मात

आर्या

कलिकलुषेऽस्मिन्भुवने त्वन्नामसमोपमानपापेभ्यः॥

अतिदुर्लभापिसुलभा भविजनसंतारणोपकृत्यर्थम्॥२२॥

ಮತ್ತೇಭವಿಕ್ರೀಡಿತಂ

ನಡಿದೈತಂದತಿದೂರದಿಂದಲದು ಕಾಶೀಕ್ಷೇತ್ರಕಂ ನಂನನೀ।
ಬಡವರ್ ಸೇವಿಸಲಾರರೆಂದು ಕೃಪೆಯಿಂದೊಂದೊಂದು ಸ
ದ್ಯೋಗದೊಳ್
ನಿಡದೊಂದೊಂದುಮಜ್ಞಾನದೀಕ್ಷೆಳಕೆ ನೀನೇ ಬಂದು ಕೈ
ಕೊಂಡುಕೊ—
ಪ್ಪಡನಾತೀರ್ಥ್ಯವ; ಮಾಳ್ಪತತ್ಸುಜನವಂ ಶೋದ್ಧಾರಮಂ
ಜಾನ್ಹವೀ॥೨೫॥

सिंहोद्धतावृत्तम्

गांगीरथिस्वदवगाहनलालसापि पुण्यावहाच्चतवदर्शनतोविमुक्तिः॥
ज्ञानेद्रवंफलमनंतमितिप्रमाणं किंस्तूयतां निपुणोहितथैवमाच

उपजातिवृत्तम्

मंदोधकोहंविबलोऽविवेकी पापीकुदैवीगुरुबोधहीनः॥
अर्थादरिद्रोसुकृतिस्वयोग्य स्तथाऽयशस्वीचजनैर्विदुष्यः।२५

द्रुतविलंबितवृत्तानि

जननि जान्हवि क्वापि भूतले नहिममोपमो दुर्दशोऽतुले॥
तदपि सर्वथा मांच निर्मले नविजहाहि भो भक्तवत्सले॥२६॥

यदिजहास्ययं पापवानिति भुवनपावनेति श्रुतिस्तुतिः॥
करुणयाऽतएवावलोकय तनयमंब संग्रह्य पालय॥२७॥

कृपमापिस्वदीयावगाहने कृतमतंकः शंभूपगूहने॥
भवभयामयक्लांतिवारणं पतितवंशसूद्धारकारणं॥२८॥

ದುರಿತಕೋಟಿಯಂಕಾಣುತಾಗಳ್ ತರಿವನಿಂನಕೀತ್ಯಾ
ಮುಂಜುಳ
ಸರಿಕೆಳಂದಿಯುಂನಾಯುಲಂದದಿಂ ಹೊರಟುಸತ್ಯಲೋಕ
ತೆರಾಳದಿಂ॥೨
ಸುರಪುರಕ್ಕೆ ಬಂದಲ್ಲಿ ದೇವತಾ ತರುಣಯರ್ಕಳಂ ಕಂ
ಬಿಟ್ಟು, ತಾ
ಧರೆಯೊಳಾಯ್ದ ಮಾತಾಳಕೈದಿಯುಂ, ಜೊರೆಯದಾ
ಉದ್ದೇಶದಲ್ಲಿ ಯುಂ॥೩(

तव विधिन्वति सा सखी सखी चरतिचंचलाविश्वतोमुखी॥
तदपि नाथ माकातवालिके हराशिरस्फुरत्कुंदमालिके॥३१॥

(ಮುಂದೆ ಸಾಗುವದು.)

ಸಿದ್ಧನಾಥ ವಾಚನ ಮಂಬಯಿ
ಮೊರಬ. ಜಿ ಧಾರವಾಡ.
ಶಾಲಾಪತ್ರಿಕೆ.

ಪುಸ್ತಕ ೧೦] [ಸಂಚಿಕೆ ೧೨

ಬೆಳಗಾವಿ, ಮಾಹೆ ಮಾರ್ಚ ೧೮೭೫.

EDUCATIONAL NEWS.
ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ಮೆಹಬ್ಬಾನ್ ಇನಸ್ಪೆಕ್ಟರ ಧೊರೆಗಳವರು ಕಲಾದಗಿ ಲ್ಲೆಯೊಳಗಿನ ಶಾಲೆಗಳನ್ನು ನೋಡಿ, ಈ ತಿಂಗಳಲ್ಲಿ ಶನ್ ಶಾಲೆಯ ಪರೀಕ್ಷ್ಯೆಯು ಸಲುವಾಗಿ ಧಾರವಾಡಕ್ಕೆ ೀಗ ಬರತಕ್ಕವರಿದ್ದಾರೆಂದು ಳ್ಳುತ್ತೀವೆ—

ಮೆಹಬ್ಬಾನ್ ಡಾಯರೆಕ್ಟರ ಧೊರೆಗಳವರು ಸ್ವಲ್ಪ ವಸದೊಳಗೆ ಕೊಲ್ಲಾಪುರಕ್ಕೆ ಬರುವವರಿರುತ್ತಾರೆಂದು ತರ್ಮಾನ ನ್ಪುಂಟು—ಅಲ್ಲಿಗೆ ಬಂದಬಳಿಕ ಅವರು ಬಹು ರವಾಗಿ ಬೆಳಗಾವಿಗೂ ಧಾರವಾಡಕ್ಕೂ ಸಿರಬಹುದು—

ಸನ್ನ ೧೮೭೫ ನೇ ಇಸವಿಯ ಜುಲಾಯಿ, ಆಗಷ್ಟ, ಪಟಂಬರ, ಈ ಮೂರು ತಿಂಗಳುಗಳಲ್ಲಿ ಮುಂಬಯಿ ಸಿಲಾಖೆಯಲ್ಲಿ ಹೊಸದಾಗಿ ಪ್ರಸಿದ್ಧಿಪಡಿಸಲ್ಪಟ್ಟ ಪುಸ್ತಕ ಮುಂ ತಾದವುಗಳ ವಿವರು ಹ್ಯಾಗಂದರೆ— ೧೪೦ ಪುಸ್ತಕಗಳು,

ಳಿಳಿ ನಿಯಮಿತ ಕಾಲಕ್ಕೆ ಹೊರಡುವ ಮಾಸಿಕ ಪ
ಮುಂತಾದವುಗಳು, ೬ ಇತರ ಭಾಷೆಗಳು_

ಕಳೆದ ನಾಲ್ಕು ವರ್ಷಗಳಲ್ಲಿ ಮ್ಯಾಟ್ರಿಕ್ಯುಲೇ
ಪರೀಕ್ಷೆಗೆ ಹೋಗಿ ಪಾಸ್ ಆದ ಜನರ ವಿವರ ವರ್ತ
ನ ಪತ್ರಗಳಲ್ಲಿ ಪ್ರಸಿದ್ಧವಾದದ್ದು ಹ್ಯಾಗಂದರೆ_

ಪರೀಕ್ಷೆಗೆ ಹೋದವರು	೧೮೮೨ ೪೪೦	೧೮೮೩ ೬೬೨	೧೮೮೪ ೭೮೬	೧೮೮೫ ೧೦೯
ಇಂಗ್ಲಿಷದಲ್ಲಿ ಪಾಸಾದವರು	೨೯೫	೫೦೦	೪೪೨	೪೦೪
ಎಲ್ಲ ವಿಷಯಗಳಲ್ಲಿ ಪಾಸ್ ಆದವರು _	೨೨೭	೨೯೪	೨೫೫	೨೬೫

ಮುಂಬಯಿಯೊಳಗಿನ ಶಾಲೆಗಳನ್ನು ಜಿಲ್ಲಾ ಶಾಲ
ಳಂದ ಬೇರೆ ಮಾಡಿ, ಈ ಎರಡು ಪ್ರಕಾರದ ಶಾಲೆಗ
ದ ಹೋದ ವಿದ್ಯಾರ್ಥಿಗಳು ಕಳೆದ ೫ ವರ್ಷಗಳಲ್ಲಿ ಪ
ಕಡಾ ಯೆಷ್ಟರಂತೆ ಪಾಸ್ ಆದರೆಂದು ನೋಡಲಾಗಿ, ಕ್ರ
ಯುವದೇನಂದರೆ_

	೧೮೮೦	೧೮೮೨	೧೮೮೩	೧೮೮೪	೧೮೮೫
ಮುಂಬಯಿಯ ಶಾಲೆಗಳಿಂದ ಹೋದವರು, ಕೇಕಡಾ _	೪೩.	೪೨.	೪೮.	೪೫.	೫೯.
ಜಿಲ್ಲಾ ಶಾಲೆಗಳಿಂದ ಹೋದವರ, ಕೇಕಡಾ __	೫೭.	೫೮.	೫೯.	೫೫.	೬೨.

ಇದರಿಂದ ಸ್ಪಷ್ಟವಾಗುವದೇನಂದರೆ, ಪಾಸಾದ ಜಿಲ
ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆಗಳು ಮುಂಬಯಿ

ಸಂಖ್ಯೆಗಳಿಗಿಂತ ಮೊದಲಿನಿಂದ ಕಡಿತನಕ ಸಾಧಾರಣ
ಗಿ ಹೆಚ್ಚಿದ್ದದ್ದಿಲ್ಲದೆ, ಅವರ ಸಂಖ್ಯೆವು ಪ್ರತಿವರ್ಷ ಕೇ
ಇ ಇ ರಂತೆ ಬೆಳೆಯುತ್ತ ಹೋಗುತ್ತದೆ, ಮತ್ತು ಮುಂ
ನಿಯವರ ಸಂಖ್ಯೆವು ಪ್ರತಿವರ್ಷ ಅಷ್ಟೇ ದರದಂತೆ ಇ
ಳುತ್ತ ಹೋಗುತ್ತದೆ!

ಬಂಗಾಲ ಇಲಾಖೆಯಲ್ಲಿ ತಿಳಿ ಜನ ನೇಟೀವರಿಗೆ ಜಿ
ಜ ಜಡಜಗಳ ಸ್ಥಳಗಳನ್ನೂ ಬೇರೆ ಅಂಥಾ ಅಧಿಕಾರದ
ಳಗಳನ್ನೂ ಕೊಡುವ ಬಗ್ಗೆ ಸರಕಾರದಲ್ಲಿ ವಿಚಾರ ನ
ದಿರುತ್ತದೆಂದು ಸರಕಾರೀ ನೌಕರರೊಳಗೆ ಸುದ್ದಿ ಹು
ಟ್ಟಿರುತ್ತದೆ—ಇದನ್ನು ಕೇಳಿ ನೇಟೀವ ಜನರಿಗೆ ಪ್ರತಿಕೂ
ಲವಾದ ಮುಂಬಯಿ ಗ್ಯಾಝೆಟೀಂಬ ವರ್ತಮಾನ ಪತ್ರದ
ಕರ್ತನು, ಆ ಸ್ಥಳಗಳಿಗೆ ತಕ್ಕವರಾದ ತಿಳಿ ಮುಂದಿ ನೇ
ಟೀವ ಜನರು ಸಿಕ್ಕುವರೆಂಬದಕ್ಕೆ ಸಂಶಯವುಂಟೆಂದು ಬ
ರೆಯುತ್ತಾನೆ.

ಇಂಗ್ಲಿಷ ಸರಕಾರಕ್ಕೆ ಸೇರಿದ ಬ್ರಹ್ಮದೇಶದೊಳಗಿನ
ಜನರಲ್ಲಿ ಇಂಗ್ಲಿಷ ಭಾಷೆಯನ್ನು ಕಲಿಯುವ ಅಭಿರುಚಿ
ಯು ಮೊಳಗಡೆಯಲ್ಲಿ ಬಹಳ ಬೆಳೆಯುತ್ತ ನಡಿದದೆ—ತೆದ
ರಿನವ್ರು ಕನ್ನಡ ಜನರಲ್ಲಿ ಆ ಅಭಿರುಚಿಯು ಇನ್ನೂ
ಸೇಳತಕ್ಕಂತೆ ಬೆಳದ ಹಾಗೆ ತೋರುವದಿಲ್ಲೆಂಬುದೊಂದು
ಖೇದಕರವಾದ ಸಂಗತಿಯು.

ಅಮೇರಿಕದಲ್ಲಿ ವಿದ್ಯಾಕಲಿತ ಹೆಂಗಸರಿಗೆ ಏ. ಎಸ್."

ಎಂಬ ಪದವಿಯನ್ನು ಕೊಡುತ್ತಾರೆ. ಅದರ ಅರ್ಥವು
ಲೆಗಳ ಒಡಹುಟ್ಟಿದವಳು" (ಸಿಸ್ಟರ್ ಆಫ್ ಆರ್ಟ್ಸ್)
ದು ಮುಂಟು— "ಎಮ್. ಏ." ಪದವಿಯನ್ನು ಸಹ ಆ
ಶದಲ್ಲಿ ವಿದ್ಯಾಂಸರಾದ ಹೆಂಗಸರಿಗೆ ಕೊಡುವ ನಡತೆಯ
ಟು.

ಅಲಾಹಾಬಾದ ಇಲಾಖೆಯಲ್ಲಿ ಯುರೋಪಿಯನ್
ನರ ಹುಡುಗರ ಸಲುವಾಗಿ ಹೊಸ ಶಾಲೆಗಳನ್ನು ಸರಕ
ದವರು ಸ್ಥಾಪಿಸಿರುತ್ತಾರೆ. ಆ ಶಾಲೆಗಳಲ್ಲಿ ಆ ವಿದ್ಯಾರ್ಥಿ
ಗಳು ಫೀ ಕೊಡಬೇಕಾಗುವದಿಲ್ಲ.

ಜರ್ಮನೀ ದೇಶವು ನಮ್ಮ ಸಂಸ್ಕೃತ ಗ್ರಂಥಗಳ
"ಶಾಮರ್ಣ್ಯದೇಶ" ವೆಂಬ ಹೆಸರಿನಿಂದ ಪ್ರಸಿದ್ಧವದೆ— ಈ
ದೇಶದವರು ಇತ್ತಕಡೆಯಲ್ಲಿ ಫ್ರೆಂಚರನ್ನು ಜಯಿಸಿ ಬಹ
ಳ ಗೌರವವನ್ನು ಪಡಿದಿರುತ್ತಾರೆ. ಈ ದೇಶವು ಈಗ
ಸುಧಾರಣೆಯ ತೌರುಮನೆಯಾಗಿರುತ್ತದೆ. ಈ ದೇಶದ
ಸಾಂಪ್ರತ ಸ್ಥಿತಿಯು ಹ್ಯಾಗಂದರೆ.

೬೦ ಹೊಳೆಗಳಲ್ಲಿ ಹಡಗಗಳು ಸಡಿಯುತ್ತವೆ. ಈ
ಹೊಳೆಗಳ ಪ್ರವಾಹಗಳಿಂದ ೭೯೦೦೦ ಬೀಸುವ ಕಲ್ಲುಗ
ಳು ನಡಿಯುತ್ತವೆ. ದೇಶದ ಕ್ಷೇತ್ರಫಲ ೨೮೪೭೮೮
ಚೌಕು ಮೈಲು, ಜನಸಂಖ್ಯೆ ೪೦೫೪೬೭೭೦, ಅಂದರೆ
೧ ಮೈಲು ಕ್ಷೇತ್ರಕ್ಕೆ ೯೯೨ ಜನರು. ಇವರಲ್ಲಿ
೨೦೪೪೯೦೦ ಗಂಡಸರು, ೨೦೯೦೪೩೦೦ ಹೆಂಗಸರು-
ಲಗ್ನ ಮಾಡಿಕೊಳ್ಳದ ಗಂಡಸರೂ ಹೆಂಗಸರೂ

ಾಳ೦,ವಿಧವೆಗಳೂ ವಿಧುರರೂ ಕೂಡಿ ಕೇಕಡಾ ೪.೬.
ಃ ದೇಶದ ಜನರು ಪರದೇಶಗಳಲ್ಲಿ ವಾಸಿಸುವದಕ್ಕೆ
ಾವಾಗಲೂ ಹೋಗುತ್ತಿದ್ದಾರ್ಯ್ ೫೦ ವರ್ಷಗಳಲ್ಲಿ
ನ ಸಂಖ್ಯೆವು ಇಷ್ಟಾಯಿತು.

ಈ ದೇಶದಲ್ಲಿ ಸನ್ನ ೧೪೭೨ ನೇ ವರ್ಷ ೫೬ ಕೋ
ಪತ್ರಗಳು ಟಪಾಲ ಮಾರ್ಗದಿಂದ ಕಳುಹಲ್ಪಟ್ಟವು;
೭೯ ಹೊಗೆಹಡಗಗಳೂ, ೪೯೪ ಇತರ ಹಡಗಗಳೂ,
೫ ಯುದ್ಧದ ಹಡಗಗಳೂ ಇದ್ದವು—ಇಲ್ಲಿ ಪ್ರತಿ ವೊ
ನು ೭೦ ರಿಂದ ೭೨ ನೇ ವರ್ಷದ ವಯಸ್ಸಿನ ವರೆಗೆ
ಳದಲ್ಲಿ ನೌಕರಿಯ ಮಾಡಬೇಕೆಂದು ಕಟ್ಟಳೆಯುಂಟು—
ೋಲೀಸ ಜನರ ಸಂಖ್ಯೆವು ೭೬ ಕೇಕಡಾ ಇ ರಂತೆಯೂ,
೭೦೦ ತೋಪುಗಳೂ ವುಂಟು.

ಹುಡುಗರಿಗೆ ವಿದ್ಯೆ ಕಲಿಸಲಿಕ್ಕೇ ಬೇಕೆಂದು ಕಟ್ಟಳೆ
ುಂಟು—೬೦೦೦ ಶಾಲಗಳಲ್ಲಿ ೬೦೦೦೦೦ ವಿದ್ಯಾ
ರ್ಥಿಗಳು ಕಲಿಯುತ್ತಾರೆ—ಮೇಲ್ತರದ ವಿದ್ಯಾಲಯುಗಳು,
ಂದರೆ ಕಾಲೇಜಗಳೂ ಯುನಿವರ್ಸಿಟಿಗಳೂ ಕೂಡಿ
೦ಳಿ, ಅವುಗಳಲ್ಲಿ ಕಲಿಯುವ ವಿದ್ಯಾರ್ಥಿಗಳು
೭೭೭೭೭, ಶಿಕ್ಷಕರು ೧೪೭೨ — ಈ ಮೂರಾ ವಿದ್ಯಾಲ
ುಗಳಲ್ಲಿ ಧರ್ಮ, ಕಾಯಿದೆ, ವೇದವಿದ್ಯಾ, ತತ್ವಜ್ಞಾ
, ಎಂಬ ನಾಲ್ಕು ಬಗೆಯ ಲಭ್ಯಾಸಗಳು ನಡಿಯುತ್ತವೆ—
ಲೌಕಿಕಾಭ್ಯಾಸದ ಶಾಲೆಗಳು ೫೬೦ ುಂಟು—ಇವುಗಳಲ್ಲ
ಿ ವ್ಯಾಪಾರ, ಉದ್ಯೋಗ, ಗಾಯನ, ವಾದ್ಯ, ನೌಕಾಶಾ
್ರ, ಖನಿಜವಿದ್ಯಾ, ಯುದ್ಧವಿದ್ಯಾ, ಮುಂತಾದವುಗಳನ್ನು
ಕಲಿಸುವ ಶಾಲೆಗಳು ಬಹಳವುಂಟು.

SELF HELF.

ತನಗೆ ತಾನೇ ನೆರವಾಗುವದು.

ರಮ್ಯವಾದ ಸ್ಥಳಗಳ ಚಿತ್ರಗಳನ್ನು ಕೊರೆಯುವ
ನಾದ ಲಾವದನೆಂಬವನು ಕೆಲವಂಶದಲ್ಲಿ ಇದೇ ವಿ
ಸ್ವಭಾವದ ಮನುಷ್ಯನಾಗಿದ್ದನು. ಇವನು ವಿಲಕ್ಷಣ
ಗಿ ಉದ್ಯೋಗದ ಗುಣಗಳುಳ್ಳವನು ಇದ್ದನು. ಇವನ
ದೆಯು ಏಡಿನ್ಬರ್ಗೋ ಪಟ್ಟಣದ ನೆರೆಯಲ್ಲಿ ಒಕ್ಕಲು
ಮಾಡಿಕೊಂಡು ಇರುತ್ತಿದ್ದನು. ಅವನು ತನ್ನ ಮು
ನ್ನು ಚಿಕ್ಕಂದಿನಲ್ಲಿಯೇ ಉದ್ಯೋಗಕ್ಕೆ ಹಚ್ಚಿದನು.
ವದನ್ನನು ಹುಡುಗನಿದ್ದಾಗ ನೋಡಿದಕ್ಕಂಥ ಸ್ಥಳಗಳ
ತ್ರಗಳನ್ನು ಜಾತುರ್ಯದಿಂದ ಕೊರೆಯುವದನ್ನು ನೋ
ಡಿ, ಅವನ ತಂದೆಯು ಅದೇ ಕೆಲಸವನ್ನು ಅವನಿಗೆ ಕ
ಸಿದನು. ಅವನು ಒಬ್ಬ ಚಿತ್ರಗಾರನ ಕೈಕೆಳಗೆ ಕೆಲಸ
ಲಿಯುತ್ತಿದ್ದಾಗ, ಹಗಲಲ್ಲಿ ಯೆಲ್ಲರಿಗಿಂತ ಹೆಚ್ಚು ಕೆ
ಸ ಮಾಡುತ್ತಿದ್ದುಗ್ಯೂ, ಪ್ರತಿವಾರದೊಳಗೆ ಯೆರಡು ರ
ತ್ರಿಗಳಲ್ಲಿ ಬೆಳತನಕ ಕೂತು ಅಭ್ಯಾಸ ಮಾಡುತ್ತಿದ್ದನು
ಈ ರಾತ್ರಿಯ ಅಭ್ಯಾಸದಿಂದ ಅವನು ಫ್ರೇಂಚ ಭಾಷೆಯ
ನ್ನು ಕಲಿತು, ಹದಿನೇಟು ವರ್ಷದವನಾಗುವದಕ್ಕೆ ಮು
ಚೆ ಅಬಿಲಾರ್ಡನೆಂಬವನ ಚರಿತ್ರೆಯು ಭಾಷಾಂತರ ಮಾಡಿ
ದನು. ಅವನು ದೊಡ್ಡ ದೊಡ್ಡ ಉದ್ಯೋಗಗಳನ್ನು ಜೋ
ಗ ಸ್ಯೆಕೊಳ್ಳುವದಕ್ಕೆ ಅತ್ಯುತ್ಕಂಠಿತನಾಗಿದ್ದನು; ಯಾಕಂ
ದರೆ ಅವನು ಇಪ್ಪತ್ತು ವರ್ಷದವನಾದಾಗ ತನ್ನ ಸ್ಮರಣೆ
ವಹಿಯಲ್ಲಿ ಬರೆದು ಇಟ್ಟದ್ದೇನಂದರೆ, "ಈಗ ನಾನು ಇ
ಪ್ಪತ್ತು ವರ್ಷದವನಾದೇನು; ಒಂದು ವೇಳೆ ನನ್ನ ತಾ

ಮುಪ್ಪಿನ ಮೂರನೇ ಪಾಲು ತೀರಿ ಹೋಯಿತೆಂದೆನ್ನಿಸಿ
ದ್ದು; ಆದರೆ ಮನುಷ್ಯ ಜಾತಿಗೆ ಹಿತವಾಗುವಂಥ ಕೆಲ
ಸವನ್ನು ನಾನು ಯೇನು ಮಾಡಿದ್ದೇನೆ?" ಇಪ್ಪತ್ತು ವ
ರ್ಷದ ಪ್ರಾಯಸ್ಥನಲ್ಲಿ ಈ ವಿಧದ ವಿಚಾರವು ಸ್ವಾಭಾವಿ
ಕವಾಗಿದ್ದಲ್ಲ. ಫ್ರೇಂಚ ಭಾಷೆಯನ್ನು ಕಲಿತನಂತರ
ಅವನು ಜರ್ಮನ್ ಭಾಷೆಯ ಅಭ್ಯಾಸವನ್ನು ಆರಂಭಿಸಿ,
ಅವನ್ನು ಬೇಗ ಕಲಿತುಕೊಂಡನು. ಭೂಮಿಯ ಹಸನಮಾ
ಡುವ ರೀತಿಯನ್ನು ಸುಧಾರಿಸಿ ಸ್ಕಾಟಲಂಡದ ರೀತಿಯ
ನ್ನು ನಡಿಸುವ ಉದ್ದೇಶದಿಂದ ಒಂದು ದೊಡ್ಡ ಹೊಲವ
ನ್ನು ತೆರಿಗೆಗೆ ತೆಗೆದುಕೊಂಡು ಸ್ವಲ್ಪ ಕಾಲದೊಳಗೆ ಅದ
ರಿಂದ ಬಳಿತಾಗಿ ಹೆಸ್ರುವಳಿಯನ್ನು ಪಡಕೊಂಡನು. ಆ
ಕಾಲದಲ್ಲಿ ಯೂರೋಪಖಂಡದೊಳಗೆ ನಡೆದಿದ್ದ ಕಾಳಗ
ವು ಮುಗಿದು ಪ್ರವಾಸಕ್ಕೆ ಅಡ್ಡಿಯಿಲ್ಲದ ಹಾಗಾದ ಬಳಿಕ
ಬೇರೆ ದೇಶಗಳೊಳಗಿನ ಒಕ್ಕಲತನದ ರೀತಿಯನ್ನೂ,
ತೋಟಗಳನ್ನು ಮಾಡುವ ರೀತಿಯನ್ನೂ ತಿಳಕೊಳ್ಳುವದ
ಕ್ಕೋಸ್ಕರ ಹೊರಟನು. ಆ ಮೇಲೆ ಯೆರಡು ಸಾರೆ
ದೇಶ ಸಂಚಾರ ಮಾಡಿ ತನ್ನ ಶೋಧಗಳನ್ನೆಲ್ಲ ಅವನು
'ಎನ್‌ಸೈಕ್ಲೋಪೀಡಿಯ*' ಯೆಂಬವೊಂದು ಪುಸ್ತಕದೊ
ಳಗೆ ಬರೆದಿಟ್ಟನು. ಈ ಪುಸ್ತಕವು ಈ ಜಾತಿಯ ಪು
ಸ್ತಕಗಳಲ್ಲಿ ಮೇಲ್ತಾದದ್ದೆಂದು ಹೇಳಬಹುದು. ಇದರಲ್ಲಿ
ಅಪ್ರತಿಮ ಕ್ರಮದಿಂದಲೂ, ಉದ್ಯೋಗದಿಂದಲೂ, ಬಹು
ಉಪಯುಕ್ತವಾದ ಜ್ಞಾನದ ಸಂಗತಿಗಳು ಹೇರಳವಾಗಿ

* ಶಾಸ್ತ್ರ, ವಿದ್ಯಾ, ಕಲಾಕೌಶಲ್ಯಾದಿಗಳ ವರ್ಣನೆಗಳು ಯಾವ ಪುಸ್ತಕದಲ್ಲಿ ಅಕ್ಷರಾನುಕ್ರಮದಿಂದ ಬರೆಯಲ್ಪಟ್ಟಿರುತ್ತವೆಯೋ, ಅದಕ್ಕೆ ಈ ಹೆಸರುಂಟು.

ಸಂಗ್ರಹಿಸಲ್ಪಟ್ಟವೆ.

ಮೇಲೆ ವರ್ಣಿಸಲ್ಪಟ್ಟವರ ಚರಿತ್ರೆಗಳಿಗಿಂತ ಸಾವ
ಅಲ್‌ದಾಸ್ರಿಯೆಂಬವನ ಚರಿತ್ರೆಯು ಕಡಿಮೆ ಚಮತ್ಕಾ
ವಾದದ್ದಲ್ಲ. ಇವನ ತಂದೆಯು ಕಾನರ್‌ವಾಲ ಪ್ರಾಂತದ
ಸೇಂಟ್ ಆಸ್ತೆಲ್ಲೆಂಬ ತಾಲೂಕಿನೊಳಗೆ ಬಹು ಕಷ್ಟ
ಯಾಸದಿಂದ ಕಾಲಕಳೆಯುತ್ತಿದ್ದನು. ಅವನು ಬಡವನಿದ
ಗ್ಯೂ ತನ್ನ ಇಬ್ಬರು ಮಕ್ಕಳನ್ನು ಒಂದು ಕಾಲಂ
ಲ್ಲಿ ಪ್ರತಿವಾರಕ್ಕೆ ಒಬ್ಬೊಬ್ಬನಿಗೆ ಒಂದು ಪೇನಿಯ ಕೆ
ಟ್ಟು ಅಭ್ಯಾಸಕ್ಕೆ ಕಳುಹಿಸಿದನು. ಹಿರಿ ಮಗನಾದ ಜಾ
ಥುನೆಂಬವನು ಸಂತೋಷದಿಂದ ಅಭ್ಯಾಸ ಮಾಡಿ ತನ್ನ ಪ
ಠಗಳನ್ನು ಚನ್ನಾಗಿ ಕಲಿಯುತ್ತಿದ್ದನು. ಆದರೆ ಚಿಕ್ಕ
ನಾದ ಸಾಮ್ಯುಅಲ್‌ನು ಮೂರ್ಖನಾಗಿ ಮೈಗಳ್ಳತನದಿಂ
ಕಲಿಯುವದನ್ನು ತಪ್ಪಿಸಿ ಕುಚೇಷ್ಟೆಯಲ್ಲಿ ಹೊತ್ತುಗಳ
ಯುತ್ತಿದ್ದನು. ಅವನು ಎಂಟು ವರ್ಷದವನಾದಾಗ ಒಂ
ದು ತವರಿನ ಖಣಿಯಲ್ಲಿ ಪ್ರತಿದಿವಸ ಒಂದುವರೆ ಪೆನ್ನು
ಕೂಲಿಯ ಉದ್ಯೋಗದಲ್ಲಿ ಶರೀರ ಶ್ರಮದ ಕೆಲಸ
ಕ್ಕೆ ಹಚ್ಚಿ, ಅವನನ್ನು ಇಟ್ಟರು. ಹತ್ತು ವರ್ಷದ
ವಯಸ್ಸಿನಲ್ಲಿ ಅವನು ಒಬ್ಬ ಮೊಚ್ಚಿಗಾರನ ಕೈ ಕೆಳಗೆ
ಕೆಲಸ ಕಲಿಯಹತ್ತಿದನು. ಅಲ್ಲಿ ಅವನಿಗೆ ಬಹು ಕಷ್ಟ
ವಾಯ್ತು. ಅಲ್ಲಿ "ಕುಂಟಿಯು ಕೆಳಗೆ ಸಿಕ್ಕ ಕಪ್ಪೆಯಂ
ತೆ ನಾನು ಇರುತ್ತಿದ್ದೆನೆಂ"ದು ಅವನು ಅನ್ನುವನು. ಅವನು
ಅಲ್ಲಿಂದ ಹಿಡಿ ಹೋಗಿ ಸಮುದ್ರಗಳ್ಳತನದಲ್ಲಿ, ಅಥವಾ
ಬೇರೊಂದು ಅಂಥಾ ಉದ್ಯೋಗದಲ್ಲಿ ಕೇರಬೇಕೆಂದು ಆ
ಗಾಗ್ಗೆ ಆಲೋಚಿಸುತ್ತಿದ್ದನು. ತಾತ್ಪರ್ಯವೇನಂದರೆ, ಅ

ನು ದೊಡ್ಡವನಾದ ಹಾಗೆ ಹೆಚ್ಚು ಬುದ್ಧಿಗೇಡಿಯಾಗುತ್ತ
ಹೋದನು. ಹಣ್ಣುಗಳ ತೋಟಗಳಲ್ಲಿ ಹೋಗಿ ಕಳವು
ಮಾಡುವ ಕೆಲಸದಲ್ಲಿ ಅವನು ಯೆಲ್ಲರಿಗಿಂತ ಮುಂದಿರು
ತ್ತಿದ್ದನು. ಮುಂದೆ ದೊಡ್ಡವನಾದ ಹಾಗೆ ಮುಂದಿಮನೆ
ಯಲ್ಲಿಗಿನ ಕೋಳಿ ಮುಂತಾದವುಗಳನ್ನು ಕದಿಯುವವರ
ಲ್ಲಿ, ಅಥವಾ, ಕಳವಿನಿಂದ ಸರಕುಗಳನ್ನು ಪರಸ್ಥಳಕ್ಕೆ
ಹಯ್ಯುವವರಲ್ಲಿ ಕೂಡಹತ್ತಿದ್ದನು. ಹದಿನೇಳು ವರ್ಷ
ವಯಸ್ಸಾದಾಗ ಅವನು ತನ್ನ ಚಾಕರಿಯ ಒಪ್ಪಂದವನ್ನು
ಕೂರಾಮ್ಮಾಡದೆ, ಬಂದು ಯುದ್ಧದ ಹಡಗವನ್ನೇರಿ ಹೋ
ಗಬೇಕೆಂದು ಓಡಿಹೋದನು. ಆದರೆ ರಾತ್ರಿಯಲ್ಲಿ ಹುಲ್ಲು
ಮಿಳದಲ್ಲಿ ಮಲಗಿಕೊಂಡದರಿಂದ ಅಲ್ಲಿಯ ತಂಪಿನಿಂದ ಸ
ನುಪಾತ ಹೊಂದಿ ಬೆಳಗ್ಗೆ ಯೆದ್ದು ತನ್ನ ಕೆಲಸಕ್ಕೆ ಪು
ನಃ ತಿರುಗಿ ಹೋದನು.

NOTICES.

ನೋಟೀಸುಗಳು.

ಜಾವಕ ನಂಬರ ೭೪೪.

೫೦—ಧೊಂಡೊ ನರಸಿಂಹ್ವ ಮುಳಬಾಗ ಹೆಡ್ಡ
ಮಾಸ್ತರ ಶಾಳಾಕಾಗನೆಲ್ಲಿ ಇವರಿಗೆ—

ಮೆ. ಎಜ್ಯುಕೇಶನಲ ಇನಸ್ಪೆಕಟರ ಸಾಹೇಬ ಬಾ.
ಪ್ರಾಂತ ದಕ್ಷಿಣಭಾಗ ಇವರ ಕಡಿಯಿಂದ ತಿಳಿಯ ಪಡಿಸು
ವದೇನಂದರೆ—ನೀವು ನಮ್ಮ ಕಡಿಗೆ ಕಳುಹಿಸಿದ ರಾಜಶೇ
ಖರದ ಏಳನೇ ಆಕ್ಯಾಸದ ಕೈ ಬರಹದ ಟೀಕೆಯ ಪುಸ್ತ
ಕವನ್ನು ಇದರ ಸಂಗಡ ತಿರಿಗಿ ಕಳುಹಿಸಿರುತ್ತದೆ.

ಸಂಗ್ರಹಿಸಲ್ಪಟ್ಟವೆ.

ಮೇಲೆ ವರ್ಣಿಸಲ್ಪಟ್ಟವರ ಚರಿತ್ರೆಗಳಿಗಿಂತ ಸಾಮ್ಯ ಅಲ್‌ದಾಸ್ರಿಯೆಂಬವನ ಚರಿತ್ರೆಯು ಕಡಿಮೆ ಚಮತ್ಕಾರವಾದದ್ದಲ್ಲ. ಇವನ ತಂದೆಯು ಕಾರ್ನವಾಲ ಪ್ರಾಂತದಲ್ಲಿ ಸೇಂಟ್ ಆಸ್ತೆಲ್ಲೆಂಬ ತಾಲೂಕಿನೊಳಗೆ ಬಹು ಕಷ್ಟ ಪ್ರಯಾಸದಿಂದ ಕಾಲಕಳೆಯುತ್ತಿದ್ದನು. ಅವನು ಬಡವನಿದ್ದಾಗ್ಯೂ ತನ್ನ ಇಬ್ಬರು ಮಕ್ಕಳನ್ನು ಒಂದು ಶಾಲೆಯಲ್ಲಿ ಪ್ರತಿವಾರಕ್ಕೆ ಒಬ್ಬೊಬ್ಬನಿಗೆ ಒಂದು ಪೇನಿಯ ಕೊಟ್ಟು ಅಭ್ಯಾಸಕ್ಕೆ ಕಳುಹಿಸಿದನು. ಹಿರಿ ಮಗನಾದ ಜಾಬೆಝುನೆಂಬವನು ಸಂತೋಷದಿಂದ ಅಭ್ಯಾಸ ಮಾಡಿ ತನ್ನ ಪಾಠಗಳನ್ನು ಚನ್ನಾಗಿ ಕಲಿಯುತ್ತಿದ್ದನು. ಆದರೆ ಚಿಕ್ಕವನಾದ ಸಾಮ್ಯುಅಲ್‌ನು ಮೂರ್ಖನಾಗಿ ಮೈಗಳ್ಳತನದಿಂದ ಕಲಿಯುವದನ್ನು ತಪ್ಪಿಸಿ ಕುಚೇಷ್ಟೆಯಲ್ಲಿ ಹೊತ್ತುಗಳೆಯುತ್ತಿದ್ದನು. ಅವನು ಎಂಟು ವರ್ಷದವನಾದಾಗ ಒಂದು ತವರಿನ ಖಣಿಯಲ್ಲಿ ಪ್ರತಿದಿವಸ ಒಂದುವರೆ ಪೆನ್ನು ಕೂಲಿಯ ಉದ್ಯೋಗದಲ್ಲಿ ಶರೀರ ಶ್ರಮದ ಕೆಲಸಕ್ಕೆ ಹಚ್ಚಿ, ಅವನನ್ನು ಇಟ್ಟರು. ಹತ್ತು ವರ್ಷದ ವಯಸ್ಸಿನಲ್ಲಿ ಅವನು ಒಬ್ಬ ಮೊಚ್ಚೆಗಾರನ ಕೈ ಕೆಳಗೆ ಕೆಲಸ ಕಲಿಯಹತ್ತಿದನು. ಅಲ್ಲಿ ಅವನಿಗೆ ಬಹು ಕಷ್ಟವಾಯ್ತು. ಅಲ್ಲಿ "ಕುಂಟಿಯ ಕೆಳಗೆ ಸಿಕ್ಕ ಕಪ್ಪೆಯಂತೆ ನಾನು ಇರುತ್ತಿದ್ದೆನೆಂ"ದು ಅವನು ಅನ್ನುವನು. ಅವನು ಅಲ್ಲಿಂದ ಓಡಿ ಹೋಗಿ ಸಮುದ್ರಗಳ್ಳತನದಲ್ಲಿ, ಅಥವಾ ಬೇರೊಂದು ಅಂಥಾ ಉದ್ಯೋಗದಲ್ಲಿ ಕೇರಬೇಕೆಂದು ಆಗಾಗ್ಗೆ ಆಲೋಚಿಸುತ್ತಿದ್ದನು. ತಾತ್ಪರ್ಯವೇನಂದರೆ, ಅ

ು ದೊಡ್ಡವನಾದ ಹಾಗೆ ಹೆಚ್ಚು ಬುದ್ಧಿಗೇಡಿಯಾಗುತ್ತ
ಪನು. ಹಣ್ಣುಗಳ ತೋಟಗಳಲ್ಲಿ ಹೋಗಿ ಕಳವು
ಾಡುವ ಕೆಲಸದಲ್ಲಿ ಅವನು ಯೆಲ್ಲರಿಗಿಂತ ಮುಂದಿರು
ದ್ದನು. ಮುಂದೆ ದೊಡ್ಡವನಾದ ಹಾಗೆ ಮುಂದಿನವನೆ
ೂಳಗಿನ ಕೋಳಿ ಮುಂತಾದವುಗಳನ್ನು ಕದಿಯುವವರ
,, ಅಥವಾ, ಕಳವಿನಿಂದ ಸರಕುಗಳನ್ನು ವರಸ್ಥಳಕ್ಕೆ
ಯ್ಯುವವರಲ್ಲಿ ಕೂಡಹತ್ತಿದ್ದನು. ಹದಿನೇಳು ವರ್ಷ
ವನಾದಾಗ ಅವನು ತನ್ನ ಚಾಕರಿಯ ಒಪ್ಪಂದವನ್ನು
ೂರಾಮಾಡದೆ, ಒಂದು ಯುದ್ಧದ ಹಡಗವನ್ನೇರಿ ಹೋ
ಬೇಕೆಂದು ಓಡಿಹೋದನು. ಆದರೆ ರಾತ್ರಿಯಲ್ಲಿ ಹುಲ್ಲು
ಳಿವಲ್ಲಿ ಮಲಗಿಕೊಂಡದರಿಂದ ಅಲ್ಲಿಯ ತಂಪಿನಿಂದ ಸ
ಾಧಾನ ಹೊಂದಿ ಬೆಳಗ್ಗೆ ಯೆದ್ದು ತನ್ನ ಕೆಲಸಕ್ಕೆ ಪು
ನಃ ತಿರುಗಿ ಹೋದನು.

NOTICES.

ನೋಟೀಸುಗಳು.

ಜಾವಕ ನಂಬರ ೨ಳಳ.

ಅದಂ—ಧೊಂಡೊ ನರಸಿಂಹ್ವ ಮುಳಬಾಗ ಹಡ್ಡ
ಮಾಸ್ತರ ಶಾಳಾಕಾಗನೆಲ್ಲಿ ಇವರಿಗೆ—

ಮೆ. ಎಜ್ಯುಕೇಶನಲ ಇನಸ್ಪೆಕಟರ ಸಾಹೇಬ ಬಾ
ರಿಂತ ದಕ್ಷಿಣಭಾಗ ಇವರ ಕಡಿಯಿಂದ ತಿಳಿಯ ಪಡಿಸ
ುದೇನಂದರೆ—ನೀವು ನಮ್ಮ ಕಡಿಗೆ ಕಳುಹಿಸಿದ ರಾಜಶೇ
ುರದ ಏಳನೇ ಆಕ್ಟ್ಯಾಸದ ಕೈ ಬರಹದ ಟೀಕೆಯ ಪುಸ್ತ
ಕವನ್ನು ಇದರ ಸಂಗಡ ತಿರಿಗಿ ಕಳುಹಿಸಿರುತ್ತದೆ.

ಕನ್ನಡ ಕವಿಟಿಯ ಮೆಂಬರರು ನೀವು ಟೀಕಾ ಪ
ಡಿನ ಅಕ್ಷ್ಯಾಸದ ವಿಷಯವು ಕಂನಡ ಸಾಲಿಗಳಲ್ಲಿ ಓದಿ
ವದಕ್ಕೆ ಅಗದಿ ಅಯೋಗ್ಯವೆಂದು ತಿಳಿಯುತ್ತಾರೆ ಮತ್ತ
ಸಿಂಪು ಬರಹವ ಶೈಲಿಯು ಅತಿ ಉತ್ತಮವೆಂದು ಕಂಡ
ಬಂದಾಗ್ಯೂ ವಿದ್ಯಾಖಾತೆಯಿಂದ ಅದಕ್ಕೆ ಆಶ್ರಯ ಕೊ
ಟಾಗದೆಂದನ್ನುತ್ತಾರೆ.

ಈಗ ನೀವು ಬರದ ಟೀಕಾ ನೋಡುತ್ತಿರಲಾಗಿ ನೀ
ವು ಕಂನಡ ಪಂಡಿತರೆಂದು ಕಂಡು ಬರುತ್ತದೆ ಆವದರಿಂದ
ಬೇರೆ ಯಾವದಾದರೊಂದು ಯೋಗ್ಯ ವಿಷಯದ ಮೇಲ
ಗದ್ಯರೂಪ ಪುಸ್ತಕವನ್ನು ಬರದಲ್ಲಿ ನಿಮಗೆ ಬಹುಶಾ ವಿ
ದ್ಯಾಖಾತೆಯಿಂದ ಇನಾಮು ಶಿಗುವದು. ತಾ. ೩೦ ನೇ
ಮಾರ್ಚ ೧೮೭೫ ಇಸವಿ.

(Signed) W. A. Russell.
Educational Inspector S. D.

ಸರಕ್ಯುಲ್ಲರ ನಂಬರು ೭೬೭.

ಕಲಾದಗಿ ಜಿಲ್ಲೆಯೊಳಗಿನ ಯಾವತ್ತೂ ಸ್ಕೂಲಮಾಸ್ತ
ರರಿಗೆ–ತಿಳಿವಡಿಸುವದೇನಂದರೆ ಮುತ್ತಗಿ ಸಾಲಿಯ ಮಾ
ಜಿ ಮಾಸ್ತನ ಶ್ರೀಧರ ಗೋವಿಂದ ಸಾತು ಇವನು ಆ ಸಾ
ಲಿಯ ಹಜರೀಯಲ್ಲಿ "ಹುಡುಗರು ಸಾಲಿಯಲ್ಲಿ ಬಂದ
ತಾರೀಖು ತಿಂಗಳ ವ ವಯಸ್ಸು ವ ಜಾತಿ" ಮುಂತಾದ
ಕೋಷ್ಟಕಗಳನ್ನು ತುಂಬಿರುವದಿಲ್ಲ. ಕಾರಣಾ ಅವನಿಗೆ
೧ ಆಣೆ ದಂಡ ಮಾಡಿರುತ್ತದೆ.

ಸಾರವಾಡದ ಸಾಲಿಯ ಹಜರೀಯಲ್ಲಿ, ತಡ್ಡು ಹಾಗು

ಶದ್ದು ವಟ್ಟ ಹುಡುಗರ ಹಜರೀಯ ಬೇರೀಹು ಮಾಡ
ುವದಿಲ್ಲ.

ಮೀಲೆ ಬರಪಂತೆ ದುರ್ಲಕ್ಷ್ಯ ಕೆಲಪು ಮಾಸ್ತರರು
ಮಾಡುತ್ತಾರೆ ಇವೇ ಪ್ರಕಾರ ಮುಂಪೆ ನಮ್ಮ ನಹರಿಗೆ
ಬಂದಲ್ಲಿ ಯೋಗ್ಯ ಶಿಕ್ಷೆ ಮಾಡಲಾದೀತು. ತಿಳಿಯುವ
ದು ತಾ. ೨೬ ಫೇ. ೧೮೭೫.

Ramchandra A. Sawanoor.

ಡಿ. ಇ. ಇ. ಜಿಲ್ಲಾ ಕಲಾದಗಿ.

ನಂಬರು ೬೭೯.

ಬೆಳಗಾವೀ ಜಿಲ್ಲೆಯೊಳಗಿನ ಯಾವತ್ತು ಸ್ಕೂಲ
ಮಾಸ್ತರರಿಗೆ—

ಬೆಳಗಾವಿ ಜಿಲ್ಲೇದ ಡಿ. ಇ. ಇ. ರ ಕಡೆಂಡ ಈವ
ಷ್ಟರ ವಾರ್ಷಿಕ ಲೆಕ್ಕಪಲ್ಲಿ ಪ್ಯಾಸ್ಸನೇಟರ ಜನರು
ಸಾಲಿಯಲ್ಲಿ ವೈಲಿ ತೆಗಿಯಲಿಕ್ಕೆ ಬಂದಿದ್ದರೋ ಇ
ಲ್ಲೋ ಬಂದಿದ್ದರೆ ಎಷ್ಟು ಸತ್ತಿ ಬಂದಿದ್ದರು. ಇದರ
ದಾಖಲೆಯನ್ನು ದಾಖಲು ಮಾಡಬೇಕು. ತಿಳಿಯುವದು
ತಾರೀಖು ೨೬ವಾದ ಫೇಬರವಾರಿ ಸನ್ನ ೧೮೭೫ ಇಸ
ವಿ. ಸಂವಧತ್ತಿ.

P. V. Chintamanpetkar.

ಡಿ. ಇ. ಇ. ಜಿಲ್ಲಾ ಬೆಳಗಾವ.

ನಂಬರು ೬೭೭.

ಬೆಳಗಾವೀ ಜಿಲ್ಲೆಯೊಳಗಿನ ಯಾವತ್ತು ೪ರುವಾ

ಯಿದಕ್ಕಿಂತ ಕಡಿಮೆ ಸಂಬಳದ ಶಿಕ್ಷಕ ಮುಂತ
ದವರಿಗೆ—

ಬೆಳಗಾವೀ ಜಿಲ್ಲೇದ ಡಿ. ಇ. ಇ. ರ ಕಡಿಂದ ತವ
ಗ ಈಗ ಇರುವ ಸಂಬಳಕ್ಕಿಂತ ಬಡತಿ ಆಗಬೇಕಂತ ಇ
ಚ್ಛೆಯುಳ್ಳವರು ಕಾಲೇಜದ ಪ್ರವೇಶ ಪರೀಕ್ಷೆಯ
ಲ್ಲಿ ಪಾಸು ಆಗಲಿಕ್ಕೇ ಬೇಕು. ಪ್ರವೇಶ ಪರೀಕ್ಷೆಕ್ಕ
ಹೋಗಲಿಕ್ಕೆ ವೋಕಳೀಕ ಕೊಟ್ಟಿರುತ್ತದೆ. ತಾರೀಖು
೭೬ ನೇ ಮಾಹೆ ಫೇಬರವಾರಿ ಸನ್ನ ೧೯೨೫ ಇಸವಿ.

P. V. Chintamanpetkar.

ಡಿ. ಇ. ಇ. ಜಿಲ್ಲಾ ಬೆಳಗಾವ.

ನಂಬರು ೬೭೬.

ಬೆಳಗಾವೀ ಜಿಲ್ಲೆದೊಳಗಿನ ಯಾವತ್ತು ಸ್ಕೂಲ
ಮಾಸ್ತರರಿಗೆ—

ಬೆಳಗಾವೀ ಜಿಲ್ಲೇದ ಡಿ. ಎ. ಇನಸ್ಪೆಕ್ಟರರ ಕಡಿಂದ
ಗೋಕಾಕ ತಾಲೂಕ ಸೈಕಿ ಕುಳಗೋಡ ಮಾಸ್ತರರಾಡ
ಕಾಸಪ್ಪಾ ಬೀರಪ್ಪಾ ಇವರು ಸರಕಾರಿ ಲಖೋಟಿಗಳನ್ನು
ಲಕ್ಷಪೂರ್ವಕವಾಗಿ ಕಳುಹಿಸಬೇ ಇರುವದರಿಂದ ನಾಟಬೇ
ಡಾಗಿ ನಮಗ ಮೇಲೆ ಮೇಲೆ ಹಾಸಲು ಕೊಡಬೇಕಾಯಿ
ತು. ಆದ ಕಾರಣ ಸದರಿಯವರಿಗೆ ಈ ತಪ್ಪಿನದಸಿಯಿಂದ
ನಾಲ್ಕ ಆಣೆ ದಂಡಮಾಡಿರುತ್ತದೆ. ಆದರೆ ಯೆಲ್ಲಾ ಮಾ
ಸ್ತರರು ಈ ಮಾತಿನ ಕಡಿಗೆ ಚನ್ನಾಗಿ ಲಕ್ಷಕೊಟ್ಟು ಸರ
ಕಾರಿ ಲಖೋಟಿಗಳನ್ನು ಕಾಳಜಿಯಿಂದ ಕಳುಹಿಸುತ್ತಾ ಇ
ರಬೇಕು. ತಾರೀಖು ೭೬ ಫೇಬ್ರುವಾರಿ ಸನ್ನ ೧೯೨೫

ಪಿ ವಿ. ಸಂವದತ್ತಿ.

P. V. Chintamanqetkar.

ಡಿ. ಇ. ಇ. ಜಿಲ್ಲಾ ಬೆಳಗಾವ.

ನಂಬರು ೬೨೫.

ಳ ಮುಖ್ಯ ಗುಣವನ್ನು ಒಂದೇ ಮಾತಿನಿಂದ ವ್ಯಕ್ತ ಪಡಿಸಿದನು. ಅದು ಹ್ಯಾಗಂದರೆ, ,,ಅಲ್ಲಿ ಯೇನು ಕೊಳ್ಳ ಬೇಡ; ಆ ಪ್ರಾಂತದ ಜನರನ್ನು ನಾನು ಬಲ್ಲೆನು. ಆ ಪ್ರಾಂತದಿಂದ ಪೂರಿಸದೊಳಗಿನ ನಮ್ಮ ಪಶು ವೈದ್ಯ ಶಾಲೆಗೆ* ಬರುವ ವಿದ್ಯಾರ್ಥಿಗಳು ಮೈಮುರಿದು ಬಡಿಗಲ್ಲಿನ ಮೇಲೆ ಸುತ್ತಿಗೆಯ ಪೆಟ್ಟು ಹಾಕುವದಿಲ್ಲ. ಅವರು ಮೈಗಳ್ಳರಿದ್ದಾರೆ. ಆದದರಿಂದ ಆ ಪ್ರಾಂತದಲ್ಲಿ ವ್ಯಾಪಾರದೊಳಗೆ ಬಂಡವಲವನ್ನು ಹಾಕಿದ ನೋರಿಗೆ ನಿನಗೆ ಲಾಭವಾಗಲಿಕ್ಕಿಲ್ಲ," ಇದು ಬಹು ಸುಂದರವೂ, ಯೋಗ್ಯವೂ ಆದ ಗುಣ ಪರೀಕ್ಷೆಯೆಂದೆನ್ನ ಬಹುದು. ಇದರಿಂದ ಪರೀಕ್ಷಕನ ಧೂರ್ತತ್ವದ ಲಕ್ಷ್ಯವೂ; ವ್ಯಕ್ತವಾಗುತ್ತದೆ. ಇದಲ್ಲದೆ ಬೇರೆ ಬೇರೆ ವ್ಯಕ್ತಿಗಳ †ಶಕ್ತಿಯಿಂದಲೇ ರಾಜ್ಯಕ್ಕೆ ಬಲವುಂಟಾಗಿ ಅವರು ನಿತ್ಯ ಬೆಳೆದುಕೊಳ್ಳುವ ಭೂವಿಗೆ ಸಹ ಬೆಲೆ ಬರುತ್ತದೆಂಬ ನಿಯಮವು ಇದರಿಂದ ದೃಢವಾಗುತ್ತದೆ. ಇದರಂತೆಯೇ ಫ್ರೆಂಚ ಜನರಲ್ಲಿ ಒಂದು ಗಾದೆಯುಂಟು.

ಈ ಗುಣವನ್ನು ಕಲಿತು ಕೊಳ್ಳುವದು ಅತಿ ಪ್ರಯೋಜನಕರವಾದ ಸಂಗತಿಯು. ಬಲವಾದ ನಿಶ್ಚಯದಿಂದ ಯೋಗ್ಯವಾದ ವಿಷಯವನ್ನು ಬೆನ್ನಟ್ಟುವದೇ ಮನುಷ್ಯ ಸ್ವಭಾವದಲ್ಲಿ ಎಲ್ಲ ವಿಧದ ನಿಜವಾದ ಘನತೆಯುಂಟಾಗುವದರ ಮೂಲವು. ಶಕ್ತಿಯು ಸಹಾಯದಿಂದಲೇ ಮನು

---

* ಪಶುಗಳ ರೋಗಗಳಿಗೆ ಮಾಡತಕ್ಕ ಔಷಧೋಪಚಾರಗಳನ್ನು ಕಲಿಯುವ ಶಾಲೆ.

† ಈ ಸಂಧಿಯಲ್ಲಿ ಶಕ್ತಿಯೆಂದರೆ ಮಾನಸಿಕ ಶಕ್ತಿ ಯೆಂದು ತಿಳಿಯ ತಕ್ಕದ್ದು.

ವ್ಯನು ದಣಿವುಳ್ಳ ಬೀಸರಿಕೆಯು ಕೆಲಸಗಳಿಂದಲೂ, ನಿಸ್ಸಾರವಾದ ಕಾರ್ಯ ಭಾಗಗಳಿಂದಲೂ ವಿರಾಗವದಲ್ಲದೆ, ತಾನು ಯಾವ ಸ್ಥಿತಿಯಲ್ಲಿ ಇದ್ದಾಗ್ಯೂ, ಮೇಲಕ್ಕೆ ಏರುತ್ತಾನೆ. ಬುದ್ಧಿಕೌಶಲ್ಯದ ಸಹಾಯದಲ್ಲಿ ಇದ್ದವರ ಅಧಿಕಾರಪಟ್ಟ ಆಶಾಭಂಗವೂ, ಸಂಕಟವೂ ಶಕ್ತಿಯ ಸಹಾಯದಲ್ಲಿ ಇಲ್ಲದೆ, ಇದರಿಂದ ಅದಕ್ಕಿಂತ ಹೆಚ್ಚು ಕೆಲಸವಾಗುತ್ತದೆ. ನಮ್ಮ ಮನೋರಥವು ಪೂರ್ಣವಾಗ ಬೇಕಾದರೆ ದೃಢವಾದ ಅಭಿಲಾಷೆಯು ಎಷ್ಟು ಅವಶ್ಯಕವೋ, ಅಷ್ಟು ಅತ್ಯುತ್ಕೃಷ್ಟವಾದ ಬುದ್ಧಿಯು ಅವಶ್ಯಕವಲ್ಲ. ಅಂದರೆ ಹಿಡಿದ ಕೆಲಸದಲ್ಲಿ ದೃಢನಿಶ್ಚಯದಿಂದಲೂ, ಪೂರ್ಣವಾದ ಶಕ್ತಿಯಿಂದಲೂ, ಶ್ರಮ ಮಾಡುವ ಹವಣಿಕೆಯು ಅವಶ್ಯಕವಿದ್ದಷ್ಟು ಕೇವಲ ಅದನ್ನು ಕಡೆಗೂಡಿಸುವ ಸಾಮರ್ಥ್ಯವು ಅವಶ್ಯಕವಲ್ಲವೆಂಬ ತಾತ್ಪರ್ಯವು, ಆದದರಿಂದ ಮನಸ್ಸಿನ ಶಕ್ತಿಯೇ ಮನುಷ್ಯನ ಸ್ವಭಾವ ಲಕ್ಷ್ಮಿಮುಖ್ಯ ಬಲವಾಗಿರುತ್ತದೆಂದು ಹೇಳಬಹುದು; ತಾತ್ಪರ್ಯವೇನೆಂದರೆ, ಆ ಶಕ್ತಿಯೇ ಮನುಷ್ಯನು ಅವರಿಂದ ಮನುಷ್ಯನ ಎಲ್ಲ ವ್ಯಾಪಾರಗಳಲ್ಲಿ ಉತ್ತೇಜನ ಉಂಟಾಗಿ, ಅವನ ಯೆಲ್ಲ ಯತ್ನಗಳಿಗೆ ಜೀವ ಕಳೆಯು ಬರುತ್ತದೆ. ನಿಜವಾದ ಕೋರಿಕೆಯು ಅದನ್ನೇ ಆಶ್ರಯಿಸಿಕೊಂಡಿರುತ್ತದೆ. ನಮ್ಮ ವ್ಯವಹಾರವೆಂಬ ಒಡವೆಗೆ ನಿಜವಾದ ಸುಗಂಧವು ಕೋರಿಕೆಯಿಂದಲೇ ಉಂಟಾಗುತ್ತದೆ. ಆಶೆಯಿಲ್ಲದ ಅಂತಃಕರಣವುಳ್ಳವನು ಸುಖಿಯಾಗಿರುವದಿಲ್ಲೆಂದು ಒಬ್ಬ ಗೃಹಸ್ಥನು ಹೇಳಿದ್ದಾನೆ. ಮನುಷ್ಯನಿಗೆ ತುಂಬಾ ಆಶೆಯುಳ್ಳ ಅಂತಃಕರಣಕ್ಕೆ ಸರಿಯಾ

ಗಿ ಸುಖಕಾರಕವಾದದ್ದು ಯಾವದೂ ಇಲ್ಲೆಂಬ ಮಾತು ನಿಜವು. ನಾವು ಮಾಡಿದ ಯತ್ನವು ಸಫಲವಾಗದಿದ್ದರೂ ನಮ್ಮ ಕೈಲಾದ ಮಟ್ಟಿಗೆ ಉದ್ಯೋಗ ಮಾಡಿದೆವೆಂಬ ಸಮಾಧಾನವನ್ನು ಮನಸ್ಸಿನಲ್ಲಿ ಪಡುತ್ತೇವೆ. ತಾಳ್ಮೆಯಿಂದ ತನ್ನ ದುಃಖ ಸಹಿಸಿಕೊಂಡು, ಯುದ್ಧದಲ್ಲಿ ತೊಡಗಿದ್ದ ಮನಷ್ಯನನ್ನು ನೋಡುವದಕ್ಕಿಂತ ಹೆಚ್ಚು ಮನೋಹರವೂ, ಆನಂದ ಕಾರಕವೂ ಆದ ಸಂಗತಿಯು ಯಾವದೂ ಅಲ್ಲ. ಅವನು ಪ್ರಾಮಾಣಿಕತನದಿಂದ ತನ್ನ ಜೀವದ ಆಶೆಯ ಬಿಟ್ಟು ಜಗಳಾಡುತ್ತಿರಲಾಗಿ, ಕಾಲುಗಳಿಂದ ರಕ್ತವು ಹರಿಯುತ್ತಿದ್ದಾಗ್ಯೂ, ಅವಯವಗಳಲ್ಲಿ ತ್ರಾಣವು ಉಳಿಯದೆ ಇದ್ದಾಗ್ಯೂ, ಕೇವಲ ಧೈರ್ಯದ ಬಲದಿಂದಲೇ ನಡೆಯುತ್ತಿರುತ್ತಾನೆ. ಪ್ರಾಯಸ್ಥರಾದ ಮನುಷ್ಯರು ತಮ್ಮ ಆಪೇಕ್ಷೆಯಂತೆ ಕೃತ್ಯನಡಿಸದಿದ್ದರೆ, ಕೇವಲ ಅಪೇಕ್ಷೆಯಿಂದ ಅವರ ಮನಸ್ಸಿನಲ್ಲಿ ಒಂದು ವಿಧದ ಬೇನೆಯುಂಟಾಗುತ್ತದೆ. ಕೆಲ ಜನರು ಸುಮ್ಮನೇ ಮಾರ್ಗ ಪ್ರತೀಕ್ಷೆಯ ಮಾಡುತ್ತ ಕೂಡುತ್ತಾರೆ. ಆದರೆ ಅದು ಸರಿಯಲ್ಲ. ವೇಲಿಂಗಟನ್ನನಂತೆ ಅವರು ದೃಢನಿಶ್ಚಯದಿಂದ ಯತ್ನ ಮಾಡತಕ್ಕದ್ದು. ಯಾವದೊಂದು ಸದುದ್ದೇಶವು ಮನಸ್ಸಿನಲ್ಲಿ ಬಂದ ಕೂಡ್ಲೆ ತ್ವರೆಯಾಗಿ ಯೆಡೆಬಿಡದೆ ಅದನ್ನು ಬೆನ್ನಟ್ಟ ತಕ್ಕದ್ದು. ನಾವು ಯಾವ ಸ್ಥಿತಿಯಲ್ಲಿ ಇದ್ದಾಗ್ಯೂ, ಶ್ರಮವನ್ನೂ ಬೇಸರಿಕೆಯನ್ನೂ ಸಹಿಸಬೇಕಾಗುತ್ತದೆ. ಅದರಿಂದ ನಮಗೆ ಹಿತಕಾರಕವಾದ ಅಭ್ಯಾಸ ಉಂಟಾಗುತ್ತದೆ. ಅರೀಸ್ಟಿಪರನೆಂಬವನು ಹೇಳಿದ್ದೇನಂದರೆ ನಮ್ಮ ವ್ಯವಹಾರಗಳಲಿ ಶಾರೀರ ಅಥವಾ

ಮಾನಸಿಕ ಶ್ರಮದ ಜೊತೆಗೆ ಬೇರೆ ಯಾತರಿಂದಲೂ ಫಲ ಉಂಟಾಗುವದಿಲ್ಲ. ಪುನಃ ಪುನಃ ಯತ್ನ ಮಾಡಬೇಕಾದ್ದು ಬಾಳುವೆಯಾಗಿರುತ್ತದೆ. ಈ ಸಂಬಂಧದಿಂದ ನಾನು ಮಾಡತಕ್ಕದ್ದಿಲ್ಲ ಮುಗಿದು ಹೋಗಿದೆ; ಆದರೆ ನನ್ನ ಧೈರ್ಯವು ಯಾತರಿಂದಲೂ ಕುಂದಲಿಲ್ಲೆಂದು ನಾನು ಅಭಿಮಾನದಿಂದ ನುಡಿಯಲು ಸಮರ್ಥನಾಗಿದ್ದೇನೆ. ನ್ಯಾಯವಾಗಿ ನೋಡಿದರೆ, ಮನುಷ್ಯನು ದೃಢಮನಸ್ಸಿನವನೂ ಯೋಗ್ಯವಾದ ಉದ್ದೇಶವುಳ್ಳವನೂ ಇದ್ದರೆ, ತನ್ನ ಮನಸ್ಸಿನಲ್ಲಿದ್ದದ್ದನ್ನೆಲ್ಲ ಕಡೆಗಾಣಿಸಲು ಸಮರ್ಥನಾಗುತ್ತಾನೆ."

ಯಾವ ಜಗದ್ವಿಸ್ತೃತವಾದ ಶಾಲೆಯಲ್ಲಿ ಶ್ರಮವೂ, ಕಷ್ಟವೂ ಯೆಂಬ ಕಠೀಣ ಸ್ವಭಾವದವರಾದಾಗ್ಯೂ ಮಾನ್ಯರಾದ ಶಿಕ್ಷಕರುಂಟೋ, ಆ ಶಾಲೆಯಲ್ಲಿ ನಾನು ತಕ್ಕಂತೆ ಕಲಿತುಕೊಂಡೆನೆಂದು ಹ್ಯೂಮಿಲ್ಲರನೆಂಬವನು ಹೇಳಿದ್ದಾನೆ. ಯಾವಾತನು ತನ್ನ ಆಸಕ್ತಿಯನ್ನು ಭಂಗ ಪಡಿಸುತ್ತಾನೋ, ಅಥವಾ, ಕ್ಷುಲ್ಲಕ ಕಾರಣಗಳಿಂದ ಕೈಯೊಳಗಿನ ಕೆಲಸವನ್ನು ಬಿಟ್ಟುಕೊಡುತ್ತಾನೋ, ಅವನು ನಿಶ್ಚಯವಾಗಿ ಕಡೆಯಲ್ಲಿ ಕಾರ್ಯ ಹಾನಿಯಾಗುವ ಮಾರ್ಗದಲ್ಲಿದ್ದಾನೆಂದು ತಿಳಿಯತಕ್ಕದ್ದು. ಯಾವದೇ ಕೆಲಸವಾಗಲಿ, ಅದನ್ನು ತಪ್ಪಿಸಕೂಡದೆಂಬ ನಿರ್ಧಾರದಿಂದ ಆರಂಭಿಸಿದರೆ, ಅದು ಸಂತೋಷ ಪಡುವಂತೆ ಬೇಗ ಕೈಗೂಡುತ್ತದೆ. ಸ್ವೀಡನದೇಶದ ಅರಸನಾದ ೯ನೇ ಚಾರ್ಲಸನು ಚಿಕ್ಕಂದಿನಲ್ಲಿ ಸಹ ಇಚ್ಛೆಯು ಸಾಮರ್ಥ್ಯವು ಬಹಳ ಉಂಟೆಂದು ದೃಢವಾಗಿ ನಂಬುತ್ತಿದ್ದನು. ಇವನು ತನ್ನ ಚಿ

ಕ್ಕ ಮಗನು ಒಂದು ಕಠಿಣವಾದ ಕೆಲಸವನ್ನು ಮಾಡುವ ದಕ್ಕೆ ಹವಣಿಸುತ್ತಿದ್ದ ಸಮಯದಲ್ಲಿ ಅವನ ತಲೆಯ ಮೇಲೆ ಕೈಯಿಟ್ಟು, ‘‘ಅವನು ಅದನ್ನು ಮಾಡುವನು! ಅವನು ಅದನ್ನು ಮಾಡುವನು!’’ ಯೆಂದು ಆವೇಶದಿಂದ ನುಡಿಯುವನು. ಉಳಿದ ಯೆಲ್ಲ ಅಭ್ಯಾಸಗಳಂತೆ ಆಸಕ್ತಿಯು ಅಭ್ಯಾಸವಾದರೂ ಕೆಲ ಕಾಲದ ನಂತರ ಸುಲಭವಾಗುತ್ತದೆ. ಅದರಿಂದ ಸಾಧಾರಣತರದ ಶಕ್ತಿಯುಳ್ಳ ಜನರು ಒಂದೇ ಕೆಲಸಕ್ಕೆ ಯೆಡೆಬಿಡದೆಯೂ, ದಣಿಯದೆಯೂ ಹತ್ತಿಕೊಂಡರೆ, ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವರು– ಸಾಧಾರಣವಾದ ಸಾಹಿತ್ಯವಿದ್ವಾಗ್ಮಿಗೆ ಅಸಾಧಾರಣವಾದ ಆಸಕ್ತಿಯಿಂದ ಬೇಕಾದ ಕೆಲಸವಾಗುವದೆಂದು ಭೂವೆಲ್ಲ ಬಸ್ಸನತನ್ನನೆಂಬವನು ನಂಬುತ್ತಿದ್ದನು. ಅದರಿಂದಲೇ ಅವನು ಬೂಯಬಿಲ್ಲಿನೊಳಗಿನ ‘‘ನಿನ್ನ ಕೈಗೆ ಸಿಕ್ಕ ಕೆಲಸವನ್ನು ನಿನ್ನಲ್ಲಿದ್ದಷ್ಟ ಸಾಮರ್ಥ್ಯದಿಂದ ಮಾಡು.’’ ಯೆಂಬ ಬೋಧನೆಯು ಸತ್ಯವಾದದ್ದೆಂದು ಪ್ರತಿಪಾದಿಸುತ್ತಿದ್ದನು. ಮತ್ತು ಅವನು ತನ್ನ ಮನೋರಥಗಳು ಯಾತರಿಂದ ಪೂರ್ಣವಾದವೆಂಬುದರ ಬಗ್ಗೆ ಹೇಳಿದ್ದು ಯೇನಂದರೆ, ‘‘ಕೈಯಲ್ಲಿ ಒಂದು ಕೆಲಸವಿದ್ದಾಗ ನಾನು ಪೂರ್ಣವಾಗಿ ಅದರಲ್ಲಿಯೇ ತೊಡಗುತ್ತಿದ್ದೆನಲ್ಲದೆ ಬೇರೊಂದು ಕೆಲಸಕ್ಕೆ ಕೈ ಹಾಕುತ್ತಿದ್ದಿಲ್ಲ.’’

ನಿಜವಾಗಿ ಬೆಲೆಯುಳ್ಳ ಕೃತ್ಯವು ಧೈರ್ಯದಿಂದ ಉದ್ಯೋಗ ಮಾಡಿದ ಹೊರತು ಕೈಗೂಡುವದಿಲ್ಲ. ಇಚ್ಛೆಯು ಹವಣಿಕೆಗೆ ಅಥವಾ ಕಷ್ಟಗಳನ್ನು ಲಕ್ಷಿಸದೆ ಉದ್ಯೋಗ ಮಾಡುವದಕ್ಕೆ ಯತ್ನವೆಂಬ ಹೆಸರುಂಟು. ಈ ಯತ್ನ

ವೇ ಮನುಷ್ಯನ ಅಭಿವೃದ್ಧಿಗೆ ಮುಖ್ಯ ಕಾರಣವಾಗಿರುತ್ತ
ದೆ. ತೋರಿಕೆಯಲ್ಲಿ ಅಸಂಭಾವ್ಯವಾಗಿ ಕಾಣಿಸುವ ಯ
ಷ್ಟೇ ಕೃತ್ಯಗಳು ಯತ್ನದಿಂದ ಹ್ಯಾಗೆ ಸಾಧಿಸಲ್ಪಟ್ಟ ವೇ
ಬದು ಅತ್ಯಾಶ್ಚರ್ಯಕರವಾಗಿರುತ್ತದೆ. ಅತ್ಯಾಸಕ್ತಿಯಿಂ
ದ ಮುಂದಾಗುವ ಪರಿಣಾಮವನ್ನು ಕುರಿತು ಆಲೋಚಿಸ
ತ್ತ ಹೋದರೆ, ಮೊದಲು ಸಂಭಾವ್ಯವಾಗಿ ತೋರುತ್ತಿದ್ದ
ಸಂಗತಿಯು ನಿಜವಾದದ್ದರಂತೆ ತೋರಹತ್ತುತ್ತದೆ,— ಯ
ಷ್ಟೇ ಸಾರಿ ನಮ್ಮ ಅಪೇಕ್ಷೆಯೇ ನಮ್ಮ ಕೈಯಿಂದಾಗ
ಬಾರದಾದ ಕೃತ್ಯದ ಕುರುಹಾಗಿರುತ್ತದೆ. ಇದಕ್ಕೆ ವಿ
ರೀತವಾಗಿ, ಹೆದರಿಕೆಯು, ಅಥವಾ ಸಂಶಯದ ಸ್ವಭಾವದ
ವರಿಗೆ ಯೆಲ್ಲವೂ ಅಸಂಭಾವ್ಯವೇ ಆಗಿ ತೋರುತ್ತದೆ;
ಇದರ ಮುಖ್ಯಕಾರಣವೇನಂದರೆ, ಅದು ಅವರಿಗೆ ಹಾಗ
ಕಾಣುತ್ತದೆಂಬಿದೇ. ಒಬ್ಬ ಪ್ರಾಯಸ್ಥನಾದ ಫ್ರೆಂಚ
ಉದ್ಯೋಗಸ್ಥನು. "ನಾನು ಫ್ರಾನ್ಸ ದೇಶದ ದಂಡಿನ
ಮುಖ್ಯಾಧಿಕಾರಿಯೂ, ದೊಡ್ಡ ದಳವಾಯಿಯೂ ಆಗುವ
ನೆಂ" ದು ನುಡಿಯುತ್ತ ತನ್ನ ಕೋಣೆಯಲ್ಲಿ ತಿರುಗಾಡು
ವನೆಂದು ಹೇಳುತ್ತಾರೆ. ಅವನ ಸಂಶಯ ಇಚ್ಛೆಯೇ
ಮುಂದಿನ ಇಷ್ಟಸಿದ್ಧಿಯ ಸೂಚಕವಾಗಿತ್ತು. ಯಾಕಂ
ದರೆ ಆ ಗೃಹಸ್ಥನು ಹೆಸರಾದ ದಳವಾಯಿಯೆಂದೆನಿಸಿ
ಕೊಂಡು ಫ್ರಾನ್ಸ ದೇಶದ ಸೇನಾಧಿಪತಿಯೆಂಬ ಪದವಿಯ
ನ್ನೊಂದಿ ಕಾಲವಶನಾದನು.

NOTICES.

ನೋಟೀಸುಗಳು.

ನಂಬರು ೫೧೦

ಸರಕ್ಯೂಲ್ಲರು.

ಮಾಸ್ತರ ಜನರಿಗೆ ಪ್ರೊಂದು ಸ್ಥಳದಿಂದ ಮತ್ತೊಂದು ಳಕ್ಕೆ ಬದಲೀ ಆದಾಗ ಅವರಿಗೆ ಭತ್ತೆ ಮೊರಿಯುಪದಿ ವೆಂದು ನಮಗೆ ತಿಳಿದು ಬಂದಪೆ. ಇನ್ನು ಮುಂದೆ ಫ್ಲಯೋಟಿಂಗ ಚಾರ್ಜೆಸ್ ಯೆಂಬ ವೆಚ್ಚದೊಳಗಿಂದ ಕೆ ನ ದರದಂತೆ ಅವರಿಗೆ ಭತ್ತೆ ಕೊಡತಕ್ಕದ್ದು —

೫೦ ರೂಪಾಯಿಗಿಂತ ಕಡಿವೆ ನಂಬಳವುಳ್ಳ ಮಾಸ್ತರರಿಗೆ — ದಿನಕ್ಕೆ ೬ ಅಣೆ.

೫೦ ರೂಪಾಯಿಗಿಂತ ಹೆಚ್ಚು ನಂಬಳವುಳ್ಳ ಮಾಸ್ತರರಿಗೆ — ದಿನಕ್ಕೆ ೪ ಅಣೆ.

ಆ ಸರಕಾರೀ ಕೆಲಸನ ಅನುಕೂಲತ್ರಿಯು ಸಲುವಾಗಿ ಬದಲೀ ಮಾಡಲ್ಪಟ್ಟ ಮಾಸ್ತರರಿಗೆ ಮಾತ್ರ ಮೇಲಿನ ಪ ರದಂತೆ ಭತ್ತೆ ಕೊಡತಕ್ಕದ್ದು — ತಾವೇ ಆಜ್ಞೆಯ ಮಾಡಿ ಬದಲೀ ಮಾಡಿಸಿ ಕೊಂಡಂಥಾ ಮಾಸ್ತರರಿಗೆ ಯೇನೂ ಭ ತ್ತೆ ದೊರಿಯಲಿಕ್ಕಿಲ್ಲ.

ಈ ಭತ್ತೆಯ ಬಿಲ್ಲುಗಳಲ್ಲಿ ಒಂದು ಸ್ಥಳದಿಂದ ಮ ತ್ತೊಂದರ ಅಂತರ ವೆಷ್ಟೆಂಬವನ್ನು ತೋರಿಸತಕ್ಕದ್ದು. ಮಾರ್ಗದಲ್ಲಿ ನಿರರ್ಥಕವಾಗಿ ದಿವಸಗಳನ್ನು ಕಳವರೆ, ಆ ದಿವಸಗಳಿಗಾಗಿ ಭತ್ತೆ ಕೊಡಲ್ಪಡಲಿಕ್ಕಿಲ್ಲ.

ಪು. ಬೆಳಗಾವಿ
ತಾ. ೭ನೇ
ಮೇ ೧೮೭೫

(Signed) W. A. Russell.
ಇ. ಇನಸ್ಪೆಕ್ಟರ ದಕ್ಷಿಣಭಾಗ

ನಂಬರ ೧೮೬.

ಕಲಾದಗಿ ಜಿಲ್ಲೆಯೊಳಗಿನ ಯಾವತ್ತು ಸ್ಕೂ
ಮಾಸ್ತರರ ವ ಅಶಿಷ್ಟಂಟರಿಗೆ—

ತಿಳಿಯು ಪಡಿಸುವದೇನಂದರೆ ಕಾಖಂಡಕಿ ಸಾಲಿಯ
ಮಾಸ್ತರನು ಬಗೆತ ಪ್ರಕಾರದಿಂದ ಸಾಲಿಯು ಕೆಲಸ
ಟ್ಟು ಪರ ಊರಿಗೆ ಹೆಚ್ಚಿಗ ಬಗ್ಗೆ ವಿಚಾರಪರ ಮಾ
ಲೇದಾರರು ಬಂದಾರಿಂದ ಪೆ. ಇ. ಇ. ಸಾ. ಬಹಾದ್ದು
ವರ ಮುಂಜೂರಿಯಿಂದ ಸದರ ಮಾಸ್ತರನಿಗೆ ೫ರು. ದಂ
ಮಾಡಿದ್ದಲ್ಲದೆ ಗೈರ ಹಾಜರು ದಿವಸದ ಸಂಬಳ ಕೊಯ್ಯು
ವ ವಿಚಾರಾಗಿರುತ್ತದೆ.

ಸದರ ಮುಜಕೂರ ಯಾವತ್ತು ಸ್ಕೂಲಮಾಸ್ತರರು
ಅಶಿಷ್ಟಂಟರು ಲಕ್ಷದಲ್ಲಿಟ್ಟು ಜಾಗ್ರತೆಯಿಂದ ನಡಿಸತಕ
ದ್ದು. ತಾರೀಖು ೨೨ ಮೇ ಸನ್ನ ೧೮೭೫ ಇಸವಿ.

Trimbak Narayen Kirtané.
ಇಂಬ್ಯಾರ್ಜ ಪಿ. ಇ. ಇ. ಜಿಲ್ಲಾ ಕಲಾದಗಿ

CORRESPONDENCE.
ಪತ್ರವ್ಯವಹಾರವು.

ವಿಶ್ವಾಸಗುಣಾವಿರ್ಭಾವದ ಪ್ರಮುಖ್ಯ ರಗಳು.

ಶಾದೂರ್ಲ— ಶ್ರೀರಾಜೀವಾಷ್ಟ ವಷ್ಟಸ್ಥಳನಿಲಯ

ಮಾ ಹಸ್ತವಾಸ್ತವ್ಯ ಲೋಲ—

ಲ್ಲೀಲಾಬ್ಜನ್ನಿಸರಂತೀ ಮಧುರಮಧುರ್ಯಂ ನಾಭಿ
ಪದ್ಮೇ ಮುರಾರೇಃ ॥
ಆಸ್ತೋಕಂ ಲೋಕಮಾತ್ರಾ ದ್ವಿಯುಗಮುಖಶಿಶೋ
ರಾನನೇಷ್ವರ್ಪ್ಯಮಾಣಂ ।
ಶಂಖಪ್ರಾಂತೇನ ದಿವ್ಯಂ ಪಯ ಇತಿ ವಿಬುಧೈಃ ಶಂಕ್ಯ
ಮಾನಂ ಪುನಾತು ॥ ೫ ॥

॥ ಟೀ. ॥ ಶ್ರೀ=ಸಂಪತ್ತುಳ್ಳ, ರಾಜೀವಾಕ್ಷ=ಮಹಾವಿ
ಷ್ಣುವಿನ, ವಕ್ಷಸ್ಥಳನಿಲಯ=ವಕ್ಷಸ್ಥಳವನ್ನೇ ಮನೆಯಾ
ಗಿ ಮಾಡಿಕೊಂಡು, ರಮಾ=ಲಕ್ಷ್ಮೀದೇವಿಯ, ಹಸ್ತ=ಕೈ
ಯಲ್ಲಿ, ವಾಸ್ತವ್ಯ=ಇರತಕ್ಕ, ಲೋಲತ್ರ್=ಸಂಚಲನುಳ್ಳ
ರುನ, ಲೀಲಾಬ್ಜತ್=ಲೀಲಾಕಮಲದಿಂದ, ಮುರಾರೇಃ=
ಮುರಾಯುಗನ, ನಾಭಿಪದ್ಮೇ=ನಾಭಿಕಮಲದಲ್ಲಿ, ನಿಃಸರಂ
ತೀ=ಸುರಿಯುವಂಥ—ಲೋಕಮಾತ್ರ=ಲೋಕಕ್ಕೆ ತಾಯಿ
ಯಾದ ರಮಾದೇವಿಯಿಂದ ದ್ವಿಯುಗ=ನಾಲ್ಕು, ಮು
ಖ=ಮುಖವುಳ್ಳ ಬ್ರಹ್ಮನೆಂಬ, ಶಿಶೋ=ಮಗುವಿನ, ಆ
ನನೇಷು=ಮುಖಗಳಲ್ಲಿ, ಶಂಖಪ್ರಾಂತೇನ=ಶಂಖಪ್ರಾಂ
ತಭಾಗದಿಂದ, ಆಸ್ತೋಕಂ=ಬಹಳವಾಗಿ, ಅರ್ಪ್ಯಮಾಣಂ
=ಅರ್ಪಿಸಲ್ಪಡುವ, ದಿವ್ಯಂ=ದಿವ್ಯವಾದ, ಪಯಃ=ಹಾಲು
ಇತಿ=ಹೀಗೆಂದು, ವಿಬುಧೈಃ=ದೇವತೆಗಳಿಂದ, ಶಂಕ್ಯಮಾ
ನ=ತರ್ಕಿಸಲ್ಪಡುವಂಥ,— ಮಧುರ=ಮಧುರವಾದ, ಮ
ಧುರ್ಯ=ಮಧುರದ ರಸದ ಪ್ರವಾಹವು, ಪುನಾತು=ಶು
ದ್ಧಪಡಿಸಲಿ ॥

ಭಾವವು.

ಶ್ರೀ ಮಹಾವಿಷ್ಣುವಿನ ವಕ್ಷಸ್ಥಳದಲ್ಲಿರು ಲಕ್ಷ್ಮೀ

ದೇವಿಯು ಹಸ್ತದಲ್ಲಿರುವ ಸಂಜೆಲಿಸುತ್ತಿರುವ ಲೀಲಾ
ಮೂಲದಿಂದ ನಾರಾಯಣನಿಂದ ನಾಭಿಕಮಲದಲ್ಲಿ ಸುರಿಯುವ
ಥ ಲೋಕ ಮಾತ್ರೆಯಾದ ರಮಾದೇವಿಯಿಂದ ಬ್ರಹ್ಮ
ನೆಂಬ ಶಿಶುವಿನ ಮುಖಗಳಲ್ಲಿ ಕಂಬು ಪ್ರಾಂತಭಾಗದಿಂ
ಜುಜಳಪೂಡಿ ಉರ್ಪಿಸಲ್ಪಡುವ ದಿವ್ಯವಾದ ಹಾಲು! ಸೀಗ
ದು ದೇವತೆಗಳಿಂದ ತರ್ಪಿಸಲ್ಪಡುವಂಥ ಮಧುರವಾದ ಪ
ಕರಂದ ರಸ ಪ್ರವಾಹವು ನಮ್ಮನ್ನು ಶುದ್ಧಿ ಪಡಿಸಲಿ

॥ ವಿವರವು ॥

ಮುಕುರಂದ ರಸವು ಬೆಳ್ಳಗೆ ಇರುತ್ತದೆ; ಅದಕ್ಕೆ ಹಾ
ನ ಸಾಮ್ಯವನ್ನು ಕೊಂದಿತು. ಕಂಬು ಸಾಮ್ಯವನ್ನು
ಪ್ಪಿಲೀಯ ಮುಟ್ಟಿಯು ಕೊಂದಿತು.
ತಾ. ೯ ಮೇ ೧೮೮೫ } ಥೋಂಪೋ ನರಸಿಂಹ ಸೂ
ಮುಕ್ಯಾಮ ಕರ್ಜದಾಗಿ. } ಮಾಸ್ತರ ಕರ್ಜದಾಗಿ.

ವಿ. ವಿ. ನಾನು ಕೆಳಗೆ ಬರೆದಿರುವ ಶ್ಲೋಕವನ್ನು
ಪ್ಪ ಅಂದವಾದ ಪತ್ರಿಕೆಯಲ್ಲಿ ಮುದ್ರಿಸಿ ಪ್ರಕಟಿಸುವಿರೆ
ತಲೂ ಯಾರಾದರು ವಿದ್ವಾಂಸರು ಇದರೊಳಗಿನ ಶ್ಲೋ
ಕದ ಅನ್ವಯ ಭಾವಾರ್ಥ ಸಹ ಬರಿದು ಇದೇ ಪತ್ರಿಕೆ
ದ್ವಾರದಿಂದ ಮುದ್ರಿಸಿ ನನ್ನ ಅಭಿಲಾಷೆಯನ್ನು ಕೊನೆಗ
ಣಿಸುವಿರೆಂತಲೂ ನಿರೀಸಂಬಿ ವಿನ್ನಹ ಮಾಡಿಕೊಂ
ದ್ದೇನೆ.

॥ ಅಶ್ವಧಾಟಿಯ ಶ್ಲೋಕವು ॥

ಸಾರಂಗಕೃತಿದನ ಸಾರಂಗವಾರಿಧರ ಸಾರಂಗರಾಜವರ
ದ ಸಾರಂಗದಾರಿತರ ಸಾರಂಗತಾತ್ಮಮದ ಸಾರಂಗತ್ರ
ಪದಬಲಂ॥

ಸಾರಂಗವತ್ಕ್ಷಸುಮ ಸಾರಂಗತಂಜತವ ಸಾರಂಗ-ಾಂ
ಘ್ರಿಯುಗಲಂ॥

ಸಾರಂಗವರ್ಣಮುಪ ಸಾರಂಗತ್ರಾಬ್ಜಮದ ಸಾರಂಗವಿತ್ಸ
ುವಮಂ॥೩॥

ಸದರ ಶ್ಲೋಕದ ಪ್ರಸಾರಂಭವಿದ್ದಕಾರಣ ಅನ್ವಯ ಭಾವಾರ್ಥವನ್ನು ಬರಿದು ತಿಳುಹಿಸುವಿರೆಂದು ಬೇಡಿಕೊಳ್ಳುತ್ತೇನೆ ಇಂತಿ ವಿನ್ನಹ ಈ ॥V ನೇ ವೇ ೧೮೭೫.

ಹಣಮಂತ ಗುರಾಪ್ಪಾ ನರಸಲಗಿ ಬ್ರಾಂ
ಚಕಸ್ಕೂಲ ಸಾಸ್ತರ ಅಂಕಲಗಿ.

ರಾವಸಾಹೇಬ ದಕ್ಷಿಣಭಾಗದ ಕನ್ನಡ ಶಾಳಾಪತ್ರ
ಕದ ಎಡಿಟರಗ ಚರಣಾರವಿಂದಗಳಿಗೆ—

ಶೇವಕನು ಮಾಡುವಾ ವಿನ್ನಹವೇನಂದರೆ—ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಮನೋಹರವಾದ ಮತಪತ್ರಕದಲ್ಲಿ ಛಾಪಿಸಿ ಪ್ರಸಿದ್ಧಿಸುವಿರೆಂದು ಮುಹಾತ್ಮಾಂಘ್ರಿಯನ್ನು ಧರಿಸಿದ್ದೇನೆ. ಈ ಸಾಲಿಗೆ ತಾರೀಖು ೬ ನೇ ವೇ ಸನ್ನ ೧೮೭೫ ದಿವಸಾ ಶ್ರೀಮಂತ ಮ. ರಾ. ರಾ. ಆನಂತಾಚಾರ್ಯ ಜಾಹಗಿರದಾರರೂ, ಗ್ರಾಮಸ್ಥರೂ, ಪಂಚರೂ, ಕೂಡಿ ಸಾಲಿಯ ಇಟ್ಟಾಲಿ ನೇ ವರ್ಗ

ದ ವಿದ್ಯಾರ್ಥಿಯರನ್ನು ಪರೀಕ್ಷೆಸಿ ಆನಂದ ಪಟ್ಟು ಇ
ರಲ್ಲಿ ಶ್ರೀ. ರಾ. ರಾ. ಜಾಹಗಿರದಾರರು ಮಿಠಾಯಿ ಹಂಚಿ
ಅಭ್ಯಾಸಿಕರಿಗೆ ಹೀಗೆ ಹೇಳಿದರಲ್ಲಾ ಬರುವ ಮಾಸದಲ್ಲಿ
ನಾವು ಪರಿಕ್ಷೆಯನ್ನು ತೆಗೆದುಕೊಂಡು ಪಾಸಾದವರಿಗೆ ಪ್ರ
ಸ್ತಕವನ್ನು ಇಕ್ಷಿಸುಕೊಡುತ್ತೀನೆಂಮು ಹೇಳಿ ಸಾಲೀಸ್ಥಿತಿ
ಟ್ಟಗದೆಂಬುವದರ ವಿಷಯಕ್ಕೆ ರಖುಸ್ಟರ ಬುಕ್ಕಿನಲ್ಲಿ
ಬರೆಬಿರುತ್ತಾರೆ. ನಾನು ಈ ಸಾಲಿಯ ಕೆಲಸ ನೋಡಲಿ
ಕ್ಕೆ ಹತ್ತಿ ಹನ್ನೆರಡು ಹದಿಮೂರು ತಿಂಗಳವಾಗುತ್ತ ಬಂ
ತು ಆದರೆ ಸದರ ಜಾಹಗಿರದಾರರು ದರಮಾಸದಲ್ಲಿ ಬಂ
ದು ಮಿಠಾಯನ್ನಾಗಲಿ, ಹಣ್ಣು ಫಲಗಳನ್ನಾಗಲಿ, ಫರಾಳ
ನ್ನಾಗಲಿ ತಂದು ಹುಡುಗರಿಗೆ ಹಂಚಿ ನೀವು ಚನ್ನಾಗಿ ಕ
ಲಿಯರಿ. ಹೆಚ್ಚು ಕಲಿತವರಿಗೆ ಮುಂಬೆ ನಿಮಗೆ ಹೆಚ್ಚೆ
ಚ್ಚು ಇನಾಮು ದೊರಿಯುವದೆಂದು ಹೇಳಿ ವಿದ್ಯಾರ್ಥಿಗಳ
ಮನಸ್ಸನ್ನು ತೃಪ್ತಿಪಡಿಸುತ್ತಾರೆ. ಇದಲ್ಲದೆ ಮಾಸ್ತರ ಚ
ನರಿಗೆ ಹರಯೋಕ ಕೆಲಸಕ್ಕೆ ಮುದತು ಮಾಡುತ್ತಾರೆ. ಹಾ
ಗು ಬ್ರಾಹ್ಮಣ ಜನರ ಎಪ್ಪತ್ತು ಹುಡುಗರು ವಿದ್ಯಾಭ್ಯಾಸ
ಮಾಡುವದಕ್ಕೆ ಬಂದರು ಅವರಿಗೆ ಅನ್ನ ವಸ್ತ್ರ ಕೊಟ್ಟು
ಇಟ್ಟು ಕೊಳ್ಳುತ್ತಾರೆ. ಈ ಧೂರೆಗಳ ಮನಸ್ಸು ಯಾ
ವಾಗಲೂ ವಿದ್ಯಾಅಭಿವೃದ್ಧಿಯ ಕಡೆಗೂ, ಪರಹಿತಕಾರ್ಯ
ದ ಕಡೆಗೂ ತೊಲಗಿರುತ್ತದೆ. ಇದು ಪ್ರಥಮ ವ್ಯವಹಾ
ರವಿದ್ದದರಿಂದ ಸಂಕಯ ಪಟ್ಟು ಬೇಡಿಕೊಳ್ಳುವಜೇನಂದ
ರೆ ಈ ಸಂಕಯವನ್ನು ದೂರ ಮಾಡಿ ಸ್ಥಳಕೊಡಬೇಕೆಂ
ದು ಬಿನ್ನಹ ಪತ್ರವಿಸ್ತಾರಕ್ಕೆ ಷ್ಟವೆ. ಇರಬೇಕು ಇಂತಿ ವಿ
ಜ್ಞಾಪನೆ.

ತಾ.೪ನೇ ಮೇ ಸನ್ನಿವೇಶಿಗೆ ಇಸವಿ ಮುಕ್ಕಾಮು ಅಂಕಲಗಿ ತಾಲೂಕ ವಿಜಾಪೂರ. } ಹಣಮಂತ ಗುರಪ್ಪ ನರಸಲಗಿ ಬಾ.ಂ. ಸೂ. ಮಾ. ಅಂ. ತಾ. ವಿ.

ರಾಜಸಾಹೇಬ ಕೆನ್ನಡ ತಾಲೂಪತ್ರ ಕರ್ತರಿಗೆ—

ಅತಿ ಭಯ ಭಕ್ತಿಯಿಂದ ಬೇಡಿಕೊಳ್ಳುವ ಬಿನ್ನಹವೇನಂದರೆ—ತಮ್ಮ ಪತ್ರದಲ್ಲಿ ಕೆಳಗೆ ಬರೆದ ಲೆಕ್ಖಗಳನ್ನು ಮುದ್ರಿಸಿ ಅವುಗಳ ಉತ್ತರ ರೀತಿವಾರ ಮಾಡಿ ಯಾರಾದರೂ ತಿಳಿಸಿದರೆ ಎನ್ನ ಮನಸ ಅಪೇಕ್ಷೆಯನ್ನು ನೆರವೇರಿಸಿದಂತೆಯಾಗುತ್ತದೆ ದಯವಾಡಿ ತಿರಸ್ಕರಿಸ ಕೂಡದೆಂದು ಬೇಡಿಕೊಳ್ಳುತ್ತೇನೆ—

ಲೆಕ್ಖವು.

(೧) ಎರಡು ಸಂಖ್ಯೆಗಳ ವರ್ಗದ ಬೇರಿಜವಷ್ಟೇ ಆ ಎರಡು ಸಂಖ್ಯೆಗಳ ಘನದ ಬೇರಿಜು ಆಗುತ್ತದೆ ಆದರೆ ಅಂಥ ಎರಡು ಸಂಖ್ಯೆಗಳ್ಯಾವವು. ೭ ಮತ್ತು ೦. ಇವುಗಳ ಹೆಸರು ಉತ್ತರ ಬೇಕು.

(೨) ಒಂದು ಕುದುರೆಯು ಮೊದಲನೇ ದಿವಸ ೨೦ ಹರದಾರಿ, ೨ನೇ ದಿವಸ ೪೦ ಪರದಾರಿ, ೪ನೇ ದಿವಸ ೮೦ ಈ ಪ್ರಕಾರ ನಡೆಯುತ್ತದೆ; ಅದರ ಮರಿಯು ೧ನೇ ದಿವಸ ೧ ಹರದಾರಿ, ೨ನೇ ದಿವಸ ೪ ಹರದಾರಿ, ೪ನೇ ದಿವಸ ೯ ಹರದಾರಿ, ೪ನೇ ದಿವಸ ೧೬ ಈ ಪ್ರಕಾರ ನೂ ಮಿತಿಯಿಂದ ನಡೆಯಲಾಗಿ ಅವೆರಡೂ ಎಷ್ಟು ದಿನಸದ ಮೇಲೆ ಎಷ್ಟು ವೇಳಕ್ಕೆ, ಕೂಡಿದವು?

ತಾರೀಖು ೬ ಮೇ ಸನ್ ೧೮೬೫ ಇಸವಿ ಮುಕ್ಕಾಮು ಧಾರವಾಡ.

ರಾಘವೇಂದ್ರ ಅಪ್ಪಾಜೀ ಮಾಜೀ ಹೆಡ್ಡ ಮಾಸ್ತರ ಹಂಚಿನಾಳ.

ಕನ್ನಡ ಶಾಲಾಪತ್ರಿಕದ ಎಡಿಟರರಿಗೆ—

ಮೋಜಿನ ಕನಮಡೀ ಶಾಲೆಯ ವಿದ್ಯಾರ್ಥಿಯು ಸದ್ವಿನಯಪೂರ್ವಕ ವಿಜ್ಞಾಪಿಸುವದೇನಂದರೆ ಚಂದನಾದ ಲೆಕ್ಖದ ನಾಲ್ಕು ಪಂಗ್ತಿಗಳನ್ನು ತಮ್ಮ ಅಂದವಾದ ಮತಪತ್ರಿಕೆಯಲ್ಲಿ ಛಾಪಿಸಿ ಪ್ರಸಿದ್ಧಿಸ ಬೇಕೆಂದು ಬೇಡಿಕೊಳ್ಳುತ್ತೇನೆ.

ಪಸ್ತಾಹೀನರಾದ ಕೆಲವು ಯಾಚಕರು ಹೂಡಿಕೊಂಡು ಪಸ್ತಾವುಳ್ಳ ಧಾರ್ಮಿಕ ಧೊರೆಯ ಬಳಿಗೆ ಹೋಗಿ ವಸ್ತ್ರಗಳನ್ನು ಬೇಡಲಾಗಿ ಸದರ ಧೊರೆಯು ಯಾವತ್ತು ಯಾಚಕರಿಗೆ ತಕ್ಕಮಟ್ಟಿಗೆ ಸಾಲುವಂಥ ಸಮುಚ್ಚಯ ತ್ರಿಕೋಣಾಕೃತಿಯಾದಂಥ ಸದರ ವಸ್ತ್ರದ ಮೂರು ಬಾಜುವಿನ ಉದ್ದಳತೆಯು ಬೇರೀಜಿನ ಇಂಚುಗಳು ಸದರ ಯಾಚಕರ ಸಂಖ್ಯೆಗೆ ಸರಿಯಾಗಿರುವಂಥ ಒಂದು ವಸ್ತ್ರವನ್ನು ಕೊಟ್ಟನು. ಅವನ್ನು ತೆಗೆದುಕೊಂಡು ಸರಿಯಾಗಿ ಪಾಲಾ ಹಂಚಿಕೊಳ್ಳಲಾಗಿ ಪ್ರತಿ ಒಬ್ಬೊಬ್ಬ ಯಾಚಕನಿಗೆ ನಾಲ್ಕು ಫೂಟು ಆಗಲು ಇನ್ನೂರು ಫೂಟು ಉದ್ದವಾದ ವಸ್ತ್ರದ ತುಂಡು ದೊರಿಯಿತು. ಹೀಗಾದ ಬಳಿಕ ಎಷ್ಟು ಜನ ಯಾಚಕರಿದ್ದರು. ಮತ್ತು ಸದರ △ವಸ್ತ್ರದ ಪ್ರತ್ಯೇಕ ಬಾಜುವಿನ ಉದ್ದಳತೆ ಎಷ್ಟು ಮತ್ತು ಆ ವಸ್ತ್ರದ ಲಂಬೋಂಚೆ ಎಷ್ಟು?

ಸದರ ಲೆಕ್ಖದ ಬಾಕ್ಕಾವು ರೀತಿ ಸಹಿತವಾಗಿ ಮುಸಮು

ತ್ರಿಕೆಯ ದ್ವಾರದಿಂದ ಪ್ರಕಟಿಸಿ ಕೀರ್ತಿಯನ್ನು ಪಡ
ಳ್ಳ ಬೇಕೆಂದು ಗಣಿತಜ್ಞರನ್ನು ಕುರಿತು ಸವಿನಯ ಪೂ
ರ್ವಕ ಪ್ರಾರ್ಥಿಸುತ್ತೇನೆ.

ತಾ. ೧೦।೪।೭೫ } ಕೃಷ್ಣಾಜಿ ಅಪ್ಪಾಜಿ ಕುಲಕರ್ಣ
} ವಿ. ಶಾ. ಕನಮಡಿ ತಾ. ಅಥಣಿ.

ಮಹಾರಾಜ ರಾಜೇಶ್ರಿ ಬೇಳಗಾಂವಿ ಕನ್ನಡ ಮಾಸ
ಪತ್ರಿಕ ಕರ್ತರಿಗೆ—

ನಾನು ವಿಸಂತಿಮಾಡಿ ಬೇಡಿಕೊಳ್ಳುವದೇನಂದರೆ ನಾ
ನು ಕೆಳಗೆ ಬರೆದಿರುವ ಲೆಕ್ಖವನ್ನು ತಮ್ಮ ಕರಕಮಲದ
ಲ್ಲಿ ಉನ್ನವಿಸುವ ಅಂದವಾದ ಮಾಸಪತ್ರಿಕೆಯಲ್ಲಿ ಅಚ್ಚಿ
ನ ಪ್ರಕಟಿಸುವರೆಂದು ನಾನು ಆಶಿಸುತ್ತೇನೆ.

(ಲೆಕ್ಖವು) ಧಾರವಾಡದಲ್ಲಿ ಒಂದು ದುಂಡಾಕೃತಿ
ಯ ಹುಡೇ ಕಟ್ಟಿಶಿದರು ಅದರ ಬುಡದ ವ್ಯಾಸವು ೬೦
ಮಳ ೪೦ ಮಳ ಎತ್ತರ ೨ ಮಳ ಮೇಲಿನ ವ್ಯಾಸವು
೪೦△೪೦ ಈ ಹುಡಕಟ್ಟಿಸಲಿಕ್ಕೆ ೪೦೦ ಇಟ್ಟಂಗಿಗಳು
೬೨
ಹತ್ತಿದವು ಆದರೆ ಹೆಬಸೂರಲ್ಲಿ ಇದೇ ಪ್ರಕಾರದ ಇಟ್ಟಂ
ಗಿಗಳಿಂದ ಕಟ್ಟಿಶಿದ್ದು ಒಂದು ದೊಡ್ಡ ಹುಡೇ ಅದೆ ಇದ
ರ ಬುಡದ ವ್ಯಾಸವು ೪೦ ಮಳ ೬೦೦ ಮಳ ಎತ್ತರವು
೫ ಮಳ ಮೇಲಿನ ವ್ಯಾಸವು ೬೦೦ ೬೦೦ ಈ ಹು
೫೦
ಡೇ ಕಟ್ಟಿಸಲಿಕ್ಕೆ ಎಷ್ಟು ಇಟ್ಟಂಗಿಗಳು ಹತ್ತಿದವು



ಇದನ್ನು ಯಾರಾದರೂ ರೀತಿ ಸಹಿತ ಮಾಡಿ ಮುಕಪತ್ರಿಕ
ದ್ವಾರೆದಿಂದ ನನಗೆ ತಿಳಿಸಿದರೆ ನಾನು ಅವರ ಉಪಕಾರವ
ನ್ನು ಸ್ಮರಿಸುತ್ತೀನೆ.

ತಾರೀಖು ೭೦ ಮಾ
ಹೆ ಮಾರ್ಚ ಸನ್ನ
ಇವ೭೫ ಇಸವಿ

ಸದಾಶಿವ ಕೂರಯ್ಯಾ ಹಿರೇ
ಮಠ ಹಿರೇ ಹಂದಿಗೋಳ ತಾ
ಲೂಕ ಗದಗ

ಸಿದ್ಧನಾಥ ವಾಚನ ಮಂದಿರ.
ಮೋರಬ. ಜಿ. ಧಾರವಾಡ.

ಶಾಲಾಪತ್ರಿಕೆ.

ಪುಸ್ತಕ ೧೧] [ಸಂಚಿಕೆ ೪

ತಾರೀಖು ೭೫ ನೇ ಮಾಹೆ ಜುಲಾಯಿ ೧೮೭೫.

EDUCATIONAL INTELLIGENCE.

ವಿದ್ಯಾನುಭೂತಿಯ ಸಂಬಂಧವಾದ

ಪ್ರಕಟಣೆಗಳು.

ಈ ವರ್ಷದ ಮುಲಕೀ ಪರೀಕ್ಷೆಯು ಬರುವ ಅಕ್ಟೋಬರ ತಿಂಗಳ ೫ ನೇ ತಾರೀಖಿಗೆ ಆಗುವದೆಂದು ಮೆ॥ ಎ. ಇನಸ್ಪೆಕ್ಟರ ಫೂರೆಗಳು ಬೆಳಗಾವ ಸಮಾಚಾರ ಪತ್ರದಲ್ಲಿ ಜಾಹೀರಾತು ಕೊಟ್ಟಿರುತ್ತಾರೆ.

ಚನುತ್ಸಾರ ಸಂಗತಿಯು—(ದೊನ್ನಿ ಹಾಡು) ಈ ಮಿಂಚು ಪುಳ್ಳ ಹಾಡನ್ನು ಎಲ್ಲರು ನೋಡಿರಬಹುದು. ಪಶ್ಚಿಮ ಅಮೆರಿಕದಲ್ಲಿ ಇದರಂಥೊಂದು ಜಾತಿಯುಂಟು. ಈ ಜಾತಿಯ ಹಾಡುಗಳನ್ನು ಎರಡು ಮೂರು ಹಿಡಿದರೆ ಪುಸ್ತಕ ಓದುವಷ್ಟು ಅಪ್ಪುಗಳ ಬೆಳಕು ಬೀಳುತ್ತದೆ. ಈ ಹಾಡುಗಳ ಪ್ರಕಾಶದ ವಿಷಯವಾಗಿ ಪದಾರ್ಥವಿಜ್ಞಾನಿಗಳ ಸಿದ್ಧಾಂ

ತವು ಇನ್ನುಏನೂ ಆಗಿಲ್ಲ. ಈ ಪ್ರಕಾಶನವು ಹೆಣ್ಣಾ ಹೊ ನ್ನಿಹುಳಕ್ಕೆ ಮಾತ್ರ ಇರುತ್ತದೆ.

ಉಳ್ಳೀಗಡ್ಡಿಯೂ, ಸೂಜಿಯೂ, — ಉಳ್ಳೀಗಡ್ಡೆಯ ನ್ನು ಸುಲಿಯುವಾಗ ಅದರ ಸಂಣ ಪರಮಾಣುಗಳು ಕ ಣ್ಣೊಳಗೆ ಹೋಗಿ ಕಣ್ಣಿಗೆ ನೀರು ಬರುತ್ತವೆಂಬದು ಯೆ ಲ್ಲರಿಗೆ ಗೊತ್ತಿರಬಹುದು. ಆದರೆ ಸುಲಿಯುವಾಗ ಬಾ ಯೊಳಗೆ ಹಲ್ಲುಗಳಿಂದ ಒಂದು ಸೂಜಿಯನ್ನು ನೆಟ್ಟಗೆ ಹಿಡಿದರೆ ನೀರು ಬರುವದಿಲ್ಲೆಂಬದಾಗಿ ತಿಳಿದು ಬಂದದೆ— ಸುಲಿಯುವಾಗ್ಗೆ ಅದರ ಸೂಕ್ಷ್ಮ ಪರಮಾಣುಗಳು ಹಾರಿ ಹೋಗಿ ಕಣ್ಣಿಗೆ ತಗಲುತ್ತವೆ; ಆದರೆ ಅವುಗಳನ್ನು ಈ ಸೂಜಿಯ ತುದಿಯು ಆಕರ್ಷಣ ಮಾಡಿಕೊಳ್ಳುತ್ತದೆ; ಮೇಲೆ ಹಾರಿ ಹೋಗಗೊಡುವದಿಲ್ಲ.

ಫ್ರಾನ್ಸ ದೇಶದಲ್ಲಿ ಮಿ. ಡಿ. ಲಾಬರಟಿ ಯೆಂಬವನು ಕಾಜು ಜಿಗಟು ಮಾಡುವದೊಂದು ಯುಕ್ತಿಯನ್ನು ಹು ಡುಕಿ ತೆಗಿದಿದ್ದಾನೆ. ಅವನು ಕಾಜು ಸ್ವಲ್ಪ ನಿಸಿ ಮಾ ಡಿ ಒಂದು ತರದ ಯಣ್ಣೆಯಲ್ಲಿ ಯಿದ್ದುತ್ತಾನೆ; ಆದರಿಂ ದ ನೆಲಕ್ಕೆ ಅಪ್ಪಳಿಸಿದರೂ, ಕಲ್ಲಿನ ಮೇಲಿಟ್ಟು ಹೊಡ ದರೂ, ಹೊಡಿಯದಂಥಾ ಶಕ್ತಿಯು ಆ ಕಾಜಿನಲ್ಲಿ ಬರು ತ್ತದೆ.

—ಸಾಧಾರಣ ಶಾಲೆಗಳಲ್ಲಿ ಪದಾರ್ಥವಿಜ್ಞಾನಶಾಸ್ತ್ರವು—

ಹೊಸದಾಗಿ ಕೂಡಿದ್ದೊಂದು ಸಭೆಯಲ್ಲಿ ಗ್ಲಾಡಸ್ಟೋ ನನೆಂಬ ಪ್ರೊಫೇಸರನು "ನಮ್ಮ ಸಾಧಾರಣ ಶಾಲೆಗಳಲ್ಲಿ ಪದಾರ್ಥವಿಜ್ಞಾನಶಾಸ್ತ್ರ ಕಲಿಸುವ ಬಗ್ಯೆ, ದಿನದಿನಕ್ಕೆ ಅ ದರ ಹೆಚ್ಚು ವಿಕೆಯ ಬಗ್ಯೆ ಅತ್ಯಾ ವಶ್ಯಕವಾದದ್ದೊಂ

ನು ನಿಬಂಧನೆಯನ್ನು ಓದಿದನು. ಸನ್ನಿಧಿಯ ನೀ ಇ
ವಿಯು ದೊಸ್ತ ಪ್ರದರ್ಶನದಿಂದ ಈ ವಿದ್ಯೆಯ ಅಭಿರುಚಿಯು
ಜನರಲ್ಲಿ ಪುಟ್ಟಿತೆಂದು ಇವನು ನಿಶ್ಚಯಮಾಡಿ ತೋರಿಸಿದ
ನು. ಆ ಪ್ರದರ್ಶನದಿಂದ ಇಂಥಾ ವಿಶೇಷ ವಿದ್ಯೆಯ ಜ್ಞಾನ
ವು ನಮ್ಮ ಶಿಲ್ಪಿಗರಲ್ಲಿ ಕಡಿಮೆಯಾಗಿದೆಯೆಂದು ಯೆಲ್ಲ
ರ ಲಕ್ಷ್ಯಕ್ಕೆ ಬಂದದರಿಂದ ಶಾಸ್ತ್ರ, ಕಲಾಕೌಶಲ್ಯಗಳ
ಜಾತಿಯು ಸ್ಥಾಪಿಸಲ್ಪಟ್ಟಿತು. ಈಗ ಯಾವತ್ತು ಟ್ರೇನಿಂ
ಗಕಾಲೇಜುಗಳಲ್ಲಿ ಈ ಜಾತಿಯಿಂದ ಬಹಳ ಉಪಯೋಗ
ವಾಗುತ್ತದೆ — ಅದರಿಂದ ಹೋದ ವರ್ಷ ಭೂಗೋಲ ಶಾ
ಸ್ತ್ರ, ಶರೀರ ರಚನಾ ಶಾಸ್ತ್ರ, ಲೋಹಪಟುಂಬಕ ಧರ್ಮ,
ವಿದ್ಯುತ್ ವಿದ್ಯೆ, ಶ್ರವಣವಿದ್ಯೆ, ಪ್ರಕಾಶ ಉಷ್ಣತೆ, ರಸಾ
ಯನಶಾಸ್ತ್ರ, ವನಸ್ಪತಿ ವಿದ್ಯೆ ಮುಂತಾದವುಗಳನ್ನು ಕಲಿ
ಯುವಂಥಾ ವಿದ್ಯಾರ್ಥಿಗಳ ಸಂಖ್ಯೆಯು ತಿಳಿಲಾರದವರೆಗೆ
ಬೆಳೆಯಿತು. ಲಂಡನ ಸ್ಕೂಲಬೋರ್ಡ್ ಎಂಬ ಕವಿಟಿ
ಯಿಯನು, ಶಾಸ್ತ್ರ ಸಂಬಂಧವಾದ ಪರೀಕ್ಷೆಯಲ್ಲಿ ಪಾಸು
ಗಿ ಸರಟೇಪಿಕೇಟುಗಳನ್ನು ಸಂಪಾದಿಸಿದಂಥಾ ಮಾಸ್ತರ
ಜನರಿಗೆ ಹೆಚ್ಚಿನ ಸಂಬಳವನ್ನು ಕೊಡುತ್ತಾರೆ. ಆಯ
ರ್ಲಂಡದ ಶಾಲೆಗಳಲ್ಲಿ ಸಹ ಮಾಸ್ತರ ಜನರಿಗೆ ಇದೇ ಪ್ರ
ಕಾರದ ಉತ್ತೇಜನವನ್ನು ಕೊಡುತ್ತಾರೆ ಸಾವಿರಾರು ಜನ
ಶಿಕ್ಷಕರು ಸರಕಾರದಿಂದ ಸ್ಥಾಪಿಸಲ್ಪಟ್ಟ ಶಾಸ್ತ್ರ ಕಲಿಯು
ವ ವರ್ಗಗಳಲ್ಲಿ ಅಭ್ಯಾಸಮಾಡುತ್ತಾರೆ. ಹೋದ ವರ್ಷ
ದ ಕಾಯಿದೆಯಿಂದ ಸಾಧಾರಣ ಶಾಲೆಗಳಲ್ಲಿ ಕಲಿಸತಕ್ಕ
ವಿಷಯಗಳಲ್ಲಿ ಕೆಲವು ಶಾಸ್ತ್ರಗಳು ಸೇರಿಸಲ್ಪಟ್ಟವೆ. ತ
ಮಾಯು ಪದಾರ್ಥವಿಜ್ಞಾನವ ಅಭ್ಯಾಸವು ತಾತ್ಪಾಲದಲ್ಲಿ

ಉಪಯೋಗಕ್ಕೆ ಬರುವಕಾರಣದಿಂದಲೂ, ಯಾವದೊಂದು ಉದ್ಯೋಗದ ಆರಂಭದಲ್ಲಿ ಅದರಿಂದ ಸಹಾಯ ಉಂಟಾಗುತ್ತದೆಂಬ ಕಾರಣದಿಂದಲೂ, ಮನಸ್ಸಿನ ಸುಧಾರಣೆಗೆ ಅತಿಶಯ ಪ್ರಯೋಜಕವಾಗಿರುತ್ತದೆಂಬ ಕಾರಣದಿಂದಲೂ ಆ ಶಾಸ್ತ್ರವನ್ನು ಕಲಿಸುವದು ಅತ್ಯಾವಶ್ಯವಾಗಿರುತ್ತದೆಂಬ ಬಗ್ಗೆ ಅವನು ತನ್ನ ಅಭಿಪ್ರಾಯವನ್ನು ಪ್ರಕಟಿಸಿದನು. ಆರಂಭದ ಶಾಲೆಗಳಲ್ಲಿ ಭೂಗೋಲ ಶಾಸ್ತ್ರವನ್ನೂ, ಶರೀರ ರಚನಾಶಾಸ್ತ್ರವನ್ನೂ, ರಸಾಯನ ಶಾಸ್ತ್ರದ ಕೆಲವು ವಿಷಯಗಳನ್ನೂ ಕಲಿಸುವದೇ ಮುಖ್ಯ ಕಾರ್ಯವೆಂದು ಅವನು ಪ್ರತಿಪಾದಿಸಿದನು.

SELF HELP.

ತನಗೆ ತಾನೇ ನೆರವಾಗುವದು.

ಆದರೆ ಜೋಜೆಫ್ ಹ್ಯೂಮನು ತನ್ನ ಉದ್ಯೋಗದ ಫಲವನ್ನು ಆಲಸ್ಯದಿಂದ ಕೂತುಕೊಂಡು ಅನುಭೋಗಿಸುವ ಮನುಷ್ಯನಲ್ಲ. ಉದ್ಯೋಗವೂ ಕೆಲಸವೂ ಇಲ್ಲದಿದ್ದರೆ ಅವನಿಗೆ ಸುಖವಾಗುತ್ತಿದ್ದಿಲ್ಲ. ತನ್ನ ಸ್ವಂತ ದೇಶದ ನಿಜವಾದ ಸ್ಥಿತಿಯನ್ನು ತಿಳಿದುಕೊಳ್ಳುವ ಅಪೇಕ್ಷೆಯುಳ್ಳವನಾಗಿ ಅವನು ಆ ಕಾಲದಲ್ಲಿ ಇಂಗ್ಲಂಡದೊಳಗೆ ಕಲಾಕೌಶಲ್ಯಾದಿಗಳ ಬಗ್ಗೆ ಹೆಸರಾದ ಗ್ರಾಮಗಳನ್ನೆಲ್ಲ ತಿರುಗಿ ಬಂದನು. ತರುವಾಯ ಪರರಾಜ್ಯಗಳ ರೀತಿಗಳನ್ನು ತಿಳಿದುಕೊಳ್ಳಪೇಕ್ಷಿಸಿದ ಯುರೋಪಿನ ನಾಡುಗಳಲ್ಲಿ ಅಡ್ಡಾಡಿದನು. ಮುಂದೆ ಇಂಗ್ಲಂಡಕ್ಕೆ ತಿರುಗಿ ಬಂದ ಮೇಲೆ

ಲೆ ಸನ್ನ ೧೮೧೫ನೇ ವರ್ಷದಲ್ಲಿ ಮಾಲಿಗಮೆಂಬಿನ ಸಭಾ ಸದನಾಗಿ, ನಡುವೆ ಸ್ವಲ್ಪ ಮಾತ್ರ ಅಂತರಿಸಿದ್ದು ಹೊತ್ತಾಗಿ, ಮೂವತ್ತೈನಾಲ್ಕು ವರ್ಷಗಳವರೆಗೆ ಅಲ್ಲಿ ಕೆಲಸ ಮಾಡಿದನು. ಇವನು ಜನರ ವಿದ್ಯಾಭ್ಯಾಸದ ಸಂಬಂಧವಾಗಿ ಮೊದಲಿಗೆ ಕೊಟ್ಟ ವ್ಯಾಖ್ಯಾನವು ಆ ಸಭೆಯ ದಸ್ತಾರಿನಲ್ಲಿ ಬರೆದಿಡಲ್ಪಟ್ಟಿದೆ. ಇವನು ಬಹು ದಿವಸ ಬಹುಮಾನದಿಂದ ನಡಿಸಿದ ಕೃತ್ಯಗಳಲ್ಲೆಲ್ಲ ಜನರ ವಿದ್ಯಾಭ್ಯಾಸದ ಸಂಗತಿಗಳಲ್ಲಿಯೂ, ಬೇರೆ ವಿಧವಾಗಿ ಅವರ ಸುಧಾರಣೆಗೆ ಕಾರಣವಾದ ಸಂಗತಿಗಳಲ್ಲಿಯೂ ಹೆಚ್ಚಾಗಿ ಮನಸು ಮಾಡುತ್ತಿದ್ದನು. ಮುಖ್ಯವಾಗಿ ಕೆರೆಯುವರಲ್ಲಿ ಸುಧಾರಣೆಯು, ಸೇವಿಂಗಬ್ಯಾಂಕ*ಯೆಂಬ ಸಾವುಕಾರಿಯ ಪದ್ಧತಿಯು, ವ್ಯಾಪಾರಸ್ಥ ಯಾವ ವಿಧದ ಅಡ್ಡಿ ಆದಬಾದೆಗಳಿಂಬ ನಿಯಮವು, ಬಿಗಿ ಹಿಡಿದು, ಸರಕಾರದ ಹಣವನ್ನು ಹೆಚ್ಚಿಮಾಡುವದು, ಜನರ ಸ್ಥಾನತ್ವಗಳನ್ನು ಸರಕಾರಕ್ಕೆ ತಿಳಿಸುವ ರೀತಿಯನ್ನು ಹೆಚ್ಚು ವಿಸ್ತಾರ ಪಡಿಸಿದ್ದು, ಈ ಮೊದಲಾದ ಸಂಗತಿಗಳಿಗೆಲ್ಲ ಅವನಿಂದ ಸಹಾಯ ಉಂಟಾಯಿತು. ಇವನು ಯಾವ ಕೆಲಸವನ್ನು ಕೈಯಲ್ಲಿ ಹಿಡಿದಾಗಲೂ, ತನ್ನಲ್ಲಿ ಇದ್ದಷ್ಟು ತ್ರಾಣವೆಯನ್ನೆಲ್ಲ ಹೆಚ್ಚಿ ಮಾಡಿ ಉದ್ಯೋಗ ಮಾಡುತ್ತಿದ್ದನು. ಅವನಿಗೆ ಜನ್ಮಾಗಿ ಮಾತಾಡಲಿಕ್ಕೆ ಬರುತ್ತಿರಲಿಲ್ಲ. ಆದರೆ ಅವನು ನುಡಿದದ್ದೆಲ್ಲ ಪ್ರಮಾಣಿಕನೂ, ಯಥಾರ್ಥ ನುಡಿಯುವವನೂ ಆದ ಮನುಷ್ಯನ ಮುಖದಿಂದ ಹೊರಟಿದ್ದೆಂಬು ಜನರ ನಂಬಿಕೆ ಇ

---

* ಸಾವುಕಾರರು, ಅಥವಾ ಸರಕಾರದವರು ಜನರ ಹಣವನ್ನು ಇಟ್ಟುಕೊಂಡು ಅವರಿಗೆ ಬಡ್ಡಿಯ ಕೊಡವಪದ್ಧತಿಯು.

ತ್ತು. ಶಾಸ್ತ್ರಬದ್ಧ ರೀತಿಯೆಂಬುವನ ಮತದಂತ ಉಪಹಾಸದಿ
ದ ಸತ್ಯದ ಪರೀಕ್ಷೆಯಾಗುತ್ತದೆಂಬದು ನಿಜವಿದ್ದರೆ, ಈ
ಪರೀಕ್ಷೆಯಲ್ಲಿ ಜೋಜೆಫಹ್ಯೂಮನು ಚನ್ನಾಗಿ ಇಳಿ
ದ್ದನು. ಇವನಿಗಿಂತ ಹೆಚ್ಚು ಉಪಹಾಸ ಮಾಡಿಸಿಕೊಂಡ
ವರು ಯಾರೂ ಇಲ್ಲ; ಆದರೂ ಇವನು ತಾನು ಹಿಡಿದದ್ದ
ನ್ನು ಯಿಂದಿಗೂ ಬಿಡುತ್ತಿದ್ದಿಲ್ಲ. ಯಾವದೊಂದು ವಾದದ
ಲ್ಲಿ ಮತ್ತ ಭೇದವುಂಟಾದರೆ, ಇವನು ಹಿಡಿದ ಪಕ್ಷವು ಸಾ
ಧಾರಣವಾಗಿ ಹಿಮ್ಮೆಟ್ಟುವದು. ಆವಾಗ್ಯೂ ಇವನ ಯ
ತ್ನಕ್ಕೆ ಫಲವಾಗದೆ ಹೋಗುತ್ತಿದ್ದಿಲ್ಲ. ರಾಜ್ಯದ ಕಂ
ದಾಯದ ಸಂಗತ್ತಿಗಳಲ್ಲಿ ಇವನಿಗೆ ತೀರ ವಿರುದ್ಧವಾದ
ಮತಗಳೇ *ಸ್ಥಾಪಿಸಲ್ಪಟ್ಟಿಗ್ಯೂ, ಇವನು ಯೆಷ್ಟೋ
ಬೆಲೆಯುಳ್ಳ ಸುಧಾರಣೆಗಳನ್ನು ಉಂಟುಮಾಡಿದನು
ಇವನು ಅಸಾಧರಣ ಕಷ್ಟವುಳ್ಳ ಕೆಲಸಗಳನ್ನು ಯು
ಕ್ತಿಯಿಂದ ಕಡೆಗಾಣಿಸುವನು; ಬೆಳಗಿನ ಆರು ಘಂಟೆ
ಯ ಕಾಲಕ್ಕೆ ಯಿದ್ದು, ಬರೆಯತಕ್ಕ ಪತ್ರಗಳನ್ನು ಬರೆ
ದು, ಪಾರ್ಲಿಮೆಂಟಿನ ಕಾದಗಳನ್ನು ಕೂಡಿಸಿ ಇಟ್ಟುಕೊ
ಳ್ಳುತ್ತಿದ್ದನು; ಆ ಮೇಲೆ ನೆಹರೆಯ ಮಾಡಿ, ತನ್ನ ಭೆಟ್ಟಿ
ಗೆ ಬಂದವರ ಭೆಟ್ಟಿಯು ತೆಗದುಕೊಳ್ಳುವನು. ಬಂದೊ
ದು ದಿವಸ ಇಪ್ಪತ್ತರವರೆಗೆ ಜನರು ಅವನ ಭೆಟ್ಟಿಗೆ
ಹೋಗುವರು. ಇವನಿಲ್ಲದೆ ಪಾರ್ಲಿಮೆಂಟಿನ ಸಭೆಯು
ಬಹಳ ಮಾಡಿ ನೆರೆಯುತ್ತಿದ್ದಿಲ್ಲ; ಒಂದೊಂದು ರಾತ್ರಿಯ
ಲ್ಲಿ ಬೆಳಗಿನ ಯೆರಡು ಮೂರು ಘಂಟೆಗಳ ಮಟ್ಟಿಗೂ ವಾ

---

* ಪಾರ್ಲಿಮೆಂಟಿನಲ್ಲಿ ವಾದ ನಡಿದು ಕಡೆಯಲ್ಲಿ ಯಾವ ಪಕ್ಷಕ್ಕೆ
ಹೆಚ್ಚು ಜನರ ಸಂಮತಿ ಬೀಳುತ್ತದೋ ಅವೇ ಸ್ಥಾಪಿತವಾಗುತ್ತದೆ.

ದ ನಡಿದಾಗ್ಯೂ, ಆ ವಾದದ ಪಕ್ಷಕಾರರಲ್ಲಿ ಇವನ ಹೆಸರು ಬಹುಶಃ ಇರತಕ್ಕದ್ದೇ. ತಾತ್ಪರ್ಯವೆನಂದರೆ, ಮೇಲೆ ಮೇಲೆ ಬೇರೆ ಬೇರೆ ವಿಧದ ರಾಜ್ಯದಾಡಳಿತೆಯ ಕಟ್ಟಳೆಗಳುಂಟಾಗುತ್ತ ಹೋದಾಗ್ಯೂ, ಪ್ರತಿವಾರ, ಪ್ರತಿಪಕ್ಷ, ಇವನಂತೆ ಎಡೆಬಿಡದೆ ಕೆಲಸ ಮಾಡುವದು; ತನ್ನ ವಿರುದ್ಧ ಮತವು ಸ್ಥಾಪಿತವಾಗಿ ತನ್ನ ಮತವು ಮುರಿದು ಉಪಹಾಸಿಸಲ್ಪಟ್ಟಾಗ್ಯೂ. ಒಂದೊಂದು ಸಮಯದಲ್ಲಿ ಒಬ್ಬನೇ ಒಂದು ಪಕ್ಷ ಹಿಡಿದು ಬೇರೆ ನಿಲ್ಲುವದು; ಯೆಷ್ಟು ಆಪತ್ತುಗಳು ಬಂದಾಗ್ಯೂ, ದೃಢ ನಿಶ್ಚಯದಿಂದ ನಡಿಯುವದು; ಯೆಂಥಾ ಪ್ರಸಂಗ ಬಂದಾಗ್ಯೂ, ಒಂದೇ ವಿಧದ ಶಾಂತಿಯ ಸ್ವಭಾವದಿಂದ ನಡಿಯುವದು; ತನ್ನ ಆಕಾಂಕ್ಷೆಯನ್ನೂ, ಸಾಹಸವನ್ನೂ ಯೆಂದಿಗೂ ಸಡಲಿಸದೆ ಇರುವದು; ತನ್ನ ಅಭಿಪ್ರಾಯದಂತೆ ಕ್ರಮ ಕ್ರಮದಿಂದ ಕಟ್ಟಳೆಗಳುಂಟಾಗಿ ಜನರು ಸಂತೋಷದ ಕೂಗಾಟಗಳೊಡನೆ ಸ್ವೀಕರಿಸಿದ್ದನ್ನು ನೋಡುವವರೆಗೆ ಬದುಕುವದು, ಇವುಗಳಿಗೆಲ್ಲ ಮನುಷ್ಯರ ಚರಿತ್ರೆಗಳಲ್ಲಿ ವ್ಯಕ್ತವಾಗುವ ದೃಢನಿಶ್ಚಯ ಬಲದ ಅತಿ ವಿಲಕ್ಷಣವಾದ ಉದಾಹರಣೆಗಳೆಂದು ಯೆಣಿಸತಕ್ಕದ್ದು.

೪ನೇ ಸಂಧಿ(ಮೂಲ ಪುಸ್ತಕದಲ್ಲಿ V ನೇದು.)

ಮಾನಸಿಕ ಶಕ್ತಿಯೂ, ಧೈರ್ಯವೂ.

ಒಬ್ಬ ಮುದುಕನಾದ ಉತ್ತರ ದೇಶ ನಿವಾಸಿಯು ನು

ಡಿದದ್ದು ಬರೆದು ಇಡಲ್ಪಟ್ಟಿದೆ; ಅದು ಟ್ಯೂಟನ್ನಿಂಬ* ಜನರ ಲಕ್ಷಣವನ್ನು ಪೂರ್ಣವಾಗಿ ತೋರಿಸುತ್ತದೆ. ಅದೇನಂದರೆ :-ಮೂರ್ತಿಗಳಲ್ಲಿ ಅಥವಾ ಭೂತಪಿಶಾಚಿಗಳಲ್ಲಿ ನಾನು ವಿಶ್ವಾಸವಿಡುವದಿಲ್ಲ; ನನ್ನ ಸ್ವಂತ ಶಾರೀರ ಮಾನಸಿಕ ಶಕ್ತಿಗಳಲ್ಲಿಯೇ ನನ್ನ ಪೂರ್ಣವಾದ ನಂಬಿಕೆಯುಂಟು." ಕಾಳಗದಲ್ಲಿ ಕೊಚ್ಚಲ್ಪಟ್ಟ ತಲೆಯ ಮೇಲೆ ಪ್ರಾಚೀನ ಕಾಲದ ಜನರು ಬರೆಯುತ್ತಿದ್ದ, "ನಾನು ದಾರಿಯಂನು ತೆಗೆಯುವೆನು, ಇಲ್ಲದಿದ್ದರೆ ಮಾಡುವೆನು" ಯೆಂಬ ಗಾದೆಯು ಇಂದಿಗೂ ಉತ್ತರ ದೇಶದ ನಿವಾಸಿಗಳ ವಂಶಸ್ಥರಲ್ಲಿ ತೋರುವ ಬಲವಾದ ಸ್ವಾತಂತ್ರ್ಯದ ಕುರುಹಾಗಿರುತ್ತದೆ. ಸ್ವೀಡನ ನಾರ್ವೇದೇಶಗಳ ಒಂದು ದೇವತೆಯ ಕೈಯಲ್ಲಿ ಸುತ್ತಿಗೆ ಇತ್ತೆಂಬಿ ಸಂಗತಿಯಿಂದ ಆ ದೇಶಗಳ ದೇವತಾ ಚರಿತ್ರೆಯ ಮುಖ್ಯ ಲಕ್ಷಣವು ಹ್ಯಾಗೆ ತಿಳಿಯುತ್ತದೆಯೋ, ಹಾಗೆ ಬೇರೆ ಯಾತರಿಂದಲೂ ತಿಳಿಯುವದಿಲ್ಲ. ಅಲ್ಪಸಂಗತಿಯಿಂದ ಮನುಷ್ಯನ ಗುಣಪರೀಕ್ಷೆಯಾಗುತ್ತದೆ. ಕೆಲ ಒಬ್ಬ ಮನುಷ್ಯನು ಸುತ್ತಿಗೆಯನ್ನು ಹ್ಯಾಗೆ ಹೊಡೆಯುತ್ತಾನೆ, ಯೆಂಬ ಅಲ್ಪವಾದ ಪರೀಕ್ಷೆಯಿಂದ ಸಹ ಅವನ ಶಕ್ತಿಯನ್ನು ಕೆಲಮಟ್ಟಿಗೆ ತರ್ಕಿಸಬಹುದು. ಒಬ್ಬ ಹೆಸರಾದ ಫ್ರಾನ್ಸದೇಶಸ್ಥನು ತನ್ನ ಸ್ನೇಹಿತನೊಬ್ಬನು ಆ ದೇಶದ ಒಂದು ಪ್ರಾಂತದಲ್ಲಿ ಹೋಗಿ ನಿಂತು, ಭೂಮಿಯು ಕೊಳ್ಳುವವನಿದ್ದಾನೆಂದು ಕೇಳಿ ಅಲ್ಲಿಯ ನಿವಾಸಿಗಳ ಮುಖ್ಯ ಗುಣವನ್ನು

---

* ಜರ್ಮನೀ ದೇಶದ ಪ್ರಾಚೀನ ನಿವಾಸಿಗಳಿಗೆ ಈ ಹೆಸರಿತ್ತು.
† ಸ್ವೀಡನ್, ನಾರ್ವೇದೇಶ ನಿವಾಸಿಗಳು.

ಒಂದೇ ಮಾತಿನಿಂದ ವ್ಯಕ್ತ ಪಡಿಸಿದನು. ಅದು ಹ್ಯಾಗಂ ದರೆ, ಅಲ್ಲಿ ಯೇನು ಕೊಳ್ಳ ಬೇಡ; ಆ ಪ್ರಾಂತದ ಜನ ರನ್ನು ನಾನು ಬಲ್ಲೆನು. ಆ ಪ್ರಾಂತದಿಂದ ಪಾರಿಸದೊಳ ಗಿನ ನಮ್ಮ ಪಶು ವೈದ್ಯ ಶಾಲೆಗೆ* ಬರುವ ವಿದ್ಯಾರ್ಥಿಗ ಳು ಮೈ ಮುರಿದು ಬಡಿಗಲ್ಲಿನ ಮೇಲೆ ಸುತ್ತಿಗೆಯ ಪೆ ಟ್ಟು ಹಾಕುವದಿಲ್ಲ. ಅವನು ಮೈಗಳ್ಳರಿದ್ದಾರೆ. ಅದದ ರಿಂದ ಆ ಪ್ರಾಂತದಲ್ಲಿ ವ್ಯಾಪಾರದೊಳಗೆ ಬಂಡವಲವನ್ನು ಹಾಕಿದ ಮೇರಿಗೆ ನಿನಗೆ ಲಾಭವಾಗಲಿಕ್ಕಿಲ್ಲ," ಇವು ಬಹು ಸುಂದರವೂ, ಯೋಗ್ಯವೂ ಆದ ಗುಣ ಪರೀಕ್ಷೆ ಯೆಂಬ ನ್ನ ಬಹುದು. ಅದರಿಂದ ಪರೀಕ್ಷಕನ ಮಾರ್ತಂತ್ವದ ಲ ಕ್ಷಣವೂ ವ್ಯಕ್ತವಾಗುತ್ತದೆ. ಇವಲ್ಲದೆ ಬೇರೆ ಬೇರೆ ವ್ಯ ಕ್ತಿಗಳ ಶಕ್ತಿಯಿಂದಲೇ† ರಾಜ್ಯಕ್ಕೆ ಬಲವುಂಟಾಗಿ ಅವ ರು ಬಿತ್ತಿ ಬೆಳೆಸುಕೊಳ್ಳುವ ಭೂಮಿಗೆ ಸಹ ಬೆಲೆ ಬರು ತ್ತದೆಂಬ ನಿಯಮವು ಇದರಿಂದ ದೃಢವಾಗುತ್ತದೆ. ಇವ ರಂತೆಯೇ ಫ್ರೆಂಚ ಜನರಲ್ಲಿ ಒಂದು ಗಾದೆಯುಂಟು.

ಈ ಗುಣವನ್ನು ಕಲಿತುಕೊಳ್ಳುವದು ಅತಿ ಪ್ರಯೋ ಜನಕರವಾದ ಸಂಗತಿಯು. ಬಲವಾದ ನಿಶ್ಚಯದಿಂದ ಯೋಗ್ಯವಾದ ವಿಷಯವನ್ನು ಬಿನ್ನಟ್ಟುವದೇ ಮನುಷ್ಯ ಸ್ವಭಾವದಲ್ಲಿ ಯೆಲ್ಲ ವಿಧದ ನಿಜವಾದ ಘನತೆಯುಂಟಾ ಗುವದರ ಮೂಲವು. ಶಕ್ತಿಯ ಸಹಾಯದಿಂದಲೇ ಮ ನುಷ್ಯನು ದಣಿವು ಕಳ್ಳ ಬೇಸರಿಕೆಯ ಕೆಲಸಗಳೊಳಗಿಂದ

---

* ಪಶುಗಳ ರೋಗಗಳಿಗೆ ಮಾಡತಕ್ಕ ಔಷಧೋಪಚಾರಗಳನ್ನು ಲಿಯುವ ಶಾಲೆ.

† ಈ ಸಂಧಿಯಲ್ಲಿ ಶಕ್ತಿಯೆಂದರೆ ಮಾನಸಿಕ ಶಕ್ತಿಯೆಂದು ತಿಳಿಯು ಕ ದು

ಲಾ, ನಿಸ್ಸಾರವಾದ ಕಾರ್ಯ ಭಾಗಗಳೊಳಗಿಂದಲೂ ಪಾ
ರಾಗುವದಲ್ಲದೆ, ತಾನು ಯಾವ ಸ್ಥಿತಿಯಲ್ಲಿ ಇದ್ದಾಗ್ಯೂ
ಮೇಲಕ್ಕೆ ಯೇರುತ್ತಾನೆ. ಬುದ್ಧಿ ಕೌಶಲ್ಯದ ಸಹಾಯದ
ಲ್ಲಿ ಇದ್ದಿದ್ದರ ಅರ್ಥವಾದಷ್ಟು ಆಶಾಭಂಗವೂ, ಸಂಕಟವೂ,
ಶಕ್ತಿಯ ಸಹಾಯದಲ್ಲಿ ಇಲ್ಲದೆ, ಇವರಿಂದ ಅದಕ್ಕಿಂತ
ಹೆಚ್ಚು ಕೆಲಸವಾಗುತ್ತದೆ. ನಮ್ಮ ಮನೋರಥವು ಪೂ
ರ್ಣವಾಗಬೇಕಾದರೆ ವೃಥವಾದ ಅಭಿಲಾಷೆಯು ಯೆಷ್ಟು
ಅವಶ್ಯಕವೋ, ಅಷ್ಟು ಅಶ್ಯಕ್ತಕಲಷ್ಟವಾದ ಬುದ್ಧಿಯು
ಅವಶ್ಯಕವಲ್ಲ; ಅಂದರೆ ಹಿಡಿದ ಕೆಲಸದಲ್ಲಿ ದೃಢನಿಶ್ಚಯ
ದಿಂದಲೂ, ಪೂರ್ಣವಾದ ಶಕ್ತಿಯಿಂದಲೂ, ಶ್ರಮ ಮಾಡು
ವ ಸಮರ್ಥತೆಯು ಅಪೇಕ್ಷಿಸಿದಷ್ಟು ಕೇವಲ ಅದನ್ನು ಕ
ಡೆಗಾಣಿಸುವ ಸಾಮರ್ಥ್ಯವು ಅವಶ್ಯಕವಲ್ಲವೆಂಬ ತಾತ್ಪ
ರ್ಯವು. ಅದದರಿಂದ ಮನಸ್ಸಿನ ಶಕ್ತಿಯೇ ಮನುಷ್ಯನ
ಸ್ವಭಾವ ಲಕ್ಷಣದ ಮುಖ್ಯ ಬಲವಾಗಿರುತ್ತದೆಂದು ಹೇಳ
ಬಹುದು; ತಾತ್ಪರ್ಯವೇನಂದರೆ, ಆ ಶಕ್ತಿಯೇ ಮನು
ಷ್ಯನು—ಅದರಿಂದ ಮನುಷ್ಯನ ಯೆಲ್ಲ ವ್ಯಾಪಾರಗಳಲ್ಲಿ
ಉತ್ಕೃಷ್ಟತೆಯ ಉಂಟಾಗಿ, ಅವನ ಯೆಲ್ಲ ಯತ್ನಗಳಿಗೆ ಜೀ
ವ ಕಳೆಯು ಬರುತ್ತದೆ. ನಿಜವಾದ ಕೋರಿಕೆಯು ಅ
ದನ್ನೇ ಅಕ್ರಯಿಸಿಕೊಂಡಿರುತ್ತದೆ. ನಮ್ಮ ವೈವಹಾರ
ವೆಂಬ ಬಿಸವನೆ ನಿಜವಾದ ಸುಗಂಧವು ಕೋರಿಕೆಯಿಂದ
ಲೇ ಉಂಟಾಗುತ್ತದೆ. ಆಶೆಯಿಲ್ಲದ ಅಂತಃಕರಣವುಳ್ಳ
ವನು ಸುಖಿಯಾಗಿರುವವಿಲ್ಲೆಂದು ಒಬ್ಬ ಗೃಹಸ್ಥನು ಹೇ
ಳಿದ್ದಾನೆ. ಮನುಷ್ಯನಿಗೆ ತುಂಬಾ ಆಶೆಯುಳ್ಳ ಅಂತಃ
ಕರಣಕ್ಕೆ ಸರಿಯಾಗಿ ಸುಖಕಾರಕವಾದುದ್ದು ಯಾವದೂ ಇ

ಲ್ಲಿಂಬ ಮೊತ್ತು ನಿಜವೆ, ನಾವು ಮಾಡಿದ ಯತ್ನವು ಸಫಲವಾಗದಿದ್ದರೂ, ಸಮ್ಮ ಕೈಲಾದ ಮಟ್ಟಿಗೆ ಉದ್ಯೋಗ ಮಾಡಿದೆವೆಂಬ ಸಮಾಧಾನವನ್ನು ಮನಸ್ಸಿನಲ್ಲಿ ಪಡುತ್ತೀವೆ. ತಾಳ್ಮೆಯಿಂದ ತನ್ನ ದುಃಖ ಸಹಿಸಿಕೊಂಡು, ಯುದ್ಧದಲ್ಲಿ ತೊಡಗಿದ್ದ ಮನುಷ್ಯನನ್ನು ನೋಡುವದಕ್ಕಿಂತ ಹೆಚ್ಚು ಮನೋಹರವೂ, ಆನಂದಕಾರಕವೂ ಆದ ಸಂಗತಿಯು ಯಾವದೂ ಇಲ್ಲ. ಅವನು ಪ್ರಮಾಣಿಕತನದಿಂದ ತನ್ನ ಜೀವದ ಆಶೆಯ ಬಿಟ್ಟು ಹಗಳಾಡುತ್ತಿರಲಾಗಿ, ಕಾಲುಗಳಿಂದ ರಕ್ತವು ಹರಿಯುತ್ತಿದ್ದಾಗ್ಯೂ, ಅಪಯಮಗಳಲ್ಲಿ ತ್ರಾಣವು ಉಳಿಯದೆ ಇದ್ದಾಗ್ಯೂ, ಕೇವಲ ಧೈರ್ಯದ ಬಲದಿಂದ ನಡೆಯುತ್ತಿರುತ್ತಾನೆ. ಪ್ರಾಯಸ್ಥರಾದ ಮನುಷ್ಯರು ತಮ್ಮ ಅಪೇಕ್ಷೆಯಂತೆ ಕೃತ್ಯ ನಡಿಸದಿದ್ದರೆ ಕೇವಲ ಅಪೇಕ್ಷೆಯಿಂದ ಅವರ ಮನಸ್ಸಿನಲ್ಲಿ ಒಂದು ವಿಧದ ಬೇನೆಯುಂಟಾಗುತ್ತದೆ. ಕೆಲಜನರು ಸುಮ್ಮನೆ ಮಾರ್ಗ ಪ್ರತೀಕ್ಷೆಯ ಮಾಡುತ್ತ ಕೂಡುತ್ತಾರೆ. ಆದರೆ ಅದು ಸರಿಯಲ್ಲ; ನೆಲಿಂಗನನ್ನನಂತೆ ಅವರು ದೃಢನಿಶ್ಚಯದಿಂದ ಯತ್ನ ಮಾಡತಕ್ಕದ್ದು. ಯಾವದೊಂದು ಸದುದ್ದೇಶವು ಮನಸ್ಸಿನಲ್ಲಿ ಬಂದ ಕೂಡ್ಲೆ ತ್ವರೆಯಾಗಿ ಯೆಡೆಬಿಡದೆ ಅದನ್ನು ಬೆನ್ನಟ್ಟತಕ್ಕದ್ದು. ನಾವು ಯಾವ ಸ್ಥಿತಿಯಲ್ಲಿ ಇದ್ದಾಗ್ಯೂ, ಶ್ರಮವನ್ನು, ಬೇಸರಿಕೆಯನ್ನು ಸಹಿಸಬೇಕಾಗುತ್ತದೆ. ಅದರಿಂದ ನನಗೆ ಹಿತಕರವಾದ ಅಭ್ಯಾಸ ಉಂಟಾಗುತ್ತದೆ. ಅರೀಸ್ಟಿಪ್ಪರನೆಂಬವನು ಹೇಳಿದ್ದೇನಂದರೆ ನಮ್ಮ ವ್ಯವಹಾರಗಳಲ್ಲಿ ಕಾರೀರ ಅಥವಾ ಮೊನಸಿಕ ಶ್ರಮದ ಹೊತ್ತು ಬೇರೆ ಯಾತರಿಂದಲೂ ಮಲ ಗುಂ

ಟುಗುವದಿಲ್ಲ. ಪುನಃ ಪುನಃ ಯತ್ನ ಮಾಡುವದೇ ನಮ್ಮ
ಬಾಳುವೆಯಾಗಿರುತ್ತದೆ. ಈ ಸಂಬಂಧದಿಂದ ನಾನು ಮಾಡ
ತಕ್ಕದ್ದಿಲ್ಲ ಮುಗಿದು ಹೋಗಿದ್ದೆ; ಆದರೆ ನನ್ನ ಧೈ
ರ್ಯವು ಯಾತರಿಂದಲೂ ಕುಂದಲಿಲ್ಲೆಂದು ನಾನು ಅಭಿ
ಮಾನದಿಂದ ನುಡಿಯ ಸಮರ್ಥನಾಗಿದ್ದೇನೆ. ನ್ಯಾಯವಾಗಿ
ನೋಡಿದರೆ, ಮನುಷ್ಯನು ಬೃಹನ್ಮನಸ್ಸಿನವನೂ ಯೋ
ಗ್ಯವಾದ ಉದ್ದೇಶವುಳ್ಳವನೂ ಇದ್ದರೆ, ತನ್ನ ಮನಸ್ಸಿನ
ಲ್ಲಿದ್ದದ್ದನ್ನೆಲ್ಲ ಕಡಿಗಾಣಿಸ ಸಮರ್ಥನಾಗುತ್ತಾನೆ.

NOTICES.

ನೋಟೀಸುಗಳು.

ನಂಬರು VIII.

ಸನ್ನ ೧೮೭೫ನೇ ಇಸವಿಯ ತೆರಿಗೆಯ ನೇಮಿಸ
ಲ್ಪಟ್ಟ ಅನ್‌ಪ್ರೊಂಡ್ ಮ್ಯಾಸ್ತ್ರರರ ವಿಷಯವಾಗಿ ಸನ್ನ
೧೮೭೫ನೇ ಇಸವಿಯ ಸವಟಂಬರ ತಿಂಗಳ ಕನ್ನಡ ಕಾ
ಲಾಪತ್ರಕದ ೩೫೨ – ೩೫೨ನೇ ಪುಟಗಳಲ್ಲಿ ಪ್ರಸಿದ್ಧ
ಮಾಡಲ್ಪಟ್ಟ ನೋಟೀಸಿಗೆ ದಕ್ಷಿಣಭಾಗದೊಳಗಿನ ಡಿ. ಆ
ನ್ನಪೆಕ್ಟರರು ಲಕ್ಷ ಕೊಡಬೇಕು. ಅವರು, ಆ ನೋಟೀ
ಸಿನಲ್ಲಿ ಪ್ರಸಿದ್ಧ ಮಾಡಿದ ಪ್ರಕಾರ ಅವಶ್ಯಕವಾದ ಪ್ರೀ
ನಿಂಗಕಾಲೇಜಿನ ಪರೀಕ್ಷೆಯಲ್ಲಿ ಪಾಸಾಗಲಿಕ್ಕೆ ಬೇಕೆಂಬ

ಬಗ್ಗೆ ಆ ಮಾಸ್ತರ ಜನರಿಗೆ ನೆನಪು ಕೊಡತಕ್ಕದ್ದು.

ಬೆಳಗಾವ
ತಾ॥ ೬ ಜುಲಾಯಿ
ಸನ್ನ ೧೮೭೫ನೇ ಇ॥

(Signed) W. A. Russell.
ಇ. ಇನ್ಸಪೆಕ್ಟರ ದಕ್ಷಿಣಭಾಗ.

ಮುಲಕೀ ಪರೀಕ್ಷೆಯ ನೋಟೀಸು.

ಈ ವರ್ಷದ ಮುಲಕೀ ೩ ನೇ, ೨ ನೇ, ಕ್ಲಾಸದ ಸ್ಕಾಲರಶಿಪ್ಪಿಕೀಟಿನ ಪರೀಕ್ಷೆಯ ವಿಷಯಗಳು ಹೇಳಿದ ವರುಷದವೇ ಅವೆ. ಭೂಗೋಲ, ಚರಿತ್ರೆಗಳಲ್ಲಿ ಏನು ಹೆಚ್ಚು ಕಡಿಮೆ ಇಲ್ಲ. ಉಪೇದವಾರರ ಗುಣ ಇತರ ವಿಷಯಗಳಲ್ಲಿ ಹೆಚ್ಚಿದರೂ ಇಂಗ್ರಜಿ, ಮರಾಠಿ ಅಥವಾ ಕನ್ನಡ ಅಕ್ಷರಗಳ ಕಡಿಗೆ ವಿಶೇಷ ಲಕ್ಷಕೊಡುವ ಬಗ್ಗೆ ಪರೀಕ್ಷಕರಿಗೆ ತಿಳಿಸೋಣಾದೀತು.

ಉಪೇದವಾರರು ಮುಖ್ಯವಾಗಿ ಹಿಂದುಸ್ಥಾನ ಮತ್ತು ಇಂಗ್ಲಂಡ ಇವುಗಳ ಚರಿತ್ರೆಯ ಕಡಿಗೂ ಭೂಗೋಲದ ಕಡಿಗೂ ವಿಶೇಷ ಲಕ್ಷಕೊಡಬೇಕು.

ಬೆಳಗಾಂವಿ ತಾ॥ ೭ ನೇ
ಜುಲಾಯಿ ೧೮೭೫ ಇ.

(Signed) W. A. Russell.
ಎ. ಇ. ದಕ್ಷಿಣಭಾಗ.

ಸರಕ್ಯೂಲರ ನಂಬರು ೬೫೯.

ಕಲಾದಗಿ ಜಿಲ್ಲೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ—

ತಿಳಿಯಪಡಿಸುವದೇನಂದರೆ—ಕೆಳಗೆ ಬರವ ನಿಯಮಕ್ಕೆ ಅನುಸಾರವಾಗಿ ನಡಕೊಳ್ಳಬೇಕು—

೧ ಹುಡುಗರಿಗೆ ಕೆಳಗಿನ ಮರ್ಯಾದೆಯ ಪ್ರಕಾರಾ ಅಭ್ಯಾಸ ಪೂರ್ಣ ಆಗದಹೊರ್ತು ಮೇಲಿನ ಮರ್ಯಾದೆ ಕಲಿಸಬಾರದು.

೨ ಯಾವದಾದರೊಂದು ಈ ಎತ್ತೈಯ ಅಭ್ಯಾಸ ಪೂರ್ಣ ಆಗದಹೊರ್ತು ಆ ಈ ಎತ್ತೀಯಲ್ಲಿ ಹುಡುಗರನ್ನು ವಾರ್ಷಿಕ ಪರೀಕ್ಷೆಕ್ಕೆ ನಿಂದರಿಸಬಾರದು.

೩ ಒಂದು ವರ್ಷ ಯಾವದಾದರೊಂದು ಮರ್ಯಾದೆಯಲ್ಲಿ ಹುಡುಗರು ಪಾಸಾಗಿದ್ದರೆ ಮರೀವರ್ಷ ಅದೇ ಹುಡುಗರನ್ನು ಅದೇ ಮರ್ಯಾದೆಯಲ್ಲಿ ಪರೀಕ್ಷೆಕ್ಕೆ ನಿಂದರಿಸಬಾರದು.

೪ ಮಾಸ್ತರ ಜನರು ದರ ತಿಂಗಳಿಗೆ ಯಲ್ಲಾ ವರ್ಗಗಳ ಪರೀಕ್ಷೆ ತೆಗದುಕೊಂಡು ಒಂದು ಪುಸ್ತಕದಲ್ಲಿ ಆಯಾ ವರ್ಗಗಳ ಮಾನಿಟರ ಜನರು ಆಯಾ ತಿಂಗಳಲ್ಲಿ ಏನು ಕಲಿಸಿದರೆಂಬುವದು ಬರದಿಟ್ಟು ನಾವು ಪರೀಕ್ಷೆಕ್ಕೆ ಹೋದಾಗ್ಗೆ ಆ ಪುಸ್ತಕವನ್ನು ನಮಗೆ ತೋರಿಸುತ್ತಿರಬೇಕು— ಹಾಗು ಮಾನಿಟರ ಜನರು ಕಲಿಸುವಕೆಲಸದಲ್ಲಿ ಏನಾದರು ತಪ್ಪು ಮಾಡಿದ್ದರೆ ಆಗಾಗ್ಗೆ ಅದನ್ನು ಅವರಿಗೆ ತಿಳಿಸುತ್ತಿರಬೇಕು.

೫ ಬ್ರಾಂಚಸಾಲಿಯಿಲ್ಲದ ಮುಖ್ಯ ಸಾಲಿಯ ಮಾಸ್ತರರು ಮೇಲಿಂದಮೇಲೆ ಬ್ರಾಂಚಸಾಲಿಯ ಪರೀಕ್ಷೆ ತೆಗೆದುಕೊಂಡು ಮೂರು ತಿಂಗಳಿಗೂಮ್ಮೆ ಆ ಸಾಲಿಯ ಸ್ಥಿತಿಯು ವಿಷಯಕ್ಕೆ ನಮ್ಮ ಕಡಿಗೆ ರಿಪೋರ್ಟ ಮಾಡುತ್ತಿರಬೇಕು.

೬ ಬ್ರಾಂಚ ಸಾಲಿಯಲ್ಲಿ ನಮ್ಮ ಪರವಾನಗಿ ಹೊ

ರ್ತ ಮೂರನೇ ಈ ಯತ್ತಿಯಕಿಂತ ಹೆಚ್ಚಿಗೆ ಕಲಿಸಬಾರದು.

೭ ಮಾಸ್ತರ ಜನರು ಹುಡುಗರನ್ನು ವಸ್ತ್ರರಹಿತ ಸಾಲಿಗೆ ಬರಗೊಡಬಾರದು— ಹಾಗು ಅವರ ವಸ್ತ್ರ ಆದಷ್ಟು ಸ್ವಚ್ಛವಿರುವಂತೆ ಮಾಡಬೇಕು.

ಈ ಮೇಲಿನ ನಿಯಮಗಳಂತೆ ನಡಿಯುವದಕ್ಕೆ ಅನೇಕ ಸಾರಿ ಹುಕುಮು ಹೊಟ್ಟಿದ್ದು ಅನೇಕ ಸಾಲಿಯ ಮಾಸ್ತರರು ಅವುಗಳಿಗೆ ಅನುಸಾರವಾಗಿ ನಡಿಯದಂತೆ ನಮಗೆ ಕೋದ ಪರೀಕ್ಷೆಯ ಕಾಲಕ್ಕೆ ಕಂಡಬಂದದರಿಂದ ಈ ಬಗ್ಗೆ ಈ ಹುಕುಂಕೊಟ್ಟದೆ— ಇದಕ್ಕೆ ಯಾರಾದರು ತಪ್ಪಿದಂತೆ ನಾವು ಪರೀಕ್ಷೆಕ್ಕೆ ಹೋದ ವೇಳೆಯಲ್ಲಿ ಕಂಡರೆ ಅವರು ಕೆಲಸಕ್ಕೆ ನಾಲಾಯಿಖಯುಂದು ತಿಳಿದು ಅವರ ವಿಷಯಕ್ಕೆ ವಿಶೇಷ ತಹವಿಜ ಮಾಡಲಾದೀತು— ತಿಳಿಯುವದು

ಸಾ॥ ೩೦ ಮಾಹೆ ಜೂನ ೧೮೭೫ ಇಸ್ವಿ.

Ramchender A. Sawanoor.

ಡಿ. ಇ. ಇ. ಜಿಲ್ಲಾ ಕಲಾದಗಿ.

ಬೆಳಗಾಂವ ಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ ಡಿ. ಎ. ಇ. ಜಿ. ಬೆಳಗಾಂವ ಇವರಕಡಿಂದ ತಿಳಿಸುವಡಿಸುವದೇನಂದರೆ ಕಳೇದ ಮಾರ್ಚಿ ತಿಂಗಳಲ್ಲಿ ನಾವು ವಾರ್ಷಿಕ ಪರೀಕ್ಷೆಕ್ಕೆ ಹೋದಾಗ್ಯೆ ಚಿಕ್ಕೋಡಿಯ ತಾಲೂಕಿನೊಳಗಿನ ಯಮಕನಮರ್ಡಿ ಹಾಂಗು ವಂಟಮುರಿ ಸಾಲಿಗಳ ಪಂಡಿತ ಮಾಸ್ತರರಾದ ಭಾಸ್ಕರ ಬಾಳಾಜಿ ಹಾಂಗು ಗದಿಗೆಪ್ಪ ರಾಚಪ್ಪಾ ಇವರು ತಮ್ಮ ತಮ್ಮ ಸಾ

ಗು ಹಾಜರಿ ರಜಿಪ್ಟರಂನು ಸ್ವಚ್ಛ ರೀತಿಯಿಂದ ಇಡದೆ ಇದ್ದದ್ದು ನಮಗೆ ತೋರಿಬಂದದ್ದರಿಂದ ನಾವು ಮೆ. ರಸಲ ಸಾಹೇಬ ಬಹಾದ್ದುರ ಎ. ಇ. ದಕ್ಷಿಣಭಾಗ ಇವರ ಮುಂಜೂರಿಯ ಮೇಲಿಂದ ಸದರ ಯುಪುಕ್ತನಮಿರ್ದ ಹಾಂಗು ವಂಟವುರಿಯ ಮಾಸ್ತರರಿಗೆ ಎರಡೆರಡು ರೂಪಾಯಿಗಳನ್ನು ದಂಡ ಮಾಡಿದ್ದೇವೆ. ಆದರೆ ಯಾವತ್ತು ಸ್ಕೂಲಮಾಸ್ತರರು ಇಂಸ ಮುಂದೆ ಸದರ ಮಾತಿನ ಹುಗ್ಗೆ ಬಹಳ ಕಾಳಜಿತೆಗೆದುಕೊಳ್ಳಬೇಕೆಂದು ನಮ್ಮ ಸೂಚನೆಯದೆ. ತಿಳಿಯೋದು ತಾ|| ೪ ನೇ ಜುಲೈ ೧೮೭೫ ಇ.

P. V. Chintamanpetkar.

ಡಿ. ಎ. ಇ. ಜಿ. ಬೆಳಗಾಂವ.

ಬೆಳಗಾಂವ ಜಿಲ್ಲೆಯೊಳಗಿನ ಯಾವತ್ತು ಅಂಟ್ರೇಂಡ ಸ್ಕೂಲಮಾಸ್ತರ ಹಾಂಗು ಅಶಿಪ್ಟಂಟೆ ಜನರಿಗೆ – ಡಿ. ಎ. ಇ. ಜಿ: ಬೆಳಗಾಂವ ಇವರಕಡಿಂದ ತಿಳಿಯಪಡಿಸುವದೇನಂದರೆ – ಮೆ. ರಸಲಸಾಹೇಬ ಬಾಹಾದ್ದುರವರು ಸನ ೧೮೭೪ ನೇ ಇ|| ಸಪಟೆಂಬರ ತಿಂಗಳ ಮಹಪತ್ರಿಕೆಯಲ್ಲಿ ಕೊಟ್ಟ ನೋಟೀಸಿನ ಸ್ರಕಾರ ೪ ರೂಪಾಯಿ ಹಾಂಗು ಹೆಚ್ಚು ಸಂಬಳವುಳ್ಳ ಯಾವತ್ತು ಅಂಟ್ರೇಂಡ ಮಾಸ್ತರ ಹಾಂಗು ಅಶಿಪ್ಟಂಟ ಜನರು ಬರುವ ಟ್ರೇನಿಂಗಕಾಲೇಜದಸರಟಿಫಿಕೇಟ ಪರೀಕ್ಷೆಕ್ಕೆ ಧಾರವಾಡಕ್ಕೆ ಹೋಗಿ ಸರಟಿಫಿಕೇಟ ಪಡಿಯಬೇಕು ಎಂತ ಇದೊಂದುವರ್ತಿ ಸೂಚಿಸಿದ್ದೇವೆ. ತಿಳಿಯೋದು ತಾ|| ೪ನೇ ಜುಲೈ ೧೮೭೫ ಇಸ್ವಿ.

P. V. Chintamanpetkar.
ಡಿ. ಎ. ಇ. ಜಿ. ಬೆಳಗಾಂವ.

ಬೆಳಗಾಂವ ಜಿಲ್ಲೆಯೊಳಗಿನ ಯಾವತ್ತ್ಹ ಸ್ಕೂಲಮಾ
ಸ್ತರರಿಗೆ—ಡಿಪ್ಯೂಟಿ ಎ. ಇ. ಜಿ. ಬೆಳಗಾಂವ ಇವರಕಡಿಂದ
ಬರದು ತಿಳಿಸುವಪೇನಂದರೆ—ಸಂವದತ್ತ್ಹಿ ತಾಲೂಕ ಪೈಕಿ
ನೆಟಸೂರ ಸಾಲಿಯ ಮೂಜಿ ಮಾಸ್ತರರಾದ ಪಾಂಡುರಂಗ
ಕಂಮೂಜಿ ಇವರು ನೂಹೆ ಫೇಬರವರಿ ಸಂನ ೧೮೭೪ನೇ
ಇಸ್ವಿ ತಿಂಗಳಲ್ಲಿ ತಮ್ಮ ಸಾಲಿಯ ಹಜರಿ ರಜಿಸ್ಟ್ರರಂನು
ಮೋನೇನು ಪುಂಬಡಲೆ ಹಾಗ ಇಟ್ಟಿದ್ದರು ಇದಲ್ಲದೆ ಸ
ದರ ಫೇಬರವರಿ ತಿಂಗಳ ಬಾಬತ್ತ ಸುಳ್ಳ ದರಮಾಹಿ ಪ
ತ್ರಿಕೆಯನ್ನು ಕಳುಹಿಸಿದ್ದರು (ಸಾಲಿಗೆ ಬಂದ ಹುಡುಗರ
ಹಜರಿಯನ್ನು ನಿತ್ಯ ತೆಗದುಕೊಳ್ಳದೆ ಇದ್ದ ಬಳಿಕ ಅದೇ
ತಿಂಗಳ ದರಮಾಹಿ ಪತ್ರಿಕೆಯನ್ನು ತಯ್ಯಾರ ಮಾಡಲಿಕ್ಕೆ
ಬರುವದಿಲ್ಲ ಯಾಕಂದರೆ ಪೂರ ಆ ತಿಂಗಳ ಬಾಬತ ರಜಿ
ಸ್ಟರವು ತುಂಬಿರುವದಿಲ್ಲ.) ಇವೆರಡು ತಪ್ಪುಗಳು ನಾವು
ಕಳೆದ ಫೇಬರವರಿ ತಿಂಗಳಲ್ಲಿ ಅಲ್ಲಿಗೆ ವಾರ್ಷೀಕ ಪರೀ
ಕ್ಷೆಕ್ಕೆ ಹೋದಾಗ್ಯೆ ನಮಗೆ ಕಂಡುಬಂದದ್ದರಿಂದ ನಾವು
ಸದರ ಅಪರಾಧದ ಬಗ್ಗೆ ಆತನಿಗೆ ಶಿಕ್ಷಿಸಬೇಕೆಂಬದಾಗಿ
ಸೀ॥ ರಸಲಸಾಹೇಬ ಬಹಾದ್ದುರ ಎ. ಇ. ಪ್ರಾಂತ ದ
ಕ್ಷಿಣಭಾಗ ಇವರ ಕಡಿಗೆ ರಿಪೋರ್ಟ ಮಾಡಿದ್ದರ ಕೆಳಗೆ
ಈ ಸಾಹೇಬರವರು ಸದರ ಪಾಂಡುರಂಗ ತಹುಸ್ಕೂಜಿ ಈತ
ನನ್ನು ಬರತರ್ಫ ಮಾಡಿದ್ದಾರೆ. ಆಪರೆ ಯಾವತ್ತ್ಹ ಮಾ

ಸ್ವದಗು ಹುಡುಗರ ನಿತ್ಯದ ಹಹರಿಯನ್ನು ವಿಚ್ಛಾಶಿರ ತುಂ
ಬುಪದಲ್ಲಿ ಬಹಳ ಕಾಳಜಿ ತೆಗದುಕೊಳ್ಳಬೇಕೆಂದು ನ
ಮ್ಮ ಸೂಚನೆಯುದೆ. ತಾ॥IV ನೇ ಜುಲೈ ೧೮೭೫ ಇ.

P. V. Chintamanpetkar.

ಡಿ. ಎ. ಇ. ಬೆಳಗಾಂವ.

CORRESPONDENCE.

ಪತ್ರವ್ಯವಹಾರವು.

ವಿಶ್ವಗುಣಾದರ್ಶದ ಚಮತ್ಕಾರಗಳು.

ಈ ಕಾವ್ಯವನ್ನು ವೇಂಕಟಾಧ್ವರಿ ಯೆಂಬ ಕವಿಯು ರಚಿಸಿದನು ಅವನು ಅಂದದ್ದು

ಶಾರ್ದೂಲ ವಿಕ್ರೀಡಿತ ವೃತ್ತವು

ಪದ್ಯಂ ಯದ್ಯಪಿ ವಿದ್ಯತೆ ಬಹುಸತಾಂ ಹೃದ್ಯಂ ವಿಗ
ದ್ಯಂ ನತದ್,
ಗದ್ಯಂಚ ಪ್ರತಿಪದ್ಯತೆನ ವಿಜಹತ್ಪದ್ಯಂ ಬುಧಾಸ್ವಾದ್ಯ
ತಾಂ;
ಆಧತ್ತೆ ಹಿತಯೋಃ ಪ್ರಯೋಗ ಉಭಯೋರಾಮೋದ
ಭೂಮೋದಯಂ;
ಸಂಗಃಕಸ್ಯಹಿ ನಸ್ವದೆತ ಮನಸೆ ವಾಧ್ವೀಕಮಾದ್ವೀ
ಕಯೋಃ॥೪॥

॥ ಟೀ ॥ಯದಿ=ಒಂದು ಪಕ್ಷದಲ್ಲಿ, ವಿಗದ್ಯಂ=ಗದ್ಯ
ಹಿತವಾದಂಥ, ಪದ್ಯಂ=ಕವಿತ್ವವು, ವಿದ್ಯತೆಚಿ=ಇದ್ದಾಗ್ಯೂ
ತದ್=ಅಪು, ಸತಾಂ=ವಿದ್ವಾಂಸರಿಗೆ, ಹೃದ್ಯಂ=ಮನೋ

ಂಜಕವಾಗುವದಿಲ್ಲ; ವಿಜಹತ್ಪದ್ಯಂ=ಪದ್ಯರಹಿತವಾದಂ
ಗದ್ಯಂಚ=ಗದ್ಯವಾದರೂ. ಬುಧಾಸ್ವಾದ್ಯತಾಂ(ಬುಧೈಃ
ಸ್ವಾದ್ಯಃಸೇವ್ಯಃ)=ಪಂಡಿತರ ಮನೋರಂಜನೇ ಮಾಡು
ಗುಣವನ್ನು, ನಪ್ರತಿಪದ್ಯತೆ=ಧಾರಣಮಾಡುವದಿಲ್ಲ; ತ
ಃಉಭಯೋಃಏಗದ್ಯಪದ್ಯವೆರಡರ, ಪ್ರಯೋಗಃ=ಪ್ರ
ಯೋಗವು, ಏವೊದಭೂವೊದಯುಂ ಪೂರ್ಣಾನಂದದ ಉ
ತ್ಪತ್ತಿಯನ್ನು, ಆಧತ್ತೆ=ಧರಿಸುತ್ತದೆ. ಪೂಧ್ವಿಕಮ್ಯುದ್ವೀ
ಕೆಯೋಃ=ಜೇನುತುಪ್ಪ ದ್ರಾಕ್ಷಾಫಳಗಳ, ಸಂಗಃ=ಕೂಟ
ಶ್ರೀ(ಅಂದರೆ ಜೇನು ತುಪ್ಪವನ್ನು ದ್ರಾಕ್ಷಾಫಲವನ್ನು ಕೂಡಿ
ತಿಂಬೋಣವು). ಕಸ್ಯಹಿಮನಸೆ=ದಾವಾತನ ಮನಸ್ಸಿಗಾ
ರೂ, ನಸ್ವಾದೇತ=ರುಚಿಯಾಗಲಿಕ್ಕಿಲ್ಲವೋ(ಬೇಕಾಗಲಿ
ಕ್ಕಿಲ್ಲವೋ?)

ಭಾವವು.

ಒಂದು ಪಕ್ಷದಲ್ಲಿ ಗದ್ಯರಹಿತವಾದಂಥ ಪದ್ಯವು ಇದ್ದಾ
ಗ್ಯೂ, ಅದು ವಿದ್ವಾಂಸರಿಗೆ ಮನೋರಂಜಕವಾಗುವದಿಲ್ಲ.
ಹಾಗೆಯೇ ಪದ್ಯರಹಿತವಾದಂಥ ಗದ್ಯವಾದರೂ, ರಸಿಕ ಪ
ರ ಮನೋರಂಜನೇ ಮಾಡುವ ಗುಣವನ್ನು ಧಾರಣ ಮಾ
ವದಿಲ್ಲವು. ಆದ ಕಾರಣ ಆ ಗದ್ಯ ಪದ್ಯ ವೆರಡರ ಪ್ರ
ಯೋಗವೊಂದೇ ಪೂರ್ಣಾನಂದದ ಉತ್ಪತ್ತಿಯನ್ನು ಧರಿ
ಸುತ್ತದೆ. ಹ್ಯಾಗಂದರೆ ಜೇನ ತುಪ್ಪ ದ್ರಾಕ್ಷಾಫಲಗಳ
ಕೂಟವು ದಾವಾತನ ಮನಸ್ಸಿಗಾದರೂ ಸೇರದೇ?

ವಿವರವು.

ಜೇನಿನ ಸಾಮತಿಯನ್ನು ಪದ್ಯಕ್ಕೆ, ದ್ರಾಕ್ಷಾಫಳಸಾ

ವ್ಯವನ್ನು ಗದ್ಯಕ್ಕೆ ಕೊಟ್ಟಿದ್ದಾನೆ. ಜೇನುತುಪ್ಪವನ್ನು ತಿಂದರೆ, ಸೀಯಿಂದ ಬಾಯಿಕಟ್ಟಿ, ಅದು ಅಪ್ರಿಯವಾಗುತ್ತದೆ; ದ್ರಾಕ್ಷಿಯನ್ನು ತಿಂದರೆ ಹುಳಿಯಿಂದ ಬೇಡವಾಗುತ್ತದೆ. ಆದರೆ ಇವೆರಡನ್ನೂ ಕೂಡಿಸಿ ತಿಂದರೆ ಬಹು ರುಚಿಕರವಾಗುತ್ತವೆ. ಹಾಗೆ ಗದ್ಯಪದ್ಯಗಳೊಂದೊಂದೇ ಆನಂದವನ್ನು ಕೊಡುತ್ತದೆ. ಆದರೂ ಅವೆಡೂ ಕೂಡಿದರೆ ಬಹಳವಾಗಿಪಂಡಿತರಿಗೆ ಆನಂದವಾಗುತ್ತದೆಂದು ಈಶ್ವರಗುಣಾದರ್ಶವೆಂಬ ಕಾವ್ಯವನ್ನು ಗದ್ಯಪದ್ಯಾತ್ಮಕವಾಗಿ ರಚಿಸುತ್ತಾನೆ.

ತಾ. ೭ಮಾಹೆ ಜುಲಾಯಿ ಸನ್ನ ೧೮೭೫ನೆ ಇಸವಿ. ಮುಕ್ಕಾಮು ಕರ್ಜಗಿ. } ಧೋಂಡೋ ನರಸಿಂಹ ಸ್ಕೂಲ ಮಾಸ್ತರ ಕರ್ಜಗಿ.

ರಾವಸಾಹೇಬ— ಶಾಲಾಪತ್ರಿಕ ಕರ್ತರ ಇವರ ಸೇವೆಗೆ—

ಕೆಳಗೆ ಎರಡು ಪಂಕ್ತಿಗಳನ್ನು ತಮ್ಮ ಕರಪಂಜರದಲ್ಲಿ ಉದ್ಭವಿಸುವ ಸುಂದರ ಮಠ ಪತ್ರಿಕೆಯಲ್ಲಿ ಬಿಡವನಮೇರೆ ದಯವಿಟ್ಟು ಮುದ್ರಿಸುವ ಮೇರಬಾನಗಿ ಆಗಬೇಕೆಂದು ವಿನಯ ಪೂರ್ವಕ ಪ್ರಾರ್ಥಿಸುತ್ತೇನೆ. ದಯ ಮಾಡಿ ಸ್ಥಾಪಿಸುವ ತಜವೀಜ ಆದೀತೆಂದು ನೆರೆನಂಬಿದ್ದೇನೆ.

ಬೆಳಗಾವಿ ಜಿಲ್ಲೆ ಜೊಳಗಿನ ೩೨ ರೂಪಾಯಿ ಸಂಬಳ
ಳ್ಳ ಹೆಡ್ಡ ಮಾಸ್ತರ ನುತ್ತ ಅಸಿಸ್ಟಂಟ ಮಾಸ್ತರಗೆ—
ಕೆಳಗೆ ಸಹಿ ಮಾಡುವವನು ವಿನಂತಿ ಮಾಡುವದೇನಂದ

ಬೆಳಗಾವಿ ಜಿಲ್ಲೆಯಲ್ಲಿ ನನಗೆ ಜಾಗಾ ದೊರಿಯಬೇಕೆಂಬ ಇಚ್ಛೆಯುಂಟು. ಆದರೆ ನೀವ್ಯಾರಾದರು ಒಬ್ಬರು ಇಲ್ಲಿಯ ನನ್ನ ಖಿರೂಪಾಯಿ ಜಾಗಕ್ಕೆ ಬರುವದು ಮನಸ್ಸಿದ್ದರೆ ತೀವ್ರ ತಮ್ಮ ವರಿಷ್ಟರ ಮೂಫರ್ತಿ ನನ್ನ ವರಿಷ್ಟರ ಕಡಿಗೆ ಅರ್ಜಿವಾಡಿ ನನಗೊಂದು ಪತ್ರ ಸರಕಾರೀ ರೀತಿ ಪ್ರಕಾರ ಕಬುಲಿ ಪತ್ರ ಕಳಸಬೇಕು. ಅಂದರೆ ಉಭಯತರ ಇಚ್ಛೆ ಪೂರ್ಣವಾಗುವದು. ಕಬುಲಿ ಇದ್ದವರು ಉತ್ರ ತೀವ್ರ ತಿಳುಹಿಸಬೇಕು. ತಂಗಡಗಿ ಗ್ರಾಮಕ್ಕೆ ಶ್ರೀಕೃಷ್ಣಾ ನದೀ ಇದ್ದು ಮುಳ್ಳಾವಾರಿ ನಡೀ ಸಂಗಮವಾಗಿದೆ. ಹವೆ ಚಲೋದು ಅದೆ. ಸ್ಕೂಲಿಯಲ್ಲಿ ಇಗ್ಗೆ ಇಂಪ್ರುಂ ಇದ್ದಾವೆ. ಇಂತಿವಿನಂತಿ.

ತಾ. ೩೧ ಮೇ ಸನ್ನ ೧೯೨೫ } ಭೀಮಾಜೀ ಗಣೇಶ
ಮು. ತಂಗಡಗಿ ತಾ. ಮುದ್ದೇ } ಕುಲಕುರ್ಣಿ ಸ್ಕೂಲ
ಬಿಹಾಳ ಜಿಲ್ಲಾ ಕಲಾದಗಿ. } ಮಾಸ್ತರ ತಂಗಡಗಿ.

ಮೆಹೆಬೂಬನ ರಾವಸಾಹೇಬ ದಕ್ಷಿಣಭಾಗದ ಕನ್ನಡ ಶಾಲಾಪತ್ರಕದ ಎಡಿಟರರ ಚರಣಾರವಿಂದಗಳಿಗೆ—

ಸೇವಕನು ಮಾಡುವಾ ವಿನ್ನಹವೇನಂದರೆ ಕೆಳಗೆ ಬರೆದ ಸಾಲ್ಕು ವಂಗ್ತಿಗಳನ್ನು ತಮ್ಮ ಮನೋಹರವಾದ ಮುಕವ ತ್ರಕದಲ್ಲಿ ಛಾಪಿಸಿ ಪ್ರಸಿದ್ಧಿಸುವಿರೆಂದು ಮಹಾತ್ಕಾಂಕ್ಷೆಯನ್ನು ಧರಿಸಿದ್ದೇನೆ.

ಒಂದು ದೊಡ್ಡ ಕೇರಿಯ ಕಾವುಗಾರಿಯ ನಡದಿತ್ತು. ದಿನಾಲೂ ೧೦೦೦೦ ಸಾವಿರ ರೂಪಾಯಿಗಳು ಬರವಡೆಯುತ್ತಾ

ಗುತ್ತಿದ್ದವು. ಅದರಲ್ಲಿ ಒಂದು ದಿನಕ್ಕೆ ಒಬ್ಬ ಮನುಷ್ಯ
ನಿಗೆ (೫ ರೂಪಾಯಿ ಸಂಬಳಾ ಮತ್ತೊಬ್ಬ ಮನುಷ್ಯನಿಗೆ
೫ ರೂಪಾಯಿ ಸಂಬಳಾ ಈ ಪ್ರಕಾರ ಇತ್ತು. ಮತ್ತು
ಒಂದು ದಿವಸಕ್ಕೆ ೫ ರೂಪಾಯಿ ಕೊಟ್ಟರೆ ೨೦ ಮಂದಿ
ದುಡಿಯುತ್ತಿದ್ದರು. ೫ ರೂಪಾಯಿ ಸಂಬಳದವರು ಎಷ್ಟು
ಷ್ಟು ಮಂದಿ? ಒಂದು ದಿವಸಕ್ಕೆ ೫ ರೂಪಾಯಿದಂತೆ ದು
ಡಿಯುವವರು ಎಷ್ಟು ಮಂದಿ ಇದಲ್ಲದೆ ೫ ರೂ. ಕೆ
ಟ್ಟರೆ ೨೦ ಮಂದಿ ದುಡಿಯುವವರು ಎಷ್ಟು ಮಂದಿ
ದ್ದರು. ಮತ್ತು ಇಷ್ಟು ಮಂದಿಗೆ ಹತ್ತುಸಾವಿರ ರೂ
ಯಿ ಹಿಡಿಯುತ್ತಿದ್ದವು. ಆದರೆ ಹತ್ತುಸಾವಿರ ರೂ. ಆ
ಬೇಕು ಹತ್ತುಸಾವಿರ ಜನರೂ ಆಗಬೇಕು. ಈ ಗಣೇ
ವು ನನಗೆ ಬಹು ಚಮತ್ಕಾರವಾಗಿ ಕಂಡು ಬಂದಿರುತ್ತದೆ
ಆದರೆ ನಮ್ಮ ಪ್ರೀಯ ಬಾಂಧವರಾದ ಯುವತ್ತು ಸು
ಲಮಾಸ್ತರರು ನನ್ನ ಮೇಲೆ ದಯಮಾಡಿ ಸದರಿ ಲೆಕ್ಕ
ರೀತಿವಾರಮಾಡಿ ಉತ್ತರಾ ಕಳುಹಿಸುವಿರೆಂದು ಬಯಿ
ಯನ್ನು ಧರಿಸಿದ್ದೇನೆ.

ಮುಕ್ಕಾಂ ಬಂಕಾಪೂ
ರ ತಾ|| ೪ | ೨ | ೨೫

ಸ. ಮಹಾರುದ್ರ ಚನವೀರಯ
ಚ್ಯಾಗಲೇರಿ ಶಪ್ಪ ಅಶಿಷ್ಟ
ಮಾಸ್ತರ ಬಂಕಾಪೂರ.

ಮೆಹಬೂಬ ರಾವಸಾಹೇಬ ದಕ್ಷಿಣಭಾಗದ ಕನ್ನ
ಶಾಲಾಪತ್ರಕ ಎಡಿಟರರ ಚರಣಾರವಿಂದಗಳಿಗೆ—
ಸೇವಕರು ಮಾಡುವಾ ವಿನ್ನಹವೇನಂದರೆ ಕೆಳಗೆ ಬ

ನಾಲ್ಕು ಪಂಗ್ತಿಗಳನ್ನು ತಮ್ಮ ಮನೋಹರವಾದ ಮುತ್ತಪ
ತ್ರಕದಲ್ಲಿ ಛಾಪಿಸಿ ಪ್ರಸಿದ್ಧಿಸುವಿರೆಂದು ಮಹಾತ್ಮಾಂಜ್ಞೆ
ಯನ್ನು ಧರಿಸಿದ್ದೇವೆ. ಈ ಟುಂಕಾಪೂರ ಸಾಲಿಯ ಸ್ಥಾ
ಪನವು ತಾರೀಖು ೯ ನೇ ಜೂನ ೧೮೪೪ ನೇ ಇಸವಿ
ದಿವಸಾ ಗಂಗಾಧರ ಮಡಿವಾಳೇಶ್ವರ ಎಂಬುವವರಿಂದ ಸ್ಥಾ
ಪಿಸಲ್ಪಟ್ಟಿತು. ಅವರು ಅಜಮೂಸು ೭। ೪। ವರ್ಷದತ
ನಕ ಈ ಗ್ರಾಮದಲ್ಲಿ, ಮಾಸ್ತರ ಕೆಲಸವನ್ನು ಮಾಡಿ ಕೈ
ಲಾಪಮಟ್ಟಿಗೂ ಪ್ರಯತ್ನಮಾಡಿ ಈ ಸಾಲಿಯನ್ನು ಉತ್ತ
ಮಸ್ಥಿತಿಗೆ ತಂದು ಬಹು ಜನರನ್ನು ಯೋಗ್ಯ ನೂಗರ್ಕ್ಕೆ
ಹಚ್ಚಿದರು. ಆ ನಂತರ ಬಂದಂಥಾ ಮಾಸ್ತರರು ಕೆಲಕೆ
ಲವು ದಿವಸಾ ಈ ಗ್ರಾಮದಲ್ಲಿ ವಾಸಮಾಡಿ ತಮ್ಮ ಕೈ
ಲಾದಮಟ್ಟಿಗೂ ಶ್ರಮಪಟ್ಟು ಮೊದಲಿನ ಸ್ಥಿತಿಯನ್ನು ಕೆ
ಡಿಸಿ ಸಾಲಿಯನ್ನು ಬಂಡುಸುದ್ದಾ ಮಾಡಿಸಿ ಬಿಟ್ಟರು. ಆ
ಮೇಲೆ ಪುನಾಃ ನಾವು ಕಷ್ಟಬಟ್ಟು ಸಾಲಿಯು ನಮ್ಮ
ಗ್ರಾಮದಲ್ಲಿರಬೇಕೆಂಬ ಅಪೇಕ್ಷೆಯಿಂದ ನಾಲ್ಕು ಜನರು
ಕೂಡಿ ಮೆ।। ರಾವಸಾಹೇಬ ಡಿ. ಎ. ಇ. ಜಿಲ್ಲಾ ಧಾರವಾ
ಡ ಇವರಿಗೆ ಹೇಳಿಕೊಳ್ಳಲಾಗಿ ಅವರು ಮೆಹೆಬ್ಬೂನಗಿಯಿಂ
ದ ತಾರೀಖು ೧೩ ನೇ ಜೂನ ೧೮೭೦ ಅಸ್ವಿ ದಿವಸಾ ವಿ
ಷ್ಣು ಶಂಕರ ಬೊತೆ ಗೋಕಾವಿ ದೊಡ್ಡಮಾಸ್ತರವೆಂಬುವ
ವರಿಗೆ ಹುಕುಂ ಕೊಟ್ಟು ಸದರಿ ಕೆಲಸಕ್ಕೆ ನೇಮಿಸಿದರು
ಅವರು ಬಂದು ಗ್ರಾಮಸ್ತರ ಮೂರಿಫತಿಯಿಂದ ಸಾಲಿಯ
ನ್ನು ಪುರುಮಾಡಿದರು. ಆಗ್ಯೆ ಹುಡುಗರು ಸಾಧಾರಣ
ಕೂಡುವದಕ್ಕೆ ಆರಂಭವಾಗಿ ಇತ್ತ್ಯಕಡಿಗೆ ಹುಡುಗರು ಬ
ಹು ಕೂಡಿ ಅಭ್ಯಾಸನಾದರೂ ಉತ್ತಮ ರೀತಿಯಿಂದ ಸಾ

ಗುತ್ತದೆ. ಇದಲ್ಲದ ಅವರ ಮೋಹನತಿಪ್ರಕಾರಾ ವಾರ್ಷಿಕ ಪರೀಕ್ಷೆಯೂದರೂ ಬಹು ನೆಟ್ಟಗೆ ಆಗುತ್ತದೆ. ಈ ಮಾಸ್ತರರು ಸರ್ವ ಜನರ ಸಂಗಡ ಪ್ರೇಮದಿಂದಿದ್ದು ಯಾವಾಗಲೂ ತಮ್ಮ ಶಾಲಾ ಕೆಲಸವನ್ನು ಬಹು ಸರಸ ರೀತಿಯಿಂದ ನಡಿಸುತ್ತಾರೆ. ಇದರಿಂದ ನಾವೆಲ್ಲರೂ ಬಹು ಆಭಾರಿಗಳಾಗಿದ್ದೇವೆ. ಪತ್ರ ವಿಸ್ತಾರ ಆದ ಬಗ್ಗೆ ಕ್ಷಮೆಯನ್ನು ಬೇಡಿಕೊಳ್ಳುತ್ತೇವೆ. ಇಂತಿ ವಿನ್ನಾಂಕಿ

ಮುಕ್ಕಾಂ ಬಂಕಾಪೂರ
ತಾ || ೪ | ೭ | ೨೫ |
ಇಸವಿ.

ಎ ಬಸಲಿಂಗಪ್ಪ ಮಾಮಲೇ
ದಟ್ಟಣಕೆಟ್ಟ ಬಂಕಾಪೂರ ಪಂ
ಚ. ಎ ಬಾಬುರಾವ ಸವಣೂರ
ಕರ ಬಂಕಾಪೂರ ಪಂಚ.

ಶಾಲಾಪತ್ರಕವ್ರ.

ಪುಸ್ತಕ ೩೧] [ಸಂಚಿಕೆ ೫

ತಾರೀಖು ೨೫ ನೇ ಮೂಹೆ ಆಗಷ್ಟ ೧೮೬೨.

EDUCATIONAL INTELLIGENCE
ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು.

ಕಳಪ ಯೆರಡು ವರ್ಷಗಳಲ್ಲಿ ಈ ಪರೀಕ್ಷೆಯಲ್ಲಿ ಾಸಾದ ಉಮೇದವಾರರನ್ನು ಕಾಲೇಜದಲ್ಲಿ ತಕ್ಕೊಂಡ ೂತುಗ ತುರ್ತಕ್ಕೆ ಪ್ರವೇಶ ಪರೀಕ್ಷೆ ಆಗಬಾರದೆಂದು ರಿಷ್ಟಾಧಿಕಾರಿಗಳ ಹುಕುಮು ಬಂದಿರುತ್ತದೆಂತ ಕೇ ುತ್ತೇವೆ.

ಡಿ. ಆಜುಕೇಶನಲ್ ಇನಸ್ಪೆಕ್ಟರರು ಒಂದೇ ಸ್ಥಳಪ ಮೂರು ವರ್ಷಗಳಕಿಂತ ಹೆಚ್ಚು ಇರಬಾರದೆಂಬ ಬ ವಿದ್ಯಾಖಾತೆಯ ಡಾಯಿರೆಕ್ಟರರಾದ ಚಾಟಫೀಲ್ಡ ಸಾ ು ಬಹಾದ್ದೂರವರು ಕಟ್ಟಳೆ ಮಾಡತಕ್ಕವರಿದ್ದಾರೆಂ ಕೇಳುತ್ತೇವೆ.

ಧಾರವಾಡ ಡಿ. ಎ. ಇನಸ್ಪೆಕ್ಟರರು ಸರಕಾರಿ ಕೆಲಸದ ನಲುವಾಗಿ ಪುಣೆಗ ಹೋಗಿರುತ್ತಾರೆ.

ಧಾರವಾಡ ಹಾಯಿಸ್ಕೂಲಿನಲ್ಲಿ ಒಬ್ಬ ತಾಲೀಮು ಮಾಸ್ತರನು ಬೇಕೆಂದು ಆ ಶಾಲೆಯ ಹೆಡ್‌ಮಾಸ್ತರರು ಬರೆದದಕ್ಕೆ ಇನಸ್ಪೆಕ್ಟರರಾದ ರಸೆಲಸಾಹೇಬ ಬಹಾದ್ದೂರವರು, ಈಗ ಟ್ರೇನಿಂಗಕಾಲೇಜದಲ್ಲಿ ಇರುವ ತಾಲೀಮು ಮಾಸ್ತರನೇ ಹಾಯಸ್ಕೂಲಿನಲ್ಲಿ ದಿನಂಪ್ರತಿಯಲ್ಲಿ ಒಂದು ತಾಸು ಕಲಿಸಬೇಕೆಂತಲೂ ಆ ಬಗ್ಗೆ ಅವನಿಗೆ ತಿಂಗಳಿಗೆ ಐದರೂಪಾಯಿ ಪಗಾರ ಮಾಡಿರುತ್ತದೆಂತಲೂ ಹುಕುಮು ಕೊಟ್ಟಿರುತ್ತಾರೆ.

ಧಾಡವಾಡ ಸ್ಕೂಲ ಆಫ್ ಇಂಡಸ್ಟ್ರಿ ಯೆಂಬ ಶಾಲೆಯಲ್ಲಿ ವಾರ್ಷಿಕ ಪರೀಕ್ಷೆಯ ಕಾಲಕ್ಕೆ ಐದಾರು ಮಂದಿ ಹತ್ತೇಳು ಹುಡುಗರಲ್ಲಿ ಎಳೆ ಹುಡುಗರು ಪಾಸಾದರು! ಅದರಿಂದ ಆ ಶಾಲೆಯ ಹೆಡ್‌ಮಾಸ್ತರರಾದ ಕೃಷ್ಣಾಜಿ ಸ್ವಾಮಿರಾವ ಮೊಹರೆ ಇವರ ಪ್ರತಿಂಶೆಯು ಬಹಳವಾಗಿ, ಅವರ ಸಂಬಳವು ಮೊದಲು ಐವತ್ತು ರೂ. ಇದ್ದದ್ದು ೨೦ ರೂಪಾಯಿ ಆಗಬೇಕೆಂದು ವರಿಷ್ಟಾಧಿಕಾರಿಗಳು ಬರೆದಿದ್ದಾರೆಂತ ಕೇಳುತ್ತೇವೆ.

ರಾ. ರಾ. ಕೇಶವ ಬಾಳೂಜಿ ಸ್ಕೂಲಮಾಸ್ತರ ಸಂವಡತ್ತಿ, ರಾ. ರಾ. ದಿವಾಕರ ಸದಾಶಿವ ಅ. ಸ್ಕೂಲಮಾಸ್ತರ ಸಂವಗಾವ, ಮತ್ತು ರಾ. ರಾ. ಶಂಕರ ಜೀವಾಜಿ ಚಿಪ್ಪಿಸ

ಿಷಮಾಸ್ತರ ಮುನ್ನೊಳಿ, ಈ ಮೂರುಮಂದಿ ಸ್ಕೂಲಮಾ
ಸ್ತರರು ಡಿಸಾರ್ಟ್‌ಮೆಂಟಿಲ್ ಪರೀಕ್ಷೆಯಲ್ಲಿ ಪಾಸಾದರೆಂ
ದು ಪತ್ರದ್ವಾರದಿಂದ ತಿಳಿಯುತ್ತದೆ.

ಉತ್ತರ ಭಾಗದ ಇಜುಕೇಶನಲ್ ಇನ್ಸಪೆಕ್ಟರರಾದ ಡಾ
ಸ್ಟರಬುಲರ ಸಾಹೇಬ ಬಹಾದ್ದೂರವರು ನಡಿಯುವ ತಿಂ
ಗಳ ೨೦ ನೇ ತಾರೀಖಿಗೆ ಕಾಶ್ಮೀರ ದೇಶಕ್ಕೆ ಸ್ಪೇಶಿಯ
ಲ್ ಕೆಲಸದ ಮೇಲೆ ಹೋಗವರಿದ್ದಾರೆಂತಲೂ, ಅವರ
ನ್ನಳದಲ್ಲಿ ಡೇಕನ್ ಕಾಲೇಜದ ಪ್ರಿನ್ಸಿಪಾಲರಾದ ಆಕ್ಸ
ಫ್ಯಾಮ ಸಾಹೇಬರ ನೇಮಣೂಕ ಆಗುತ್ತದೆಂತಲೂ ಇಂಡಿ
ಯನ್ ಸ್ಟೇಟ್ಸಮನ ಪತ್ರದಿಂದ ತಿಳಿದು ಬರುತ್ತದೆ.

ಹೆಚ್ಚು ಸಾಯಿಯ ವಿಷವು ಎಷ್ಟು ತೀಕ್ಷ್ಣ ವಿರುತ್ತದೆಂ
ಬಗ್ಗೆ ಲಖನೌ ಪಟ್ಟಣದಲ್ಲಿ ಸಂಭವಿಸಿದಂಥ ಸಂಗತಿಯನ್ನು
ನ್ನು ಕುರಿತು ಅಲ್ಲಿ ಇರುವನೊಬ್ಬನು ಇಂಡಿಯನ್ ಡೇಲಿನ್ಯೂ
ಸ್‌ಯೆಂಬ ವರ್ತಮಾನ ಪತ್ರಕ್ಕೆ ಬರೆದದ್ದು ಹ್ಯಾಗಂದರೆ—

ಲಖನೌ ಪಟ್ಟಣದಲ್ಲಿ ಒಬ್ಬ ಗೃಹಸ್ಥನದೊಂದು ತೋ
ಟವಿತ್ತು. ಅದರೊಳಗೆ ಇರುವದೊಂದು ಗಿಡದ ಫಲಗಳ
ನ್ನು ಆ ಗೃಹಸ್ಥನ ಮಕ್ಕಳೂ, ತೋಟಿಗನೂ ತಿಂದರು. ಆ
ರಿಂದ ಅವರ ಕೈಕಾಲುಗಳು ಪೊರಟು ಹಿಡಿದು, ಬಾಯಿ
ಬುರುಗು ಬಂದು ಸ್ಮೃತಿದಪ್ಪಿತು. ಹೀಗಾಗುವ ಕಾರ
ಣವೇನೆಂಬದಾಗಿ ಆ ತೋಟದೊಡೆಯನು ಬಹಳ ಶೋಧ
ಮಾಡಿದಾಗ್ಯೂ ಗೊತ್ತು ಹತ್ತಲಿಲ್ಲ. ಆ ಮೇಲೆ ಅವನು ಆ
ಗಿಡದ್ದೆಂದು ಫಲದ ರಸ ತೆಗಿದು ಅದನ್ನು ಪೃಥಕ್ಕರಣ
ಮಾಡಿಸಲಾಗಿ ಅದರಲ್ಲಿ ಸ್ವಲ್ಪ ವಿಷದ ಭಾಗ ಹೊರಟಿ

ತು. ತರುವಾಯ ಗಿಡದ ಫಲಗಳಲ್ಲಿ ವಿಷ ಉತ್ಪನ್ನವಾಗುವ ಕಾರಣವೇನೆಂಬ ಬಗ್ಗೆ ಕೋಧ ಮಾಡಲಾಗಿ ತೋಟಿಗರು ಆ ಗಿಡಕ್ಕೆ ಬಹಳ ಫಲಗಳು ಆಗಬೇಕೆಂಬ ಉದ್ದೇಶದಿಂದ ಅದರ ಬುಡದಲ್ಲಿ ಸತ್ತ ನಾಯಿಯನ್ನು ಹೂಳಿದ್ದಕಂತಲೂ, ಆ ನಾಯಿಗೆ ಹುಚ್ಚು ಹಿಡಿದಿತ್ತೆಂತಲೂ ತಿಳಿದು ಬಂತು!

ದೊಡ್ಡ ಪರ್ವತ—ಅಮೇರಿಕಾ ಖಂಡದಲ್ಲಿ ನ್ಯೂಗಿನೀಯೆಂಬದೊಂದು ಪರ್ವತ ವುಂಟು. ಅದರ ಎತ್ತರವು ೩೦೦೦ ಫೂಟು ಉಂಟು— ಅದರ ಮೇಲೆ ಒಬ್ಬ ಸಾಹೇಬನು ಬಹಳ ಸಾಹಸದಿಂದ ಸುಮಾರು ೨೨೦೦ ಫೂಟು ಎತ್ತರ ಮೇಲೆ ಏರಿ ಹೋದನು. ಆದರೆ ಹಾಗೆಯೇ ಮುಂದೆ ಹೋಗಲಿಕ್ಕೆ ಅವನ ಶಕ್ತಿಯು ಸಾಲದೆ ಹೋಗಿ ಬಾಯಿಯಿಂದ ರಕ್ತ ಹೊರಟು, ಮೂರ್ಛಿರಿಯಾದನು. ಆ ಮೇಲೆ ಆ ಸಾಹೇಬನು ಬಹಳ ಸಂಕಟ ಪಟ್ಟು ಕೆಳಗೆ ಇಳಿದು ಬಂದನೆಂದು ವರ್ತಮಾನ ತಿಳಿದು ಬಂದದೆ— ಅಂದಮೇಲೆ ಆ ಪರ್ವತವು ಹಿಮಾಲಯಕ್ಕಿಂತ ಎತ್ತರವಾಗಿದೆ ಯೆಂದು ತಿಳಿದು ಬರುತ್ತದೆ.

SELF HELP.

ತನಗೆ ತಾನೇ ನೆರವಾಗುವದು.

ಯಾವ ಜಗದ್ವಿಸ್ತೃತವಾದ ಶಾಲೆಯಲ್ಲಿ ಶ್ರಮವುಳ್ಳ ಕಷ್ಟವೂ ಯೆಂಬ ಕಠಿಣ ಸ್ವಭಾವದವರಾದಗ್ಗೂ ಹೊಸ್ಸ

ರಾದ ಶಿಕ್ಷಕರುಂಟೋ, ಆ ಶಾಲೆಯಲ್ಲಿ ನಾನು ತಕ್ಕಂತೆ ಕಲಿತು ಕೊಂಡೆನೆಂದು ಹ್ಯೂಮಿಲ್ಲರನೆಂಬವನು ಹೇಳಿದ್ದಾನೆ. ಯಾವಾತನು ತನ್ನ ಆಸಕ್ತಿಯನ್ನು ಭಂಗ ಪಡಿಸುತ್ತಾನೋ, ಅಥವಾ, ಹುಲ್ಲಕ ಕಾರಣಗಳಿಂದ ಕೈಯೊಳಗಿನ ಕೆಲಸವನ್ನು ಬಿಟ್ಟುಕೊಡುತ್ತಾನೋ, ಅವನು ನಿಶ್ಚಯವಾಗಿ ಕಡೆಯಲ್ಲಿ ಕಾರ್ಯಹಾನಿಯಾಗುವ ಮಾರ್ಗದಲ್ಲಿದ್ದಾನೆಂದು ತಿಳಿಯುತಕ್ಕದ್ದು ಯಾವದೇ ಕೆಲಸವಾಗಲಿ, ಅದನ್ನು ತಪ್ಪಿಸಕೂಡದೆಂಬ ನಿರ್ಧಾರದಿಂದ ಆರಂಭಿಸಿದರೆ ಅದು ಸಂತೋಷ ಪಡಿಸುವಂತೆ ಬೇಗ ಕೈಗೂಡುತ್ತದೆ. ಸ್ವೀಡನದೇಶದ ಅರಸನಾದ ೧೨ನೇ ಚಾರ್ಲಸನು ಚಿಕ್ಕಂದಿನಲ್ಲಿ ಸಹ ಇಚ್ಛೆಯ ಸಾಮರ್ಥ್ಯವು ಬಹಳ ಉಂಟೆಂದು ದೃಢವಾಗಿ ನಂಬುತ್ತಿದ್ದನು. ಇವನು ತನ್ನ ಚಿಕ್ಕ ಮಗನು ಒಂದು ಕಠಿಣವಾದ ಕೆಲಸವನ್ನು ಮಾಡುವದಕ್ಕೆ ಹವಣಿಸುತ್ತಿದ್ದ ಸಮಯದಲ್ಲಿ ಅವನ ತಲೆಯ ಮೇಲೆ ಕೈಯಿಟ್ಟು, "ಅವನು ಅದನ್ನು ಮಾಡುವನು! ಅವನು ಅದನ್ನು ಮಾಡುವನು" ಯೆಂದು ಆವೇಶದಿಂದ ನುಡಿದನು. ಉಳಿದ ಯೆಲ್ಲ ಅಭ್ಯಾಸಗಳಂತೆ ಆಸಕ್ತಿಯು ಅಭ್ಯಾಸವಾದರೂ ಕೆಲಕಾಲದನಂತರ ಸುಲಭವಾಗುತ್ತದೆ. ಅದರಿಂದ ಸಾಧಾರಣ ತರದ ಶಕ್ತಿಯುಳ್ಳ ಜನರು ಒಂದೇ ಕೆಲಸಕ್ಕೆ ಯೆಡೆಬಿಡದೆಯೂ, ದೃಢವಿಶ್ವಾಸವೂ ಹತ್ತಿಕೊಂಡರೆ, ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವರು. ಸಾಧಾರಣವಾದಸಾಹಿತ್ಯವಿಲ್ಲದಿದ್ದಾಗ್ಯೂ, ಅಸಾಧಾರಣವಾದಆಸಕ್ತಿಯಿಂದಲೇ ಕಾವ್ಯ ಕೆಲಸವಾಗುವದೆಂದು ಥಾವೆಲ್ಲಬಕ್ಸ್‌ತನ್ನನೆಂಬವನು ನಂಬುತ್ತಿದ್ದನು. ಅದರಿಂದಲೇ ಅವನು ಹಾಯಿಬಲ್ಲ

ನೊಳಗಿನ ,,ನಿನ್ನ ಕೈಗೆ ಸಿಕ್ಕ ಕೆಲಸವನು, ನಿನ್ನಲ್ಲಿದ್ದ
ಷ್ಟು ಸಾಮರ್ಥ್ಯದಿಂದ ಮಾಡು'' ಯೆಂಬ ಬೋಧನೆಯು
ಸತ್ಯವಾದದ್ದೆಂದು ಪ್ರತಿಪಾದಿಸುತ್ತಿದ್ದನು. ಮತ್ತು ಅ
ನು ತನ್ನ ಮನೋರಥಗಳು ಯಾತರಿಂದ ಪೂರ್ಣವಾ
ವೆಂಬುದರ ಬಗ್ಗೆ ಹೇಳಿದ್ದು ಯೇನಂದರೆ, ,, ಕೈಯಲ್ಲಿ
ಒಂದು ಕೆಲಸವಿದ್ದಾಗ ನಾನು ಪೂರ್ಣವಾಗಿ ಅದರಲ್ಲಿ ಯೆ
ತೊಡಗುತ್ತಿದ್ದೆನಲ್ಲದೆ ಬೇರೊಂದು ಕೆಲಸಕ್ಕೆ ಕೈಹಾಕ
ತ್ತಿದ್ದಿಲ.''

ನಿಜವಾಗಿ ಬೆಲೆಯುಳ್ಳ ಕೃತ್ಯವು ಧೈರ್ಯದಿಂದ ಆ
ದ್ಯೋಗ ಮಾಡಿದ ಪ್ರೊತ್ಸಾ ಕೈಗೂಡುವದಿಲ್ಲ. ಇಚ್ಛೆ
ಯು ಹವಣಿಕೆಗೆ ಅಥವಾ ಕಷ್ಟಗಳನ್ನು ಲಕ್ಷಿಸದೆ ಆ
ದ್ಯೋಗ ಮಾಡುವದಕ್ಕೆ ಯತ್ನವೆಂಬ ಹೆಸರುಂಟು. ಈ
ಯತ್ನವೇ ಮನುಷ್ಯನ ಅಭಿವೃದ್ಧಿಗೆ ಮುಖ್ಯ ಕಾರಣ
ವಾಗಿರುತ್ತದೆ. ತ್ರೋರಿಕೆಯಲ್ಲಿ ಅಸಂಭಾವ್ಯವಾಗಿ ಕ
ಣಿಸುವ ಯಷ್ಟೋ ಕೃತ್ಯಗಳು ಯತ್ನದಿಂದ ಹ್ಯಾಗೆ ಸಾ
ಸಲ್ಪಟ್ಟವೆಂಬದು ಅತ್ಯಾಶ್ಚರ್ಯಕರವಾಗಿರುತ್ತದೆ.
ತ್ಯಾಸಕ್ತಿಯಿಂದ ಮುಂದಾಗುವ ಪರಿಣಾಮವನ್ನು ಕುರಿತು
ಆಲೋಚಿಸುತ್ತ ಹೋದರೆ, ಮೊದಲು ಸಂಭಾವ್ಯವಾ
ತ್ರೋರುತ್ತಿದ್ದ ಸಂಗತಿಯು ನಿಜವಾದದ್ದರಂತೆ ತ್ರೋರು
ಹತ್ತುತ್ತದೆ; ಯಿಷ್ಟೂ ಸಾರಿ ನಮ್ಮ ಅಪೇಕ್ಷೆಯೇ ನಮ್ಮ
ಕೈಯಿಂದಾಗಬಹುದಾದ ಕೃತ್ಯದ ಕುರುಹಾಗಿರುತ್ತದೆ
ಇದಕ್ಕೆ ವಿಪರೀತವಾಗಿ, ಹೆದರಿಕೆಯು, ಅಥವಾ ಸಂಕೋ
ದ ಸ್ವಭಾವದವರಿಗೆ ಯಿಲ್ಲವೂ ಅಸಂಭಾವ್ಯವೇ ಆ
ತ್ರೋರುತ್ತದೆ; ಇದರ ಮುಖ್ಯ ಕಾರಣವೇನಂದರೆ, ಅ

ಅವರಿಗೆ ಹಾಗೆ ಕಾಣುತ್ತದೆಂಬದೇ. ಒಬ್ಬ ಪ್ರಾಯಸ್ಥನಾದ ಫ್ರೆಂಚ ಉದ್ಯೋಗಸ್ಥನು. "ನಾನು ಫ್ರಾನ್ಸದೇಶದ ದಂಡಿನ ಮುಖ್ಯಾಧಿಕಾರಿಯೂ, ದೊಡ್ಡ ದಳವಾಯಿಯೂ ಆಗುವೆನೆಂದು" ನುಡಿಯುತ್ತ ತನ್ನ ಕೋಣೆಯಲ್ಲಿ ತಿರುಗಾಡುವನೆಂದು ಹೇಳುತ್ತಾರೆ. ಅವನ ಅತ್ಯುತ್ಕಟವಾದ ಇಚ್ಛೆಯೇ ಮುಂದಿನ ಇಷ್ಟ ಸಿದ್ಧಿಯ ಸೂಚಕವಾಗಿತ್ತು. ಯಾಕಂದರೆ ಆ ಗೃಹಸ್ಥನು ಹೆಸರಾದ ದಳವಾಯಿ ಯೆಂದೆನಿಸಿಕೊಂಡು ಫ್ರಾನ್ಸ ದೇಶದ ಸೇನಾಧಿಪತಿಯೆಂಬ ಪದವಿಯ ಹೊಂದಿ ಕಾಲವಶನಾದನು.

"ಆರಿಜಿನಲ್ಲ" ಯೆಂಬ ಗ್ರಂಥವನ್ನು ಬರೆದವನಾದ ವಾಕರನೆಂಬವನು ಇಚ್ಛೆಯ ಸಾಮರ್ಥ್ಯದಲ್ಲಿ ಬಹಳ ನಂಬಿಕೆಯುಳ್ಳವನಿದ್ದನು; ಅವನು ಒಂದು ಸಮಯದಲ್ಲಿ, "ನಾನು ಆರೋಗ್ಯವುಳ್ಳವನಾಗುವದಕ್ಕೆ ನಿಶ್ಚಯಪಟ್ಟಿದ್ದೇನೆ"ಂದು ಹೇಳಿ ಅದೇ ಮೇರಿಗೆ ಆರೋಗ್ಯವುಳ್ಳವನಾದನು. ಇಂಥಾ ನಿಶ್ಚಯವು ಒಂದೊಂದು ಸಲ ಸಫಲವಾಗಬಹುದು. ಆದರೆ ಹಲವು ಔಷಧೋಪಚಾರಾದಿಗಳನ್ನು ನಡಿಸುವದಕ್ಕಿಂತ ಈ ಮಾರ್ಗವು ಹೆಚ್ಚು ಸುಲಭವಾಗಿ ತೋರಿದಾಗ್ಯೂ, ಸರ್ವ ಕಾಲವೂ, ಇದು ಸಫಲವಾಗಲಾರದು. ಶರೀರದಮೇಲೆ ಮನಸ್ಸಿನ ಅಧಿಕಾರವು ಬಹಳ ನಡಿಯುತ್ತದೆಂಬದಕ್ಕೆ ಸಂದೇಹವಿಲ್ಲ; ಆದರೆ ಈ ಅಧಿಕಾರವು ಮಿತಿಮೀರಿ ಹೋದರೆ, ಶರೀರದ ಸಾಮರ್ಥ್ಯವೆಲ್ಲ ನಷ್ಟ ವಾಗುವದು. ಮೂರರೆಂಬ ಜನರ ಮುಖ್ಯಸ್ಥನಾದ ಮೂಲೀ ಮೊಲಕ್ಕನೆಂಬವನ ಬಗ್ಗೆ ಜನರು ಹೇಳುವದೇನಂದರೆ. ಅವನು ಅಸಾಧ್ಯವಾದ ರೋಗದಿಂದ

ಗ್ರಸ್ತನಾಗಿ ಬೇನೆಯಲ್ಲಿ ಬಿದ್ದಿರಲಾಗಿ, ಅವನ ದಳದವರಿಗೂ, ಪೋರ್ತುಗೀಸ ಜನರಿಗೂ, ಕಾಳಗವುಂಟಾಯಿತು. ಆಗ ಜಗಳವು ಒಳ್ಳೆ ಭರದಿಂದ ನಡಿಯುತ್ತಿದ್ದ ಸಮಯದಲ್ಲಿ ಅವನು ಡೋಲಿಯ ಬಿಟ್ಟಳಿದು, ತನ್ನ ಸೈನ್ಯದೊಳಗೆ ಕೇರಿ, ಶತ್ರುಗಳ ಸಂಗಡ ಕಚನವಾಡಿ ಅವರನ್ನು ಜಯಿಸಿದ ಕ್ಷಣವೇ, ಕಳೆಗುಂದಿ ಮರಣ ಹೊಂದಿದನು.

ಮನುಷ್ಯನು ತಾನು ಯೋನಾಗಬೇಕೆಂದು, ಅಥವಾ ಯೋನು ಮಾಡಬೇಕೆಂದು ಚಿಂತಿಸುವನೋ ಅದು ಆಗುವದಕ್ಕೆ, ಅಥವಾ ಮಾಡುವದಕ್ಕೆ ಅವನ ಇಚ್ಛೆಯೇ (ಉದ್ದೇಶದ ಬಲವೇ) ಕಾರಣವು. ಒಬ್ಬ ಸತ್ಪುರುಷನು ಹೇಳಿದ್ದು ಯೋನಂದರೆ ,, ನಿನ್ನ ಅಪೇಕ್ಷೆಯಂತೆ ನಿನಾಗುವಿ ದೇವರ ಇಚ್ಛೆಗೆ ಹೊಂದಿದಂಥ ನಮ್ಮ ಇಚ್ಛೆಯು ಬಲವು ಯೆಪ್ಪುಂಟಿಂದರೆ, ನಾವು ಮನಃಪೂರ್ವಕವಾಗಿಯೂ, ನಿಜವಾದ ಬುದ್ಧಿಯಿಂದಲೂ ಯೋನಾಗಬೇಕೆಂದು ಅಪೇಕ್ಷಿಸುವೆವೋ ಅದು ನಾವು ಆಗುವೆವು. ಯಾವಾತನ ಅಪೇಕ್ಷೆಯಂತೆ ಫಲವಾಗುವದಿಲ್ಲವೋ, ಅವನು ಆತುರದಿಂದ ತಾನು ಲೀನನೂ, ಶಾಂತನೂ, ಮಿತಭಾಷಿಯೂ, ಉದಾರನೂ, ಆಗಲಿಚ್ಛಿಸುವದಿಲ್ಲ. ಒಬ್ಬ ಬಡಿಗೆಯವನ ಕಥೆಯುಂಟು, ಅದು ಹ್ಯಾಗಂದರೆ, ಒಬ್ಬ ನ್ಯಾಯಾಧೀಶನು ಕೂಡ್ಸುವ ತೀರ್ಪಿಟಿಗೆಯನ್ನು ಒಂದುದಿವಸ ನೆಟ್ಟಗೆ ಮಾಡಿಸುವದಕ್ಕೆ ಅವನ ಹತ್ತರ ತಂದಿರಲಾಗಿ, ಅವನು ಬಹು ಜಾಗ್ರತೆಯಿಂದ ಅದರ ಮೇಲೆ ಉಜ್ಜುಗೊರಡನ್ನು ಆಡಿಸಹತ್ತಿದನು. ಆಗಲೊಬ್ಬವನು ನೀನು ಇಷ್ಟು ಜಾಗ್ರತೆ ಮಾಡುವದೇನು ಕಾರಣವೆಂದು ಕೇಳಲಾಗಿ, ,,ನಾನು ಇದರ

ನೋಲೆ ಕೊಡುವ ಹೊತ್ತು ಬಂದಾಗ ಇದರಿಂದ ನನಗೆ ಸುಖವಾಗಬೇಕೆಂದು ಇಚ್ಛಿಸುತ್ತೇನೆ," ಯೆಂದು ಉತ್ತರ ಹೇಳಿದನು. ಮುಂದೆ ಅತ್ಯಾಶ್ಚರ್ಯಕರವಾಗಿ ವರ್ತಿಸಿದ್ದೇನೆಂದರೆ, ಅವನು ಅದೇ ತೀವಿಟಿಗೆಯಮೇಲೆ ನ್ಯಾಯಾಧೀಶನಾಗಿ ಕೂತುಕೊಳ್ಳುವ ಸಮಯವು ನಿಜವಾಗಿ ಬಿದಗಿತು.

ನಮ್ಮ ಇಚ್ಛೆಯು ಸ್ವಾತಂತ್ರ್ಯದಬಗ್ಗೆ ನಯ್ಯಾಯಿಕರ ಸಿದ್ಧಾಂತಗಳು ಹ್ಯಾಗೇ ಇರಲಿ, ಪ್ರತ್ಯೇಕ ಮನುಷ್ಯನು ವ್ಯವಹಾರದೊಳಗೆ ಒಳಿತು ಹೀನಗಳಲ್ಲಿ ತನಗೆ ಬೇಕಾದದ್ದನ್ನು ಆರಿಸಿ ಕೊಳ್ಳುವದಕ್ಕೆ ತಾನು ಸ್ವತಂತ್ರನೆಂದು ಜನ್ಮಾಗಿ ಬಿಲ್ಲನು. ನೀರಿನ ಪ್ರವಾಹವು ಯಾವದಿಕ್ಕಿಗೆ ಹೋಗುತ್ತದೆಂದು ನೋಡುವದಕ್ಕೋಸ್ಕರವಾಗಿ ಅದರೊಳಗೆ ಜಲ್ಲಿದ ಕಡ್ಡಿಯಂತೆ ಮನುಷ್ಯನಲ್ಲ. ಒಳ್ಳೇ ಘಟ್ಟಿಗನಾಪ ಈ ಜುವವನ ತಾರಣೆಯು ಅವನಲ್ಲಿ ಉಂಟು; ತನ್ನ ಸ್ವಂತ ಕೈಕಾಲುಗಳನ್ನು ಆಡಿಸುವದಕ್ಕೂ, ತೆರೆಗಳ ಸಂಗಡಾ ಗುದ್ಯಾಡುವದಕ್ಕೂ, ಅವನು ಸಮರ್ಥನಾಗಿದ್ದದ್ದಲ್ಲದೆ, ಬೇಕಾದದಿಕ್ಕಿಗೆ ತನ್ನ ದಾರಿಯನ್ನು ತೆಗಿದು ಕೊಳ್ಳುವದಕ್ಕೆ ಬಹುಶಃ ಸ್ವತಂತ್ರನಾಗಿದ್ದಾನೆಂಬದು ಯೆಲ್ಲರಿಗೂ ಗೊತ್ತುಂಟು. ನಮ್ಮ ಇಚ್ಛೆಗೆ ಪೂರ್ಣವಾದ ಪ್ರತಿಬಂಧವು ಯಾತರಿಂದಲೂ ಆಗದು. ಮಂತ್ರವಿದ್ಯದಿಂದ ಬಂಧಿಸಿದಂತೆ ಇಂಥಾದೇ ಕೃತ್ಯ ಮಾಡಬೇಕೆಂಬ ಬಂಧನವು ನಮಗಿಲ್ಲವೆಂಬದನ್ನು ನಾವು ಜನ್ಮಾಗಿ ಬಲ್ಲೆವು. ಇಂಥಾ ಬಂಧನಕ್ಕೆ ನಾವು ಒಳಗಾಗಿದ್ದರೆ, ನಮ್ಮಲ್ಲಿ ಉತ್ತರುತ್ವವನ್ನು ಪಡೆದುಕೊಳ್ಳಬೇಕೆಂಬ ಇಚ್ಛೆಯೆಲ್ಲದು

ಬ್ರಲವಾಗುತ್ತಿತ್ತು. ವ್ಯಾಪಾರ ಉದ್ಯೋಗಗಳೂ, ಪ್ರಪಂಚವ್ಯವಹಾರಗಳೂ, ಪ್ರಪಂಚ ನಿಯಮಗಳೂ, ಸಾರ್ವಜನಿಕ ವ್ಯವಸ್ಥೆಗಳೂ, ಸಾರ್ವಜನಿಕ ಸ್ಥಾಪನೆಗಳೂ, ಇವೆಲ್ಲ ನಮ್ಮ ಇಚ್ಛೆಯು ಸ್ವತಂತ್ರವಾಡಬ್ದೆಂಬದಾಗಿ ಅನುಭವದಿಂದ ಸಿದ್ಧವಾದ ನಂಬಿಗೆಯಿಂದಲೇ ಉಂಟಾಗಿವೆ. ಹೀಗಿಲ್ಲದಿದ್ದರೆ, ನಾವು ಮಾಡಿದಂತೆ ಪಡಿಯಬೇಕೆಂಬ ನಿಯಮವು ಉಳಿಯುತ್ತಿದ್ದಿಲ್ಲ. ಆ ವೇಲೆ ಶಿಕ್ಷೆಣೆ, ಬೋಧನೆ, ಉಪದೇಶ, ದಂಡ, ಸುಧಾರಣೆ, ಮುಂತಾದವುಗಳಿಂದ ಯೇನು ಲಾಭವಾಗುತ್ತಿತ್ತು? ಮನುಷ್ಯರು ಬಹಳ ಮಾಡಿ ತಮ್ಮ ತಮ್ಮ ಮನಸ್ಸಿಗೆ ಬಂದಂತೆ ಕಾರ್ಯಗಳನ್ನು ಮನ್ನಿಸುತ್ತಾರೆ, ಅಥವಾ ಮನ್ನಿಸುವದಿಲ್ಲವೆಂಬ ಜಗತ್ಪ್ರಸಿದ್ಧವಾದ ಸಂಗತಿಯಲ್ಲಿ ಯೆಲ್ಲ ಜನರ ನಂಬಿಕೆಯಿಲ್ಲದಿದ್ದರೆ, ಕಾರ್ಯಗಳಿಂದ ಯೇನು ಪ್ರಯೋಜನವಾಗುತ್ತಿತ್ತು? ನಮ್ಮ ಮನದರಿಕೆಯು ನಾವು ಜೀವದಿಂದಿರುವಮಟ್ಟಿಗೂ ಪ್ರತಿಕ್ಷಣದಲ್ಲಿ ಇಚ್ಛೆಯು ಸ್ವತಂತ್ರವಾದದ್ದೆಂದು ಕೂಗುತ್ತಿರುತ್ತದೆ. ಇದೊಂದೇ ಪೂರ್ಣವಾಗಿ ನಮ್ಮ ವಶದಲ್ಲಿದ್ದ ಒಡಿವೆಯು. ಇದನ್ನು ಯೋಗ್ಯಮಾರ್ಗಕ್ಕಾಗಲಿ, ಅಯೋಗ್ಯಮಾರ್ಗಕ್ಕಾಗಲಿ, ಹಚ್ಚುವದು ಕೇವಲ ನಮ್ಮ ಸ್ವಾಧೀನವಾಗಿರುತ್ತದೆ. ನಮ್ಮ ಅಭ್ಯಾಸಕ್ಕೂ, ಮೋಹಕ್ಕೂ ನಾವು ವಶವರ್ತಿಗಳಲ್ಲ, ಅವೇ ನಮ್ಮ ವಶದಲ್ಲಿ ವರ್ತಿಸತಕ್ಕಂಥವು. ನಾವು ಅವುಗಳ ಸ್ವಾಧೀನವಾಗುವಾಗ್ಗೆಸಹ ಮನದರಿಕೆಯು ಇನ್ನು ಅಡ್ಡಿಯು ಮಾಡಬಹುದೆಂದು ಹೇಳುತ್ತಿರುತ್ತದೆ. ಇಷ್ಟಲ್ಲದೆ ಅವುಗಳನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದು ನಾವು

ಬೋಧಿಸಿದರೆ, ನಮ್ಮ ನಿಶ್ಚಯವನ್ನು ಕಡೆಗಾಣಿಸುವ ಸಾಮರ್ಥ್ಯವು ನಮ್ಮಲ್ಲಿ ಯೆಷ್ಟು ಮಟ್ಟಿಗಿರುತ್ತದೋ, ಅಷ್ಟಕ್ಕಿಂತ ಹೆಚ್ಚು ಈ ಕೆಲಸಕ್ಕೆ ಪ್ರಯೋಜನವಿಲ್ಲೆಂದು ಸಹ ಅದು ಹೇಳುತ್ತಿರುತ್ತದೆ.

ಲವೆನಾಯಿ ಯೆಂಬುವನು ಒಮ್ಮೆ ಒಬ್ಬ ಉಲ್ಲಾಸಿಗನಾದ ಪ್ರಾಯಸ್ಥನ ಸಂಗಡ ಮಾತಾಡುತ್ತಿರಲಾಗಿ ಅಂದದ್ದೇನಂದರೆ, "ನೀನು ಈಗ ಯಾವದೊಂದು ನಿಶ್ಚಯವನ್ನು ಹಿಡಿದು ನಡಿಯತಕ್ಕಂಥ ವಯಸ್ಸಿನವನಾಗಿರುತ್ತೀ. ಇನ್ನು ಮುಂದೆ ಸ್ವಲ್ಪ ತಡಮಾಡಿದರೆ, ನೀನು ನಿನ್ನ ಕೈಯಿಂದಲೇ ಅಗಿದುಕೊಂಡು ಗೋರಿಯೊಳಗೆ ಸಿಕ್ಕಿಬೀಳಬೇಕಾಗುವದು. ಆ ಗೋರಿಯಮೇಲಿನ ಕಲ್ಲನ್ನು ಉರುಳಿಸುವ ಸಾಮರ್ಥ್ಯವಸಹ ನಿನ್ನಲ್ಲಿಲ್ಲ. ನಮ್ಮ ಇಚ್ಛೆಯು ಅತಿ ಸುಲಭವಾಗಿ ನಮ್ಮ ಅಭ್ಯಾಸಕ್ಕೆ ವಶವಾಗುತ್ತದೆ. ಅದರಿಂದ ಬಲವಾಗಿಯೂ, ನಿಶ್ಚಯವಾಗಿಯೂ, ಇಚ್ಛೆಯನ್ನು ಧರಿಸುವದಕ್ಕೆ ಕಲಿ. ಹೀಗೆ ಮಾಡಿ ಗೊತ್ತಿಲ್ಲದೆ ಹರಿದಾಡುವ ನಿನ್ನ ಬಾಳುವೆಯನ್ನು ಸ್ಥಿರಪಡಿಸು; ಅದನ್ನು ಇನ್ನು ಮುಂದೆ ಗಾಳಿಯೊಳಗೆ ದಿಕ್ಕಿಲ್ಲದೆ ಹಾರಾಡುವ ಬಿಣಾಗಿದ ಎಲೆಯಂತೆ ಅತ್ತಿತ್ತ ಹೋಗಗೊಡಬೇಡ.

ಪ್ರಾಯಸ್ಥರು ತಾವು ಏನಾಗಬೇಕೆಂದು ಅಪೇಕ್ಷಿಸುವರೋ, ಅದು ತಾವಾಗುವರು, ದೃಢವಾದ ನಿಶ್ಚಯವನ್ನು ಮಾತ್ರ ಹಿಡಿಯತಕ್ಕದ್ದು, ಯೆಂದು ಬಕ್ಸ್ಟನನೆಂಬವನ ಅಭಿಪ್ರಾಯವಿತ್ತು. ಅವನು ತನ್ನ ಒಬ್ಬ ಮಗನಿಗೆ ಪತ್ರದಲ್ಲಿ ಬರೆದದ್ದೇನಂರೆ, "ನೀನು ಇನ್ನುಮೇಲೆ ನಿನ್ನ ಮನಸ್ಸಿಗೆ ತಿಳಿದ ಮಾರ್ಗವನ್ನು ಹಿಡಿಯಬಹುದಾದ

ಪಯುಸ್ಸಿನವನಾಗಿರುತ್ತೀ. ಆದದರಿಂದ ನೀನು ಇನ್ನು ನಿನ್ನ ಮನಸ್ಸಿನ ಬಲವನ್ನೂ ನಿಶ್ಚಯವನ್ನೂ, ತಾತ್ಪರ್ಯವನ್ನು ಅನುಭವಕ್ಕೆ ತಂದು ತೋರಿಸತಕ್ಕದ್ದು; ಅಥವಾ ಆಲಸ್ಯದಲ್ಲಿ ಮುಳುಗಿ, ಗೊತ್ತಿಲ್ಲದೆ ಅಡ್ಡಾಡುವ ನಿರುಪಯುಕ್ತನಾದ ಮನುಷ್ಯನ ನಡತೆಯನ್ನು ಸ್ವಭಾವವನ್ನು, ಕಲಿತು ಕೊಳ್ಳತಕ್ಕದ್ದು. ನೀನು ಒಮ್ಮೆ ಯಿಂಥಾಸ್ಥಿತಿಯಲ್ಲಿ ಬಿದ್ದ ಮೇಲೆ ಪುನಃ ಮೇಲಕ್ಕೆ ಯೇಳುವದು ಸುಲಭವಲ್ಲೆಂದು ನಿನಗೆ ತಿಳಿಯುವದು. ಪ್ರಾಯಸ್ಥನಾದ ಮನುಷ್ಯನು ತಾನು ಹ್ಯಾಗಾಗಬೇಕೆಂದು ಕೋರುವನೋ, ಹಾಗೇ ಆಗುವನೆಂದು ನಾನು ನಂಬುತ್ತೇನೆ. ನನ್ನ ಸ್ವಂತ ಅನುಭವನವಾದರೂ ಹೀಗೇ ಉಂಟು. ನಾನು ನಿನ್ನ ವಯಸ್ಸಿನವನಿದ್ದಾಗ ಮಾಡಿದ ವ್ಯವಸ್ಥೆಯಿಂದಲೇ ಈಗ ನಾನು ಅನುಭೋಗಿಸುವ ಸೌಖ್ಯವೂ, ಘನತೆಯೂ, ಉಂಟಾಯಿತು. ನೀನು ಉದ್ಯೋಗಿಯೂ, ಜಾಗ್ರತೆಯುಳ್ಳವನೂ ಆಗಬೇಕೆಂದು ಮನಃಪೂರ್ವಕವಾಗಿ ನಿಶ್ಚಯಿಸಿಕೊಂಡರೆ, ನೀನು ಜೀವದಿಂದಿರುವ ಮಟ್ಟಿಗೂ ಈ ನಿಶ್ಚಯವನ್ನು ಹಿಡಿದದ್ದಕ್ಕೆ ಬಹು ಸಂತೋಷ ಪಡುವಿಯೆಂಬದಕ್ಕೆ ಸಂದೇಹವಿಲ್ಲ." ನಮ್ಮ ಇಚ್ಛೆಯು ಹಿಡಿಯುವ ಮಾರ್ಗವನ್ನು ಲಕ್ಷ್ಯದಲ್ಲಿ ತರದೆ ಕೇವಲ ಇಚ್ಛೆಯೆಂದರೇನು, ಯೆಂದು ವಿಚಾರಿಸಲಾಗಿ, ನಿತ್ಯತ್ವವೂ ದಾಢ್ಯವೂ, ದೃಢನಿಶ್ಚಯವೂ ಈ ಹೆಸರನ್ನು ಹೊಂದುತ್ತವೆ ಯೆಂದು ತಿಳಿಯುತ್ತದೆ. ಅದರಿಂದ ಇಚ್ಛೆಯು ಯಾವ ಉದ್ದೇಶವನ್ನೂ, ಯಾವ ಮಾರ್ಗವನ್ನೂ ಹಿಡಿಯುವದೋ, ಅದರಂತೆ ಪರಿಣಾಮವಾಗುವದೆಂಬದು ಸ್ಪಷ್ಟವೇ. ದೃಷ್ಟ

ಪಾಪ ಇಚ್ಛೆಯು ಇಂದ್ರಿಯ ಭೋಗಗಳಲ್ಲಿ ಒಲಿದರೆ, ಅದು ರಾಹುವಿನಂತೆ ವರ್ತಿಸುವದು; ಬುದ್ಧಿಯು ಕೇವಲ ನೀಚ ಇಳಿದು ಅದರ ದಾಸ್ಯವನ್ನು ಕೈ ಕೊಳ್ಳುವದು. ಆದರೆ ಒಳ್ಳೇ ಕೃತ್ಯವನ್ನು ಹಂಬಾಲಿಸಿದರೆ, ದೃಢವಾದ ಇಚ್ಛೆಯು ಅರಸನಂತೆ ಯಿರುತ್ತದೆ; ಬುದ್ಧಿಯು ಮನುಷ್ಯನಲ್ಲಿ ಅತ್ಯುತ್ತಮ ಸ್ಥಿತಿಯನ್ನುಂಟು ಮಾಡುವ ಪ್ರಧಾನನಂತೆ ಯಿರುತ್ತದೆ.

"ಇಚ್ಛೆಯಿದ್ದಲ್ಲಿ ಮಾರ್ಗವಿರುವದು," ಯೆಂಬದೊಂದು ಯಥಾರ್ಥವಾದ ಹಳೇ ಗಾದೆಯುಂಟು. ಯಾವಾತನು ಇಂಥಾದೊಂದು ಕೆಲಸವನ್ನು ಮಾಡುವೆನೇ, ಯೆಂದು ನಿಶ್ಚಯ ಪಡುತ್ತಾನೋ, ಅವನು ಅದೇ ನಿಶ್ಚಯದ ಬಲದಿಂದ ಬಹುತೇಕ ಮಾರ್ಗದಲ್ಲಿದ್ದ ಇಕ್ಕಟ್ಟುಗಳನೆಲ್ಲ ದಾಟಿ, ಆ ಕೆಲಸವನ್ನು ಸಂಪಾದಿಸಿಕೊಳ್ಳುತ್ತಾನೆ—ನಾವು ಸಮರ್ಥರಿದ್ದೇವೆಂದು ಚಿಂತಿಸುವದರಿಂದಲೇ ಬಹುತರವಾಗಿ ಸಮರ್ಥರಾಗುತ್ತೇವೆ,—ಇಂಥಾದೊಂದು ಸಂಪಾದನೆಯು ಮಾಡತಕ್ಕದ್ದೆಂಬ ನಿಶ್ಚಯವೇ ಒಂದೊಂದು ಸಮಯದಲ್ಲಿ ಸಂಪಾದನೆಯು ತಾನೇ ಆಗಿಹೋಗುತ್ತದೆ—ಈ ಮೇರಿಗೆ ಒಂದೊಂದು ವೇಳೆ ದೃಢನಿಶ್ಚಯವೆಂಬ ಗುಣದಲ್ಲಿ ಬಹುತೇಕ ಸರ್ವಶಕ್ತತ್ವದ ಲಕ್ಷಣವು ಉಂಟೆಂದು ತೋರಬರುತ್ತದೆ. ಸುಪರೋ ಯೆಂಬವನ ಇಚ್ಛೆಯ ಬಲದಿಂದಲೇ ಅವನ ಯೋಗ್ಯತೆಯ ಬಲವುಂಟಾಗಿತ್ತು; ಬೇರೆ ನಿರ್ಧಾರವುಳ್ಳ ಮನುಷ್ಯರಂತೆ ಅವನಾದರೂ ಜನರಿಗೆ ನೀವು ನಿಮ್ಮ ಕೆಲಸದಲ್ಲಿ ಬಲವಾದ ಇಚ್ಛೆಯನ್ನು ಧರಿಸಿರೆಂದು ಬೋಧಿಸುವನು—ತಮ್ಮ ಯ

ತ್ನವನ್ನು ಕಡೆಗಣಿಸದಂಥ ಜನರಿಗೆ ಅವನು, ,, ನೀ
ಅರ್ಥ ಮಾತ್ರ ಅಚ್ಛಿಸಬಲ್ಲಿರಿಂ"ದು ಅನ್ನುವನು. ರಿ
ಲೂ, ನೇಪೋಲಿನ್ ಮೊದಲಾದವರಂತೆ ಅವನು ,,ಅಸ
ಭಾವ್ಯ" ಎಂಬ ಶಬ್ದವನ್ನು ಕೋಶದೊಳಗಿಂದ ತೆಗಿದ
(ಮುಂದಕ್ಕೆ ಸಾಗುವದು).

NOTICES.
ನೋಟೀಸುಗಳು.

ನಂಬರು ೨೮೬

ಬಿ. ಎಜ್ಯುಕೇಸನಲ್ ಇನಸ್ಪೆಕ್ಟರ ಜಿಲ್ಲಾ ಕಾನಡಾ
ವರ ಕಡೆಯಿಂದ ಕಾನಡಾ ಜಿಲ್ಲೆಯೊಳಗಿನ ಯಾವತ್ತ
ಸ್ಕೂಲ ಮಾಸ್ತರರಿಗೂ ಅಸಿಷ್ಟ್ಯಂಟರಿಗೂ ತಿಳಿಯಪಡಿಸ
ವದೇನಂದರೆ– ಕಾರವಾರ ತಾಲೂಕ ಕಸಬಾ ಕಾರವಾ
ಸ್ಟ್ರೀಸಾಲಿಯು ಮಾಸ್ತರರಾದ ರಾಮಚಂದ್ರ ನಯಮಾಜೀ ಪವ
ರ ಇವರು ಕಳಪ ಜುಲಾಯಿ ತಿಂಗಳಲ್ಲಿ ೫೨ ದಿವಸಗ
ಬಿನ್ನಪಗಾರಿ ರಜಾಪಡಕೊಂಡು, ಆ ರಜೆಯ ಮುದ್ದತ
ಲ್ಲಿ ತಮ್ಮ ಕೆಲಸದ ಮೇಲೆ ಹಾಜರ ಆಗದೆ ೫೬ ದಿವ
ಗಳು ಹೆಚ್ಚು ಗೈರಹಾಜರ ಉಳಿದಿದ್ದರು. ಈ ಸಂಗ
ಯನ್ನು ನಾವು ಮೊದಬ್ಯಾನ ರಸಲಸಾಹೇಬ ಬಡಾದ್ದಿ
ಎ. ಇನಸ್ಪೆಕ್ಟರ ಪ್ರಾಂತದಲ್ಲೇನಾ ಭಾಗ ಇವರ ಕಡಿಗೆ ಕ
ರದು ತಿಳಿಸಲಾಗಿ ಸಾಹೇಬ ಮಜಸುಫರವರು ಸದರ ಮ
ಸ್ತರರಿಗೆ ಸದರ ಅಪರಾಧದ ಬಗ್ಗೆ ೫೦ ರೂಪಾಯಿ ಜುಲ್ಮಾ
ನೆ ಮಾಡಿದರು. ಈ ಮಜಕೂರು ಎಲ್ಲರು ತಿಳಿದುಕೊ

ಡು ಬಹು ಜಾಗ್ರತೆಯಿಂದ ನಡೆದುಕೊಳ್ಳತಕ್ಕದ್ದು.

ಮುಖ್ಯಮು ಕಾರವಾರ. } R. W. Bhamp.
ತಾ. ೧೦ಅಗಷ್ಟ ೧೮೭೫ } ಡಿ. ಎ. ಇ. ಜಿ. ಕಾಸುತಾ.

ಸರಟೀಫಿಕೇಟು ಪರೀಕ್ಷೆಯು ವಿಷಯಕ್ಕೆ.

ಈ ವರ್ಷ ಟ್ರೇನಿಂಕಾಲೇಜದ ಸರಟೀಫಿಕೇಟು ಪರೀಕ್ಷೆಯು ಬರುವ ಅಗಟಂಬರ ತಿಂಗಳ ಐನೇ ತಾರೀಖು ಸೋಮವಾರ ಹಗಲು (೧೦) ಹತ್ತು ಘಂಟೆಗೆ ಧಾರವಾಡ ಟ್ರೇನಿಂಗಕಾಲೇಜದಲ್ಲಿ ಪ್ರಾರಂಭವಾಗುವದು. ಈ ಪರೀಕ್ಷೆಯನ್ನು ಮಿಹಬ್ಬಾನ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬಬಹಾದ್ದೂರವರು ತೆಗೆದುಕೊಳ್ಳುವರು. ಸದರ ಕಾಲೇಜದಲ್ಲಿ ಕಲಿಯುವೆ ಇದ್ದವರು ಮಿಹಬ್ಬಾನ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬಬಹಾದ್ದೂರವರ ಅಪ್ಪಣೆಯಿಂದಲೂ, ಸನ್ನ ೧೮೭೬ ಇಸವೀ ಈಚೆಗೆ ಕಾಲೇಜದ ಸರಟೀಫಿಕೇಟು ಪಡೆಯುವೆ, ಸ್ಕೂಸ್ತರ ಕೆಲಸವನ್ನು ಬೊರಕಿಸಿದವರು, ತಮ್ಮ ಜಿಲ್ಲೆಯ ಡಿಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರವರ ಹುಕುಮಿನಿಂದಲೂ, ಸದರಿ ನೇಮಿಸಿದ ತಾರೀಖಿನ ಪೂರ್ವದಲ್ಲಿ ಎರಡು ದಿವಸ ಮೊದಲಿಗಾಗಿಯೇ ತಮ್ಮ ಹೆಸರನ್ನು ಪರೀಕ್ಷೆಯ ರಜಿಸ್ತರವಲ್ಲಿ ಕೇರಿಸಲಿಕ್ಕೆ ಟ್ರೇನಿಂಗಕಾಲೇಜದ ಸುಪರಿಂಟೆಂಡರ ಕಡಿಗೆ ಬಂದು ಹಾಜರಾಗತಕ್ಕದ್ದು.

ಬೋ. ಕೆ ಹುಲಾಯಿ } Bhoujungrao K. Hoolgoal.
ಸನ್ನ ೧೮೭೫ ಇ. } ಪ್ರಿ. ಟ್ರೈ. ಕಾಲೇಜ ಧಾರವಾಡ.

ನಂಬರು ೬೫೫

೪೨ ಡೂ ಜಿಲ್ಲೆಯೊಳಗಿನ ಸ್ಕೂಲಮಾಸ್ತರ ಡಾಗು ಅಶಿಷ್ಟ್ಯಂಟರ ನೇಮಣೂಕುಗಳ ಪಟ್ಟಿ ಮಾಜಿ
ಎಪ್ರೀಲ್ ಸಂನ ೧೮೬೫ ನೇ ಇಸ್ವಿ.

ನಂಬರು.	ಪಗರ ಪಟ್ಟಿ ಮಾಸ್ತರರ ಹೆಸರು.	ಮೊದಲು ನೇಮಕ ಇದ್ದ ಸ್ಥಳ.	ಈಗ ನೇಮಕ ಪಟ್ಟ ಸ್ಥಳ.	ನಂ. ದೂ.	ಶೇರಾ.
೧	ಶೇತಾರಾಮ ಭುಜಂಗ.	ಸೂಲ ಮಾಸ್ತರ ಶಿಂಗೆರಗಾವ.	ಹೆಡ್ಡ ಸೂ. ಗೋಕರ್ಣ.	೨೫	
೨	ಗೋವಿಂದ ಶ್ರೀಧರ.	ಹೆಡ್ಡ ಮಾಸ್ತರ ಗೋಕರ್ಣ.	ಹೆಡ್ಡ ಮೂ. ಬನವಾಸಿ.	೨೫	
೩	ಅಂಣಾಜೀ ಕೇಪಗಿರಿ.	ಹೆಡ್ಡ ಮಾಸ್ತರ ಬನವಾಸಿ.	ಹೆಡ್ಡ ಮೂ. ಶಿದ್ದಾಪೂರ.	೨೫	
೪	ರಾಘಜೀ ಸಯಾಜೀ.	ಹೆಡ್ಡ ಮಾಸ್ತರ ಶಿದ್ದಾಪೂರ.	ಹೆ. ಸ್ಕೂ. ಶಾ. ಕಾರವಾರ.	೨೫	
೫	ವಿಷ್ಣು ಗೋವಿಂದ.	ಹೆ. ಮೂ. ಸ್ಕೂ. ಶಾಲೆ ಕಾರವಾರ.	ಹೆ. ಸ್ಕೂ. ಶಾ. ಭಟ್ಕಳ.	೨೫	
೬	ಮಂಜಾದೇವ ಬಾಳಕೃಷ್ಣ.	ಹೆ. ಮೂ. ಸ್ಕೂ. ಶಾಲೆ ಭಟ್ಕಳ.	ಮೂ. ಸ್ಕೂ. ಶಾ. ಹಳಿಯಾಳ	೨೨	
೭	ಪರಮೇಶ್ವರ ಶಂಕರ.	೧ನೇ ಅ. ೨. ಸ್ಕೂಲ ಶಿರಸಿ.	ಹೆಡ್ಡ ಮೂ. ಯಲ್ಲಾಪೂರ	೨೫	
೮	ಗೋವಿಂದ ಚಿಮಣಾಜೀ.	ಹೆಡ್ಡ ಮಾಸ್ತರ ಯಲ್ಲಾಪೂರ.	ಹೆಡ್ಡ ಮಾಸ್ತರ, ಸೂಪಾ.	೨೫	
೯	ರಾಮಚಂದ್ರ ಗಣಪಯ್ಯಾ-	ಹೆಡ್ಡ ಮಾಸ್ತರ ಸೂಪಾ.	ಹೆಡ್ಡ. ಮುಂಡಗೋಡ.	೨೦	
೧೦	ಶಿಖರೋ ಪರಪತ.	ಹೆಡ್ಡ ಮಾಸ್ತರ ಮುಂಡಗೋಡ.	ಹೆಡ್ಡ ಮೂ. ಕಾರವಾರ.	೨೫	
೧೧	ಗೋವಿಂದ ಗಂಗಾಧರ.	ಹೆಡ್ಡ ಮಾಸ್ತರ ಕಾರವಾರ.	ಹೆಡ್ಡ ಮೂ ಹಳಿಯಾಳದ	೨೫	

ಸಂಖ್ಯೆ	ಹೆಸರು	ಸ್ಥಳ	ಕಾಲ	ಕರ್ತೃ
೧	ರಾಮಾಯಣ	ಕಿಷ್ಕಿಂಧೆ	೧೧	
೨	ಸಾರಾಯಣ	ಕಿಷ್ಕಿಂಧೆ	೧೧	
೩	ಪಿತೃವಾಕ್ಯ	ಕಿಷ್ಕಿಂಧೆ	೧೧	
೪	ಹನುಮಂತ	ಕಿಷ್ಕಿಂಧೆ	೧೧	
೫	ಸೀತಾಪಹಾರ	ಕಿಷ್ಕಿಂಧೆ	೧೧	
೬	ಸೀತಾನ್ವೇಷಣ	ಕಿಷ್ಕಿಂಧೆ	೧೧	
೭	ಲಂಕಾಪ್ರವೇಶ	ಕಿಷ್ಕಿಂಧೆ	೧೧	
೮	ಸೀತಾಸಂದರ್ಶನ	ಕಿಷ್ಕಿಂಧೆ	೧೧	
೯	ಲಂಕಾದಹನ	ಕಿಷ್ಕಿಂಧೆ	೧೧	
೧೦	ಸೀತಾಸಂದೇಶ	ಕಿಷ್ಕಿಂಧೆ	೧೧	
೧೧	ಸೀತಾಸಂದೇಶ	ಕಿಷ್ಕಿಂಧೆ	೧೧	
೧೨	ಲಂಕಾಪ್ರವೇಶ	ಕಿಷ್ಕಿಂಧೆ	೧೧	
೧೩	ಸೀತಾಸಂದರ್ಶನ	ಕಿಷ್ಕಿಂಧೆ	೧೧	
೧೪	ಲಂಕಾದಹನ	ಕಿಷ್ಕಿಂಧೆ	೧೧	
೧೫	ಸೀತಾಸಂದೇಶ	ಕಿಷ್ಕಿಂಧೆ	೧೧	
೧೬	ಸೀತಾಸಂದೇಶ	ಕಿಷ್ಕಿಂಧೆ	೧೧	

ಸಂಖ್ಯೆ.	ವರ್ಗ ಪಟ್ಟ ಮಾಸ್ತರರ ಹೆಸರು.	ಮೊದಲು ನೇಮಕ ಇದ್ದ ಸ್ಥಳ.	ಈಗ ನೇಮಕ ಪಟ್ಟ ಸ್ಥಳ.	ಸಂಬಳ.	ಶೇರಾ.
೨೯	ನಾರಾಯಣ ಅಚ್ಯುತ.	ಸೂ. ಮೂ. ಉಪ್ಪಿನಪಟ್ಟಣ.	ಸೂ. ಮೂ. ಸ್ಕೂಲೆಶಿರಸಿ	೨೨	
೫೮	ವಾಮನ ಮಹಾದೇವ.	ಸೂಲ ಮೂ. ಕಂಚನಹಳ್ಳಿ.	ಹೆಡ್ಡ ಮೂಸ್ತರ ಪಾಳೆ.	೨೦	
೧೯	ಶ್ರೀನಿವಾಸ ವೆಂಕಟೇಶ.	ಸೂಲ ಮೂಸ್ತರ ಪಾಳೆ.	ಸೂಲ ಮೂಸ್ತರ. ಕಳಚೆ.	೧೫	

ಮುಕ್ತಾಂ ಕಾರವಾರ ತಾರೀಖು
೫೨ ನೇ ಆಗಸ್ಟ ಸನ್ನ ೧೮೭೫ಇ

R. W. Bhanap.
ಡಿ. ಎಜುಕೇಶನಲ್ ಇಂನಸ್ಪೆಕ್ಟರ ಜಿಲ್ಲಾ ಕಾನಡಾ.

CORRESPONDENCE.

ಪತ್ರವ್ಯವಹಾರವು.

ರಾವಸಾಹೇಬ– ಶಾಲಾಪತ್ರಕದ ಎಡಿಟರರ ಸಂನಿಧಿಗೆ—

ವಿ. ವಿ. ತಾರೀಖುಗಳನ್ನೂ ಜುಲಾಯಿ ಸನ್ನ ೧೮೭೫ ಇಸವಿ ದಿವಸ ಶಿಂದಗೀ ತಾಲೂಕ ಮಾನುಲೇದಾರರಾದ ರಾವಸಾಹೇಬ ಹಯವದನ ಭಗವಂತ ಇವರು ಶಾಲೆಯಲ್ಲಿ ಬಂದು ಹುಡುಗರನ್ನು ಪರೀಕ್ಷಿಸಿ ವಿಯುಟಿಸರ್ ಬುಕ್ಕಿನಲ್ಲಿ "ಹುಡುಗರು, ನಾವು ಕೇಳಿದ ಪ್ರಶ್ನಕ್ಕೆ ಚನ್ನಾಗಿ ಉತ್ತರ ಕೊಟ್ಟರು. ಮತ್ತು ಹೋದ ಸೂಕ್ಲ ಮಾಸ್ತರಗಿಂತಲೂ ಈಗಿನವರು ಸಾಲಿ ಸುಧಾರಿಸಿದ್ದಾರೆ." ಎಂದು ಶರಾ ಬರದ್ದಲ್ಲದೆ, ಉದಾರ ಮನಸ್ಸಿನಿಂದ ಹುಡುಗರಿಗೆ ಮುಂದೆ ವಿದ್ಯೆ ಕಲಿಯಲಿಕ್ಕೆ ಉತ್ತೇಜನ ಬರಬೇಕೆಂದು ಒಬ್ಬ ವಿದ್ಯಾರ್ಥಿಗೆ ಇಪ್ಪತ್ತಣೆ ಕ್ರಯದ ಒಂದು ಪುಸ್ತಕವನ್ನೂ, ಎಲ್ಲ ಹುಡುಗರಿಗೆ ನಾಲ್ಕು ಶೇರು ಮಿಠಾಯಿಯನ್ನೂ ಹಂಚಿದರು.

ಈ ಸಂಗತಿಯು ಪ್ರಸಿದ್ಧಿಸುವದಕ್ಕೆ ಯೋಗ್ಯವಿದ್ದದರಿಂದ ಬರೆದು ಕಳುಹಿಸಿದ್ದೇನೆ. ಪ್ರಕಟಿಸುವದು ಹೆತ್ತಾಗೀನವು ಇಂತಿ ವಿನ್ನಹ.

ಶಾಲಾ ಅಲಸಂಗಲ ತಾ. ಶಿಂದಗಿ
ತಾರೀಖು ೩೦।೭।೭೫

ಅಂಣಾಜಿ ನಾರಾಯಣ
ಗೋ. ಪೆ. ಮಾ. ಅ.

ಪೆಹಬ್ಬಾನ ರಾವಸಾಹೇಬ ದಕ್ಷಿಣಭಾಗದ ಕನ್ನ
ಡ ಶಾಲಾಪತ್ರಕದ ಎಡಿಟರರ ಚರಣಾರವಿಂದಗ
ಳಿಗೆ—

ಸೇವಕನು ಮಾಡುವಾ ವಿನ್ನಹವೇನಂದರೆ ಕೆಳಗೆ ಬ
ದ ನಾಲ್ಕು ಪಂಗ್ತಿಗಳನ್ನು ತಮ್ಮ ಮನೋಹರವಾದ ಮು
ಪತ್ರಕದಲ್ಲಿ ಛಾಪಿಸಿ ಪ್ರಸಿದ್ಧಿ ಸುವಿರೆಂದು ಮಹತ್ಕೃ
ಪೆಯನ್ನು ಧರಿಸಿದ್ದೇನೆ.

ಗಣಿತವು.

೯ ಗುಡಿಗಳಿದ್ದವು. ಆ ಗುಡಿಗಳಿಗೆ ಒಬ್ಬನೇ ಪೂಜಾರಿ
ಯು ಮೊದಲನೇ ಗುಡಿಗೆ ಹೋಗಬೇಕಾದರೆ ೫೦೦ರೂ
ಪಾಯಿಗಳನ್ನು ಕೊಟ್ಟು ಹೋಗಬೇಕು. ಅವನ ಕೈ
ಯೊಳಗೆ ಬಾಕಿ ಉಳಿದ ರುಪಾಯಿಗಳನ್ನು ಒಳಗೆ ಹೋ
ಗಿ ದೇವರಿಗೆ ತೋರಿಸಬೇಕು ಅವನ ಕೈಯೊಳಗೆ
ಇದ್ದಷ್ಟು ರೂಪಾಯಿಗಳನ್ನು ದೇವರು ಕೊಡಬೇಕು
ತಿರಿಗಿ ಬರಬೇಕಾದರೆ ಮತ್ತೂ ೨ನಕಿ ಎರಡನೇ ದೇ
ವರ ಗುಡಿಗೆ ಹೋಗಬೇಕಾದರೆ ಬಾಗಲು ಕಾಯುವವ
ನಿಗೆ ೫೦೦ ರೂಪಾಯಿಗಳನ್ನು ಕೊಟ್ಟು ಒಳಗೆ ಹೋಗ
ಬೇಕು. ಮತ್ತು ಇವನ ಕೈಯೊಳಗೆ ಬಾಕಿ ಉಳಿದ ರೂ
ಪಾಯಿಗಳು ದೇವರಿಗೆ ತೋರಿಸಬೇಕು. ಹೀಗೆ ಗುಡಿ
ಗಳಿಗೆ ಸಮನಾಗಿ ಮೂಡಿ ಬಂದನು. ಆದರೆ ಮನಿಂದ ಎ
ಷ್ಟು ರೂಪಾಯಿಗಳು ಎಷ್ಟ್ಟಹೇಳು? ಮತ್ತು ಇವನ ಅ
ಣ್ಣನು ತನ್ನ ತಪ್ಪನ್ನು ಹ್ಯಾಗೆ ಇಟ್ಟು ಹೋಗಿದ್ದನೋ
ಹಾಗೆಯೇ—ಅಣ್ಣನು ಇಟ್ಟು – ತಾನೂ ಒಯ್ದಿ ರೂಪಾಯಿ
ಗಳನ್ನು ಹಾಂಗೂ ತಮ್ಮನೂ ಒಯ್ದು ರೂಪಾಯಿಗಳನ್ನು

ಕೂಡಲೇ ತೆಗೆದುಕೊಂಡು ಬಂದನು. ಆದರೆ ಅದಿನ
ಒಯ್ದ ರೂಪಾಯಿಗಳು ಎಷ್ಟು? ಮತ್ತೆ ತಮ್ಮನು ಎ
ಯ್ದ ರೂಪಾಯಿಗಳು ಎಷ್ಟು ಹೇಳಿರಿ?

ಈ ಗಣಿತವು ನನಗೆ ಬಹಳ ಚಮತ್ಕಾರವಾಗಿ ಕಂಡ
ಬಂದಿರುತ್ತದೆ. ಆದರೆ ನಮ್ಮ ಪ್ರೀಯ ಬಾಂಧವರಾ
ಯಾವತ್ತು ಸ್ಕೂಲಮಾಸ್ತರರು ನನ್ನ ಮೇಲೆ ದಯವಿ
ಸಿ ಲೆಕ್ಕ ರೀತಿಯಾದ ಮಾಡಿ ಉತ್ತರ ಕಳುಹಿಸುವಿರೆ
ದು ಬಯಕೆಯನ್ನು ಧರಿಸುವೆನೆ. ಪತ್ರವಿಸ್ತಾರ ಆದ
ಕ್ಷಮೆಯನ್ನು ಬೇಡಿಕೊಳ್ಳುತ್ತೇನೆ. ಇಂತಿ ವಿನ್ನ
ನು. ಬಂಕಾಪೂರ } ಸಹಿ ಹಂಪಣ್ಣ ಸಂಗತ್ರಪ್ಪ ವ
ತಾ. ೧೦IV೭೫ಇ. } ಶಿಷ್ಯಕ ಬಂಕಾಪೂ.

ಮೆಹಬೂಬ ರಾವಸಾಹೇಬ ಪಟ್ಟಿಣಾಭಾಗವ ಕನ್ನ
ಡಶಾಲಾಪತ್ರಕವ ಎಡಿಟರರ ಚರಣಾರವಿಂದಕ್ಕೆ —

ಸೇವಕನು ಮಾಡುವಾ ವಿನ್ನಹವೇನಂದರೆ ಕೆಳಗೆ ಬ
ರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಮನೋಹರವಾದ
ಮಿತಪತ್ರಕದಲ್ಲಿ ಛಾಪಿಸಿ ಪ್ರಸಿದ್ಧಿಸುವಿರೆಂದು ಮಹ
ತ್ಕಾಂಕ್ಷೆಯನ್ನು ಧರಿಸಿದ್ದೇನೆ.

ವಿನಂತಿ ವಿಶೇಷ ನಮ್ಮ ಶಾಲೆಯ ಪರೀಕ್ಷೆಯನ್ನು
ಮೆಹಬೂಬನ ರಾವ ಬಹದ್ದೂರ ಡಿ. ಎ. ಇ. ಜಿಲ್ಲಾ ಧಾ
ವಾಡ ಇವರು ತೆಗೆದುಕೊಂಡು ಶಾಲೆಯ ಸ್ಥಿತಿಯ ವಿಷ
ಯಕ್ಕೆ ಬರೆದಿಟ್ಟ ಸಂಗತಿ ಏನಂದರೆ—ನಾವು ತಾರೀಖು
೫ನೇ ಮಾಹೆ ಫೇಬ್ರವರಿ ೧೮೭೫ ಇಸವಿ ದಿನವಾ
ರ ಶಾಲೆಯ ಪರೀಕ್ಷೆಯನ್ನು ತೆಗೆದುಕೊಂಡಿವಿ ಶಾಲೆ

ಯ ಸ್ಥಿತಿಯು ಬಹು ಚೆನ್ನಾಗಿದೆ ಹೆಡ್ ಮಾಸ್ತರರು ಮತ್ತು ಶಿಕ್ಷಕರು ತಂಮ ತಂಮ ಕೆಲಸಗಳನ್ನು ಚೆನ್ನಾಗಿ ಲಕ್ಷ ಪೂರ್ವಕ ಮಾಡಿವ್ಯಾರೆ. ಪರೀಕ್ಷೆ ಕೆಳಗೆ ಬರೆದ ಪ್ರಕಾರ ಆಗಿದೆ ಪರೀಕ್ಷೆಯಲ್ಲಿ ಅಂತು ನಿಂತ ಹುಡುಗರ ಸಂಖ್ಯೆ೪೪ ಅವರಲ್ಲಿ ಪಾಸ ಹುಡುಗರು ೪೧ ಈ ಪ್ರಕಾರ ಆಗಿದೆ. ಪತ್ರ ವಿಸ್ತಾರ ಆದ ಬಗ್ಗೆ ಕ್ಷಮೆಯನ್ನು ಬೇಡಿಕೊಳ್ಳುತ್ತೇನೆ ಇಂತಿ ವಿನಯ.

ಮುಕ್ಕಾಂ ಬಂಕಾಪೂರ
ತಾ॥೧೦।೪।೧೮೮೨ ಇಸ್ವಿ.

ವಿಷ್ಣು ಶಂಕರ ಬೋತೆ ಗೋ
ಕಾಂವಿ ಹೆಡ್ ಮಾಸ್ತರ ಶಾಲಾ
ಬಂಕಾಪೂರ.

ಮೇಹಬಾರ್ನ ರಾವಸಾಹೇಬ ದಕ್ಷಿಣಭಾಗ ಕಂನಡ ಶಾಲಾಪತ್ರ ಕರ್ತರ ಚರಣಕಮಲ ಸನ್ನಿಧಿಗೆ—

ಅಭ್ಯಾಧಾರಕನು ಮಾಡುವಾ ವಿನಂತಿ ಯೇನಂದರೆ ಸನ್ನ ೧೮೭೫ ಇಸವಿ ಜುಲಾಯಿ ತಿಂಗಳ ಮತಪತ್ರಿಕೆಯೊಳಗಿನ ಲಿಖ್ಯದ ರೀತಿವಾರ ಬರೆದಿರುತ್ತೇನೆ. ಮತ್ತೂ ನನ್ನ ಅಭ್ಯಾಸವು ಇನ್ನೂ ನೂತನವಿರುವಕಾರಣ ಎಫಾವುತಿಬುದ್ಧಿಯಿಂದಾ ಬರೆದಿರುವೆನು ಆದರೆ ಅದನ್ನು ತಮ್ಮ ಅಂದವಾದ ಮತಪತ್ರಿಕೆಯಲ್ಲಿ ಮುದ್ರಿಸಿ ಪ್ರಸಿದ್ಧ ಮಾಡುವಿರೆಂಬ ಬಹಳ ಅಪೇಕ್ಷೆಯನ್ನು ಧರಿಸಿದ್ದೇನೆ. ಒಂದು ಕೆರಿ ಕಾಮುಗಾರಿ ಯಾಗುವದಿತ್ತು ಅದರಲ್ಲಿ ದಿನಕ್ಕೆ ೧೦೦೦೦ ಸಾವಿರಾರ ರೂಪಾಯಿಗಳು ಬಹವಡಿಯಾಗುತ್ತಿದ್ದವು. ಮನುಷ್ಯರ ಸಂಬಳವು ಹ್ಯಾಗಂದರೆ ಇ ಮನುಷ್ಯನಿಗೆ ೫ ರು ಪಾಯಿ ಕೊಟ್ಟರೆ ೬೦ ದಿನಾ ಮತ್ತೊಬ್ಬನಿಗೆ ೬ ರೂಪಾ

ಯಿ ಕೊಟ್ಟರೆ ದಿನಾ ನಡಿಯುತ್ತ್ಯಾನೆ ೬ ರೂಪಾಯಿ ಕೊಟ್ಟರೆ ೨೦ ಮಂದಿ ದುಡಿಯುತ್ತ್ಹಾರೆ ಆದಲೆ ಹತ್ತು ಸಾವಿರ ರೂಪಾಯಿಗಳು ಆಗಬೇಕು ಮತ್ತು ಮಂದಿಯು ಅಷ್ಟೇ ಆಗಬೇಕು ಮತ್ತು ಪ್ರತ್ಯೇಕ ಜನರು ಎಷ್ಟು ಇದ್ದರು.

ಇದಕ್ಕೆ ರೀತಿಯು.

ಪ್ರ	ಮ	ಅ	
ಮ	ರು	ಮ	ರು
೬	೫	ಷ	= ೫ಷ
೬	೬	ಯ	= ಯ
೨೦	೬	ಜ್ಞ	= ಜ್ಞ ಮುಂದೆ ಬೆಳ್ಳುದ ಪ್ರ.

೨೦

ಷ + ಯ + ಜ್ಞ = ೬೦೦೦ ಮ.

೫ಷ + ಯ + ಜ್ಞ = ೬೦೦೦ ರು.

೨೦

$$ಷ = ೬೦೦೦ - ಯ - ಜ್ಞ = \frac{೨೦೦೦೦ - ೨೦ಯ - ಜ್ಞ}{೬೦೦}$$

೬೦೦೦೦೦ − ೬೦೦ಯ − ೬೦೦ಜ್ಞ = ೨೦೦೦೦ −

೨೦ಯ − ಜ್ಞ =

ಉತ್ತರವು.

$$ಯ = \frac{೪೦೦೦೦ + ೯೯ಜ್ಞ}{೪೦} = \begin{cases} ಜ್ಞ = ೪೦, ೬೬೦ \\ ಯ = ೯೯೦೬, \\ \quad ೯೪೦೨ \\ ಷ = ೬೯, ೨೪ \end{cases}$$

$$೪೦೦೦೦ = ೪೦ಯ - ೯೯ಜ್ಞ$$

ಯು ಸ್ಥಿತಿಯು ಬಹು ಚಂನಾಗಿಧೆ ಹೆಡ್ಡ ಮಾಸ್ತರರು ಮತ್ತು ಶೀಷ್ಟಕರು ತಂಮ ತಂಮ ಕೆಲಸಗಳನ್ನು ಚೆಂನಾಗಿ ಲಷ್ಯ ಪೂರ್ವಕ ಮಾಡಿವ್ಯಾ ರೆ. ಪರೀಕ್ಷೆ ಳಲ್ಲಿ ಬರೆದ ಪ್ರಕಾರ ಆಗಿಧೆ ಪರೀಕ್ಷೆಯಲ್ಲಿ ಅಂತು ನಿಂತ ಹುಡುಗರ ಸಂಖ್ಯೆ ೪೪ ಅವರಲ್ಲಿ ಪಾಸ ಹುಡುಗರು ೪೦ ಈ ಪ್ರಕಾರ ಆಗಿಧೆ. ಪತ್ರ ವಿಸ್ತಾರ ಆಪ ಬಗ್ಯೆ ಷ್ಟವೆಯನ್ನು ಬೇಡಿಕೊಳ್ಳು ತ್ತೇನೆ ಇಂತಿ ವಿಂನಹ.

ಮುಕ್ಕಾಂ ಬಂಕಾಪೂರ
ತಾ॥೧೦।೧೪।೭೫ ಇಸ್ವಿ.

ವಿಷ್ಣು ಶಂಕರ ಬೋಕೆ ಗೋಕಾಂವಿ ಹೆಡ್ಡ ಮಾಸ್ತರ ಶಾಲಾ ಬಂಕಾಪೂರ.

ಮೇಹಬ್ಬಾನ ರಾವಸಾಹೇಬ ದಕ್ಷಿಣಭಾಗ ಕಂನಡ ಶಾಲಾಪತ್ರ ಕರ್ತರ ಚರಣಕಮಲ ಸನ್ನಿಧಿಗೆ—

ಅಷ್ಟೋಧಾರಕನು ಮಾಡುವಾ ವಿನಂತಿ ಯೇನಂದರೆ ನನ್ನ ೧೪೭೫ ಇಸವಿ ಜುಲಾಯಿ ತಿಂಗಳ ಮತಪತ್ರಿಕೆಯೊಳಗಿನ ಲೆಖ್ಖಿದ ರೀತಿವಾರ ಬರೆದಿರುತ್ತೇನೆ. ಮತ್ತೂ ನನ್ನ ಅಭ್ಯಾಸವು ಇನ್ನೂ ನೂತನವಿರುವಕಾರಣ ಎಥಾಮತಿಬುದ್ಧಿಯಿಂದಾ ಬರೆದಿರುವೆನು ಆಪರೆ ಅದನ್ನು ತಪ್ಪು ಅಂದವಾದ ಮತಪತ್ರಿಕೆಯಲ್ಲಿ ಮುದ್ರಿಸಿ ಪ್ರಸಿದ್ಧ ಮಾಡುವಿರೆಂದು ಬಹಳ ಅಪೇಕ್ಷೆಯನ್ನು ಧರಿಸಿದ್ದೇನೆ. ಒಂದು ಕೆರಿ ಕಾ ಮಗಾರಿ ಯಾಗುವದಿತ್ತು ಅದರಲ್ಲಿ ದಿನಕ್ಕೆ ೧೦೦೦೦ ಸಾವಿರಾರ ರೂಪಾಯಿಗಳು ಬಹವಡಿಯಾಗುತ್ತಿದ್ದವು. ಮನುಷ್ಯರ ಸಂಬಳವು ಡ್ಯಾಗಂದರೆ ಇ ಮನುಷ್ಯನಿಗೆ ೫ ರೂಪಾಯಿ ಕೊಟ್ಟರೆ ಒಂದು ದಿನಾ ಮತ್ತೊಬ್ಬನಿಗೆ ೫ ರೂಪಾ

ಯಿ ಕೊಟ್ಟರೆ ದಿನಾ ನಡಿಯುತ್ತ್ಯಾನೆ ಇ ರೂಪಾಯಿ ಕೊಟ್ಟರೆ ೨೦ ಮಂದಿ ದುಡಿಯುತ್ತ್ಯಾರೆ ಆದರೆ ಹತ್ತು ಸಾವಿರ ರೂಪಾಯಿಗಳು ಆಗಬೇಕು ಮತ್ತು ಮಂದಿಯು ಅಷ್ಟೇ ಆಗಬೇಕು ಮತ್ತು ಪ್ರತ್ಯೇಕ ಜನರು ಎಷ್ಟು ಇದ್ದರು.

ಇದಕ್ಕೆ ರೀತಿಯು.

ಪ್ರ	ಮ	ಅ	
ಮ	ರ	ಮ	ರ
ಇ	೫	ಷ	= ೫ಷ
ಇ	ಇ	ಯ	= ಯ
೨೦	ಇ	ಜ್ಞ	= ಜ್ಞ ಮುಂದೆ ಲೆಖ್ಖದ ಪ್ರ.

೨೦

ಷ + ಯ + ಜ್ಞ = ೧೦೦೦೦ ಮ.

೫ಷ + ಯ + ಜ್ಞ = ೧೦೦೦೦ ರ.

೨೦

$$ಷ = ೧೦೦೦೦ - ಯ - ಜ್ಞ = \frac{೨೦೦೦೦೦ - ೨೦ಯ - ಜ್ಞ}{೧೦೦}$$

೧೦೦೦೦೦ − ೧೦೦ಯ − ೧೦೦ಜ್ಞ = ೨೦೦೦೦೦ −

೨೦ಯ − ಜ್ಞ =

ಉತ್ತರವು.

$$ಯ = \frac{೪೦೦೦೦ + ೯೯ಜ್ಞ}{೪೦} = \begin{cases} ಜ್ಞ = ೪೦, ೧೬೦ \\ ಯ = ೯೯೦೫, \\ \quad ೯೪೦೨ \\ ಷ = ೧೯, ೨೪ \end{cases}$$

$$೪೦೦೦೦ = ೪೦ಯ - ೯೯ಜ್ಞ$$

ಈ ಲೆಖ್ಖಕ್ಕೆ ಇತ್ಯಾದಿ ಅನಂತ ಉತ್ತರಗಳು ಆಗುತ್ತವೆ.

ಗುರನಾಥ ಕಾಸಿರಾವ ದೇಸಾಯಿ
ತಡಸ ಶಾಲೆಯ ವಿದ್ಯಾರ್ಥಿ.

ರಾ॥ ರಾ॥ ಶಾಲಾಪತ್ರ ಕರ್ತ ಎಡಿಟರರಿಗೆ—

ವಿ. ವಿ. ತಮ್ಮ ಕರಕಮಲದಲ್ಲುದ್ಭವಿಸುವ ಪುಸ್ತಕದಲ್ಲಿ ಈ ನಾಲ್ಕು ಪಂಕ್ತಿಗಳಿಗೆ ಸ್ಥಳಬೊರಿಯುವದೆಂದು ಕೋರುತ್ತೇನೆ—

(ಗಣಿತ)

೧ ನೇ ಉದಾಹರಣೆ. ಘನಪೂಟಿನ ವ್ಯಾಸಕ್ಕೆ ಎಷ್ಟು ಇಂಚುಗಳು? ಅದಿರಿದಿರಾದ ಒಂದು ಅಂಚೆಸಿಂದ ಮತ್ತೊಂದು ಅಂಚಿಗೆ ಮಾಡುವ ಚತುರಸ್ರವು. ಎಷ್ಟು ಚಚ್ಚೌಕ ಇಂಚುಗಳು?

ಈ ಲೆಖ್ಖವನ್ನು ನನ್ನ ಪ್ರೀಯ ಬಾಂಧವರಾದ ಮಾಸ್ತರ ಜನರು ರೀತಿಸಹಿತವಾಗಿ ಬರೆದು ನನ್ನ ಮನೋರಥವನ್ನು ಈಡೇರಿಸುವರೆಂದು ನಂಬುತ್ತೇನೆ.

ತಾ.೬೪।೧೧।೬೫ ಇಸವಿ. } ರಾಮಚಂದ್ರ
ಮುಕ್ಕಾಂ ಐರಣಿ ತ್ರಾ॥ ರಾಣೇಬೆ } ನರಸೋಪಂ
ನ್ನೂರ ಜಿಲ್ಲಾ ಧಾರವಾಡ. } ಡ್ಡಮಾಸ್ತರ.

ಶಾಲಾಪತ್ರಕವು.

ಪುಸ್ತಕ ೧೧] [ಸಂಚಿಕೆ ೬

ತಾರೀಖು ೩೫ ನೇ ಮಾಹೆ ಸಪ್ಟಂಬರ ೧೮೭೫.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ಧಾರವಾಡ ಟ್ರೇನಿಂಗಕಾಲೇಜದ ಮೊದಲನೇ ಅಸಿಷ್ಟಾಂಟಾದ ರಾ. ರಾ. ಪ್ರಭಾಕರ ಸುಭಾನಜಿ ವಿಜ್ಯಾಪೂರ ಇವರನ್ನು ಬೆಳಗಾವ ಮರಾಠೀ ಶಾಲೆಯ ಹೆಡ್‌ಮಾಸ್ತರ ಕೆಲಸಕ್ಕೆ ನೇಮಿಸಿ ಅಲ್ಲಿಯ ಹೆಡ್‌ಮಾಸ್ತರರಾದ ರಾ. ರಾ. ನಾನಾದಾತಾರ ಯೆಂಬವರನ್ನು ಸದರ ಕಾಲೇಜದಲ್ಲಿ ಏನೇ ಅಸಿಷ್ಟಾಂಟ ಮಾಸ್ತರ ಕೆಲಸಕ್ಕೆ ನೇಮಿಸಿರುತ್ತಾರೆಂತ ಕೇಳುತ್ತೇವೆ. ಇದಲ್ಲದೆ ಸ್ವಲ್ಪ ದಿವಸಗಳಲ್ಲಿಯೇ ಹೆಚ್ಚಿಗೆ ವರ್ಗಾವರ್ಗಿಗಳು ಆಗತಕ್ಕವುಗಳುಂಟೆಂದು ಸಹ ಜನವಾರ್ತೆಯುಂಟು.

ಕನ್ನಡ ತಾನ್ಸಲೇಟರರು ಮೊಂದು ವರ್ಷದ ಸಲೋರ್ ರಜೆಯನ್ನು ಈ ತಿಂಗಳಲ್ಲಿ ತಕ್ಕೊಳ್ಳತಕ್ಕವರಿ

ದ್ದಾರೆ. ಅವರ ಆಫೀಸು ಬಹುತೆರವಾಗಿ ಬೆಳಗಾವಿಗೆ ಹೋಗುವದು. ಬೆಳಗಾವ ಜೆಲ್ಲೆಯ ಡಿ. ಇನಸ್ಪೆಕ್ಟರರು ಸದರ ತ್ರಾನ್ಸಲೇಟರವರ ಕೆಲಸಕ್ಕೆ ಅಗಟಿಂಗ ಮೊಕರರಾಗಿರುತ್ತಾರೆಂತ ಕೇಳುತ್ತೇವೆ.

ವಿದ್ಯಾಖಾತೆಯ ಡಾಯಿರೆಕ್ಟರರಾದ ಬಾಟಫೀಲ್ಡ ಸಾಹೇಬ ಬಹಾದ್ದೂರವರು ಶಾಲೆಗಳ ಸಂಬಂಧವಾಗಿ ಕೆಲವು ಹೊಸ ನೀರುವುಗಳನ್ನು ಮಾಡುವದಕ್ಕಾಗಿ ಪುಣೆಯಲ್ಲಿ ಒಂದು ಸಭೆಯನ್ನು ಕೂಡಿಸಿದ್ದರು. ಆ ಸಭೆಗೆ ಧಾರವಾಡದ ಡಿ. ಎ. ಇನಸ್ಪೆಕ್ಟರರು ಹೋಗಿದ್ದರು. ಇನ್ನು ಮುಂದೆ ಡಿಪುಟಿ ಇನಸ್ಪೆಕ್ಟರರು ಯಾವದೊಂದು ಸ್ಥಳದಲ್ಲಿ ಮೂರುವರ್ಷಕ್ಕಿಂತ ಹೆಚ್ಚು ಇರಲಾಗದೆಂಬ ನಿಯಮವು ಬೇಗ ಜಾರೀ ಆಗುವದೆಂದು ವರ್ತಮಾನ ಪತ್ರಗಳಿಂದ ತಿಳಿಯುತ್ತದೆ.

ಶಿವುದಾಬಾದದಲ್ಲಿರುವ ಹೆಣ್ಣುಹುಡುಗಿಯರ ಟ್ರೇನಿಂಗಕಾಲೇಜ ನೋಡುವದಕ್ಕಾಗಿ ಮಿಸ್ ಮೇರಿ ಯೆಂಬ ಪ್ರಖ್ಯಾತ ಥೊರೆಸಾನಿಯವರು ಬರುವ ಅಕ್ಟೋಬರ ತಿಂಗಳಲ್ಲಿ ಅವುಮಾಬಾದಕ್ಕೆ ಹೋಗತಕ್ಕವರಿದ್ದಾರೆಂದು ತಿಳಿದು ಬಂದದೆ.

ಹೊಸದಾಗಿ ದಿವಾಣೀ ಖಾತೆಯಲ್ಲಿ ಯಿಷ್ಟೀ ಮುಂದಿ ಹೆಂಗಸರನ್ನು ಬಿಲೀಫ ಕೆಲಸಕ್ಕೆ ನೇಮಿಸಿರುತ್ತಾರೆಂದು ಕೇಳುತ್ತೇವೆ. ಹೆಂಗಸರ ಮೈ ಮೇಲಿನ ವಸ್ತ್ರ ಬ

ಳವೆಗಳನ್ನು ಹಬ್ಬೀ ಮಾಡಬೇಕಾದರೆ, ಅವುಗಳನ್ನು ತೆ
ದುಕೊಳ್ಳುವದಕ್ಕೆ ಗಂಡಸರಿರುವದು ಸರಿಯಲ್ಲೆಂದು
ಕೆಲವರ ಮತವುಂಟು. ಆದರೆ ಇದೊಂದು ವಿದ್ಯಾಸುಧಾರ
ಕೆಯ ಸುದ್ದಿಯೆಂತಲೂ, ಹೆಂಗಸರು ವಿದ್ಯಾಕಲಿತದಕ್ಕೆ ಒ
ಳ್ಳೇ ಪರಿಣಾಮವುಂಟಾಯಿತೆಂತಲೂ ತಿಳಿಯತಕ್ಕದ್ದು.

ಮುಂಬಯಿ ಕಾಲೇಜಿನೊಳಗಿನ ವಿದ್ಯಾರ್ಥಿಗಳು ಕೆ
ಸ್ಪಿಯರ ಯೆಂಬವರ ನಾಟಕವನ್ನು ಮಾಡಿತೋರಿಸಿದ
ರು. ಅವರು ಹೋದ ವರ್ಷ ನಾಟಕ ಮಾಡಲಿಲ್ಲೆಂದು
ಹೇಳಿ, ಅವರಿಗೆ ಉತ್ತೇಜನ ಕೊಡುವದಕ್ಕಾಗಿ ಮುಂಬ
ಯಿಯೊಳಗಿನ ಸರ್ಕಾವಸಜೆ ಜಾಹಾಂಗೀರ ಯೆಂಬ ಘನ
ಸೀ ಗೃಹಸ್ಥರು ೫೦೦ರೂಪಾಯಿ ಬಹ್ಮೀಸು ಕೊಟ್ಟರೆ
ಂದು ಕೇಳುತ್ತೇವೆ. ಈ ವಿದ್ಯಾರ್ಥಿಗಳು ಗ್ರಾಂಟ
ರೋಡ ಥಿಯೇಟರ ಯೆಂಬ ನಾಟಕಗೃಹದಲ್ಲಿ ಸುಮಾರು
ಹದಿನೈದು ದಿವಸಗಳ ಹಿಂದೆ ಮುದ್ರಾರಾಕ್ಷಸವೆಂಬ ನಾಟ
ಕವನ್ನು ಮಾಡಿ ತೋರಿಸಿದರು. ಮುಂದೆ ಬೇಗ ಹೊ
ರಾಹನ ಕೋಕರಸವೆಂಬ ನಾಟಕವನ್ನು ಮಾಡಿ ತೋರಿ
ಸತಕ್ಕವರಿದ್ದಾರೆಂದು ತಿಳಿವವೆ.

ವಿಲಾಯತಿಯೊಳಗಿನ ಯೂನತ್ವ ಜನರ ಪೈಂದುವ
ರ್ಷದ ಆದಾಯವು ೧೯೦೦ಕೋಟಿಅವೆಯೆಂದು ಅಂದಾಜು
ುಂಟು. ಅದರಿಂದ ಪ್ರತಿ ಒಬ್ಬ ಮನುಷ್ಯನ ಆದಾಯವು
ಾಸರಿ ೪೦೦ಬೀಳುತ್ತದೆ. ಹಿಂದುಸ್ಥಾನದ ಜನರ ಆದಾ
ುವು ೪೦೦ಕೋಟಿ ಅವೆ. ಅದರಿಂದ ವರ್ಷಕ್ಕೆ ಪ್ರತಿ ಒ

ಬ್ಬ ಮನುಷ್ಯನಿಗೆ ಸರಾಸರಿ ಇಪ್ಪತ್ತು ರೂಪಾಯಿ ಬೀಳುತ್ತದೆ.

ಭಯಂಕರವಾದ ಧರಣೀ ಕಂಪವು—ದಕ್ಷಿಣ ಅಮೇರಿಕದಲ್ಲಿ ಕೋಲಂಬಿಯಾ ಪ್ರಾಂತದ ಕುಕ್ಕುಟವೆಂಬ ಗ್ರಾಮದಲ್ಲಿ ತಾರೀಖು ೧೮ ಮಾಹೆ ಮೇ ದಿವಸ ಧರಣೀಕಂಪವಾಯಿತು. ಅದರಿಂದ ಅಲ್ಲಿಯ ನಿವಾಸಿಗಳಿಗೆ ಬಹಳ ಕೇಡು ಉಂಟಾಯಿತು. ಮತ್ತೂ ಐದು ಬೇರೆ ಊರುಗಳಿಗೆ ಸ್ವಲ್ಪ ಹೆಚ್ಚು ಕಡಿಮೆ ಕೇಡು ಒದಗಿತು ಒಟ್ಟು ೪೫೦೦೦ಜನ ವಸ್ತಿಯಲ್ಲಿ ೧೬೦೦೦ ಜನರು ಮಡಿದರು. ಉಳಿದವರಿಗೆ ಮನೆಮಾರು ಇಲ್ಲದ ಹಾಗಾಯಿತು. ಈ ಧರಣೀಕಂಪವಾದ ಕೂಡಲೇ ಜ್ವಲ್ಪರ್ವತದ ಹೊಗೆ ಯಂಥದೊಂದು ಪ್ರಕಾರದ ಹೊಗೆ ತುಂಬಿಕೊಂಡಿತೆಂದು ತಿಳಿದು ಬರುತ್ತದೆ.

ತಣ್ಣೀರು, ಹವೆ ಇವೆರಡರ ಉಪಯೋಗದಿಂದ ಉಗಿಯು ಹಾಗೇ ಕೆಲಸ ನಡಿಯುವದೊಂದು ಯುಕ್ತಿಯನ್ನು ಫಿಲೆಡೆಲ್ಫಿಯಾ ಪಟ್ಟಣದಲ್ಲಿ, ಕೆಲಿ ಯೆಂಬ ಮನುಷ್ಯನು ತೆಗೆದಿರುತ್ತಾನೆ.

ಜಪಾನದಲ್ಲಿ ಈಗ ಸುಮಾರು ೪೦೦ಸರಕಾರೀ ಶಾಲೆಗಳುಂಟು. ಸನ್ನ ೧೮೭೫ನೇ ಇಸವಿಯಲ್ಲಿ ೪ಹೊಸನಾರ್ಮಲಸ್ಕೂಲಗಳು ಸ್ಥಾಪಿಸಲ್ಪಟ್ಟವು. ಮೊದಲಿಗೆ ಯೆರಡು ಇದ್ದದರಿಂದ ಒಟ್ಟಿಗೆ ೬ಆದವು. ಸರಕಾರೀ ಶಾಲೆಗಳ

ಲ್ಲಿ ವಿದ್ಯಾರ್ಥಿಗಳು ಕಲಿಯಲಿಕ್ಕೆ ಬೇಕೆಂದು ಬಲಾತ್ಕಾರ ಉಂಟು.

ಸನ್ನವಿಶೇಷನೇ ಇಸವಿಯ ಅಗಸ್ತ ತಿಂಗಳಲ್ಲಿ ಇಂಗ್ಲಿಷ ವಿದ್ಯಾಖಾತೆಯಿಂದ ದೇಶಸ್ಥಿತಿ ರೀತಿಯ ಪ್ರಕರಣ ಪರೀಕ್ಷೆಯ ಬಗ್ಗೆ ಹೊರಟ ಪೊಟ್ಟು ಸಾರಾಂಶ ರಿಪೋರ್ಟದ ಮೇಲಿಂದ ಪರೀಕ್ಷಿಸಲ್ಪಟ್ಟ ಇಂಗ್ಲಿಷ ಶಾಲೆಗಳಲ್ಲಿ ಇಂಗ್ಲಿಷ ಶಾಲೆಗಳೊಳಗ ಮಾತ್ರ ಕ್ರಮವಾದ ಗರಡೀ ಸಾಧಕವನ್ನು ಕಲಿಸಿರುತ್ತಾರೆಂದು ಕಂಡು ಬರುತ್ತದೆ.

ಸರಕಾರೀ ನೌಕರರು ಖಾಪಖಾನೆಗಳಲ್ಲಿಯೂ ವರ್ತಮಾನ ಪತ್ರಗಳಲ್ಲಿಯೂ ಯಿಪ್ಪ ಮಟ್ಟಿಗೆ ಸಂಬಂಧವಿಡಬಹುದೆಂಬ ಬಗ್ಗೆ ಇತ್ತಲಾಗಿ ಬಹಳ ವಾದ ವಿವಾದ ನಡೆದದರಿಂದ ನೇಕನಾಮದಾರ ಗವ್ರ್ನರ ಜನರಲ್ ಇನ್ ಕೌನ್ಸಿಲ್ಲಿನವರು ಅದರ ಸಂಬಂಧವಾಗಿ ಈಗ ಜಾರೀ ಇರುವ ನಾಲ್ಕು ನಿಯಮಗಳು ಯೆಲ್ಲರಿಗೂ ಮತ್ತೊಮ್ಮೆ ಚನ್ನಾಗಿ ತಿಳಿಯ ಬೇಕೆಂಬದಾಗಿ ಅವುಗಳನ್ನು ಪ್ರಸಿದ್ಧಿಸಿರುತ್ತಾರೆ. ●

SELF HELP.

ತನಗೆ ತಾನೇ ನೆರವಾಗುವದು.

ಸಾಕಬೇಕೆಂಬ ಅಭಿಪ್ರಾಯದವನಿದ್ದನು. ,,ನನಗೆ ಗೊತ್ತಿಲ್ಲ,'' ,,ನನ್ನಿಂದಾಗದು,'' ,,ಇದು ಅಸಂಭಾವ್ಯವು,''

ಯುಂಬ ನುಡಿಗಳನ್ನು ತಿರಸ್ಕರಿಸಿದಪ್ಪ ಅವನು ಬೇರ
ಯಾವ ಮಾತನ್ನು ತಿರಸ್ಕರಿಸುತ್ತಿದ್ದಿಲ್ಲ. ,,ಕಲಿ! ಮಾ
ಡು! ಯತ್ನಿಸು!" ಯೆಂದು ಅವನು ಕೂಗುವನು. ಆ
ವನ ಚರಿತ್ರೆಯು ಬರಿದವನು ಹೇಳಿದ್ದೇನೆಂದರೆ, ಮನಸಿನ
ಯಾವ ಶಕ್ತಿಗಳ ಅಂಕುರಗಳು ಯೆಲ್ಲ ಮನುಷ್ಯರಲ್ಲಿ
ಯೂ ಇರುತ್ತವೆಯೋ, ಅವುಗಳನ್ನು ಚನ್ನಾಗಿ ಜಾಗ್ರತೆ
ಪಡಿಸಿ ಪ್ರಯೋಗಿಸಲು ಯೇನು ಫಲವಾಗುತ್ತದೆಂಬದರ
ಮೇಲಾದ ಉದಾಹರಣೆಯು ಅವನಿಂದಪ್ಪುಂಟಾಗಿದೆ.

,,ದೃಢತರವಾದ ನಿಶ್ಚಯವೇ ಅತಿ ನಿಜವಾದ ಜ್ಞಾನ"
ವೆಂದು ನೇಪ್ಪೋಲಿಯನ್ನನು ಆಗಾಗ್ಗೆ ಅನ್ನುವನು. ಇ
ವನಂಥ ಬಿಸ್ಮ ಜನರ ಚರಿತ್ರೆಗಳಿಂದ ತಿಳಿಯುವದಕ್ಕಿಂತ
ಹೆಚ್ಚಾಗಿ ಇವನ ಚರಿತ್ರೆಯಿಂದ ಬಿಸ್ಮ ಬಲಿಷ್ಠವೂ, ನಿಶ್ಚಯ
ಕವೂ ಆದ ಇಚ್ಛೆಯಿಂದ ಯೇನು ಪರಿಣಮಿಸುತ್ತದೆಂಬ
ದು ವ್ಯಕ್ತವಾಗಿ ತಿಳಿಯುತ್ತದೆ. ಅವನು ತನ್ನ ಶಾರೀರ
ಮಾನಸಿಕಶಕ್ತಿಯನ್ನೆಲ್ಲ ತನ್ನ ಕೆಲಸದಲ್ಲಿಯೇ ವೆಚ್ಚಮಾ
ಡಿದನು. ದುರ್ಬಲರಾದ ಅರಸರೂ, ಅವರ ಪ್ರಜೆಗಳೂ,
ಒಬ್ಬರ ಹಿಂದೆ ಒಬ್ಬರು ಅವನ ಯೆದುರಿನಲ್ಲಿ ಪತನ
ಹೊಂದುತ್ತ ಹೋದರು. ಅವನ ದಂಡಿನ ಮಾರ್ಗದಲ್ಲಿ ಆ
ಲ್ಪಸವೆಂಬ ದೊಡ್ಡ ಪರ್ವತವುಂಟೆಂದು ಯಾರೋ ಅನ್ನ
ಲಾಗಿ ಅವನು ,,ಆಲ್ಪಸವು ನಿಲ್ಲಲಿಕ್ಕಿಲ್ಲ," ಯೆಂದು ನು
ಡಿದು, ಸ್ಪೂರ್ವದಲ್ಲಿ ಮನುಷ್ಯ ಸಂಚಾರವಿಲ್ಲದಂಥ ಪ್ರ
ದೇಶದೊಳಗಿಂದ ಸಿಂಪ್ಲನ್ನೆಂಬ ಶಿಖರದ ಮೇಲಿಂದ ಹೋ
ಗುವ ಮಾರ್ಗವನ್ನು ಕಟ್ಟಿಸಿದನು. ,,ಅಸಂಭಾವ್ಯವೆಂಬ
ಕಬ್ಬಿಣ ಮೂರ್ಖಜನರ ಕೋಶಗಳಲ್ಲಿ ಮಾತ್ರ ವುಂಟಿಂ"

ದು ಅವನು ಅನ್ನುವನು. ಅವನು ಪಟ್ಟ ಕ್ರಮವು ಅತಿ ಭಯಂಕರವಾದದ್ದೇ ಸರಿ; ಒಂದೊಂದು ಸಮಯದಲ್ಲಿ ನಾಲ್ಕು ಮಂದಿ ಪತ್ರ ಲೇಖಕರನ್ನು ಒಮ್ಮೇಲೆ ಕೆಲಸಕ್ಕೆ ಕೂಡ್ರಿಸಿ ದಣಿಸುವನು. ಅವನು ಯಾರನ್ನೂ, ತನ್ನನ್ನು ಸಹ, ಶ್ರಮದಿಂದ ಉಳಿಸುತ್ತಿದ್ದಿಲ್ಲ. ಅವನನ್ನು ನೋಡಿ ಬೇರೆ ಜನರಲ್ಲಿ ಸಹ ಆವೇಶವು ತುಂಬಿಕೊಂಡಿತು. "ನನ್ನ ದಳವಾಯಿಗಳನ್ನು ನಾನು ಕೆಸರಿನಿಂದ ಮಾಡಿದೆನೆಂ"ದು ಅವನು ಅನ್ನುವನು. ಆದರೆ ಇವೆಲ್ಲ ನೆಪ್ಪೀನು ಪ್ರಯೋಜನದ್ದಾಗಲಿಲ್ಲ. ಯಾಕಂದರೆ ಅತಿ ಪ್ರಬಲವಾದ ಅವನ ಸ್ವಾರ್ಥ ಬುದ್ಧಿಯಿಂದಲೇ ಅವನ ಸ್ವಂತ ನಾಶವೂ, ಫ್ರಾನ್ಸ್‌ದೇಶದ ನಾಶವೂ ಒದಗಿತು; ಅವನ ಹಿಂದೆ ಫ್ರಾನ್ಸವು ಅರಸು ಸತ್ತು ಹಾವಿಳಿಗೆ ಒಳಗಾಯಿತು. ಪರರಿಗ ಕಲ್ಯಾಣವಾಗಬೇಕೆಂಬ ಬುದ್ಧಿ ಇಲ್ಲದಿದ್ದರೆ, ಎಷ್ಟು ಜಾಗ್ರತೆಯಿಂದ ಅಧಿಕಾರ ನಡಿಸಿದಾಗ್ಯೂ, ಅದರಿಂದ ಅದನ್ನು ನಡಿಸುವವನಿಗೂ ಅದಕ್ಕೆ ಒಳಗಾದವರಿಗೂ ಹಾನಿಮಾತ್ರ ಉಂಟಾಗುತ್ತದೆಂಬ ನಿಯಮವು ಅವನ ಚರಿತ್ರೆಯಿಂದ ತಿಳಿದುಬಂದಿದೆ. ಅದಲ್ಲದೆ ಸದ್ಬುದ್ಧಿಯೆ ಪ್ರೊತಾಗಿ ಜ್ಞಾನವು ನಾಶದ ಮೂಲತತ್ವವಾಗಿರುತ್ತದೆಂದು ಸಹ ಅವನ ಚರಿತ್ರೆಯಿಂದ ತಿಳಿಯುತ್ತದೆ.

ನಮ್ಮ ಸ್ವಂತ * ವೇಲಿಂಗಟನ್ನನು ಇವನಿಗಿಂತ ಬಹು ದೊಡ್ಡ ಮನುಷ್ಯನಿದ್ದನು. ನೇಪೋಲಿಯನ್ನನಿಗಿಂತ ಅವನಲ್ಲಿ ನಿಶ್ಚಯವೂ, ಸ್ಥಿರತ್ವವೂ, ಆಗ್ರಹವೂ ಕಡಿಮೆ

---

* ಇವನು ನೇಪೋಲಿಯನನ್ನು ಸನ್ನ ಎಲಾಸ್ ನೇ ಪರ್ವ ಗೆದ್ದು, ಯೆಲ್ಲ ಯುರೋಪ ಖಂಡದ ದುಃಖವನ್ನು ಪರಿಹರಿಸಿದನು.

ಯಿಲ್ಲದ, ಆತ್ಮಸಂಶಯವಿಮನವೂ, ಪ್ರಾಮಾಣಿಕತನವೂ, ಸಿಹುವಾದ ದೇಶಾಭಿಮಾನವೂ ನಿಹಳ ಹೆಚ್ಚಿತ್ತು. "ಘನ ತ"ಯೇ ನೇಪೋಲಿಯನ್ನನ ಅಭೀಷ್ಟವಾಗಿತ್ತು; ಆದರೆ ನೆಲ್ಸನ್ನನಂತೆ ವೇಲಿಂಗಟನ್ನನ ಮುಖದಲ್ಲಿ ಸರ್ವದಾ "ನಮ್ಮ ಕರ್ತವ್ಯಕರ್ಮ" ವೆಂಬ ಶಬ್ದವೇ ಇರುತ್ತಿತ್ತು ವೇಲಿಂಗಟನ್ನನು ಬರಿದ ಪತ್ರಗಳಲ್ಲಿ ಘನತೆಯೆಂಬ ಶಬ್ದವು ಯೆಲ್ಲಿಯೂ, ಇಲ್ಲೆಂತಲೂ, ಕರ್ತವ್ಯಕರ್ಮವೆಂಬ ಶಬ್ದವು ಪುನಃ ಪುನಃ ಬರುತ್ತಿದ್ದಾಗ್ಯೂ, ಅದರ ಸಂಗಡ ಗರ್ವದ ನುಡಿಗಳು ಯೆಲ್ಲಿಯೂ ಕಾಣಿಸುವದಿಲ್ಲೆಂತಲೂ ಹೇಳುತ್ತಾರೆ. ಯಿಪ್ಪಟ್ಟ ದೊಡ್ಡ ಸಂಕಟವು ಬಂದಾಗ್ಯೂ, ವೇಲಿಂಗಟನ್ನನ ಬುದ್ಧಿಗೆ ಭ್ರಂಶವು, ಅಥವಾ ಅವನ ಮನಸ್ಸಿಗೆ ಹೆದರಿಕೆಯು ಬರುತ್ತಿದ್ದಿಲ್ಲ; ಒದಗಿದ ಕಷ್ಟಕ್ಕೆ ಸರಿಯಾಗಿ ಅವನ ಶಕ್ತಿಯು ತಪ್ಪದೆ ಬೆಳೆಯುತ್ತಿತ್ತು – ಯುದ್ಧೋಪದಲ್ಲಿ ನಡಿದ ಕಾಳಗಗಳಲ್ಲಿ ಮುಂಟಾದ ಅಪರಮಿತ ಸಂಕಟಗಳಲ್ಲಿಯೂ, ಬುದ್ಧಿಗೆ ಹುಚ್ಚುಹಿಡಿಸುವಂಥ ಪೀಡೆಯಲ್ಲಿಯೂ, ಅವನು ಯಿಪ್ಪಟ್ಟ ಶಾಂತಿಯಿಂದಲೂ, ಸ್ಥಿರ ಮನಿಸ್ಸಿನಿಂದಲೂ, ನಿಶ್ಚಯದಿಂದಲೂ, ನಡಿದನೆಂಬದು ಇತಿಹಾಸದಲ್ಲಿ ಸಿಕ್ಕಬಹುದಾದ ಅತಿ ಘನವಾದ ಸಂಗತಿಯೆಂದು ಹೇಳಬಹುದು. ಸ್ಪೇನದೇಶದಲ್ಲಿರುವಾಗ ವೇಲಿಂಗಟನ್ನನು ತನ್ನ ದಳವಾಯಿತನದ ಬುದ್ಧಿಕೌಶಲ್ಯವನ್ನು ತೋರಿಸಿದ್ದಲ್ಲದೆ, ಅತಿ ವಿಸ್ತಾರವಾದ ರಾಜ್ಯದಾಡಳತೆಯ ಜ್ಞಾನವನ್ನು ಸಹ ವ್ಯಕ್ತಪಡಿಸಿದನು. ಅವನು ಸ್ವಾಭಾವಿಕವಾಗಿ ಬಹು ಶಿಷ್ಟನವನಾದಾಗ್ಯೂ, ತಾನು ಹ್ಯಾಗೆ ನಡಿಯ ಬೇಕೆಂಬದನ್ನು ಚನ್ನಾಗಿ ತಿಳಿದು

ಂಡವನಾದದರಿಂದ ಆ ಶಿಷ್ಟನ್ನು ಜಗ್ಗಿ ಹಿಡಿಯುತ್ತಿದ್ದ
ು. ಅವನ ಹತ್ತರ ಇರುವವರು ಅವನ ತಾಳ್ಮೆಗೆ ಕಡೆಯಿ
ೆಂದು ನೆನಸುವರು. ಅವನ ಘನವಾದ ಯೋಗ್ಯತೆಯು,
ಭಿಮಾನ, ಲೋಭ ಮುಂತಾದ ಕೀಳು ಗುಣಗಳಿಂದ
ಿಂದೂ ಮಲಿನವಾಗಲಿಲ್ಲ. ಅವನು ಅತಿಶಯವಾಗಿ ಒಂ
ೀ ಸ್ವಭಾವವುಳ್ಳವನಾದಾಗ್ಯೂ, ವಿಧವಿಧದ ಗುಣಗಳನ್ನು
ಕ್ತಪಡಿಸುತ್ತಿದ್ದನು. ಅವನು ದಳವಾಯಿತನದಲ್ಲಿ ನೇ
ೋಲಿಯನ್ನನಿಗೆ ಸರಿಯಾದವನು; ಚಾರುಕುತನ, ಉ
ಂತೆ ಧೈರ್ಯಗಳಲ್ಲಿ ಕ್ಲೈವನಿಗೆ ಸರಿಯಾದನನು; ರಾ
ಕಾರಭಾರದಲ್ಲಿ, ಕ್ರಾಮುವೆಲ್ಲನಿಗೆ ಸರಿಯಾದವನು; ದೊ
ಮನಸ್ಸಿನಲ್ಲಿಯೂ, ನಿಷ್ಕಲಂಕತ್ವದಲ್ಲಿಯೂ ವಾಶಿಂ
ಟನ್ನನಿಗೆ ಸರಿಯಾದವನು ಇದ್ದನು. ಈ ದೊಡ್ಡ ಪೇ
ಂಗಟನ್ನನು ಯುಕ್ತಿ ಪ್ರಯುಕ್ತಿಗಳಿಂದಲೂ, ಕುಂದದ
ೌರ್ಯದಿಂದಲೂ, ಘನವಾದ ಧೈರ್ಯದಿಂದಲೂ, ಅದ
ಕ್ಕು ಘನತರವಾದ ತಾಳ್ಮೆಯಿಂದಲೂ ಬಹು ಕಷ್ಟಪಟ್ಟು
ಕಾಳಗಗಳನ್ನು ಗೆದ್ದು, ಚಿರಸ್ಥಾಯಿಯಾದ ಕೀರ್ತಿಯ
ನ್ನು ತನ್ನ ಹಿಂದೆ ಸ್ಥಾಪಿಸಿದನು.

ಮನಸ್ಸಿನ ಶಕ್ತಿಯು ಅವಕಾಶವಿಲ್ಲದೆ ನಿಷ್ಕ್ರಿಯಾತ್ಮಕ
ವಾಗಿ ಪ್ರಕಟನಾಗುತ್ತದೆ. ಲೆಫ್ಟ್ಯಾರ್ಡನೆಂಬವನಿಗೆ ಆಫ್ರಿಕ
ಸಂಘವೆಂಬ ಹೆಸರಿನ ಸಮಾಜದವರು ಆಫ್ರಿಕಕ್ಕೆ ನೀನು
ಯಿಂದು ಹೊರಡುತ್ತೀ ಯೆಂದು ಕೇಳಲಾಗಿ ಅವನು ,,ನಾ
ಳೆ ಬೆಳಗ್ಗೆ'' ಯೆಂದು ಉತ್ತರ ಕೊಟ್ಟನು. ಬ್ಲುಚರನೆಂಬ
ನು ಅತಿ ತ್ವರೆಯುಳ್ಳವನಾದದರಿಂದ ಅವನಿಗೆ ಪ್ರಸಿಯ
ದೇಶದ ದಳದಲ್ಲಿ ,,ಮುಂದರಿಕೆಯದಳವಾಯಿ'' ಯೆಂಬ

ಅಷ್ಟ ಹೆಸರುಂಟಾಯಿತು. ಜೊನಜರ್ವಿಸ (ಇವನಿಗೆ ಮುಂದೆ
ಅಲರ್ಸ್ಟೇಂಟನೆನ್ನೇಂಟನೆಂಬ ಪದವಿಯುಂಟಾಯಿತು) ನೇ
ಬವನಿಗೆ ನೀನು ನಿನ್ನ ಹಡಗದ ಮೇಲೆ ಯಿಂದು ಯೋ
ರುತ್ತೀದಿಂದು ಕೇಳಲಾಗಿ ,,ಈಕ್ಷಣವೇ" ಯೆಂದು ಉ
ತ್ತರ ಕೊಟ್ಟನು. ಕಾಲಿನ ಕ್ಯಾಂಬೆಲ್ಲನೆಂಬವನನ್ನು ಹಿಂದು
ದೇಶದೊಳಗಿನ ಸೈನ್ಯದ ಮುಖ್ಯಾಧಿಕಾರಿಯ ಕೆಲಸಕ್ಕೆ
ನೇಮಿಸಿದ ನಂತರ ನಿನ್ನಿಂದ ಯಿಂದು ಹೊರಡೋಣವಾ
ಗುವದೆಂದು ಕೇಳಲಾಗಿ ಅವನು ,,ನಾಳೆ ಬೆಳಗ್ಗೆ" ಯೆಂ
ದು ಉತ್ತರ ಕೊಟ್ಟನು; ಈ ಉತ್ತರದಿಂದ ಅವನು ಮುಂ
ದಿನ ತನ್ನ ಜಯದ ಲಕ್ಷಣವನ್ನು ತೋರಿಸಿದನು. ಯಾ
ಕಂದರೆ ತಾತ್ಕಾಲಿಕ ನಿಶ್ಚಯದಿಂದಲೂ, ಅದರಂತೆ ಕೆಲಸ
ದಲ್ಲಿ, ತೀವ್ರತೆಯಿಂದಲೂ ಯುದ್ಧದಲ್ಲಿ ಜಯವಾಪ್ತಿಯಾ
ಗುತ್ತದೆ; ಉದಾಹರಣಾರ್ಥವಾಗಿ, ಯುದ್ಧದಲ್ಲಿ ಶತ್ರು
ಗಳು ಯೇನಾದರೂ ತಪ್ಪು ಮಾಡಿದರೆ, ಆ ಕ್ಷಣದಲ್ಲಿ ಅ
ವರ ತಪ್ಪಿನಿಂದ ಲಾಭ ಮಾಡಿಕೊಳ್ಳುವದಕ್ಕೆ ಅವಕಾಶ
ಮಾಡಕೂಡದು. ನೇಪೋಲಿಯನ್ನನು ನುಡಿದದ್ದೇನಂದರೆ,
,,ಅಕೋರ್ಲೆಯಲ್ಲಿ ನನ್ನ ಸಂಗಡ ಇಪ್ಪತ್ತೈದೇ ಮಂದಿ
ರಾವುತರು ಇದ್ದಾಗ್ಯೂ, ನಾನು ಜಯಹೊಂದಿದೆನು. ಶತ್ರು
ಗಳು ದಣಿದು ಸ್ವಲ್ಪ ಆಲಸ್ಯಪಟ್ಟದ್ದನ್ನು ನೋಡಿ, ಅ
ವೇ ಸಂಧಿಯು ಸಾಧಿಸಿ ನನ್ನ ಒಬ್ಬೊಬ್ಬ ಮನುಷ್ಯನ ಕೈ
ಯಲ್ಲಿ ಒಂದೊಂದು † ತುತೂರಿಯ ಕೊಟ್ಟು, ಅಷ್ಟು
ಸ್ವಲ್ಪ ಜನರ ಸಹಾಯದಿಂದಲೇ ಆ ದಿವಸ ಗೆದ್ದೆನು.

† ಒಂದು ತುತೂರಿಯು ಕೆಲ ಜನರ ಸಮುದಾಯದ ಗುರುತಾಗಿರು
ತ್ತದೆ. ಆದದರಿಂದ ಈ ತುತೂರಿಗಳಿಂದ ಅಷ್ಟು ಬೇಕೆ ಬೇಕೆ ಸಮು
ದಾಯಗಳುಂಟೆಂದು ಭಾವವನ್ನು ಸೂಚಿಸಿದನೆಂದು ತೋರುತ್ತದೆ.

ಬೆರಡು ಸೈನ್ಯಗಳಂದರೆ ಯೆದುರುಬದುರು ನಿಂತು ಒಂ
ದನ್ನೊಂದು ಹೆದರಿಸಲೆತ್ನಿಸುವಂಥ ಯರಡು ಸಮುದಾ
ಯಗಳುಂಟು. ಅಂಥಾ ಪ್ರಸಂಗದಲ್ಲಿ ನಿಜವಾದ ಕಾರಣವಿ
ಲ್ಲದೆ, ಆಕಸ್ಮಾತ್ತಾಗಿ ಜಮ್ಮಿಭಯವುಂಟಾಗುತ್ತದೆ; ಆ
ವೆ ಸಂಧಿಯಲ್ಲಿ ಲಾಭ ಸಾಧಿಸಿಕೊಳ್ಳತಕ್ಕದ್ದು." ಮು
ತ್ತೊಂದು ಸಮಯದಲ್ಲಿ ಅವನು ಅಂದದ್ದೇನಂದರೆ, "ವ್ಯೆ
ರ್ಥವಾಗಿ ಕಳವಳವುಟ್ಟಿ ಪ್ರತಿ ಕ್ಷಣದಲ್ಲಿ ದುರ್ದೈವಕ್ಕೆ
ಸ್ಪದವುಂಟಾಗುತ್ತದೆ". ಆಸ್ಟ್ರಿಯದ ಜನರು ವೇಳೆಯ
ನೆಲೆಯನ್ನು ಯೆಂದಿಗೂ, ಅರಿಯದವರಾಗಿ, ಸುಮ್ಮನೇ
ಹೊತ್ತಗಳೆಯುತ್ತಿದ್ದ ಸಂಧಿಯು ಸಾಧಿಸಿ, ನಾನು ಅವರನ್ನು
ಜಯಿಸಿದೆನೆಂದು ಅವನು ಹೇಳುವನು.

ಕಳದ ನೂರು ವರ್ಷಗಳಲ್ಲಿ ಬ್ರಿಟಿಶಜನರ ಶಕ್ತಿಯು
ವ್ಯಕ್ತವಾಗುವಕ್ಕೆ ಹಿಂದು ದೇಶವು ದೊಡ್ಡ ಸ್ಥಾನವಾ
ಯಿತು. ಹಿಂದುದೇಶದ ಕಾರ್ಯಗಳನ್ನು ಮಾಡುವದರಲ್ಲಿ
ಯೂ, ಯುದ್ಧ ಸಂಗತ್ರಿಗಳಲ್ಲಿಯೂ, ಕ್ಲೈವನಿಂದ ಹಾವೆ
ಲಾಕ್, ಕ್ಲೈಡ್ ಯೆಂಬವರವರೆಗೂ ಕೀರ್ತಿಯುಳ್ಳ ಹೆಸ
ರುಗಳನ್ನೊಂದು ಬಿಸ್ತ್ರ ಮೂಲ್ಯಾರ್ಹವಾದ ದೊಡ್ಡ ಮೂಲಿಕೆ
ಸೀ ಉಂಟು. ಆ ಹೆಸರುಗಳು ಯಾವವಂದರೆ, ವೆಲ್ಲೆ
ಸ್ಲೀ, ಮೆಟ್ಕಾಫ್ ಟರಮೋ ಎಡ್ವರ್ಡ್, ಲಾರೆನ್ಸ್, ಇತ್ಯಾದಿ
ಈ ಮೂಲಿಕೆಯಲ್ಲಿ ವಾರನ್‌ಹೆಸ್ಟಿಂಗ್ಸನೆಂಬದೊಂದು ದೊ
ಡ್ಡದಾದಾಗ್ಯೂ, ಮಲಿನವಾದ ಹೆಸರುಂಟು. ಈ ಮನುಷ್ಯ
ನ ಇಚ್ಛೆಯು ಅತಿ ದೃಢವಾದ್ದು, ಉದ್ಯೋಗವು ದಣು
ವಿಲ್ಲದ್ದು; ಇವನ ಮನೆತನವು ಪುರಾತನ ಕಾಲದಿಂದ ಹೆಸ
ರಾದದ್ದು ಅದರೆ ಇವನ ಪೂರ್ವಜರ ದುರ್ಗತಿಯಿಂದಲೂ.

ಅವರ ನಿಷ್ಪ್ರಯೋಜಕ ತಕ್ಕಂತೆ ಸ್ಟೂಅರ್ಟ್‌ರೆಂಬ ರಾಜವಂಶದವರು ಅವರಿಗೆ ಆಶ್ರಯವನ್ನು ಕೊಡದೆ ಇದ್ದ ಕಾರಣದಿಂದಲೂ ಅವರಿಗೆ ಬಡತನವುಂಟಾಗಿ, ಡೆಲೆಸ್ಫರ್ಡಯೆಂಬಲ್ಲಿಯ ವತನವನ್ನು ಅವರು ನೂರಾರು ವರ್ಷಗಳಿಂದ ಅನುಭೋಗಿಸುತ್ತ ಬಂದಾಗ್ಯೂ, ಕಡೆಯಲ್ಲಿ ಅದು ಅವರ ಕೈಯಿಂದ ಹೋಯಿತು. ಆದರೂ ಡೆಲೆಸ್ಫರ್ಡದಲ್ಲಿ ವಾಸಿಸುತ್ತಿದ್ದ ಕಡೆಯ ಹೆಸ್ಟಿಂಗ್ಸನು ಆ ತಾಲೂಕಿನೊಳಗಿನ ಬೇರೆ ಆಸ್ತಿಯವನ್ನು ತನ್ನ ಎರಡನೇ ಮಗನಿಗೆ ಕೊಟ್ಟನು. ಅವನ ಮನೆಯಲ್ಲಿ ಮುಂದೆ ಬಹು ವರ್ಷಗಳ ನಂತರ ಅವನ ಮೊಮ್ಮಗನಾದ ವಾರೆನ್ ಹೇಸ್ಟಿಂಗಸನು ಹುಟ್ಟಿದನು. ಹುಡುಗನು ಆ ಹಳ್ಳಿಯ ಶಾಲೆಯಲ್ಲಿ ಬಡವರ ಮಕ್ಕಳ ಸಂಗಡ ಓದ ಬರಿಯ ಕಲಿತನು. ಅವನು ತನ್ನ ಅಜ್ಜ ಮುತ್ತಿಂದಿರು ಅನುಭೋಗಿಸಿದ ಭೂಮಿಯಲ್ಲಿ ಆಡುತ್ತಿದ್ದು, ಕೂರನೂ, ರಾಜನಿಷ್ಠನೂ, ಆದ ಡೆಲೆಸ್ಫರ್ಡದ ಹೆಸ್ಟಿಂಗ್ಸನು ಯೆಂಥಾ ಮನುಷ್ಯನಿದ್ದನೆಂಬದನ್ನು ಯಾವಾಗಲೂ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿದ್ದನು; ಆದದರಿಂದ ಅವನ ಬಾಲ್ಯದ ಆವೇಕವು ಪ್ರಜ್ವಲಿತವಾಯಿತು. ಅವನು ಏಳು ವರ್ಷದವನಿದ್ದಾಗ ಬೇಸಿಗೆಯಲ್ಲಿ ಒಂದು ದಿವಸ ತನ್ನ ಮುಂಚಿನ ವತನದ ಭೂಮಿಯೊಳಗಿಂದ ಹರಿಯುವ ದೊಂದು ಪ್ರವಾಹದ ಧಡದಲ್ಲಿ ಕೂತುಕೊಂಡಿರಲಾಗಿ, ತನ್ನ ಮನಸ್ಸಿನಲ್ಲಿ ಇನ್ನೂ ಈ ವತನವನ್ನು ನಾನು ತಿರುಗಿ ಸಂಪಾದಿಸಿಕೊಳ್ಳಬಹುದೆಂಬದಾಗಿ ನಿಶ್ಚಯಿಸಿಕೊಂಡನೆಂದು ಹೇಳುತ್ತಾರೆ. ಅದು ಹುಡುಗ ಬುದ್ಧಿಯ ಮನೋರಾಜ್ಯದ ಸ್ವಪ್ನವೇ ಸರಿ ಆದರೆ ಅವನು ಅದರಂತೆಯೇ

ನಿಜವಾಗಿಮಾಡಿದನು. ಈ ಆಲೋಚನೆಯು ಅವನ ಮನಸ್ಸಿನಲ್ಲಿ ಬೇರಗೊಂಡು, ಆವೇಶವನ್ನುಂಟು ಮಾಡಿತು. ಮುಂದೆ ವೃದ್ಧನಾಗುವವರೆಗೂ ಅವನು ಈ ತನ್ನ ನಿಶ್ಚಯವನ್ನು ತಾಳ್ಮೆಯುಳ್ಳದ್ದಾದಾಗ್ಯೂ ಹಿಂದಿರುಗದಂಥ ಅಭಿಲಾಷೆಯಿಂದ ಹಾಗೇ ಕಾಯ್ದುಕೊಂಡನು; ಈ ವಿಧದ ಇಚ್ಛೆಯೇ ಅವನಲ್ಲಿ ಒಡೆದು ಕಾಣಿಸುವಂಥ ವಿಶೇಷ ಗುಣವಾಗಿತ್ತು. ಈ ದಿಕ್ಕಿಲ್ಲದ ಹುಡುಗನು ಮುಂದೆ ಅತಿ ಬಲಾಢ್ಯರೆಂದೆನಿಸಿಕೊಂಡವರಲ್ಲಿ ಯೆಣಿಸಲ್ಪಟ್ಟನು. ಅವನು ತನ್ನ ಮನೆತನವ ಜೈವವನ್ನು ಪುನಃ ತೆರಿದನು; ತನ್ನ ವತನದ ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡು, ಅಲ್ಲಿದ್ದ ತನ್ನ ಪೂರ್ವಜರ ಮನೆಯನ್ನು ಪುನಃ ಕಟ್ಟಿಸಿದನು. ಮಕಾಲೇಯೆಂಬ ಪ್ರಸಿದ್ಧ ಗ್ರಂಥಕರ್ತನು ವಾರನ್‌ಹೇಸ್ಟಿಂಗಸನ ಬಗ್ಗೆ ಬರಿದದ್ದೇನಂದರೆ, "ಅವನು ಅತ್ಯಲ್ಪ ಶೀಮೆಯಲ್ಲಿ ನಿಂತು ಎಶಿಯಖಂಡದ ಐದು ಕೋಟಿ ಜನರನ್ನು ಆಳುತ್ತಿರಲಾಗಿ, ಯುದ್ಧ, ರಾಜ್ಯದ ಆದಾಯ, ಕಾಯ್ದೆಗಳು ಮುಂತಾದ ಚಿಂತೆಗಳಲ್ಲಿ ಮುಳುಗಿದಾಗ್ಯೂ, ತನ್ನ ಆಶೆಯನ್ನೆಲ್ಲ ಡೆಲೆಸ್ಪರ್ಡದ ವತನದಲ್ಲಿಯೇ ಇಟ್ಟುಕೊಂಡಿದ್ದನು. ಇದಲ್ಲದೆ ಅವನು ಬಹು ದಿವಸ ನಡಿಸಿದ ರಾಜ್ಯಕಾರಭಾರವು ಅತಿ ವಿಲಕ್ಷಣವಾಗಿ ಒಳಿತು ಹೀನಗಳಿಂದಲೂ, ಮಾನಾಪಮಾನಗಳಿಂದಲೂ, ವಿಚಿತ್ರ ಸ್ವರೂಪ ಪ್ರಳ್ಳದ್ದಾಗಿ ಕಡೆಯಲ್ಲಿ ಸಮಾಪ್ತಿಗೆ ಹೋದ ನಂತರ ಅವನು ಡೆಲೆಸ್ಪರ್ಡದಲ್ಲಿಯೇ ಹೋಗಿ ನಿಂತು ಮರಣಹೊಂದಿದನು * "

---

* ವಾರನ್ ಹೇಸ್ಟಿಂಗ್ಸನು ಪನ್ನ ಐಶ್ವರ್ಯದ ಸಮರ್ಥದ ಸಂಬಂ

ಹಿಂದು ದೇಶದಲ್ಲಿ ದೊಡ್ಡಸ್ತಿಕೆಯು ಹೊಂದಿದ ಜನರಲ್ಲಿ ಸರಚಾರ್ಲಸ ನೇಪಿಯರನೆಂಬುವನು ಅಸಾಧಾರಣವಾದ ಧೈರ್ಯವೂ, ನಿಶ್ಚಯವೂ ಉಳ್ಳವನು. ಅವನು ಒಂದು ಯುದ್ಧದಲ್ಲಿ ತನಗೆ ಬಂದ ಕಷ್ಟಗಳಬಗ್ಗೆ ಹೇಳಿದ್ದುಯೇನಂದರೆ, "ಅವುಗಳಿಂದ ನನ್ನ ಕಾಲುಗಳು ಹೆಚ್ಚು ದೃಢವಾಗಿ ಭೂಮಿಯಲ್ಲಿ ನಡುತ್ತವೆ. ವಿಯೂನೀ ಯೆಂಬಲ್ಲಿ ಅವನು ಮಾಡಿದಕಾಳಗವು ಇತಿಹಾಸದಲ್ಲಿ ಅತ್ಯಸಾಧಾರಣವಾದ್ದೆಂದು ಹೇಳಬಹುದು. ಅವನ ಹತ್ತರಳ೦೦ಮಂದಿ ಯುರೋಪಿಯನ್ನರು ಸಹಿತವಾಗಿ ೨೦೦೦ ಮಾತ್ರ ದಳವಿದ್ದಾಗ್ಯೂ, ಘಟ್ಟಿಗರೂ, ಪ್ರೌಢತಾಗಿ ಶಸ್ತ್ರಗಳುಳ್ಳವರೂ ಆದ ೪೫೦೦೦ ಮಂದಿಬಲೂಚಿಸ್ತಾನದವರ ಸಂಗಡ ಕದನವಾಡಿದನು. ಅದು ತೋರಿಯಲ್ಲಿ ಬಳ್ಳೀ ಯೆದೆಗಾರಿಕೆಯು ಅವಿಚಾರವೆಂದು ತೋರಬಹುದು ಆದರೆ ಆ ದಳವಾಯಿಗೆ ತನ್ನ ಸ್ವಂತದ್ದೂ, ತನ್ನ ದಳದವರದೂ ನಂಬಿಕೆಯಿತ್ತು. ಅವನು ಶತ್ರು ಸೈನ್ಯದ ಮಧ್ಯಭಾಗವನ್ನು ಅದರ ಮುಂದಿದ್ದ ಒಂದು ಯತ್ನರನಾದ ದಿನ್ನೆಯಮೇಲೆ ಯೇರಿಸಿ, ಮೂರು ತಾಸುಗಳ ವರೆಗೆ ಕೊಲೆಯಾದ ಕಾಳಗವನ್ನು ಯೆಸಗಿದನು. ಅವನ ಚಿಕ್ಕದಳ ದೊಳಗಿನ ಪ್ರತಿ ಒಬ್ಬ ಮನುಷ್ಯನು ತನ್ನ ಒಡಿ

ದಲ್ಲಿ ಹಿಂದು ದೇಶದ ಗವರ್ನರ ಜನರಲ್ಲನಾಗಿದ್ದನು. ಆದರೆ ಇವನ ಮೇಲೆ ಯೆಷ್ಟೋ ದೊಡ್ಡ ದೊಡ್ಡ ತಪ್ಪುಗಳನ್ನು ಹೊರಿಸಿ, ಆ ವರ್ಷ ಅವುಗಳ ವಿಚಾರಣೆಯು ಆರಂಭವಾದದ್ದು ಮುಂದೆ ೭ ವರ್ಷ, ೩ ತಿಂಗಳುಗಳ ವರೆಗೆ ನಡೆದಿತ್ತು. ಕಡೆಯಲ್ಲಿ ಇವನು ನಿರಪರಾಧಿಯೆಂದು ನಿರ್ಣಯವಾದಾಗ್ಯೂ, ಜನರಲ್ಲಿ ಬಹು ಅಪಕೀರ್ತಿ ಪಟ್ಟನು. ಆದರೆ ಇವನು ಯೆಷ್ಟೋ ಬಹು ದೊಡ್ಡ ಕೃತ್ಯಗಳನ್ನಾದರೂ ಮಾಡಿದನು.

ಯನಿಂದ ಆವೇಶಪಟ್ಟು ಆ ಕಾಳಗದಲ್ಲಿ ಶೂರನಾಗಿ ಕಾದಿದನು. ಅವನ ಒಬ್ಬೊಬ್ಬ ಮನುಷ್ಯನಿಗೆ ಇಪ್ಪತ್ತು ಮಂದಿಗಳಂತೆ ಬಲೂಚಿಗಳಿದ್ದಾಗ್ಯೂ, ಅವರು ಮೋರೆಯ ತಿರುಗಿಸದೆ ಹಿಂದಕ್ಕೆ ಓಡಿದರು. ಶಿಪಾಯಿಗಳ ಯುದ್ಧವು, ನಿಜವಾಗಿ ನೋಡಿದರೆ, ಯೆಲ್ಲ ವಿಧದ ಯುದ್ಧವು, ಈ ಬಗೆಯ ಧೈರ್ಯದಿಂದಲೂ, ಆವೇಶದಿಂದಲೂ, ವ್ಯಥನಿಶ್ಚಯದಿಂದಲೂ, ಮಾತ್ರಗೆಲ್ಲಲ್ಪಡುತ್ತದೆ. ಒಂದು ಹೆಜ್ಜೆ ಮುಂದಕ್ಕೆ ಹೋದರೆ, ಓಟದ ಹೂಜು ಗೆದೆಯೆಲ್ಪಡುತ್ತದೆ; ಮತ್ತೊಂದುಸಾರಿ ಹೆಜ್ಜೆಗ ಮುಂದಕ್ಕೆ ಹವಣಿಸಿದರೆ ಕಾಳಗದಲ್ಲಿ ಜಯ ವುಂಟಾಗುತ್ತದೆ; ಜಗಳದಲ್ಲಿ ಹೆಜ್ಜೆಗೆ ಐದು ನಿನಿಟುಗಳವರೆಗೆ ಧೈರ್ಯ ತಾಳಿದರೆ, ಯೆದು ರಾಳಗಳು ಸೋಲಿಸಲ್ಪಡುತ್ತಾರೆ. ತಾತ್ಪರ್ಯವೇನಂದರೆ, ಪ್ರತಿಪಕ್ಷಿಗಳಿಗಿಂತ ನಮ್ಮ ಬಲವು ಕಡಿಮೆ ಇದ್ದಾಗ್ಯೂ, ಅದನ್ನೇ ಹೆಜ್ಜೆಗೆ ವೊಟ್ಟುಕೂಡಿಸಿ ಹೆಚ್ಚುಕಾಲದವರೆಗೆ ಪ್ರಯೋಗಿಸಲು, ನಾವು ಅವರಿಗಿಂತ ಶ್ರೇಷ್ಠರಾಗುತ್ತೇವೆ. ಸ್ಪಾರ್ಟಪಟ್ಟಣದಲ್ಲಿ ಒಬ್ಬ ಪ್ರಾಯಸ್ಥನು ನನ್ನ ಕತ್ತಿಯು ಬಹಳ ಸಣ್ಣದಬೆ ಯೆಂದು ತನ್ನ ತಂದೆಗೆ ಹೇಳಲಾಗಿ ಅವನು, "ಅದಕ್ಕೆ ವೊಂದು ಹೆಜ್ಜೆಯ ಕೂಡಿಸು," ಯೆಂದು ಮಗನಿಗೆ ಉತ್ತರ ಹೇಳಿದನು. ಇದೇ ಮಾತು ಯೆಲ್ಲ ಕಡೆಯಲ್ಲಿ ಸರಿಯಾಗಿ ಹತ್ತುತ್ತದೆ.

ನೇಪೀಯರನು ತನ್ನ ಸ್ವಂತ ವೀರಾವೇಶದಿಂದ ತನ್ನ ಜನರಿಗೆ ಪ್ರೇರಿದುಂಬಿಸುವನು; ಇದೇ ತಕ್ಕ ಮಾರ್ಗವು. ತನ್ನ ದಳವೊಳಗಿನ ತೀರ ಕಡಿಮೇತರದ ಶಿಪಾಯಿಗಳಿಗೆ ಸರಿಯಾಗಿ ಅವನು ಕಾಮುರಾಡುವನು. ಅವನು ನುಡಿದ

ದ್ದೇನಂದರೆ ತಕ್ಕಷ್ಟು. ಕೆಲಸ ಮಾಡುವದೇ ಸೈನ್ಯದ ಮೇಲೆ ಅಧಿಕಾರ ನಡಿಸುವ ದೊಡ್ಡ ಯುಕ್ತಿಯಾಗಿರುತ್ತದೆ. ಸೈನ್ಯದ ಮುಖ್ಯಸ್ಥನು ತನ್ನ ಕೆಲಸದಲ್ಲಿ ಪೂರ್ಣವಾಗಿ ಮನಸ್ಸನ್ನು ತೊಡಗಿಸದಿದ್ದರೆ, ಅವನಿಗೆ ಜಯ ಸಾಗದು. ಕೆಲಸವು ಹೆಚ್ಚಾದಂತೆ ಶ್ರಮ ಮಾಡಿಯೂ, ಕಷ್ಟ ಹೆಚ್ಚಾದಂತೆ ಧೈರ್ಯ ತೋರಿಸಿಯೂ ಯೆಲ್ಲ ಸಂಗತಿಗಳನ್ನು ಸ್ವಾಧೀನ ಮಾಡಿಕೊಳ್ಳತಕ್ಕದ್ದು" ಕಚ್ಚಲದೇಶದ ಗುಡ್ಡಗಳಲ್ಲಿ ಅವನು ಯುದ್ಧಕ್ಕೆ ಹೋದಾಗ ಅವನ ಸಂಗಡ ಹೋದ ಒಬ್ಬ ಪ್ರಾಯದವನಾದ ಉದ್ಯೋಗಸ್ಥನು ಒಂದು ಸಮಯದಲ್ಲಿ ಅಂದದ್ದೇನಂದರೆ "ಈ ಮುದುಕನು ಯಾವಾಗಲೂ ಕುದುರೆಯ ಮೇಲೆ ಕೂತುಕೊಂಡಿದ್ದದ್ದನ್ನು ನೋಡಿ, ನಾನು ಪ್ರಾಯಸ್ಥನೂ, ಸಾಮರ್ಥ್ಯವಂತನೂ ಆಗಿ ಸುಮ್ಮನೆ ಹ್ಯಾಗೆ ಕೂಡ್ರಲಿ? ಅವನು ಅಪ್ಪಣೆಯ ಮಾಡಿದರೆ, ನಾನು ಜಡಿದ ಫಿರಂಗಿಯ ಬಾಯಿಯೊಳಗೆಸಹ ಹೋಗುವೆನು" ಈ ಮಾತು ನೇಪೀಯರನಿಗೆ ತಿಳಿದಾಗ ಅವನು ತನ್ನ ಶ್ರಮಕ್ಕೆ ಇದೇ ಸಂಪೂರ್ಣವಾದ ಫಲವೆಂದು ನುಡಿದನು. ನೇಪೀಯರನಿಗೆ ಹಿಂದುದೇಶದೊಳಗಿನವನೊಬ್ಬ ಗಾರುಡಿಗನು ಭಿಟ್ಟಿಯಾದ ಸಂಗತಿಯಿಂದ ಅವನ ಶಾಂತವಾದ ಧೈರ್ಯವೂ ಆಶ್ಚರ್ಯಕರವಾದ ಸರಲ ಸ್ವಭಾವವೂ ಪ್ರಾಮಾಣಿಕತನವೂ ಚನ್ನಾಗಿ ತಿಳಿಯುತ್ತದೆ. ಅದು ಹ್ಯಾಗಂದರೆ, ಆ ದೇಶದೊಳಗಿನ ಯುದ್ಧಗಳು ಮುಗಿದನಂತ ಒಂದು ದಿವಸ ಒಬ್ಬ ಹೆಸರಾದ ಗಾರುಡಿಗನು ನೇಪೀಯರನ ಮಾಳಿಯಲ್ಲಿ ಬಂದು, ಅವನೂ, ಅವನ ಕುಟುಂಬದವರೂ, ಅವನ ಕೈಕೆಳಗಿನ ಉ

ದ್ಯೋಗಸ್ಥರೂ ಕೂತಿರಲಾಗಿ, ತನ್ನ ಆಟವನ್ನು ಆಡಿ ತೋರಿಸಿದನು. ಯೆಷ್ಟೋ ಆಶ್ಚರ್ಯದ ಕೃತ್ಯಗಳನ್ನು ಮಾಡಿ ತೋರಿಸಿದನಂತರ, ಆ ಗಾರುಡಿಗನು ತನ್ನ ಸಂಗಡ ಬಂದಿದ್ದ ಒಬ್ಬ ಮನುಷ್ಯನ ಅಂಗೈಯಲ್ಲಿ ಒಂದು ಲಿಂಬೇಹಣ್ಣನ್ನು ಇಟ್ಟು, ಪಬ್ಲಿಕತ್ತಿಯ ಆಡುತ್ತಾಡುತ್ತ ಬಂದು ಆ ಹಣ್ಣನ್ನು ಯೆರಡು ತುಂಡಾಗಿ ಕಡಿದನು. ಅದನ್ನು ನೋಡಿ ಅವರಿಬ್ಬರೂ ಕೂಡಿ ಯೇನಾದರೂ ಕಣ್ಣಿ ಮೋಸ ಮಾಡಿದ್ದಾರೆಂದು ನೇಪೀಯರನು ತಿಳಿದುಕೊಂಡನು. ಅಂಗೈಯಲ್ಲಿಟ್ಟು ಇಷ್ಟು ಚಿಕ್ಕವಸ್ತುವನ್ನು ಒಂಚೇ ಕಡತದಿಂದ ಕೈಗೆ ಸಿಟ್ಟು ತಗಲಿಸದೆ ಕಡಿದು ಯೆರಡು ತುಂಡು ಮಾಡುವದು ಅಸಂಭಾವ್ಯವೆಂದು ಅವನು ನೆನಸಿದನು. ಆದರೆ ಇಂಥಾದೇ ಒಂದು ಸಂಗತಿಯನ್ನು ಸ್ಕಾಟನು ,,ತಾಲಿಸ್ಮನ್ನಿಂ'' ಬ ಕಥೆಯಲ್ಲಿ ಬರಿದಿದ್ದಾನೆ. ನೇಪೀಯರನು ತನ್ನ ಸಂಶಯವನ್ನು ಪರಿಹರಿಸಿಕೊಳ್ಳವದಕ್ಕೋಸ್ಕರವಾಗಿ, ನನ್ನ ಕೈಯಲ್ಲಿ ಲಿಂಬೇಹಣ್ಣನ್ನು ಇಟ್ಟು ಕಡಿ ಯೆಂದು ಗಾರುಡಿಗನಿಗೆ ಹೇಳಿ, ತನ್ನ ಬಲಗೈಯನ್ನು ಮುಂದಕ್ಕೆ ಒಡ್ಡಿದನು. ಗಾರುಡಿಗನು ಆ ಕೈಯನ್ನು ಚನ್ನಾಗಿ ಪರೀಕ್ಷಿಸಿನೋಡಿ, ನನ್ನಿಂದ ಈ ಕೆಲಸವಾಗಬೆಂದು ಹೇಳಿದನು. ಅದನ್ನು ಕೇಳಿ ನೇಪೀಯರನು ,,ಸರಿ, ನಿನ್ನ ಮೋಸವನ್ನು ಗೊತ್ತು ಹಚ್ಚಬಹುದೆಂದು ನಾನು ಯೆಣಿಸೇ ಇಲ್ಲ'' ಯೆಂದು ಹೇಳಲಾಗಿ ಗಾರುಡಿಗನು ,,ಆದರೆ ನಿಲ್ಲಿರಿ, ನಿಮ್ಮ ಯಡಗ್ಯೆಯ ನೋಡುವ'' ಯೆಂದು ಹೇಳಿ, ಅವನ ಯೆಡಗ್ಯೆಯ ತೆಗೆದುಕೊಂಡು ಪರೀಕ್ಷಿಸಿ ನೋಡಿದನು. ಆಗಲವನು, ,,ನಿವು ಈ ಕೈ

ಯನ್ನು ಅಲ್ಲಾಡದಹಾಗೆ ಮುಂದಕ್ಕೆ ಒಡ್ಡಿದರೆ ನಾನು ನ
ನ್ನ ಕೌಶಲ್ಯವನ್ನು ತೋರಿಸುವೆನು" ಯೆಂದು ಹೇಳಿದ
ನು. ಅದಕ್ಕೆ ನೇಪೀಯರನು ಬಲಗೈಯಾಕೆ ಬೇಡ, ಯೆ
ಡಗೈಯೇ ಯಾಕೆ" ಬೇಕೆಂದು ಕೇಳಲಾಗಿ, ಗಾರುಡಿಗ
ನು "ಯಾಕಂದರೆ ಬಲಗೈಯು ಮಧ್ಯಭಾಗದಲ್ಲಿ ತಗ್ಗಾ
ಗಿದ್ದದರಿಂದ ಬಂದು ಮೇಳೆ ಹೆಬ್ಬೊಟ್ಟಿಗೆ ಪೆಟ್ಟು ತಗಲು
ವ ಭಯವುಂಟು. ಯೆಡಗೈಯ ಮಧ್ಯಭಾಗವು ಯೆತ್ತರ
ವಾಗಿದ್ದದರಿಂದ ಈ ಭಯವು ಅಷ್ಟಿಲ್ಲ" ಯೆಂದು ಹೇಳಿ
ದನು. ಆ ಮಾತು ಕೇಳಿ ನೇಪೀಯರನು ಚಕಿತನಾದನು.
ಅವನು ಹೇಳಿದ್ದೇನಂದರೆ "ನಾನು ಬೆದರಿದೆನು. ಅವನ
ಕೃತ್ಯವು ನಿಜವಾಗಿ ಖಡ್ಗವಿದ್ಯೆಯ ಕೌಶಲ್ಯವೇ ಯೆಂದು
ನನಗೆ ಆಗ ತಿಳಿಯಿತು. ನಾನು ಮೊದಲು ನನ್ನ ಜನರ
ಸಮಕ್ಷ ಅವನಿಗೆ ಬೈದು ನೀನು ಮೋಸಮಾಡಿದಿ ಯೆಂ
ದು ಅನ್ನಬೇಡೋಗಿದ್ದರೆ, ನಿಜವಾಗಿ ಒಪ್ಪಿಕೊಳ್ಳುತ್ತೇನೆ,
ನಾನು ಒಲ್ಲೆನೆಂದು ಹೇಳುತ್ತಿದ್ದೆನು. ಆದದರಿಂದ ನನ್ನ
ಯೆಡಗೈಮೇಲೆ ಲಿಂಬಿಯಹಣ್ಣನ್ನು ಇಟ್ಟು, ಅದನ್ನು
ಇಟ್ಟು, ಅದನ್ನು ಮುಂದಕ್ಕೆ ಒಡ್ಡಿ ಘಟ್ಟಿಯಾಗಿ ಹಿಡಿದೆ
ನು. ಆ ಮೇಲೆ ಗಾರುಡಿಗನು ತನ್ನ ಮೈಯನ್ನು ಸಮ
ತೋಲಾಗಿ ಮಾಡಿಕೊಂಡು, ಚಲಾಖಿಯಿಂದ ಒಂದೇ ಕಡ
ತವನ್ನು ಹೊಯ್ದು, ಲಿಂಬಿಯ ಹಣ್ಣನ್ನು ಯಿರಡು ತುಂ
ಡುಮಾಡಿದನು. ಅವನ ಕತ್ತಿಯ ಧಾರೆಯು ಒಂದು ತಣ್ಣಿ
ಗಾದ ದಾರದಂತೆ ನನ್ನ ಕೈಮೇಲೆ ಹಾಯ್ದು ಹೋದಹಾಗೆ
ನನ್ನ ಮನಸ್ಸಿಗೆ ತೋರಿತು. ಹಿಂದುದೇಶದೊಳಗೆ ಕತ್ತಿ
ಯುಹಿಡಿಯುವ ಕೂರರಲ್ಲಿ ಇಷ್ಟು ಕೌಶಲ್ಯವುಂಟು. ಅಂ

ಥವರನ್ನು ನಮ್ಮ ಜನರು ಮಿಯಾನಿಯ ಕಾಳಗದಲ್ಲಿ ಸೋಲಿಸಿದರು."

NOTICES.

ನೋಟೀಸುಗಳು.

ತಂಗಳಗ ೧೦೦ರೂಪಾಯಿಗಳಿಗಿಂತ ಕಡಿಮೆ ಸಂಬಳವುಳ್ಳ ಮನುಷ್ಯನು (ರಜೆಯ ನಿಯಮಗಳ ತಿಳಿಸಿನೇ ಪುಟದೊಳಗಿನ (B) ನೋಡು) ಸರಕಾರಕ್ಕೆ ದೆಚ್ಚಿನ ತಿಚ್ಚು ಬೀಳದಿದ್ದಾಗ್ಯೂ ಹಕ್ಕಿನ ರಜೆಗೆ ಬಾಧ್ಯನಾಗುವದಿಲ್ಲ. ವಿಶೇಷವಾಗಿ ಲಾಯಖಿಯ ಪ್ರಸಕ್ತಿಗಳಿದ್ದಲ್ಲಿ ಮಾತ್ರ ಪ್ರಸಂಗಾನುಸಾರವಾಗಿ ಕಾರಣಗಳನ್ನು ತೋರಿಸಿ ಶಿಫಾರಸುಗಳನ್ನು ಮಾಡಬಹುದು. (ಇಂಥಾ ಪ್ರಸಕ್ತಿಯಲ್ಲಿ ಸಹ ದೆಚ್ಚಿನ ವೆಚ್ಚವಾಗ ಕೂಡದೆಂಬದು ಸ್ಪಷ್ಟವೇ)

ಬೆಳಗಾಂವ
ತಾರೀಖ ೫ ಅಗಸ್ತ
ಸನ್ ೧೮೮೨ನೇ ಇ.

(Signed) W. A. Russell.
ಎ. ಇನಸ್ಪೆಕ್ಟರ ದಕ್ಷಿಣಭಾಗ.

ಶಾಲೆಗಳ ರಜಿಸ್ತರಗಳು ಮಶಿ ಮುಂತ್ರಾದ್ದು ಬಿದ್ದು ಕೆಟ್ಟರೆ, ಮೊದಲು ಡಿ. ಯೆ. ಇನ್ಸಪೆಕ್ಟರರ ಅಪ್ಪಣೆಯು ಪಡಿದ ಹೊರ್ತು ಜೊಸರಜಿಸ್ತರಗಳನ್ನು ತಯಾರ ಮಾಡ ಬಾರದೆಂದು ದಕ್ಷಿಣಭಾಗದೊಳಗಿನ ಶಾಲೆಗಳ ಮಾಸ್ತರ ಜನರಿಗೆ ಈ ನೋಟೀಸಿನಿಂದ ಪುಕುಮು ಮಾಡಲ್ಪಡುತ್ತದೆ.

ಈ ಪುಕ್ಕುಮು ಮುರಿಯುವವರಿಗೆ ಭಾರೀ ಶಿಕ್ಷೆಯಾಗುವದು.

ಬೆಳಗಾವಿ
೧ನೇ ಸಪ್ಟಂಬರ
ಸನ್ ೧೮೭೫ ಇ.

(Signed) W. A. Russell.
ಎ. ಇನ್ಸಪೆಕ್ಟರ ದಕ್ಷಿಣಭಾಗ.

ಎ. ಇನ್ಸಪೆಕ್ಟರ ದಕ್ಷಿಣಭಾಗ ಇವರ ಕಚೇರಿಯಿಂದ ಬೆಳಗಾವಿ ೧ನೇ ಸಪ್ಟಂಬರ ೧೮೭೫ ಇಸವಿ.

೧ನೇ ಯೊತ್ತಿಯ ಎಲ್ಲ ವಿಷಯಗಳಲ್ಲಿ ಪಾಸ್ ಆದ ಪ್ರತಿ ಒಬ್ಬ ವಿದ್ಯಾರ್ಥಿಗಾಗಿ ತಿಂಗಳಿಗೆ ೪ ಅಣೆಯಂತೆ ಟ್ರೈನ್ಡ್ ಮಾಸ್ತರ ಜನರಿಗೆ ಹಣಕೊಡಬೇಕೆಂದು ದಕ್ಷಿಣ ಭಾಗದೊಳಗಿನ ಡಿ. ಯೆ. ಇನಸ್ಪೆಕ್ಟರರಿಗೆ ಈ ಸರಕ್ಯುಲ್ಲರಿನಿಂದ ತಿಳಿಸಿರುತ್ತದೆ.

(Signed) W. A. Russell.
ಯೆ. ಇನಸ್ಪೆಕ್ಟರ ದಕ್ಷಿಣಭಾಗ.

CORRESPONDENCE.

ಪತ್ರವ್ಯವಹಾರವು.

ಮೆಹಬ್ಬಾನ ರಾವಸಾಹೇಬ—ದಕ್ಷಿಣಭಾಗದ ಕನ್ನಡ ಶಾಲಾಪತ್ರಕದ ಎಡಿಟರರ ಚರಣಾರವಿಂದಗಳಿಗೆ—

ಸೇವಕನು ಮಾಡುವ ವಿನ್ನಹ ಏನಂದರೆ ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಮನೋಹರವಾದ ಮಹಪ

ತ್ರಕದಲ್ಲಿ ಛಾಪಿಸಿ ಪ್ರಸಿದ್ಧಿಸುವಿರೆಂದು ಮಹತ್ಕಾಂಕ್ಷೆಯನ್ನು ಧರಿಸಿದ್ದೇನೆ.

ಈ ಸಾಲಿಗೆ ತಾರೀಖು೨೧ ನೇ ಮಾಹೆ ಅಗಷ್ಟ ಸನ್ ೧೮೭೫ನೆಯ ದಿವಸ ಶ್ರೀಮಂತ ರಾಜಶ್ರೀ ಮಾಯಪ್ಪಾ ಉರ್ಫ ಅಪ್ಪಾಸಗುಣಪ್ಪಾ ನಾಡಗವಡಾ ಪರಗಣೆ ತೇರದಾಳ ಇವರು ಬಂದು ೧೨೨ನೇ ವರ್ಗಗಳ ಪರೀಕ್ಷೆಯನ್ನು ತೆಗೆದುಕೊಂಡು ಆನಂದಭರಿತರಾಗಿ ಹುಡುಗರಿಗೆ ಮಿಠಾಯಿ ಹಂಚಿದರು. ಹಾಂಗು ಮಾಸ್ತರರು ಮೋಹನತವುಳ್ಳವರಾಗಿದ್ದಾರೆಂದು ರಜಿಸ್ತರದಲ್ಲಿ ಷರಾ ಬರೆದಿದ್ದಾರೆ.

ತಾರೀಖು ೧೪ನೇ ಮಾಹೆ ಅಗಷ್ಟ ಸನ್ನ ಮಜಕೂರ ದಿವಸ ಶ್ರೀಮಂತ ರಾಜಮಾನ್ಯರಾಜಶ್ರೀ ಯಶವಂತ ಮೋರೇಶ್ವರ ಕೇಳಕರ ಮಾಮಲೇದಾರ ತಾಲೂಕ ಅಥಣಿ ಇವರು ಪರೀಕ್ಷೆಗೆ ಬಂದ ವೇಳೆಯಲ್ಲಿ ಹುಡುಗರ ಸಂಖ್ಯೆ ರಜಿಸ್ತರಕ್ಕೆ ೧೬ ಇದ್ದವು. ಅದನ್ನು ನೋಡಿ ಊರ ಗವಡ ಕುಲಕರ್ಣಿ ಇವರಿಗೆ ಹಾಗು ರಯತ ಜನರಿಗೆ ನಿಮ್ಮ ಹುಡುಗರನ್ನು ಶಾಲಿಗೆ ಯಾಕೆ ಕಳಸುವದಿಲ್ಲಾ ಹೀಗೆ ಅಂದ ಬಳಿಕ ನಾವು ಹೊಲಮನಿಯ ಕೆಲಸಕ್ಕೆ ಕಳಸುತ್ತೇವೆ, ಅದಕ್ಕೆ ರಾವಸಾಹೇಬ ಮಾಮಲೇದಾರ ಸಾಹೇಬರವರು ಊರ ಜನರಿಗೆ ಛಂದಾಗಿ ಬೋಧಿಸಿದರು. ನಿಮ್ಮ ಹುಡುಗರನ್ನು ಶಾಲಿಗೆ ಕಳುಹಿಸಿ ಕೊಡಿರಿ ಮಾಸ್ತರರು ಮೋಹನತಯುಳ್ಳವರಾಗಿದ್ದಾರೆ. ಅಂತ ಹೇಳಿ ಯಾವತ್ತು ಹುಡುಗರದು ಪರೀಕ್ಷೆ ತೆಗೆದುಕೊಂಡು ಆನಂದಭರಿತರಾಗಿ ರಜಿಸ್ತರದಲ್ಲಿ ಮಾಸ್ತರರು ಕಲಿಸುವ ವಿಷಯಕ್ಕೆ ಬಹಳ ಮೋಹನತಯುಳ್ಳವರಿದ್ದಾರೆಂದು ಬರೆದು ಸ್ವಾ

೧ ಮೆರುದಿವಸ ಅಥಣಿಗೆ ಹೋಯಿತು. ಆದರೆ ಈ ತಿಂಗಳಲ್ಲಿ ಏನಿಕೆ ಹುಡುಗರನ್ನು ರಾ. ರಾ. ರಾವಸಾಹೇಬ ಮಾಮುಲೇದಾರ ಸಾಹೇಬರವರು ಬೋಧಮಾಡಿದ ಪ್ರಕಾರ ಊರ ಜನರು ಧ್ಯಾನದೊಳಗೆ ತಂದು ಕಳುಹಿಸಿ ಕೊಡುವವರು ಇದ್ದಾರೆ. ಪತ್ರವಿಸ್ತಾರ ಮಾಫಿ ದೈನ್ಯ ಮೂರ್ಕ ಬೇಡಿಕೊಳ್ಳುತ್ತೇನೆ. ಇಂತಿವಿಜ್ಞಾಪನೆ

ತಾ. ೧೮ ಮಾಹೆ ಸಪ್ಟೆಂಬರ } ಸಹಿ ನಾರಾಯಣ ಭಗವಂತ
ಸನ್ನ ೧೮೮೫ ಇಸವಿ. } ವಿ. ಬ್ರಾ. ಮಾ. ತಾ. ಅಥಣಿ

ರಾ. ರಾ. ಕನ್ನಡ ಶಾಲಾಪತ್ರಿಕ ಕರ್ತರಿಗೆ—

ವಿ. ವಿ. ಅಯ್ಯಾ ಪತ್ರ ಕರ್ತರೇ, ಮಾಹೆ ಜೂನ ಹಾಗು ಜುಲ್ಯೆತಿಂಗಳ ಪತ್ರಗಳಲ್ಲಿ ಪ್ರಸಿದ್ಧವಾದ ಲೆಕ್ಖಗಳಲ್ಲಿ ಕೆಳಗೆ ಬರೆದವುಗಳನ್ನು ಬಿಡಿಸಿ ಕಳುಹಿಸಿದ್ದೇನೆ ಆದರೆ ದಯಮಾಡಿ ತಮ್ಮ ಸುಂದರ ಪತ್ರದಲ್ಲಿ ಅವುಗಳಿಗೆ ಸ್ಥಳ ಕೊಡಬೇಕೆಂದು ಬಿನ್ನೈಸಿದ್ದೇನೆ.

ಸೂಚನೆ—"ಕೆಳಗೆ ಆ ಆ ಲೆಕ್ಖಗಳನ್ನೂ ಅವು ಬಿಡಿಸುವ ವಿಸ್ತಾರವನ್ನೂ ಬರೆದರೆ ಬಹಳ ಸ್ಥಳ ಬೇಕಾಗಿ ಎರಡನೇ ಉಪಯುಕ್ತ ವಿಷಯಗಳಿಗೆ ಅಡ್ಡಿಯಾಗುವದೆಂದು ತಿಳಿದು ಆವ ಮಟ್ಟಿಗೆ ಸಂಕ್ಷೇಪವಾಗಿ ಬರೆಯುತ್ತೇನೆ."

ಇ."ಸ. ಕೋ. ಹಿರೇಮಠ ಇವರು ಕೊಟ್ಟ ಉ." ಇದರಲ್ಲಿ ವರ್ತುಳ ಸಮಾಂತರ ಖಂಡದ ಘನಫಲ, ಮಾಡುವದು ಅವಶ್ಯವಾದದ್ದು. ಅದು ಸಿದ್ಧಾಂತಗಳ ಆಧಾರದ ಮೇಲಿಂದ ಶಿದ್ಧವಾಗಿರುವದು. ಹ್ಯಾಗಂದರೆ—"ಎರಡೂ ಮುಖಗಳ ವರಿಘಗಳ ಇಲ್ಲ ವೆ. ವ್ಯಾಸಗಳ ವರ್ಗಗಳನ್ನು

ಮಾಡಿ, ಅದರಲ್ಲಿ ಅವ್ಯೇ ವ್ಯಾಸ ಇಲ್ಲವ್ಯೇ ಪರಿಘಗಳನ್ನು ಗುಣಿಸಿ ಬರುವ ಗುಣಾಕಾರವನ್ನು ಕೂಡಿಸಿ ಬರುವ ಬೇರೀಜಿಗೆ ವ್ಯಾಸ ತೆಗೆದುಕೊಂಡಿದ್ದರೆ ೭V೫೪ಳಿಇವುಗಳಿಂದಲೂ, ಪರಿಘ ತೆಗೆದುಕೊಂಡಿದ್ದರೆ, .೦೭೯೫V ಇವುಗಳಿಂದಲೂ ಗುಣಿಸಿ ಬರುವ ಗುಣಾಕಾರದ $\frac{1}{4}$ವ್ಯೇ ಅದರ ಘನಫಲವು.”

ಇನ್ನು ಆ ಎರಡು ಬುರುಜುಗಳ ಘನಫಲವನ್ನು ಮೇಲೆ ಬರೆದ ಪ್ರಕಾರ ಮಾಡಲಾಗಿ ಮೊದಲನೇದರದು. ಇವಿ೫೦.VVV೦ಮತ್ತು ಎರಡನೇದರದು೨V೫೫೦.೫೬ ಬರುತ್ತವೆ. ಇವುಗಳನ್ನು ತೆಗೆದುಕೊಂಡು ಪ್ರಮಾಣಗಣಿತೆ ಆಧಾರದಿಂದ–

ಆ. ಮು. ಅ ಉ.

ಇವಿ೫೦. VVV; ೨V೫೫೦. ೫೬೩೮೮ = ೬೨೪ ಇಷ್ಟು ಇಟ್ಟಂಗಿಗಳು ಹತ್ತುವವು.

೨. ,,ಕೃ. ಅ. ಕುಲಕರ್ಣಿ ವಿ. ಕನಮಡಿ ಶಾಲೆ.” ಇವರು ಕಳುಹಿಸಿದ ಲೆಕ್ಕದಲ್ಲಿ ಆ ವಸ್ತ್ರದ ಪ್ರತಿಭುಜದ ಉದ್ದಳತೆಗೆ ಸರಿಯಾಗಿ ೭ಷ್ಟ'ಘೂಟುಗಳು :: ೪ಷ್ಟ×೫೨ =೪೬ಷ್ಟ=ಬಂದ ಜನ ಸಂಖೆ. ಅನ್ನು ೪೬ಷ್ಟ×೨೦೦ ಘೂಟ ಉದ್ದ.×೪ ಘೂ. ಅ=೨VV೦೦ಷ್ಟ=ಆ .ವಸ್ತ್ರದ ಚಚ್ಚೌಕ ಘೂಟುಗಳು.

ಇನ್ನು ಶಿದ್ಧಾಂತಗಳ ಆಧಾರದಿಂದ ಅ

ಷ್ಟ – ಷ್ಟ$_{೪}$ = ೪ಷ್ಟ$_{೪}$ = ಅಷ್ಟ ಲಂಬ



$\therefore$ ಷ$\sqrt{\frac{೫}{೪}} \times$ ಷ $\times \frac{೧}{೬} =$ $\frac{\text{ಷ}\sqrt{\frac{೫}{೪}}}{೪}$ = ಅಬಕ ತ್ರಿಕೋಣದ ಹೈ

ತ್ರಫಲ $\therefore$ ಸಮೀಕರಣ ಹಾಕಿ $\frac{\text{ಷ}\sqrt{\frac{೫}{೪}}}{೪}$ = ೨೪೦೦ ಷ ಸ. ಬಿ.

ಉ. $\begin{cases} \text{ಷ} = ೩೭೦ \pm ೩೦. \text{ಕಿ} \text{ ಬಂದು ಭುಜದ ಅಳತಿ.} \\ \text{ಷ}\sqrt{\frac{೫}{೪}} = ೩೦೬೪೫೬೭೭. ೭೦ \text{ ಲಂಬೊಂಚೆ.} \end{cases}$

ಪಿ. ,,ಮು. ಚ. ಬ್ಯಾಗಲೇರಿ ಫ. ಅ. ಬಂಕಾಪೂರ'' ಇವರ ಲೆಕ್ಖವು ಅನಿಮಿತ ಸಮೀಕರಣದಿಂದ ಸಹಜವಾಗಿ ಬಿಡಿಸ ಬಹುದು. —ಅಂದರೆ ೫ರೂ. ಸಂಬಳದವರು ,ಷ' ಜನರು ೩ರೂ. ಸಂಬಳದವರು ,ಯ' ಜನರು. $\therefore$,೩೦೦೦೦ —(ಷ + ಯ), ಇಷ್ಟ ಜನರು ಪಿನೇ ಪ್ರತಿಯವರು ಇವರ ಸಂಬಳದ ಆಕಾರವನ್ನು ಮಾಡಿ ಹತ್ತು ಸಾವಿರ ರುಪಾಯಿಗಳಿಗೆ ಸರಿ ಇಟ್ಟು ೫ಷ + ಯ + $\frac{೧೦೦೦೦ - (\text{ಷ} + \text{ಯ})}{೨}$ = ೩೦೦೦೦. ಈ ಸಮೀಕರಣವನ್ನು ಬಿಡಿಸಲಾಗಿ

ಇನೇ ಪ್ರತಿ ೩೯ — ೪೪ — ೫೩ — ೭೬

ಎನೇ ,, ೯೯೦೩ — ೯೪೦೨ — ೯೭೦೪ — ೯೬೦೪

ಪಿನೇ ,, ೪೦ — ೩೬೦ — ೭೪೦ — ೪೭೦

ಇನ್ನೂ ಇಷ್ಟಿತ ಉತ್ತರಗಳು ಬರುತ್ತವೆ. ತಿಳಿಯುವದು ಇದೇ ಬಿನ್ನಃ

ಮು. ಶಿಗ್ಲಿ ತಾ. ಲಕ್ಷ್ಮೇ ಶ್ವರ ತಾ. ಇ ಸವಟಂಬರಸನ್ನು ೩೪೭೫ ಇಸವಿ. } ವಿಷ್ಣು ಪರಶುರಾಮು ಮೈಲ್ಹಿ. ಸ್ಕೂ. ಮೂ. ಶಿಗ್ಲಿ.

ಶಾಲಾಪತ್ರಕವು.

ಪುಸ್ತಕ ೧೧] [ಸಂಚಿಕೆ ೭

ತಾರೀಖು ೨೫ ನೇ ಮಾಹೆ ಅಕ್ಟಂಬರ ೧೮೬೫.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧವಾದ

ವೃತ್ತಾಂತಗಳು.

ವಿದ್ಯಾಖಾತೆಯ ಡಾಯರೆಕ್ಟರರಾದ ಮೆಹೆಬ್ಬಾನ ಜಾ ಸ್ಫೀಲ್ಡ ಸಾಹೇಬ ಬಹಾದ್ದೂರವರು, ಹೋದ ತಿಂಗಳ ಕೊನೆಗೆ ಧಾರವಾಡಕ್ಕೆ ಬಂದು, ಯೆರಡು ಮೂರು ದಿವಸ ುಂತು, ಟ್ರೇನಿಂಗ್ ಕಾಲೇಜ, ಹಾಯಸ್ಕೂಲ ಮೊದಲಾದ ಾಲೆಗಳನ್ನು ನೋಡಿ, ತಿರಿಗಿ ಟಪಾಲವಾಗದಿಂದ ಬೆಳ ಾವೀ ಮೇಲೆ ಹಾಯ್ದು ಪುಣೆಗೆ ಹೋದರು.

ರಾವಸಾಹೇಬ ವಿದ್ಯಾಖಾತೆಯ ಕನ್ನಡ ತ್ರಾನ್ಸಲೇಟರಿಗೆ ನಡಿಯುವ ತಿಂಗಳದಿಂದ ಒಂದು ವರ್ಷದ ಫೋರ್ (ಅರ್ಧಾ ಪಗಾರದ ಖಾಸಗೀ ರಜೆ) ಯೆಂಬ ರಜೆ ೊರಕಿತು. ಅಲ್ಲಿಯ ವರೆಗೆ ಅವರ ಕೆಲಸ ನೋಡಲಿ ೆ ಬೆಳಗಾವ ಜಿಲ್ಲೇಯ ಡಿ. ಇ. ಇನ್ಸಪೆಕ್ಟರರಾದ ರಾ ಸಾಹೇಬ ಪಾಂಡುರಂಗ ವೆಂಕಟೇಶ ಹೆಂತಾಮಣಿ ಬೇಟ

ಇವರ ನೇಮಣೂಕ ಅಗಟಿಂಗವಾಗಿ ಮೊಕದಬ ಅದಂತ್ರಿ
ಅವರು ಈ ತ್ರಂಗಳ ಇನೇ ತಾರೀಖಿಗೆ ಧಾರವಾಡಕ್ಕೆ
ಬಂದು ತ್ರಾನ್ಸಲೇಟುಬ ಕೆಲಸದ ಚಾರ್ಜ್ ತಕೊಳ್ಳಂಡರು
ಬೆಳಗಾವ ಡಿ. ಇನ್ಸಪೆಕ್ಟರರ ಸ್ಥಳದಮೇಲೆ ಸದ್ಯಕ್ಕೆ, ಧಾ
ರವಾಡ ಜಿಲ್ಲೀಯ ಅಸಿಷ್ಟಾಂಟ ಡಿ. ಇನ್ಸಪೆಕ್ಟರರಾ
ರಾವಸಾಹೇಬ ಅಪ್ಪಾಜಿ ಬಾಬೂರಾವ ದಿವೇಕರ ಇವರನ್ನು
ನೇಮಿಸಿ, ಅವರ ಕೆಲಸಕ್ಕೆ ಧಾರವಾಡ ಸಾಯರ್ಸೂಪ
ನೊಳಗಿನ ಹೊಸದಾಗಿ ಬಂದ ಇನೇ ಅಸಿಷ್ಟಾಂಟರಾದ ರಾ
ರಾ. ರಾವಜಿ ಬಾಳಾಜಿ ಕರಂದೀಕರ ಬಿಂಬಿಪರನ್ನು ನೇ
ಮಿಸಿದ್ದಾರೆ.

ತ್ರಾನ್ಸಲೇಟರರಗ ಕಚೇರಿ--ಮುಖ್ಯಾಮ

ಧಾರವಾಡ.

ನಮ್ಮ ಕಚೇರಿ ಧಾರವಾಡಕ್ಕೆ ಬಂದು ಐದು ತಿಂಗಳು
ಪೂರ್ಣವಾಯಿತು. ಆವರೆಗೂ ಇನ್ನೂ ಎಷ್ಟೋ ಜನ
ಪೊಸ್ತಗರುಕನ್ನಡ ತ್ರಾನ್ಸಲೇಟರ್ ಪತ್ರ ಕೊಟ್ಟಿದ್ದ
ತಪತ್ರಿಕೆಯು ಯಿರುತ್ತಿತ್ತು. "ನಿಮಗಾಗಿ" ಯೆಂಬ ಪತ್ರ
ಮೇಲೆ ವಿಳಾಸ ಬರೆಯುತ್ತಾರೆ. ಅದರಿಂದ ನಮ
ಪ್ರತಿಯೊಂದು ಲಖೋಟೆಗೆ ಬಿ. ಡಬ್ಲ್ಯೂ ಅಕ್ಷರವು ಬರು
ಹಾಸಲು ವಿನಾಕಾರಣ ಬಿಳುತ್ತಿತ್ತು. ಅದರಿಂದ
ನ್ನು ಮುಂದೆ ಪೊಸ್ತರ ಜನರು ಹಾಗ ಬರೆಯುವ "ಧಾ
ವಾಡ" ಯೆಂದು ಪತ್ರ ಬರೆಯುವೇಕು. ಇಲ್ಲದಿದ್ದ
ಅವರ ಲಖೋಟೆಗಳನ್ನು ಹಿಡಿದು ಹಳಸಲಾಗಿಸು. ತಾರಿ

ಬು ಳ್ಳಿನಪಾಹೆ ಆಸ್ಥಾನ್ಯಿಬಿಬ, ಸನ್ನಾ ಅV೭೫೫ನೀ ಇಸವಿ.

P. V. Chintamanpetkar.

ಅಗಷ್ಟಿಂಗ ಕನ್ನಡಪತ್ರಿನ್ನಲೇಟರ, ಇ. ಡಿ.

ನಾವು ಡೋಲಿಬ ಲಗ್ನ ಪ್ರಂಗಳಲ್ಲಿ ತಾಲೀಮು ಮಾಸ್ತರನ ವಿಷಯುಕ್ಕೆ ಬರಬಂತ್ರಿ ಆಗದೆ, ಆ ಮಾಸ್ತರನಿಗೆ ಟ್ರೇನಿಂಗ್ ಕಾಲೇಜಿದಲ್ಲಿ ಏರಿ ದೊಮಾಯಿ ಪಗಾರ ಇದ್ದದ್ದು ಏಳಿ ದೂಪಾಯಿ ಮಾಡಿ, ಆತನು ಟ್ರೇನಿಂಗ್ ಕಾಲೇಜ್ ರಲ್ಲಿದ್ದೂ, ಈ ಮುಖ್ಯ ಲಿನಲ್ಲಿಯೂ ಕಲಿಸಬೇಕೆಂದು ಸೂಚನೆಯು ಆಗಿರುತ್ತದೆಂದು ಕೇಳುತ್ತೇವೆ.

ಕನ್ನಡ ಪಾಲಾಪತ್ರಕ್ಕೆ ವಿಷಯ ಕಳುಹಿಸುವವರಿಗೆ ಸೂಚನೆ.

ಈ ಪತ್ರಕ್ಕೆ ಬರೇ ಲೆಖ್ಖಗಳೂ, ಎರಡನೇಯವರ ಬಾಯಿಂದಕೇಳಿದಂಥ ಸ್ಫುಟ ಕೆಲ್ಲೀಕಗಳೂ ಹೊತ್ತಾರ್ಗಿ ಬೇರೆ ವಿಷಯಗಳೇ ಬರುವದಿಲ್ಲ, ಇದು ನೋಡಿ ನಮಗೆ ಬಹಳ ಆಶ್ಚರ್ಯವಾಗುತ್ತದೆ. ಈ ಪತ್ರಿಕದಲ್ಲಿ ಕೇರಿಸುವದಕ್ಕಾಗಿ, ಇತಿಹಾಸ, ಭೂಗೋಲ ವ್ಯಾಕರಣ, ಜ್ಯೋತಿಃ ಶಾಸ್ತ್ರ, ಶಿಕ್ಷಣಪದ್ಧತಿ, ಹೊಸ ಕವಿತೆಗಳು, ಪ್ರಾಚೀನಶಿಲಾ ಲೇಖಿಗಳು ಮುಂತಾದ ಶಾಲೋಪಯೋಗಿ ವಿಷಯಗಳೂ, ಹಾಂಗು ಆಯಾ ವಿಷಯುಗಳ ಕಳುಹಿಸುವವರು ಇರುವ ಸ್ಥಳಗಳ ಜನರ ನಡನುಡಾವಳಿಗಳೂ, ಉದ್ಯೋಗಗಳೂ, ಪ್ರಾಚೀನ ಕಥೆಗಳೂ ಮೊದಲಾದ ಅನೇಕ ಮನೋರಂಜಕ ವಿಷಯುಗಳೂ ಬರಿಯುತಕ್ಕದ್ದಾಗಿರುತ್ತದೆ.—ಆದದರಿಂ

ದ ಈ ಸೂಚನೆಗಳ ಕಡೆ ದಕ್ಷಿಣ ಭಾಗದೊಳಗಿನ ಯಾವತ್ತು ಮಾಸ್ತರ ಜನರು ಲಕ್ಷ ಕೊಡುವರೆಂದು ಕೋರುತ್ತೇವೆ. ಈ ವಿಷಯಗಳವೇಲೆ ಉತ್ತಮ ರೀತಿಯಿಂದ ನಿಬಂಧಗಳನ್ನಾಗಲೀ ಶಂಕಾಸಮಾಧೀನಗಳನ್ನಾಗಲೀ ಬರೆದು ಕಳುಹಿಸುವ ಮಾಸ್ತರ ಜನರ ಹೆಸರುಗಳನ್ನು ನಾವು ಆಯಾಯ ಜಿಲ್ಲೇಯ ರಾ|| ಸಾ|| ಡಿಪೂಟಿಯವರಿಗೂ ದಕ್ಷಿಣಭಾಗದ ಸಿ|| ಇನ್ಸಪೆಕ್ಟರ ಸಾಹೇಬರಿಗೂ ವರ್ತಕೊಳ್ಳಿ ತಿಳಿಸಿ ಅವರ ವಿಷಯಕ್ಕೆ ಒಳ್ಳೇ ಸಫಾರಸು ಮಾಡುವೆವು.

ಎ. ಕ. ಶಾ. ಪ.

ಅಜಾರಿ ರಜೆ

ಸೌಕರ ಜನರಿಗೆ ಖಾಸಗೀ ಕೆಲಸದ ಬಗ್ಗೆ ಶಿಕ್ಕಪ ರಜೆಯಂತೆಯೇ ಡಾಕ್ಟರರ ಸರಟೇಫಿಕೇಟಿನ ಮೇಲಿಂದ ಶಿಕ್ಕ ರಜೆಯಾದರೂ ತಿಳಿಯಲಾದೀತೆಂದು ಸರಕಾರದವರು ನಿಯಮ ಮಾಡಿದ್ದಾರೆ.

ಕುಟುಂಬವಲ್ಲಿ ಶಾಂತತೆ ಇರುವ ಬಗ್ಗೆ ಉತ್ತಮ ಉಪಾಯವು.

"ಇಂಡಿಯನ್ ಮಿರರ" ಎಂಬ ಪತ್ರದಲ್ಲಿ, ಕುಟುಂಬದೊಳಗೆ ಶಾಂತತೆ ಇರಬೇಕೆಂಬದಾಗಿ ಕೆಲವು ನಿಯಮಗಳನ್ನು ಕೊಟ್ಟಿದ್ದಾರೆ. ಅವು ಯಾವವಂದರೆ:—

೧ ಕುಟುಂಬದಲ್ಲಿ ಯಾವಾಗಲು ಎಲ್ಲ ಸಂಗತ್ರಿಗಳತವ್ಮ ಇಚ್ಛೆಯಂತೆ ಆಗುತ್ತಾವೆಂದು ತಿಳಿಯ ಕೂಡದು

ಆದ ಕಾರಣ ಯಾವದಾದರೊಂದು ಸಂಗತಿ ತಮ್ಮ ಮನಸ್ಸಿನಂತೆ ಆಗದಿದ್ದರೆ ತಮಗೆ ಕೆಟ್ಟ ಕಾಣಿಸದಂತೆ ಜಾಗ್ರತೆಯನ್ನಿಡಬೇಕು.

೩ ಮನುಷ್ಯನು ಸರ್ವ ಗುಣ ಸಂಪನ್ನನಲ್ಲ. ಆದ ಕಾರಣ, ಅವನಿಂದ ಯಾವಾಗಲೂ ದೋಷರಹಿತ ಕೆಲಸಗಳೇ ಆಗಬೇಕೆಂಬ ಅಪೇಕ್ಷೆಯನ್ನು ಮಾಡಬಾರದು.

೪ ಕುಟುಂಬದೊಳಗೆ ಬಹಳ ಜನರು ಇರುತ್ತಾರೆ, ಅವರೆಲ್ಲರ ಗುಣ ಸ್ವಭಾವಗಳನ್ನು ಕುಟುಂಬದೊಳಗಿನ ಪ್ರತಿ ವ್ಯೊಬ್ಬನು ಒಳಿತ್ತಾಗಿ ತಿಳುಕೊಂಡಿರಬೇಕು.

೫ ತಮ್ಮ ಹತ್ತರ ಯಾವದಾದರೊಂದು ವಸ್ತು ಇಲ್ಲವೆ ಯಾವನಾದರೊಬ್ಬ ಮನುಷ್ಯನು ಇದ್ದರೆ, ಏನಾದಾಗ್ಯೂ ಅವನ ವಿಷಯಕ್ಕೆ ಜಾಗೃತೆ ತಕ್ಕೊಳ್ಳವದು ಅವಶ್ಯವಿದ್ದಂತೆ, ಕುಟುಂಬದೊಳಗಿನ ಯೆಲ್ಲ ಜನರ ವಿಷಯಕ್ಕೆ ಜಾಗೃತೆ ತಕ್ಕೊಳ್ಳಬೇಕು.

೬ ಕುಟುಂಬ ದೊಳಗೆ ಯಾವನಿಗಾಬರು ಸುಖ ಇಲ್ಲವೆ ದುಃಖ ಉಂಟಾದರೆ, ಆ ಸುಖ ದುಃಖಗಳನ್ನು ಯೆಲ್ಲರು ತಮಗೆ ಉಂಟಾದಂತೆ ತಿಳಿಯಬೇಕು. ಹೀಗಾವದರಿಂದ ಸುಖವು ಹೆಚ್ಚಾಗುವದು, ದುಃಖವು ಕಡಿಮೆ ಆಗುವದು.

೭ ಯಾವನಿಗಾದರೊಬ್ಬ ಮನುಷ್ಯನಿಗ ಸಿಟ್ಟಿನಿಂದ ಹೆಚ್ಚು ಕಡಿಮೆ ಮಾತಾಡುವ ಪ್ರಸಂಗ ಬಂದರೆ, ಅದನ್ನು ಜಾಣತನದಿಂದ ಆದಷ್ಟು ತಪ್ಪಿಸ ಬೇಕು.

೮ ಮೈಯಲ್ಲಿ ಹಡ್ಡು ಉಂಟಾಗಿ ತಮಗೆ ಬಹಳ ತ್ರಾಸವಾದರೆ, ವಿವೇಕತನದಿಂದ ದಬ್ಬಿ ಕೊಳ್ಳ ಬೇಕು.

೯ ಕುಟುಂಬದಲ್ಲಿ ಯೆರಡನೇ ಮನುಷ್ಯನಿಗೆ ಇಂಥಾ

೨೯. ಉಂಡ್ಮಾಡಲಿ ಅವನ ಸಂಗಡ ಸಭ್ಯ ಮಾತುಗಳನ್ನಾಡಿ
ವನ ಮನಸ್ಸಿಗೆ ಸಮಾಧಾನವಪಡ್ಸುಂಟು ಮಾಡಬೇಕು.

೯ ಕುಟುಂಬದೊಳಗಿನ ಮನುಷ್ಯರು ಯಾವಾಗಲೂ
ಸಂದದಲ್ಲಿ ಇರುವಂತೆ ನಡಿಯಬೇಕು.

೧೦ ತಪ್ಪು ಮೇಲೆ ಇಂಥಾ ಪ್ರಸಂಗ ಒದಗಿದರೂ
ತಪ್ಪು ಕಲ್ಪ್ಯಾಣ ಕರ್ತನಾದ ದೇವರೇ ತಮಗೆ ಇಂಥಾ
ಪ್ರಸಂಗ ತಂದಿದ್ದಾನೆಂದು ತಿಳಿದು ನೋಡಿ, ಮನಸ್ಸಿಗೆ ಅ
ಸಮಾಧಾನ ಮಾಡಿಕೊಳ್ಳಬಾರದು.

೧೧ ತಪ್ಪು ಕೈಕೆಳಗಿನ ನೌಕರ ಜನರಿಗೆ ಎಂದೆಂದೂ
ಬಿರುಸು ಮಾತು ಆಡಬಾರದು.

೧೨ ಕುಟುಂಬದೊಳಗಿನ ಜನರ ಸುಖದ ಕಡಿಗೆ
ಹೊದಲು ಲಕ್ಷ ಕೊಟ್ಟು, ಬಳಿಕ ಸ್ವಂತ ಸುಖದ ಕಡಿಗೆ
ಲಕ್ಷ ಕೊಡಬೇಕು.

೧೩ ಯಾವಾಗಲೂ ಮೃದು ಮಾತುಗಳನ್ನಾಡುತ್ತಿರ
ಬೇಕು, ಮತ್ತು ಸಿಟ್ಟನ್ನು ತೀರ ಕಡಿಮೆ ಮಾಡಬೇಕು.

೧೪ ಯಾವನಾದರೊಬ್ಬನು ಕಠಿಣ ಮಾತುಗಳಿ
ದಾಗಲೀ ಕೃತಿಯಿಂದಾಗಲೀ ತಮ್ಮ ಮನಸ್ಸನ್ನು ನೋ
ಯಿಸಿದರೆ, ತಮಗೂ ಇಂಥಾ ಪ್ರಸಂಗಗಳು ಬರುತ್ತವೆ
ದು ವಿಚಾರಮಾಡಿ ಆತನ ಅಪರಾಧ ಕ್ಷಮಿಸಬೇಕು.

೧೫ ತಮ್ಮ ಸ್ತುತಿ ತಾವೇ ಮಾಡಿಕೊಳ್ಳಬಾರದು
ಯೆರಡನೇಯವರನ್ನೇ ಸ್ತುತಿಸುತ್ತಿರಬೇಕು.

೧೬ ಹುಡುಗರ ಸಂಗಡ ತಾಂತ್ರ ಸ್ವಭಾವದಿಂದಿರಬೆ
ಕು. ಅವರನ್ನು ಒಳ್ಳೇ ಮಾರ್ಗಕ್ಕೇ ತರಬೇಕು.

ಮೇಲೆ ಹೇಳಿದ ನಿಯಮಗಳು ಬಹಳೇ ಚನ್ನಾ

ರುತ್ತವೆ. ಆದದರಿಂದ ಪ್ರತಿಯೊಂದು ಕುಟುಂಬದವರು ಲಕ್ಷ ಕೊಟ್ಟು ಇವುಗಳನ್ನನುಸರಿಸಿದರೆ, ದೇಶದ ಕಲ್ಯಾಣವಾಗುವದೆಂಬದಕ್ಕೆ ಸಂದೇಹ ವಿಲ್ಲ.

ನೇತ್ರ ರೋಗವನ್ನು ಪರಿಹರಿಸುವ ಉಪಾಯವು. ಭೋಜನವಾದ ಮೇಲೆ ಕೈಗಳು ಹಸಿ ಇರುವಾಗ ಅಂಗೈಗೆ ಅಂಗೈ ಕೂಡಿಸಿ ಘಸ ಘಸ ತಿಕ್ಕಿ, ಕಣ್ಣು ಒರಸಿಕೊಳ್ಳ ಬೇಕು. ಅದರಿಂದ ನೇತ್ರದಲ್ಲಿ ಹುಟ್ಟಿದಂಥ ರೋಗ ತಿಮಿರಗಳು ಪರಿಹಾರವಾಗುತ್ತವೆ. ಇದೇ ಪ್ರಕಾರ ದಿನಂಪ್ರತಿಯಲ್ಲಿ ಮೂರು ಸಾರಿ ತಣ್ಣೀರಿಂದ ಬಾಯಿ ಮುಪ್ಪುಕೊಂಡು, ಬೇರೆ ತಣ್ಣೀರು ತಕ್ಕೊಂಡು ಮೂರು ಸಾರಿ ಕಣ್ಣುಗಳಿಗೆ ಉಗ್ಗ ಬೇಕು, ಅಂದರೆ ಬಹಳ ದುಃಖ ಕೊಡುವಂಥ ನೇತ್ರ ರೋಗಗಳು ಯಾವೂ ಆಗುವದಿಲ್ಲ.

ಸೊಲ್ಯೂಸು.

ದಕ್ಷಿಣ ಭಾಗದೊಳಗಿನ ಯೂಪತ್ತು ಸ್ಕೂಲ ಮಾಸ್ತರ ಜವರಿಗೆ ತಿಳಿಸುವದೇನಂದರೆ, ಮುಂಬಯಿ ಸರಕಾರದವರು ತಮ್ಮ ಅಲಾಮೆಯ ಪಣಾನೆಯ ಕೋಶವನ್ನು ಮಾಡತಕ್ಕವರಿದ್ದಾರೆ. ಆ ಬಗ್ಗೆ ಅವರ ಕಡೆಯಿಂದ ಬರುವ ಜಿಂದ ಕೆಲವು ಪ್ರಶ್ನೆಗಳನ್ನು ಮುಹೆರಬೂನ ಯೆಜ್ಜುಕೇನ ಲಾ ಇನಸ್ಪೆಕ್ಟರ, ಸಕ್ಷಿಣ ವಿಭಾಗ, ಇವರ ಅಪ್ಪಣೆಯಿಂದ ಕೆಳಗೆ ಪ್ರಸಿದ್ಧ ಮಾಡಿರುತ್ತೇವೆ. ಅವರು ಯೂಪತ್ತು ಮಾಸ್ತರರು ಇವರು ಅವುಗಳಿಗೆ ಸಮುಪರ್ಕ ಉತ್ತರಗ

ನ್ನು ಬರೆದು, ಆದಷ್ಟು ತೀವ್ರ ತಮ್ಮ ತಮ್ಮ ಜಿಲ್ಲೆಯ ಡಿ. ಎ. ಇನ್ಸಪೆಕ್ಟರನವರ ಕಡೆಗೆ ಕಳುಹಿ ಕೊಡತಕ್ಕದ್ದು.

ತಾ. ೧೬ ಆಕ್ಟೋಬರ ೧೮೮೫ ಇಸವಿ. } P. V. Chintamanpetkar. Acting Kannada Translator

---

೧೬

ಜಾತಿ.

೧ ನಿಮ್ಮ ಜಾತಿಯ ಉತ್ಪತ್ತಿಯ ಬಗ್ಗೆ ನಿಮಗೆ ಗೊತ್ತಿದ್ದದ್ದು ಬರೆಯಿರಿ. ಆ ವಿಷಯದ ಬಗ್ಗೆ ಪುರಾಣ, ಗ್ರಂಥ, ದಂತಕಥೆಗಳಿದ್ದರೆ ಸ್ವಲ್ಪದರಲ್ಲಿ ಅವುಗಳ ಸಾರಾಂಶವನ್ನು ಬರೆಯಿರಿ.

೨ ನಿಮ್ಮ ಜಾತಿಯಲ್ಲಿ ಶಾಖೆಗಳು (ಉಪಭೇದಗಳು) ಅವೆಯೋ ಹ್ಯಾಗೆ? ಇದ್ದರೆ ಅವು ಯೆಷ್ಟು ಅವೆ? ಅವುಗಳ ಮಹತ್ವದ ಪ್ರಕಾರ ಕ್ರಮದಿಂದ ಅವುಗಳ ಹೆಸರುಗಳನ್ನು ಬರೆಯಿರಿ? ನಿಮ್ಮ ಜಾತಿಯು ಯಾವ ಜಾತಿಯ ಶಾಖೆ ಯೆಂದು ತಿಳಿಯುತ್ತಿರೋ ಆ ಮೂಲ ಜಾತಿಯ ಹೆಸರು ಬರೆಯಿರಿ. ಈ ಜಾತಿಗೂ ಬೇರೆಜಾತಿಗಳಿಗೂ ಸಂಬಂಧ ತೋರಿಸುವಂಥ ಮಾಹಿತಿ ಗೊತ್ತಿದ್ದರೆ ಕೂಡಿರಿ.

೩ ಈ ಪ್ರಾಂತದಲ್ಲಿ ನಿಮ್ಮ ಜಾತಿಯವರ ಮನೆಗಳು ಯೆಷ್ಟು ಅವೆ? ಅವರ ಜನ ಸಂಖ್ಯೆ ಯೆಷ್ಟು? ನಿಮ್ಮ ಜಾತಿಯವರು ಮುಂಬಯಿ ಇಲಾಖೆಯ ಇಲ್ಲವೆ ಹಿಂದುಸ್ಥಾನದ ಯಾವದಾದರೂ ಭಾಗದಲ್ಲಿ ಇರುತ್ತಾರೋ ಹ್ಯಾಗೆ? ಇರುತ್ತಿದ್ದರೆ ಅಹಮದಸಿನ ಮೇಲಿಂದ ಅವರ (೧) ಮನೆಗಳ ಸಂಖ್ಯೆ (೨) ಜನಸಂಖ್ಯೆ ಕೊಡಿರಿ.

೪ ನಿಮ್ಮ ಕುಲದೇವತೆಯ ವೃತ್ತಾಂತವನ್ನು ಬರೆಯಿರಿ. ಹಾಂಗೂ ಆ ದೇವತೆಯ ಮುಖ್ಯಸ್ಥಾನವು ಯಾವದಾವರು ಇದ್ದರೆ ಹೇಳಿರಿ.

೫ ನಿಮ್ಮ ಜಾತಿಯ ಜನರು ಧರ್ಮದ ಯಾವ ಪಂಥಕ್ಕೆ ಸೇರಿರುತ್ತಾರೆ. ಅವರು ಹಣೆಯಮೇಲೆ ಹಚ್ಚುವ ನಾಮದ ಆಕಾರವನ್ನು ಸ್ಪಷ್ಟವಾಗಿ ಹೇಳಿರಿ.

೬ ಮಗ್ಗಲಿಗೆ ಬರೆದಿರುವ ಪ್ರಸಕ್ತಿಗಳಲ್ಲಿ ನಿಮ್ಮ ಜಾತಿಯವರು ಯಾವ ಸಂಸ್ಕಾರ (ಕರ್ಮ)ಗಳನ್ನು ಮಾಡುತ್ತಾರೆ? ಆ ಸಂಸ್ಕಾರಗಳಲ್ಲಿ ಕುದ್ದ ಧರ್ಮ ಸಂಬಂಧವು, ಯಾವವು ರೂಢಿಯಿಂದ ಬಂದಂಥವು ಯಾವವು?

ಜನ್ಮ, ಉಪವೀತಧಾರಣ, ಮೌಂಜೀಬಂಧನ, ವಾ) ದೀಕ್ಷೆಯ, ಗರ್ಭಧಾರಣ, ಮರಣ.

೭ ನಿಮ್ಮ ಜಾತಿಯವರು ಅವಶ್ಯವೆಂದು ತಿಳಿದ ಜಾತೀಯ ಭೋಜನಗಳು ಯಾವವು, ಐಚ್ಛಿಕವಾದ ಯಾವವು ಇವು ಬರೆಯಿರಿ.

೮ ಹೆಣವನ್ನು ಸ್ಮಶಾನಕ್ಕೆ ಒಯ್ಯುವಾಗ ನಿಮ್ಮ ಜಾತಿಯವರು ರಾಮನಾಮ ತಕ್ಕೊಳ್ಳುವ ರೀತಿ ಯಾವದು?

೯ ನಿಮ್ಮ ಜಾತಿಯವರು ತಮ್ಮ ತಮ್ಮೊಳಗೆ ಯಾವ ರೀತಿಯಿಂದ ನಮಸ್ಕಾರ ಮಾಡುತ್ತಾರೆ, ಮತ್ತು ಯೆಡನೇ ಜಾತಿಯವರಿಗೆ ಹ್ಯಾಗೆ ನಮಸ್ಕಾರ ಮಾಡುತ್ತಾರೆ?

೧೦ ನಿಮ್ಮ ಜಾತಿಯವರು ಬಹಳ ಮಾಡಿ ಯಾವ ಉದ್ಯೋಗ ಮಾಡುತ್ತಾರೆ, ಹಾಂಗು ವರ್ಷಕ್ಕೆ ಸ್ಥೊಂದು ಕುಟುಂಬದ ಆದಾಯವೆಷ್ಟಾಗುತ್ತದೆ?

೫೫ ನಿಮ್ಮ ಜಾತಿಯ ಗಂಡಸರೂ ಹೆಂಗಸರೂ ಪ್ರಸಂಗ ಭೇದದಿಂದ, ಮನೆಯಲ್ಲಿ ಇದ್ದಾಗ, ಕಾಂಗು ಜೋರಾಗಿ ಬೋಗುವಾಗ, ಯಾವ ಪ್ರಕಾರದ ಮೋಷಾಕು ಉಡಿಸೊಳ್ಳುತ್ತಾರೆ? ಈ ಮೋಷಾಕದಲ್ಲಿ ಯೀನಾದರು ವಿಶೇಷತ್ವ ಲಕ್ಷಣ ಕೊಡತಕ್ಕಂಥಿ ಇದ್ದರೆ ಹೇಳಿರಿ? ಅಲ್ಲದೇ ಇತ್ತೀಕಡೆಗೆ ಯೀನಾದರು ಹೊಸ ಚಾಲಿನೆ ಬಿಗಿದ್ದರೆ ಬರೆಯಿರಿ?

೫೬ ನಿಮ್ಮ ಜಾತಿಯಲ್ಲಿ ಮೂಡತಕ್ಕ ಹಬ್ಬಗಳನ್ನು ಬರೆಯಿರಿ. ಅವುಗಳ ಮೂಲದ ಬಗ್ಗೆ ಆ ದಿವಸ ಮೂಡತಕ್ಕಂಥದರ ಬಗ್ಗೆ. ನಿಮಗೆ ಯೀನು ಗೊತ್ತಿದೆ?

೫೭ ನಿಮ್ಮ ಜಾತಿಯವರು ಯಾವ ಪ್ರಕಾರದ ಆಟ ಬೀಟಗಳನ್ನು ಆಡುತ್ತಾರೆ.

೫೮ ನಿಮ್ಮ ಜಾತಿಯಲ್ಲಿ ಪುನರ್ವಿವಾಹ ನಡಿಯುವದೋ? ನಡಿಯುವದಿದ್ದರೆ ಯಾರು ಯಾಕೆ ನಡಿಯುವದಿಲ್ಲ, ಯೆಂಬ ಬಗ್ಗೆ ನಿಮ್ಮ ಅಭಿಪ್ರಾಯ ಬೇಳಿರಿ.

೫೯ ನಿಮ್ಮ ಜಾತಿಯವರ ಪ್ರೊಟ್ಟು ಆಸ್ತಿ, ಸ್ಥಾವರ ಜಂಗಮ ಕೂಡಿ ಯೆಷ್ಟಿದೀತು?

೬೦ ನಿಮ್ಮ ಜಾತಿಯವರ ಜನಸ್ಥಿತಿ ಸಾಧಾರಣವಾಗಿ ಹ್ಯಾಗಿರುವದು? ಮತ್ತು ಅವರ ಸ್ಥಿತಿ ಸುಧಾರಿಸುವದಕ್ಕೆ ಯಾವ ಪ್ರತಿಬಂಧಗಳು ಇರುತ್ತವೆ.?

೬೨

ಜಾತಿ ಭೋಜನಗಳು.

೬೧ ಬೇರೆ ಬೇರೆ ಜಾತಿಯವರು ಜಾತಿ ಭೋಜನಗಳ

ನ್ನು ಯಾವ ಪ್ರಸಂಗದಲ್ಲಿ ಮಾಡಿಸುತ್ತಾರೆ? ಅವುಗಳಲ್ಲಿ ಶುದ್ಧ ಧರ್ಮ ಸಂಬಂಧದವು ಯಾವವು? ಲೌಕೀಕದವು ಯಾವವು? ಮಾಡಲಿಕ್ಕೇ ಬೇಕಾದಂಥವು ಯಾವವು? ಇಚ್ಛಾನುಸಾರವಾದವು ಯಾವವು?

೩ ಉತ್ಸವಗಳಲ್ಲಿ ಹೊರಟಾದ ಜಾತಿ ಭೋಜನಗಳನ್ನು ಜಾತಿಯವರೆಲ್ಲರು ಕೂಡಿ ಸುಮಾಡಿರುತ್ತಾರೋ ಹ್ಯಾಗೆ? ಹಾಗಿದ್ದರೆ ಆ ಕೆಲಸಕ್ಕೆ ಪತ್ತುವ ಖರ್ಚು ಯೆಲ್ಲಿಂದ ಕೊಡುತ್ತಾರೆ?

೪ ಯಾವದಾವರೊಂದ ಉದ್ಯೋಗ ಮಾಡುವವರಿಗೆ ಆ ಉದ್ಯೋಗದ ಮಂದಾ ಜನರು ಭೋಜನ ಸಮಾರಂಭವನ್ನು ಮಾಡಿಸುತ್ತಾರೋ ಹ್ಯಾಗೆ? ಹಾಗಿದ್ದರೆ ಯಾವ ಪ್ರಸಂಗಗಳಲ್ಲಿ ಈ ಪ್ರಕಾರದ ಭೋಜನಗಳನ್ನು ಮಾಡಿಸುತ್ತಾರೆ? ಅವುಗಳ ಖರ್ಚು ಎಲ್ಲಿಂದ ಕೊಡುತ್ತಾರೆ? ಅವುಗಳನ್ನು ಯಾವ ಸ್ಥಳದಲ್ಲಿ ಮಾಡಿಸುತ್ತಾರೆ? ಅವುಗಳಿಗೂ, ಸಾಧಾರಣ ಜಾತಿ ಭೋಜನಗಳಿಗೂ ಭೇದವೇನು?

೫ ಯಾವ ಪ್ರಸಂಗಗಳಲ್ಲಿ, ಮತ್ತು ಯಾವ ವರ್ಗದ ಜನರನ್ನು, ತಮ್ಮ ಜಾತಿಯವರಿಗೆಲ್ಲ ಆಮಂತ್ರಣ ಕೊಡುತ್ತಾರೆ? ಯಾವ ಪ್ರಸಂಗಗಳಲ್ಲಿ ಮೊಂದೇ ವ್ಯವಹಾರದ ಜನರನ್ನು ಕರೆದರೆ ನಡೆಯುವದು? ಮತ್ತು ಯಾವ ಪ್ರಸಂಗದಲ್ಲಿ, ಬಳಗದವರನ್ನೂ (ಗೋತ್ರಜರನ್ನು) ಇಷ್ಟ ಮಿತ್ರರನ್ನೂ ಕರೆಯುವರು?

೬ ಬಹಳಮಾಡಿ ಜಾತಿಭೋಜನಗಳು ಯಾವಸ್ಥಳದಲ್ಲಿ ಆಗುತ್ತವೆ? ಊಟಕ್ಕೆ ಬಂದವರ ಊಡಿಗೆಗಳು ಯಾ

ವ ಪ್ರಕಾರದವು ಇರುತ್ತವೆ? ಅಡಿಗೆ ಯಾರು ಮಾಡುತ್ತಾರೆ? ಮತ್ತು ಯಾರು ಬಡಿಸುತ್ತಾರೆ? ಯಾವ ಜಾತಿಯವರಲ್ಲಿ ಗಂಡಸರೂ ಹೆಂಗಸರೂ ಒಮ್ಮೆಲೆ ಊಟಕ್ಕೆ ಕೂಡುತ್ತಾರೆ? ಅಲ್ಲಿ ಹುಡುಗರು ಬರುತ್ತಾರೋ ಹ್ಯಾಗೆ? ಬರುತ್ತಿದ್ದರೆ ಅವರು ಯೆಲ್ಲಿ ಕೂಡ್ರುತ್ತಾರೆ?

೬ ಯಜಮಾನನು ತನ್ನ ಜಾತಿಯವರಿಗೇ ಆಮಂತ್ರಣ ಕೊಡುತ್ತಾನೋ ಅಥವಾ ಯೆರಡನೇ ಜಾತಿಯ ತನ್ನ ಮಿತ್ರರನ್ನೂ ಕರೆಯುತ್ತಾನೋ? ಯರಡನೇ ಜಾತಿಯವರನ್ನು ಕರೆಯುತ್ತಿದ್ದರೆ, ಅವರು ಇವರೊಳಗೆ ಬಂದು ಊಟಕ್ಕೆ ಕೂಡ್ರುತ್ತಾರೋ ಅಥವಾ ಹೊರಗೆ ಬೇರೆ ಕೂಡ್ರುತ್ತಾರೋ? ಒಬ್ಬ ಗೌಡನು ತನ್ನ ಊರವರಿಗೆಲ್ಲ ಊಟ ಮಾಡಿಸಿದರೆ ಅವನ ಮನೆಯಲ್ಲಿ ಯಾವಜಾತಿಯವರು ಊಟಕ್ಕೆ ಕೂಡ್ರುವರು? ಯಾವ ಜಾತಿಯವರು ಹೊರಗೆ ಬೇರೆ ಕೂಡ್ರುವರು? ಯಾವಜಾತಿಯವರು ಬಡಿಸಿಕೊಂಡು ಮನೆಗೆ ತಕ್ಕೊಂಡು ಹೋಗುವರು?

೭ ಬೇರೆ ಬೇರೆ ಜಾತಿಯವರಲ್ಲಿ ಬ್ರಾಹ್ಮಣರಿಗೆ ಊಟಮಾಡಿಸುವ ರೀತಿ ಯೆಷ್ಟು ಮಟ್ಟಿಗೆಉಂಟು? ಬ್ರಾಹ್ಮಣರು ಯೆರಡನೇ ಜಾತಿಯವರ ಭೋಜನ ಸಮಾರಂಭಕ್ಕೆ ಬರುವರೋ ಅಥವಾ ಅವರಿಗೆ ಬೇರೆ ದಿವಸನೇಮಿಸಿ ಭೋಜನ ಮಾಡಿಸುವರೋ? ಉಪಾಧ್ಯಾರನ್ನು ಊಟಕ್ಕೆ ಕರೆದರೆ ಅವರ ಕುಟುಂಬದವರನ್ನೆಲ್ಲ ಕರದಂತೆ ಆಗುತ್ತದೆಯೋ ಹ್ಯಾಗೆ?

೮ ಜಾತಿ ಭೋಜನದ ಕಾಲಕ್ಕೆ ಯಾವ ಜಾತಿಯವರಲ್ಲಿ ಊಟಕ್ಕೆ ತಳಿಗೆಗಳನ್ನು ತಕ್ಕೊಳ್ಳುತ್ತಾರೆ? ಯಾರ

ಲ್ಲಿ ಯಿಲೆಗಳಮೇಲೆ ಊಟ ಮಾಡುತ್ತಾರೆ? ತಾಟು ತ
ಕೊಳ್ಳುತ್ತಿದ್ದರೆ ಅವು ತಾಮ್ರದವೋ, ಹಿತ್ತಾಳವೋ,
ಣ್ಣಿನವೋ ಯಾತರವು ಇರುತ್ತವೆ? ಯಾವಜಾತಿಯವ
ಲ್ಲಿ ಸ್ನೇಮಾಚಾರದ ಅಡಿಗೆಯ ಭಾಂಡಗಳು ಇರುತ್ತವೆ?
ವು ಯಾರಪಕ್ಷದಲ್ಲಿ ಇರುತ್ತವೆ? ಅವು ಬೇಡಿದವರಿಗೆ
ಕೊಡುವಬಗ್ಗೆ ನಿಯಮಗಳು ಯಾವವಿರುತ್ತವೆ.?

೯ ಜಾತಿ ಭೋಜನಗಳಲ್ಲಿ ಏ ನೇ, ಎ ನೇ, ಳಿನೇ,
ರಿಂದು ಮೂರು ಪಗರ್ಗಳನ್ನು ಮಾಡಿ ಅವುಗಳ ಮು
ಲ್ಲಿ ಪ್ರಕಾರ ಹೇಳಿರಿ. ಪ್ರತಿ ಪ್ರೊಂದು ಪಗರ್ದ ಊಟದ
ಲ್ಲಿ ತಲಾಗಿ ಖರ್ಚು ಯಷ್ಟು ಬೀಳುತ್ತದೆ.? ಜಾತಿ
ೋಜನ ಮಾಡಿಸುವ ಬೇರೆ ಬೇರೆ ಪ್ರಸಂಗಗಳಲ್ಲಿ ಪ್ರ
ಪ್ರೊಂದಕ್ಕೆ ತಕ್ಕ ಪ್ರಕಾರವನ್ನು ನಿಶ್ಚಯಿಸುವದಕ್ಕಾಗಿ
ಮಾಪದಾಡರು ನಿಯಮ ಇಲ್ಲವೆ ರೂಢಿ ಇದ್ದರೆ ಹೇಳಿ
. ಮತ್ತು ಈ ಪ್ರಕಾರ ಭೋಜನಗಳನ್ನು ಮಾಡಿಸುವ
ರಲ್ಲಿ ಶ್ರೀಮಂತರಿಗೆ, ಬಡಪರಿಗೆ, ಹಾಂಗೂ, ಮಧ್ಯ
ಪ್ರತಿಯವರಿಗೆ ಅಜಮಾಸು ಖರ್ಚು ಯೆಷ್ಟು ಬೀ
ುವದು?

ಸೂಚನೆ–ಈ ಅಜಮಾಸು ಮಾಡುವದರಲ್ಲಿ ಊಟ
ಬರುವವರ ಸಾಧಾರಣ ಸಂಖ್ಯೆ ಅಂದರೆ ಊಟಕ್ಕೆ
ತಿಯವರು ಯೆಲ್ಲರು ಬರುವರೋ? ವ್ಯವಹಾರದವರೇ
ರುವರೋ, ಇಲ್ಲವೆ ಅವ್ವರೂ ಇವ್ವರೂ ಬರುವರೋ
ಂಬುದನ್ನೂ ತಲಾಗಿ ಅಜಮಾಸು ಖರ್ಚು ಯೆಷ್ಟು ಬ
ುವದು ಯೆಂಬದನ್ನೂ ಲಕ್ಷದಲ್ಲಿ ಇಡತಕ್ಕದ್ದು.

೩೦ (ಅ) ಊಟಕ್ಕೆ ಬರುವವರಿಗೆ ಯಾರು ಅಮಂ

ತ್ರಣ ಕೊಡುತ್ತಾರೆ? ಮತ್ತು ಆಮಂತ್ರಣದ ಪ್ರಕಾ
ಯಾವದು? (ಬ) ಶ್ರೀಮತ್ತರೂ, ಮಧ್ಯಮ ಪ್ರತಿಯ
ರೂ, ಬಡಪರೂ ಸಮಾರಂಭದ ಸಾಮಾನುಗಳನ್ನು ಹ್ಯಾ
ಕೂಡಿಸುತ್ತಾರೆ? ಹಾಗೂ ಅವುಗಳ ಕ್ರಯ ಹ್ಯಾಗೆ ಕ
ಡುತ್ತಾರೆ? (ಕ) ಅಡಿಗೆಯವರನ್ನೂ, ಆಳುಗಳನ
ಯಾವ ಯಾವಪ್ರಕಾರದಿಂದ ತಂದು ಕೊಡುತ್ತಾ
(ಡ) ಊಟಕ್ಕೆ ಕೂಡುವದಕ್ಕಾಗಿ ಮನೆ ಇಲ್ಲವೆ ಬೈ
ಸ್ಥಳಗಳನ್ನು ಯಾವರೀತಿಯಿಂದ ದೊರಕಿಸುತ್ತಾರೆ?

೧೭ ಜಾತಿ ಭೋಜನ ನಡೆದಾಗ (ಅ) ಗಂಡಸರ
ಹೆಂಗಸರೂ ಪ್ರೊವ್ಯೆಲೆ ಉಣ್ಣುತ್ತಾರೋ ಇಲ್ಲವೊ
(ಬ) ವಿಧವೆಯರನ್ನು ಕರೆಯುತ್ತಾರೋ ಇಲ್ಲವೊ
(ಕ) ಎಲೆಗಳನ್ನು ಹಾಕುತ್ತಾರೋ ಇಲ್ಲವೋ? (ಡ)
ಲೆ ಬಡಿಸೋಣಾದಮೇಲೆ ಊಟಕ್ಕೆ ಆರಂಭ ಮಾಡುತ್ತ
ರೋ ಅಥವಾ ಅದರ ಪೂರ್ವದಲ್ಲಿ ಆರಂಭ ಮಾಡುತ್ತ
ರೋ? (ಇ) ಭೋಜನಕ್ಕೆ ಕೂಡುವ ಹೊತ್ತು ಯಾ
ದು? (ಫ) ಊಟಕ್ಕೆ ಬಂದ ಗಂಡಸರೂ ಹೆಂಗಸರೂ ಯ
ವಪ್ರಕಾರದ ವಸ್ತ್ರ ಧರಿಸುತ್ತಾರೆ? ಇವುಗಳ ಬಗ್ಗೆ ಬೇ
ಬೇರೆ ಜಾತಿಯವರಲ್ಲಿ ನಡೆಯುವ ರೂಢಿಗಳುಯಾವವ

೧೮ ಜಾತಿ ಭೋಜನಗಳಲ್ಲಿ ಯಾವ ಜನರು ಬರ
ದಿಲ್ಲ?

೧೮

ಹಬ್ಬಗಳು.

೧ ಹಿಂದು ಜನರೊಳಗೆ ಬೇರೆ ಬೇರೆ ಜಾತಿಯವ

ಮುಖ್ಯ ಹಬ್ಬಗಳು ಯಾವವು? ಎಲ್ಲ ಜಾತಿಯವರು ಆ
ಹಬ್ಬಗಳನ್ನು ಮಾಡಲಿಕ್ಕೇ ಬೇಕೋ ಹ್ಯಾಗೆ? ಅವುಗಳ
ನ್ನು ಮಾಡಿಸುವದಕ್ಕೆ ಯಾವ ನಿರ್ಬಂಧಗಳನ್ನು ಮಾಡಿ
ರುತ್ತಾರೆ? ಪಟ್ಟಣದ ನಿವಾಸಿಗಳು, ವ್ಯಾಪಾರಿಗಳು, ಕಾ
ರಾಗೀರರು, ಹಬ್ಬದ ಸಂಬಂಧದ ನಿಯಮಗಳನ್ನು ಮು
ರಿದರೆ ಅವರಿಗೆ ಆಗತಕ್ಕ ಶಾಸನ ಜಾತಿಯ ಪಂಚರು ಮಾ
ಡುತ್ತಾರೋ ಇಲ್ಲವೆ ಆ ಮಾತಿನ ನಿರ್ಣಯವನ್ನು ವ್ಯಾ
ಪಾರದ ಮುಹಾಜನರು ಮಾಡುತ್ತಾರೋ? ಹಬ್ಬದ ದಿವಸ
ದಿನಗೆಲಸದ ಕೆಲವು ಭಾಗಗಳನ್ನು ಯೆಷ್ಟು ಮಟ್ಟಿಗೆ
ಬಿಡುತ್ತಾರೆ? ಪೂರ್ಣ ವಿಶ್ರಾಂತಿ ಯೆಷ್ಟು ಮಟ್ಟಿಗೆ ಬೇ
ಕಾಗುವದು? ಹಿಂದು ಜನರು ಸಾಧಾರಣವಾಗಿ ಪರ್ಷದಲ್ಲಿ
ಸೆಷ್ಟು ದಿನ ವಿಶ್ರಾಂತಿಯ ದಿನಗಳೆಂದು ಯೆಣಿಸುತ್ತಾ
ರೆ? ಆ ದಿನಗಳಲ್ಲಿ ತಿರಿ ತಿರಿಗಿ ಬರುವಂಥವು ಯಾವವು?
ಹಾಂಗು ವಿಶೇಷ ಪ್ರಸಕ್ತಿಗಳು ಯಾವವು? ಹಬ್ಬಗಳ
ನ್ನು ಮಾಡುವ ರೀತಿ ಯಾವದು? ಹಬ್ಬದ ದಿನ ದಿನಕ್ಕೆಂ
ಚೆಲುವ ವಸ್ತ್ರಗಳನ್ನು ಹೊರುವದೂ, ವಿಷ್ಟಾನ್ನವ
ನ್ನು ಭೋಜನ ಮಾಡುವದೂ ಅವಶ್ಯವೋ ಹ್ಯಾಗೆ?

೨ ಒಕ್ಕಲತನದವರೂ, ಕೂಲಿಯವರೂ, ದೈಪ್ರಳ್ಳವ
ಹಬ್ಬದ ದಿನ ಯೆಷ್ಟು ಹೊತ್ತು ವಿಶ್ರಾಂತಿಯ ತ
ಕ್ಕೊಳ್ಳುವರು? ಯಜಮಾನನು ತನ್ನ ಆಳುಗಳಿಗೆ ಊಟ
ಮಾಡ್ಸಿಗಲಿ, ಉಡಿತವನ್ನಾಗಲಿ ಯಾವ ಯಾವ ಹಬ್ಬಗಳ
ಲ್ಲಿ ಕೊಡಬೇಕಾಗುತ್ತದೆ?

೩ ಹಿಂದು ಜನರು ಯಾವತ್ತು ಹಬ್ಬಗಳಲ್ಲಿ ಧರ್ಮ
ಬಂಧದ ವಿಧಿಗಳನ್ನು ಮಾಡಲಿಕ್ಕೇ ಬೇಕೋ ಹ್ಯಾಗೆ?

ಉಪವಾಸ ಮಾಡುವ ದಿವಸಗಳು ಯವಾವವ್ರು? ಭೋಜನ
ಸಮಾರಂಭಗಳನ್ನು ಆನಂದಕಾರಕ ನೃತ್ಯಗಳನ್ನು ಮಾ
ಡುವ ದಿವಸಗಳು ಯಾವವು?

ಈ ಪ್ರಶ್ನೆಗಳಿಗೆ ಜೈನ, ಮುಸಲ್ಮಾನ, ಪಾರ್ಸೀ ಜನ
ರಬಗ್ಯೆ ಉತ್ತರಗಳನ್ನು ಕೊಡಿರಿ.

ಕೀಳ ತರದ ಹಿಂದೂ ವರ್ಗಗಳು.

ಹಿಂದು ಜನರಲ್ಲಿ ಬೇರೆ ಬೇರೆ ಕೀಳ ಜಾತಿಗಳ ಹ
ಗ್ಗೆ ಕೆಳಗೆ ಬರೆದ ಪ್ರಶ್ನೆಗಳಿಗೆ ಪ್ರತ್ಯೇಕವಾಗಿ ಉತ್ತರ
ಗಳನ್ನು ಕೊಡಿರಿ:—

೧ ಈ ಪ್ರಾಂತದೊಳಗಿನ ಕೀಳ ಜಾತಿಗಳ ವೃತ್ತಾ
ನ್ನು ಹೇಳುವಂಥ ಸ್ಥಳಿಕ ಪುರಾಣ ಇಲ್ಲವೆ ಪ್ರಾಚೀನ
ಗ್ರಂಥ ವೇನಾದರು ಉಂಟೋ? ಆ ಕೀಳ ಜಾತಿಯವರ
ಈ ದೇಶಕ್ಕೆ ಬಂದ ವಿಷಯ ಗೊತ್ತುಂಟೋ? ಅವರ ಪ್ರಾ
ಚೀನ ಕಲಹಗಳ ಬಗ್ಗೆ ಆಗಲಿ ಧರ್ಮ ಸಂಬಂಧದ ವಾ
ವಿವಾದಗಳ ಬಗ್ಗೆ ಆಗಲಿ, ದಂತಕಥೆಗಳು ಯೇನಾದರ
ಉಂಟೋ? ಮತ್ತು ಆ ಜಾತಿಯ ಜನಗಳಾಗ, ಇಲ್ಲ ಅ
ಭಿಲ್ಲ ಇಲ್ಲವೆ ಇದೇ ಪ್ರಕಾರದ ಬೇರೆ ಯಾವದಾದರ
ಕುಲದವರಿಗಾಗಲಿ, ಜಾತಿಯವರಿಗಾಗಲಿ, ಯೇನಾದರ
ಸಂಬಂಧ ಹಚ್ಚುತ್ತಾರೋ? ಬೇರೆ ಬೇರೆ ಕೀಳ ಜಾ
ಯವರು ವಹಿಸುವಂಥ ಹೆಸರುಗಳು ಅವರಿಗೆ ಹ್ಯಾಗೆ ಬ
ದವು ಯೆಂಬ ಬಗ್ಗೆ ನೀವು ಯೇನಾದರು ಬಲ್ಲಿರೋ?

೨ ಈ ಜಾತಿಯಲ್ಲಿ ಶಾಖೆಗಳೇನಾರು ಉಂಟೋ
ಇದ್ದರೆ ಅವುಗಳ ಹೆಸರಿನ ಅರ್ಥ, ಉತ್ಪತ್ತಿ, ಹಾಂಗು ಭೆ

ನದ ಕಾರಣ, ಇವುಗಳ ಬಗ್ಗೆ ವಿವರಿಸಿ ಹೇಳಿರಿ. ನೇರೆ ಬೇರೆ ಕಾಖೆಗಳವರು ಪರಸ್ಪರ ಅನ್ನವ್ಯವಹಾರ ವನ್ನೂ ಶರೀರ ಸಂಬಂಧವನ್ನೂ ಮಾಡುತ್ತಾರೋ ಇ ಲ್ಲವೋ?

೪ ಈ ವರ್ಗದವರಿಗೆ ಯಾರಾದರು ಪರೋಪಜೀವಕ ರಾಗಲಿ ಗುರುಗಳಾಗಲಿ ಇರುತ್ತಾರೆನು? ಇದ್ದರೆ ಅವರ ವೃತ್ತಾಂತವೇನು? ಅವರು ಯಾವ ಜಾತಿಗೆ ಹೊಂದಿದವ ರು? ಗುರುಗಳಿಗೆ ಯಾವ ಪ್ರಕಾರದಿಂದ ಧನ ಮುಟ್ಟಿಸಿ ಕೊಡುತ್ತಾರೆ? ಜನನ, ಮರಣ, ವಿವಾಹಕಾಲಗಳಲ್ಲಿ ಈ ವರುಗಳು ಯಾವ ಕೆಲಸ ಮಾಡುತ್ತಾರೆ? ಅವರು ಕೀಳ ವರ್ಗದವರ ಸೇವೆ ಮಾಡುವ ನೀಚತ್ವವನ್ನು ಹೊಂದು ತ್ತಾರೋ ಹ್ಯಾಗೆ?

೫ ವಿವಾಹ, ಮರಣಕಾಲಗಳಲ್ಲಿ ಆಗುವ ಸಂಸ್ಕಾರಗ ಳನ್ನು ವಿವರಿಸಿ ಹೇಳಿರಿ. ಈ ಕೀಳ ವರ್ಗದವರಲ್ಲಿ ಹೆಸ ರು ಇಡುವ ಕಾಲಕ್ಕೂ, ವಾಗ್ನಿಶ್ಚಯ ಕಾಲಕ್ಕೂ ರಜೋ ದರ್ಶನಕಾಲಕ್ಕೂ ಮಾಡತಕ್ಕ ಸಮಾರಂಭಗಳೇನಾದರು ಉಂಟೋ ಹ್ಯಾಗೆ? ಮತ್ತು ಮುಂಜಿಬಂಧನ ಸಮಾರಂಭ ಕ್ಕೆ ಸರಿಯಾದ ಏನಾದರು ಸಮಾರಂಭ ಅವರಲ್ಲಿ ಇರುತ್ತ ವೆಯೋ? ಅವರಲ್ಲಿ (ಅ) ಎಲ್ಲ ಹಿಂದು ಜನರಿಗೆ ಸಾಮಾ ನ್ಯವಾದಂಥ, (ಬ) ವಿಶೇಷವಾಗಿ ಅವರಲ್ಲಿಯೇ ಇರುವಂಥ, ಹಬ್ಬಗಳೂ ಉಪವಾಸಗಳೂ ಯಾವವು? ಅವರು ತಮ್ಮ ಪೂರ್ವಜರನ್ನು ಪೂಜಿಸುತ್ತಾರೋ ಹ್ಯಾಗೆ? ಅವರು ಯಾವ ದೇವರಲ್ಲಿ ಬಹಳ ಭಕ್ತಿ ಮಾಡುತ್ತಾರೆ? ಅವರ ಮನೆಗಳಲ್ಲಿ ಮೂರ್ತಿಗಳು ಇರುತ್ತವೆಯೋ

ಹ್ಯಾಗೆ? ಇದ್ದರೆ ಯಾವ ದೇವರವು? ವಿಶೇಷವಾಗಿ ಅವ
ರ ಜಾತಿಯವರೇ ಹೋಗ ತಕ್ಕಂಥ ಯಾತ್ರಿ ಸ್ಥಳಗಳವೆ
ಯೋ ಅಥವಾ ಮುಸಲ್ಮಾನ ಪೀರರ ಸಮಾಧಿಗಳಿಗೂ
ಹಿಂದುಗಳವರ ಪವಿತ್ರ ಕ್ಷೇತ್ರಗಳಿಗೂ ಯಾತ್ರೆಗಾಗಿ ಹೋ
ಗುತ್ತಾರೋ? ಯಿರಡನೇದಕ್ಕೆ ಅವರು ಅನುಸರಿಸುತ್ತಿ
ದ್ದರೆ, ಈ ಪ್ರಾಂತದಲ್ಲಿಯೂ, ನೆರೆ ಹೊರೆಯ ಪ್ರಾಂತ
ಗಳಲ್ಲಿಯೂ ಅವರ ಭಕ್ತಿಯ ಯಾತ್ರೆಯ ಸ್ಥಳಗಳು
ಯಾವವು ಹೇಳಿರಿ. ಈ ಪ್ರಾಂತದಲ್ಲಿ ಯಾವತ್ತು ಜಾತಿ
ಯ ಹಿಂದು ಜನರು ಪೂಜಿಸುವಂಥ ಯಾವವಾವರು ಕೀ
ಳ ಜನರಲ್ಲಿ ಹುಟ್ಟಿದ ಸಾಧುಗಳ ಪವಿತ್ರ ಸ್ಥಳಗಳು ಅ
ವೆಯೋ ಹ್ಯಾಗೆ.

೫ (ಅ)ಹೆಂಣು ಹುಡುಗೆಯರೂ(ಬ) ಗಂಡು ಹುಡುಗೆ
ರೂ ಯೆಷ್ಟು ವಯಸ್ಸಿನವರಾದ ಮೇಲೆ ಅವರ ಲಗ್ನಮಾ
ಡುತ್ತಾರೆ? ಈ ವರ್ಗದವರಲ್ಲಿ ವಿಧವೆಯರು ಪುನರ್ವಿವಾ
ಹ ಮಾಡಿಕೊಳ್ಳುತ್ತಾರೋ ಹ್ಯಾಗೆ? ಗಂಡಸರು ಒಬ್ಬ
ಹೆಂಡತಿ ಜೀವದಿಂದ ಇರುವಾಗ್ಗೆ ಮತ್ತೊಬ್ಬಳನ್ನು ಮದು
ವೆಯಾಗುತ್ತಾರೋ ಹ್ಯಾಗೆ? ಆಗುತ್ತಿದ್ದರೆ ಮೊದಲನೇ
ಹೆಂಡತಿ ಜೀವದಿಂದ ಇರಲಿಕ್ಕೆ ಯಿರಡನೇಯವಳನ್ನು
ಲಗ್ನವಾಗುವದು ನ್ಯಾಯವೆಂಬದಕ್ಕೆ ಯಾವ ಆಧಾರವು?
ಈ ವರ್ಗದವರು ಬೇರೆ ಯಾವ ಜಾತಿಯವರ ಸಂಗಡವಾ
ಗಲೀ ಕುಲದವರ ಸಂಗಡವಾಗಲೀ ಕರೀರ ಸಂಬಂಧ ಮಾ
ಡುತ್ತಾರೋ ಇಲ್ಲವೋ?

೬ ತಾವು ಕಡಿಮೆ ವರ್ಗದ ಜನರು ಎಂದು ಅವರು
ಒಪ್ಪಿಕೊಳ್ಳುತ್ತಾರೋ ಹ್ಯಾಗೆ? ಅವರು ತಮ್ಮನ್ನು ಮೊದ

ನೇ ಜಾತಿ ಬಿಟ್ಟು ಬೇರೆ ಜಾತಿಯ ಜನರೆಂದು ಹೇಳುವ
ದಕ್ಕೆ ಯಿಂದಾದರು ಪ್ರಯತ್ನ ಮಾಡುವದುಂಟೋ ಹ್ಯಾ
ಗೆ? ಅವರು ಯಾವ ಹೆಸರಿನಿಂದ ಯೆರಡನೇ ಕುಲದಲ್ಲಿ
ಕೇರುತ್ತಾರೆ? ಯಾವನಾದರೊಬ್ಬ ಹೆಚ್ಚಿನ ಜಾತಿಯವನ
ಮೇಲೆ ಈ ಜನರ ನೆರಳು ಬೀಳುವ ಪ್ರಸಂಗ ಬಂದರೆ,
ಇವರು ಕೆಳಗೆ ಬೊಗ್ಗುತ್ತಾರೆಂಬ ಬಗ್ಯೆ, ಇವರು ಹಾದ
ಹೋದ ಬಳಿಕ ಇವರ ಹೆಜ್ಜೆಯ ಗುರುತುಗಳನ್ನು ಅಳಿಸಿ
ಹಾಕುವ ಬಗ್ಯೆ, ನಿಮಗೆ ಏನಾದರು ಉದಾಹರಣೆ ಗೊ
ತ್ತುಂಟೋ ಹ್ಯಾಗೆ? ಇಂಥಾ ನಡತೆ ಕೇಳವಾದದ್ದೆಂದು
ಈ ಜನರು ತಿಳಿಯುತ್ತಾರೆಂದು ನೀವು ಯೋಚಿಸುತ್ತಿ
ರೋ ಹ್ಯಾಗೆ? ಕೀಳ ವರ್ಗದವರಲ್ಲಿ ಯಾವನಾದರು ತಾ
ನು ಮುಸಲ್ಮಾನನಿಗಿಂತ ಹೆಚ್ಚಿನ ಜಾತಿಯವನೆಂದು ತಿಳಿ
ಕೊಳ್ಳುತ್ತಾನೋ ಹ್ಯಾಗೆ?

೭ ಈ ಜನರ ಈಗಿನ ಸ್ಥಿತಿಗೂ ಐವತ್ತು ವರ್ಷಗಳ
ಹಿಂದಿನ ಸ್ಥಿತಿಗೂ ಹೆಚ್ಚು ಕಡಿಮೆ ಏನು? ಈಗಿನ ಕಾಲದ
ಲ್ಲಿ ಈ ಜಾತಿಯವರು ಸಾಧಾರಣವಾಗಿ ಮಾಡುವ ಉ
ದ್ಯೋಗಗಳು ಯಾವವು? ಆಗ್ಗೆ ಏನು ಉದ್ಯೋಗ ಮಾ
ಡುತ್ತಿದ್ದರು? ಅವರಲ್ಲಿ ಜನರು ಉದ್ಯೋಗಾರ್ಥವಾಗಿ ನಿ
ಮ ಪ್ರಾಂತವನ್ನು ಬಿಟ್ಟು ಹೋಗುತ್ತಾರೋ ಹ್ಯಾಗೆ? ಈ
ಜಾತಿಯವರಲ್ಲಿ ಯಾರಾದರು ಶ್ರೀಮಂತರಾಗಿದ್ದಾರೋ
ಹ್ಯಾಗೆ? ಆಗಿದ್ದರೆ, ಅವರು ತಮ್ಮ ಹಣವನ್ನು ಯಾ
ಕೆಲಸಕ್ಕೆ ಹಚ್ಚುತ್ತಾರೆ?

೮ ಕೂಲಿಗಾರನು ದಿನಾ ಯೆಷ್ಟು ಕೂಲಿ ದೊರಕಿಸ
ತ್ತಾನೆ? ಅವನ ಹೆಂಡತಿಯು ಅವನಿಗೆ ಸಹಾಯ ಮಾಡ

ತ್ತಾಳೋ ಹ್ಯಾಗೆ?

೯ ಈ ಜಾತಿಯವರಲ್ಲಿ ಒಂದು ಕುಟುಂಬದ ಮನೆ, ಸಾಮಾನು, ಆಹಾರ, ವಸ್ತ್ರ ಮುಂತಾದವುಗಳ ಬಗ್ಗೆ ವಿವರಿಸಿ ಬರೆಯಿರಿ. ಈ ಜನರಲ್ಲಿ (ಅ) ಬಡತನದಲ್ಲಿದಂಥ(ಬ)ಉಂಡು ತಿಂದು ನೆಟ್ಟಗಿದ್ದವರ, ಗಂಡಹೆಂಡರೂ ಯುವರಡು ಹುಡುಗರೂ ಇದ್ದ ಕುಟುಂಬಕ್ಕೆ ತಿಂಗಳೊಂದಕ್ಕೆ ಅಜಮಾಸು ಯೇನು ಖರ್ಚು ಹತ್ತುತ್ತದೆ?

೧೦ ಬಡ ಕುಟುಂಬದಲ್ಲಿಯೂ, ಸಾಧಾರಣ ನೆಟ್ಟಗಿದ್ದಂಥಾ ಕುಟುಂಬದಲ್ಲಿಯೂ (೧) ಲಗ್ನವಾದರೆ ಇಲ್ಲವೆ (೨) ಯಾರಾದರು ಸತ್ತರೆ ಖರ್ಚು ಯೆಷ್ಟು ಬೀಳುತ್ತದೆ? ಮದುವೆಯ ಪ್ರಸಕ್ತಿಯಲ್ಲಿ, ಮಗಳ ಮದುವೆಗೂ ಮಗನ ಮದುವೆಗೂ, ಹತ್ತುವ ಖರ್ಚಿನ ಅಕಾರವನ್ನು ಪ್ರತ್ಯೇಕವಾಗಿ ಹೇಳಿರಿ.

೧೧ ಈ ಜಾತಿಯವರನ್ನು ಲೌಕಿಕಸಂಬಂಧದಲ್ಲಿ ತಮ್ಮ ಮಾತಿನಲ್ಲಿ ನಡೆಸಿಕೊಳ್ಳುವಂಥ ಪ್ರಮುಖ ಮನುಷ್ಯನು ಯಾವನಾದರು ಇರುವನೋ ಹ್ಯಾಗೆ? ಇದ್ದರೆ ಅವನಿಗೆ ಯೇನು ಅನ್ನುತ್ತಾರೆ? ಮತ್ತು ಅವನನ್ನು ಹ್ಯಾಗೆ ನೇಮಿಸುತ್ತಾರೆ? ಜಾತಿಸಂಬಂಧವಾದ ವಾದಗಳು ಹ್ಯಾಗೆ ಖಗೆ ಹರಿಸಲ್ಪಡುತ್ತವೆ? ಯಾವನೊಬ್ಬ ಮನುಷ್ಯನು ಯಾವ ಪ್ರಕಾರದ ಅಪರಾಧಗಳನ್ನು ಮಾಡಿದರೆ ಅವನನ್ನು ಈ ಜಾತಿಯವರುತಮ್ಮ ವರ್ಗದಿಂದ ತೆಗೆದು ಹಾಕುತ್ತಾರೆ? ಜಾತಿ ವಾದಸಂಬಂಧವಾಗಿ ತಮ್ಮ ಗುರುವಿನ ಅಭಿಪ್ರಾಯ ಕೇಳುತ್ತಾರೋ ಹ್ಯಾಗೆ? ಕೇಳುತ್ತಿದ್ದರೆ ಎಷ್ಟು ಮಟ್ಟಿಗೆ ಕೇಳುತ್ತಾರೆ?

೩೨ ಈ ಕೇಳ ವರ್ಗದವರಲ್ಲಿ ಯಾವೆನಾದರೊಬ್ಬನು ತನ್ನ ಜಾತ್ರಿಯವರಿಗೆ ಡಾಕುವ ಊಟದ ಬಗ್ಗೆ ಸ್ವಲ್ಪ ಮಾಹಿತಿ ಹೇಳಿರಿ. ಯಾವ ಪ್ರಸಂಗಗಳಲ್ಲಿ ಇಂಥ ಊಟಗಳನ್ನು ಮಾಡಿಸುತ್ತಾರೆ? ಅಡಿಗೇರುನ್ನು ಯಾರು ಮಾಡುತ್ತಾರೆ? ಯಾವ ಪ್ರಕಾರದ ತಳಿಗೆಗಳನ್ನು ಉಪಯೋಗಿಸುತ್ತಾರೆ? ಆ ತಳಿಗೆಗಳು ಯಾರಪ್ಪು ಗಂಡಸರ ಸಂಗಡವೇ ಹಂಗಸರೂ, ಹುಡುಗರೂ ಊಟಕ್ಕೆ ಹೋಗಿ ಕೂಡ್ರುತ್ತಾರೋ ಹ್ಯಾಗೆ? ಆಗ ಅವರು ಯಾವ ಪ್ರಕಾರದ ವಸ್ತ್ರಗಳನ್ನು ಉಡುತ್ತಾರೆ? ಅವರು ಯೇನು ಉಣ್ಣುತ್ತಾರೆ? ಮತ್ತು ಏನು ಕುಡಿಯುತ್ತಾರೆ? ಭೋಜನ ಸಮಾರಂಭ ಆವ ಕೂಡಲೆ ಸೃಷ್ಟಿ ಗಾಯನಗಳೇನಾದರು ಆಗುತ್ತವೆಯೋ ಹ್ಯಾಗೆ?

೩೩ ಹುಡುಗರ ಸಲುವಾಗಿಯೂ ಹೆಂಡಪರ ಸಲುವಾಗಿಯೂ, ಈ ಜನರಲ್ಲಿ ಜೋಗುತನವುಳ್ಳ ಇಲ್ಲವೆ ಪ್ರಸಂಗಾಧೀನ ಆಟಗಳೇನಾದರು ಉಂಟೋ ಹ್ಯಾಗೆ? ಅವರ ಗರಡೀ ಸಾಧನ ಮಾಡುತ್ತಾರೋ ಹ್ಯಾಗೆ?

೩೪ ಇಳ ಇವರು ಕಥೆಗಳನ್ನು ಕೇಳುವದಕ್ಕೂ ವಾದ್ಯಗಳನ್ನು ಬಾರಿಸುವದಕ್ಕೂ ನೆಚ್ಚುತ್ತಾರೋ ಹ್ಯಾಗೆ? ಕಥೆಗಳನ್ನು ಕೇಳುವದಕ್ಕೆ ಮೆಚ್ಚುತ್ತಿದ್ದರೆ, ಅವುಗಳನ್ನು ಯಾರು ಯಾವಾಗ್ಗೆ ಮತ್ತು ಯೆಲ್ಲಿ ಹೇಳುತ್ತಾರೆ? ಹಾಗು ಆ ಕಥೆಗಳು ಯಾತರ ಸಂಬಂಧವವಿರುತ್ತವೆ? ವಾದ್ಯಗಳನ್ನು ಬಾರಿಸಲಿಕ್ಕೆ ಮೆಚ್ಚುತ್ತಿದ್ದರೆ ಅವರು ಯಾವ ಯಾವ ವಾದ್ಯಗಳನ್ನು ಬಾರಿಸುತ್ತಾರೆ?

೩೫ ಅವರು ಸರ್ಪಗಳನ್ನು ಹೂಜಿಸುತ್ತಾರೋ ಹ್ಯಾಗೆ?

ಇಟ ಅವರಲ್ಲಿ ಹಾಸ್ಯಗಾರರು ಇರುತ್ತಾರೋ ಹ್ಯಾಗೆ?
ಇಪ ಈ ವರ್ಗದೊಳಗಿನ ಜನರು ಯಾವ ಜನರ ಸಂ
ಡ ಹಣದ ವ್ಯವಹಾರಗಳನ್ನು ನಡಿಸುತ್ತಾರೆ? ಬಹಳ
ಮಾಡಿ ಅವರು ಸಾಲದೊಳಗೆ ಇರುತ್ತಾರೋ ಹ್ಯಾಗೆ? ಹಾ
ದ್ದರೆ, ಅವರು ಸಾಲದೊಳಗೆ ಮುಳುಗಿರುವದಕ್ಕೆ ಸಾ
ಮಾನ್ಯ ಕಾರಣವೇನು?

NOTICE .

ನೋಟೀಸು

ಧಾರವಾಡ ಜಿಲ್ಲೆದೊಳಗಿನ ನೇಮಣೂಕುಗಳು.

ಇ ಹಣಮಂತ ರಾಮಚಂದ್ರ ಬಾಗಲವಾಡಿ ಅ. ಮಾ
ತ್ತರ ಮರಾಠಿಸ್ಕೂಲ ಧಾರವಾಡ ಇವರನ್ನು ನವಲಗುಂದ
ತಾ. ಪೈಕಿ ಚಿಕ್ಕನರಗುಂದ ಸಾಲಿಯ ಹೆಡ್ಡ ಮಾಸ್ತರ ಕೆ
ಲಸಕ್ಕೆ ನೇಮಿಸಿರುತ್ತದೆ. ಸಂಬಳ ರೂ. ೩೨

ಅ ಸದರಿ ಬಾಗಲವಾಡಿ ಇವರ ಜಾಗಾಕ್ಕೆ ಧಾರವಾಡ
ಕನ್ನಡ ಸಾಲಿಯ ಅ. ನಾದ ರಾಮಚಂದ್ರ ಕಾಶೀನಾಥ
ಪಟವರ್ಧನ ಇವರನ್ನು ನೇಮಿಸಿರುತ್ತದೆ. ಸಂಬಳ ರೂ
ಮೂಯಿ ೩೨

ಆ ಸದರಿ ಪಟವರ್ಧನ ಇವರ ಜಾಗೇದ ಮೇಲೆ ಸಖಾ
ರಾಮ ಶಂಕರ ಮೈಸಕರ ಮಾಜಿ ಅ. ಮಾಸ್ತರ ನರಗುಂ
ದ ಇವರನ್ನು ನೇಮಿಸಿರುತ್ತದೆ. ಸಂಬಳ ರೂ. ೩೨

ಳ ಬಂಬಿಗಟ್ಟಿ ತಾ. ಕಲಘಟಗಿ ಈ ಸಾಲಿಯ ಮಾ
ತ್ತರರಾದ ಪಹರತ ರಹಿಮಾನ ಇವರಿಗೆ ಪೋಲೀಸ ಖಾತೇ
ಯಲ್ಲಿ ನಾಯಿಕಿ ಜಾಗಾ ಶಿಕ್ಕಿದ್ದರಿಂದ, ಅವರು ತಮ್ಮ ಜಾ

ಗಾಳ್ಕೆ ಹೊರಟು ಹೋದವರು ಸದರಿಯವರ ಜಾಗಾದ ಮೇಲೆ ಹಾನಗಲ್ಲ ತಾ. ಪೈಕಿ ನರೆಗಲ್ಲ ಸಾಲಿಯ ಮಾಸ್ತರಾದ ತವನಾಜಿ ಸೋಮನಾಥ ಇವರ ನೇಮಣೂಕು ಮಾಡಿರುತ್ತದೆ. ಸಂಬಳ ರೂ. ೧೫

೫ ಸದರ ತವನಾಜಿ ಸೋಮನಾಥ ಇವರ ಜಾಗಾದ ಮೇಲೆ ಮೊರಬದ ಸಾಲಿಯ ಎನ್ನೇ ಅ. ಮಾಸ್ತರರಾದ ವೇಣು ವಾಸುದೇವ ತಡಕೋಡ ಇವರ ನೇಮಣೂಕು ಮಾಡಿರುತ್ತದೆ. ಪಗಾರ ರೂ. ೧೫

೬ ರೋಣ ತಾಲೂಕ ಸೂಡಿಸಾಲಿಯ ಮಾಸ್ತರರಾದ ಯೋಗೇಶ್ವರ ಭೋಂಡದೇವ ಲಿಮಯೆ ಹಾಂಗೂ ಹುಬ್ಬಳ್ಳಿ ತಾ. ಪೈಕಿ ಯರಗುಪ್ಪಿ ಸಾಲಿಯ ಮಾಸ್ತರರಾದ ರಾಜೋರಾವ ಪಿರಾಜಿ ಇವರು ನಾವು ಸವಾಷ್ಟ ಹೋದಾಗ್ಯೆ ತಮ್ಮ ತಮ್ಮ ಸಾಲಿಯ ರಜಿಷ್ಟರ ತುಂಬಿದ್ದಿಲ್ಲಾ ಈ ವಿಷಯಕ್ಕೂರು ನಾವು ಮೆಹೆರ್ಬಾನ ಇಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಹದ್ದೂರವರಿಗೆ ತಿಳುಹಿಸಲು, ಸದರೀ ಮಾಸ್ತರರಿಗೆ ಒಂದೊಂದು ತಿಂಗಳದ ಪಗಾರ ದಂಡಮಾಡಬೇಕೆಂದು ಬರದು ಬಂದದರಿಂದ ಸದರೀ ಮಾಸ್ತರರಿಗೆ ದಂಡ ಮಾಡಿರುತ್ತದೆ.

೭ ಹಿರೇಕೆರೂರ ಸಾಲಿಯ ಮಾಸ್ತರರಾದ ನರಸೋಗಣೇಶ ಇವರು ಹಿರೇಕೆರೂರ ಸಾಲಿಯ ಪಗಾರ ತಗೊಂಡು ರಟ್ಟೆಹಳ್ಳಿಯಲ್ಲಿ ಹಾಂಗೂ ರಟ್ಟೆಹಳ್ಳಿ ಮಾಸ್ತರರಾದ ಕಲ್ಲೋಳಿ ಶಿವಾಜಿ ಇವರು ರಟ್ಟೆಹಳ್ಳಿ ಪಗಾರ ತಗೊಂಡು ಹಿರೇಕೆರೂರಲ್ಲಿ, ಕೆಲಸ ಮಾಡಬೇಕೆಂದು ಗೊತ್ತಾಗಿ ಆ ಪ್ರಾ॥ ಪರಸ್ಪರ ವರ್ಗಾವರ್ಗಿಗಳಾಗಿರುತ್ತವೆ.

೪ ಹುಲಗೂರ ಸಾಲಿಯ ಪಡ್ಡಿ ಮಾಸ್ತರರಾದ ಹಣಮಂತ ಜೀವಾಜೀ ಮಂಟೂರ ಇವರಿಗೆ ಅಪ್ಪೇ ಪಗಾರದ ಮೇಲೆ, ಕೋಡ ತಾ. ಹೈಕೇ ಕೋಡಸಾಲಿಯ ಪಡ್ಡಿ ಮಾಸ್ತರ ಕೆಲಸಕ್ಕೆ ನೇಮಣೂಕು ಮಾಡಿ, ಹುಲಗೂರ ಸಾಲಿ ಮಾಸ್ತರ ಜಾಗೂದ ಮೇಲೆ ಕೋಡಸಾಲಿಯ ಮಾಸ್ತರರಾದ ನರಸಿಂಹ ಕೇಷೋ ಇವರ ನೇಮಣೂಕು ಮಾಡಿರುತ್ತದೆ.

೯ ಕೋಡ ತಾಲೂಕ ಮಾಸೂರ ಸಾಲಿಯ ಪಡ್ಡಿ ಮಾಸ್ತರರಾದ ಮಾಸಾಜಿ ತೇಜೋ ಶಿರಸಂಗಿ ಇವರನ್ನು ಹುಬ್ಬಳ್ಳಿ ತಾ. ಹೈಕೆ ಅಮುರಗೊಳ್ಳ ಸಾಲಿಯ ಮಾಸ್ತರ ಜಾಗಾಕ್ಕೆ ಹಾಂಗು ಅಮುರಗೊಳ್ಳ ಸಾಲಿಯ ಮಾಸ್ತರರಾದ ಕೃಷ್ಣಾಜಿ ನಾಮದೇವ ನಾಯ್ಕರೆ ಇವರನ್ನು ಮಾಸೂರ ಸಾಲಿಯ ಪಡ್ಡಿ ಮಾಸ್ತರ ಜಾಗಾಕ್ಕೆ ಈ ಪ್ರಕಾರ ಪರಸ್ಪರ ವರ್ಗಾವರ್ಗಿಗಳನ್ನು ಮಾಡಿರುತ್ತದೆ.

೧೦ ಗದಗ ತಾಲೂಕಿನ ಹೈಕೆ ಕಲಕೇರಿ ಸಾಲಿಯ ಮಾಸ್ತರರಾದ ಗಣೇಶ ಗಂಗಾಧರ ಭೋಸೇಶ್ವರ ಇವರಿಗೆ ಬೆಳಗಾವಿ ಜಿಲ್ಲೇದ ಹೈಕೆ ಚಿಕ್ಕೋಡಿತಾಲೂಕ ಭೋಜಸಾಲಿಯ ಮಾಸ್ತರ ಜಾಗಾ ಶಿಕ್ಕದ್ದರಿಂಪ ಅವರು ಹೊರಟು ಹೋದರು. ಮತ್ತು ಅವರ ಜಾಗಾದ ಮೇಲೆ, ಸದರಿ ಭೋಜ ಸಾಲಿಯ ಮಾಸ್ತರರಾದ ಶಿವಾಜಿ ಅಪ್ಪಾಜಿ ಶಿರಸಂಗಿ ಇವರ ನೇಮಣೂಕಾದ್ದರಿಂದ ಸದರಿಯವರು ಬಂದು ತಮ್ಮ ಕೆಲಸದ ಮೇಲೆ ಹಜರಾದರು.*

Chanbassappa B. Dharwar.

ಸಿಸೂಟ ಇ. ಇ. ಜಿಲ್ಲಾ ಧಾರವಾಡ

ಬಾಲಬೋಧಕ.

ಪುಸ್ತಕ ೬೧] [ಸಂಚಿಕೆ V

ತಾರೀಖು ೭೫ ನೇ ಮಾಹೆ ನವಂಬರ ೧೮೭೫.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ಮಹಾರಾಣಿಯವರ ಜ್ಯೇಷ್ಠ ಪುತ್ರರಾದ ಯುವರಾಜರು ಈ ದೇಶವನ್ನೆಲ್ಲ ನೋಡಬೇಕೆಂಬ ಉದ್ದೇಶದಿಂದ ವಿಲಾಯತಿಯಿಂದ ಹೊರಟು V ನೇ ನವೆಂಬರ ದಿನ ಮುಂಬಾಯಿಗೆ ಬಂದು, ಅಲ್ಲಿ ಹದಿನೈದು ದಿನ ನಿಂತು ತಮ್ಮ ದರ್ಶನಕ್ಕಾಗಿ ಬಂದಂಥ ಸಣ್ಣ ದೊಡ್ಡ ಸಂಸ್ಥಾನಿಕರನ್ನು ಕಾಣಿಸಿಕೊಂಡು, ಮುಂಬೆ ಚನ್ನ ಪಟ್ಟಣವ ಕಡೆ ಹೋದರು. ಆವದರಿಂದ ನಡೆದ ತಿಂಗಳಲ್ಲಿ ಆಗುವ ಮುಂಬಾಯಿ ಯುನಿವರ್ಸಿಟೀ ಪರೀಕ್ಷೆಗಳೆಲ್ಲ ನಿಯಮಿತ ವಿತಿಗಿಂತ ಒಂದೊಂದುವಾರ ಮುಂದೆ ಬಿದ್ದವು.

ನಾವುದಾರ ಗವರ್ನರ್ ಜನರಲ್ ಪ್ರಭುಗಳು ವಿದ್ಯಾ ವೃದ್ಧಿತದಲ್ಲಿಯು ವಿದ್ಯಾಖಾತೆಯ ಹಾಯುರೆಕ್ಟರ ಕೆಲಸ ಪುಣೇ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ರಾವಸಾ

ಹೇಟ ನಾರಾಯಣಭಾಯಿ ದಾಂಡೇಕರ ಇವರನ್ನು ನೇಮಿಸಿರುತ್ತಾರೆ.

ಮದ್ರಾಸ ಯುನಿವರ್ಸಿಟಿಯಲ್ಲಿ ಈ ವರ್ಷ ಆಗತಕ್ಕ ಪರೀಕ್ಷೆಗಳಲ್ಲಿ ಮುಂಬಯಿ ಇಲಾಖೆಯ ವಿದ್ಯಾಖಾತೆಯ ಮುಖ್ಯಾಧಿಕಾರಸ್ಥರಾದ ಚಾಟಫೀಲ್ಡ ಧೊರೆಗಳನ್ನು ಡೆಕ್ಕನ್ ಕಾಲೇಜಿದ ಪ್ರಿನ್ಸಿಪಾಲರಾದ ಡಾಕ್ಟರ ಕೇಲಹಾರ್ನ ಧೊರೆಗಳನ್ನೂ ಪರೀಕ್ಷಕರನ್ನು ನೇಮಿಸಿರುತ್ತಾರೆ.

ಮುಂಬಾಯಿ ಇಲಾಖೆಯೊಳಗಿನ ಮರಾಠಿ ಶಾಲೆಗಳಿಗಾಗಿ ಮೆ. ಡಾಯರೆಕ್ಟರ ಧೊರೆಗಳು ತಯಾರ ಮಾಡಿದ ಹೊಸ ಇಯತ್ತೆಗಳನ್ನು ಸರಕಾರದವರು ಮಂಜೂರ ಮಾಡಿ ೪೪ ನೇ ಅಕ್ಟೋಬರ ಸರಕಾರೀ ಗ್ಯಾಜೇಟಿನಲ್ಲಿ ಪ್ರಸಿದ್ಧ ಮಾಡಿರುತ್ತಾರೆ.

ಮೆ. ದಕ್ಷಿಣಭಾಗದ ಎ. ಇನ್ಸಪೆಕ್ಟರ ಧೊರೆಗಳು ಧಾರವಾಡ ಹಾಯ್ ಸ್ಕೂಲಿನದೂ, ಟ್ರೇನಿಂಗ ಕಾಲೇಜಿದ್ದೂ ಪರೀಕ್ಷೆ ತೀರಿಸಿಕೊಂಡು ಬೆಳಗಾವಿಗೆ ತಿರಿಗಿ ಹೋದರು. ಧೊರೆಗಳು ತಿರಿಗೊಮ್ಮೆ ದಶಂಬರ ತಿಂಗಳಾದ ನಂತರ ಧಾರವಾಡಕ್ಕೆ ಬರತಕ್ಕವರಿದ್ದಾರೆಂದು ಕೇಳುತ್ತೇವೆ.

ಮುಂಬಯಿ ಯುನಿವರ್ಸಿಟಿಯ ಈ ವರ್ಷದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ರಾ. ರಾ. ಜಯಸತ್ಯಬೋಧರಾವ ತಿರಮುಲರಾವ ಇನಾಮದಾರ, ರಾ. ರಾ. ಶಾ

ಮುಂತಾದ ವಿಷಯ ವಕೀಲ ಇಪರಿಬ್ಬರು ಗೃಹಸ್ಥರನ್ನು ಕ
ನ್ನಡಿನಲ್ಲಿ ಪರೀಕ್ಷಕರನ್ನು ನೇಮಿಸಿರುತ್ತಾರೆ.

ಕನ್ನಡ ತ್ರಾನ್ಸಲೇಟರರ ಮುಂದ್ತನೀಸರಾದ ರಾ.ರಾ.
ಗಂಗಾಧರ ಮಡಿವಾಳೇಶ್ವರ ತುರಮುರಿ ಇವರು ಇಷ್ಟು
ದಿನ ಬೆಳಗಾವಿಯಲ್ಲಿದ್ದರು. ಆದರೆ ಇನ್ನು ಮುಂದೆ
ಧಾರವಾಡದಲ್ಲಿಯೇ ಇರಬೇಕೆಂದು ನಿಯಮವಾದದರಿಂ
ದ ಅವರು ಕಳೆದ ತಿಂಗಳ ಕೊನೆಗೆ ಇಲ್ಲಿ ಬಂದರು.

ಬೆಳಗಾವ ಕಲಾದಗೀ ಜಿಲ್ಲೆಗಳಲ್ಲಿ ಕಾಲೆಗಳ ಸಂಖ್ಯೆ
ಹೆಚ್ಚಾದದರಿಂದ, ಅವೆರಡೂ ಜಿಲ್ಲೇಗಳಿಗೂ ಕೂಡಿ ಒಂದು
ಅಸಿಷ್ಟಂಟ ಡಿ. ಎ. ಇನ್ಸಪೆಕ್ಟರ ಜಾಗಾ ಹೊಸದಾಗಿ ಮಾ
ಡ ಬೇಕೆಂದು ಆಲೋಚನೆ ನಡೆದಿರುತ್ತದೆಂದು ಕೇಳು
ತ್ತೇನೆ.

ಈ ವರ್ಷ ಧಾರವಾಡ ಹಾಯಿಸ್ಕೂಲಿನಿಂದ ತೆಳ್ಳಿ ಇ
ಪ್ಪತ್ತು ಮೂರು ಮಂದಿ ಮ್ಯಾಟ್ರಿಕುಲೇಶ ಪರೀಕ್ಷೆಕ್ಕೆ
ಹೋಗಿರುತ್ತಾರೆ. ಅವರಲ್ಲಿ ಇಂಗ್ಲಿಷದಲ್ಲಿ ಹುಲ್ಲರೂ
ಪಾಸುಗಿದ್ದಾರೆಂದು ಕೇಳುತ್ತೇವೆ.

ಕವಿತೆಯ ಬಗ್ಗೆ ಇನಾಮು.

ಕ್ಯಾಪ್ತನ ಪರಫ್ಯಾಮರಿ ಯೆಂಬ ಕಂಪನಿಯವರು
ಲಂಡಂಟುಯಿವ್ಸ ಯೆಂಬ ಪತ್ರದೊಳಗ ಒಂದು ಜಾಹೀ
ರಾತು ಕೊಟ್ಟಿರುತ್ತಾರೆ. ಅದೇನಂದರೆ ಪ್ರಸ್ತ ಅಪ್ ವೆ

ಲ್ಲ. ಯುವರಾಜರು ಹಿಂದುಸ್ಥಾನದೇಶವನ್ನು ಪರಿಯಟನ ಮಾಡುವದಕ್ಕೆ ಹೋಗಿರುತ್ತಾರೆ, ಆ ಸಂಬಂಧದಿಂದ ಮೂರು ಪ್ರಕಾರದ ಉತ್ತಮ ಕವಿತೆಗಳನ್ನು ಬರಿಸಿದವರಿಗೆ ೧೦೦ ನೂರು ಗಿನಿ ಬಕ್ಷೀಸು ಕೊಡಬೇಕೆಂದು ನಿಶ್ಚಯ ಮಾಡಿದ್ದಾರೆ. ೧ ನೇ ಬಕ್ಷೀಸು ೫೦ ಗಿನೀದು, ೨ ನೇ ದು ೪೦ ಗಿನೀದು, ೩ ನೇದು ೩೦ ಗಿನೀದು (ದರವೊಂದು ಗಿನೀಕೆಮತ್ತು೧೦॥ ರುಪಾಯಿ). ಕವಿತಾ ಮಾಡುವವರು ಯಾವ ಜಾತಿಯವರಾದರು ಇದ್ದರು ಚಿಂತೆ ಇಲ್ಲ. ಇಬ್ಬರ ಕವಿತೆಗಳು ಒಂದೇ ಗುಣವುಳ್ಳವು ಇದ್ದಲ್ಲಿ ೨ ನೇ ೩ ನೇ ಬಕ್ಷೀಸುಗಳ ರಕಮು ಪ್ರೊಟ್ಟು ಗೂಡಿಸಿ ಕವಿತೆಗಳ ಸಂಖ್ಯೆದ ಮೇಲಿಂದ ಸಮನಾಗಿ ಹಂಚಿ ಕೊಟ್ಟು. ದೀತು ಪ್ರತ್ಯೇಕ ಕವಿತೆಯು ೫೦ ಒಳಗಳಿಗಿಂತ ಕಡಿಮೆಯಾಗಿಯೂ ೨೦೦ ಒಳಗಳಿಗಿಂತ ಹೆಚ್ಚಾಗಿಯೂ ಇರಕೂಡದು. ಕವಿತಾ ಇಂಗ್ಲಿಷ ಭಾಷೆಯಲ್ಲಾಗಲಿ, ಹಿಂದುಸ್ಥಾನದೊಳಗೆ ನಡೆಯುವ ಬೇರೆ ಯಾವದೊಂದು ಭಾಷೆಯಲ್ಲಾಗಲಿ ಬರದಿರಬೇಕು. ಇಂಗ್ಲಿಷ ಭಾಷೆಯಲ್ಲಿ ಇರದೆ ಹಿಂದುಸ್ಥಾನದೊಳಗಿನ ಭಾಷೆಯಲ್ಲಿ ಇದ್ದರೆ, ಮೂಲ ಕವಿತಾ ಬರದು, ಅದನ್ನೇ ರೋಮನ್ ಅಕ್ಷರದಿಂದ ಇಂಗ್ಲಿಷದಲ್ಲಿ ಬರೆಯ ಬೇಕು, ಮತ್ತು ಪ್ರತ್ಯೇಕ ಕವಿತೆಯ ಸಂಗಡ ಅದರ ಉತ್ತಮ ಇಂಗ್ಲಿಷ ಭಾಷಾಂತರವನ್ನು ಇರಬೇಕು. ಪ್ರತ್ಯೇಕ ಕವಿತೆಯು ಯೋಗ್ಯವಾಗಿಯೂ, ಎಲ್ಲರ ಮನಸ್ಸಿಗೆ ಬರುವಂತೆಯೂ ಇದ್ದರೆ ಉತ್ತಮ ಗುಣಗಳು ಕೊಡಲ್ಪಡುವವು. ಈ ಕವಿತೆಯಲ್ಲಿ ಪ್ರಾಚೀನ ಕಾಲದ ಸ್ಥಿತಿಗೂ ಅರ್ವಾಚೀನ ಕಾಲದ ಸ್ಥಿತಿಗೂ ತು

ಲನೆ ಮಾಡಿರಬೇಕು. ಇಲ್ಲಿವೆ ಸಾಂಪ್ರತ ಮಾನವೀ ಪ್ರಾಣಿಗಳ ಸ್ಥಿತಿಯಲ್ಲಿ ಉತ್ತಮ ಪ್ರಕಾರದ ಆವಶ್ಯಕತೆಯ ಪದಾರ್ಥದಿಂದ ಆಗುವಂಥ ಪರಿಣಾಮಗಳ ವಿಷಯಕ್ಕೆ ಅದರಲ್ಲಿ ಸ್ವಲ್ಪ ಬರದಿರಬೇಕು. ಆ ಕವಿತೆಗಳನ್ನು ವಿಲಾಯತಿಯೊಳಗಿನವರು ತಾರೀಖು ೭೦ ದಿಸಂಬರದೊಳಗಾಗಿಯೂ, ಹಿಂದುಸ್ಥಾನದೊಳಗಿನವರು ೫೫ ಜೂನುವಾರಿ ಸಂನ ೧೮೭೬ ನೇ ಇಸವಿ ಪ್ರೊಳಗಾಗಿಯೂ ಮುಟ್ಟುವಂತೆ ಕಳುಹಿಸಿಕೊಡಬೇಕು. ಲಂಡನ್ ಶಹರ ಸಚ್ಚಿಬಿಯ ಭಾಗ ಸ್ಟ್ರಾಂಡ್ ಬೀದಿಯಲ್ಲಿ ವಾಸವಿರುವ ೪೦, ಕ್ರಾಪ್ಟನ್ ಪರಸ್ಪ್ಯಮರಿ ಯೆಂಬ ಕಂಪನಿಯವರಿಗೆ ಮುಟ್ಟುವಂತೆ ಕಳುಹಿಸಿಕೊಡಬೇಕು. ಇಂ. ವಿ.

ನೋಟೀಸು.

ಟ್ರೇನಿಂಗ್‌ಕಾಲೇಜಿನ ಛಳಿಗಾಲದ ೭೫ ದಿವಸದ ಸೂಟಿಯು ಈ ತಿಂಗಳ ೧೫ ನೇ ತಾರೀಖಿನಿಂದ ಪ್ರಾರಂಭವಾಗುತ್ತದೆ. ಆ ಕಾಲೇಜಿನ ವಿದ್ಯಾರ್ಥಿಗಳೂ ಅನ್‌ಟ್ರೈಂಡ ಮಾಸ್ತರರೂ ದಿಸೆಂಬರ ೨೦ ನೇ ತಾರೀಖಿನ ದಿವಸ ಕಾಲೇಜಿಕ್ಕೆ ಹಾಜರಾಗತಕ್ಕದ್ದು.

ಧಾರವಾಡ ಟ್ರೇನಿಂಗ್‌ಕಾಲೇಜು } (Sd.) B. K. Hooligol
೨೯ ನೇ ನೊವೆಂಬರ ೧೮೭೫ } Principal.

ವೆಚ್ಚವಿಲ್ಲದೆ ನಾರಿನ ಮೇಲೆ ಔಷಧ.

ರೇವಾಕಾಂತಾ ಪ್ರಾಂತದೊಳಗಿನ ಬೇವಗಡ ಬಾರಿಯಾ ಸೆಂಬಲ್ಲಿಯ ಔಷಧಾಲಯದ ಸುಪರಿಂಟೆಂಡೆಂಟರಾದ

ರಾ. ರಾ. ಗಣಪತರಾವ ರಾಮಚಂದ್ರ ಯೆಂಬವರು ಯೆ
ಲ್ಲ ಜನರಿಗೆ ತಿಳಿಸುವ ಬಗ್ಗೆ ನಮ್ಮ ಕಡಿಗೆ ಬರೆದು ಕಳು
ಹಿದ್ದಾರೆ. ಈ ಉಪದ್ರವಕರವಾದ ಅಂಟಿಕೊಳ್ಳುವ ರೋ
ಗದ ಮೇಲೆ ಇಂಗ್ರಜಿ ವೊಳಗಂತು ಇಲ್ಲೀಯಿಲ್ಲ, ಆ
ವರೆ ನಮ್ಮ ಮರಾಠಿ ವೈದ್ಯರ ಹತ್ತರವಾದರು ಖಾತ್ರಿಯಿಂ
ದ ಗುಣ ಕೊಡುವಂಥ ಔಷಧಗಳಂತು ಬಹಳ ವೂಡಿ
ಸೊರಿಯಲಿಕ್ಕಿಲ್ಲ. ಶೋಧ ಪಾಂಗು ಅನುಭವದಿಂದ
ಮೋಡಲಾಗಿ, ಈ ಈ ಕೆಳಗೆ ಬರೆದ ಔಷಧದಿಂದ ಬಹ್ರ
ಜನರಿಗೆ ಗುಣವಾಗಿದೆ.

೧ ಕೋಳಯ ಹೇಲು (ವಿಷ್ಠಾ).
೧ ಹರಳಿನ ಸುಣ್ಣಾ (ತೊಯಿಸಿದ್ದು.)
೧ ಅಂಗು.

ಮೇಲೆ ಬರೆದ ಔಷಧಗಳನ್ನು ಸರಿಭಾಗ(ಅಂದರೆ ಪ್ರ
ತಿ ಒಂದು ಒಂದು ದುಡ್ಡಿನ ತೂಕ) ತಕ್ಕೊಂಡು, ಯಾವದಾ
ವರೊಂದು ಗಿಡದ ಯೆಲೆಯ ಮೇಲೆ ದನುಟಿಯಂತ್ರಿ ಹರ
ಡಿ ಹಚ್ಚಿ ಬೇಕು. ಮತ್ತು ನಾರು ಆದ ಕಾಲಿಗೆ ಇಲ್ಲವೆ
ಶರೀರದ ಯಾವ ಭಾಗಕ್ಕೆ ಆಗಿರುತ್ತದೋ ಆ ಭಾಗಕ್ಕೆ
ಹರಿವಿಯ ಪಟ್ಟಿಯಿಂದ ಕಟ್ಟ ಬೇಕು. ಪಾಂಗು ಅದನ್ನು
ಮೂರು ದಿವಸಗಳ ವರೆಗೆ ಬಿಚ್ಚ ಬಾರದು, ನಾಲ್ಕನೇ ದಿವ
ಸ ಬಿಚ್ಚ ಬೇಕು. ಮುಂದೆ ನಾರು ಆದ ಸ್ಥಳವು ನಾಲ್ಕು
ದಿವಸ ಸ್ವಲ್ಪ ನೋಯಿಸುತ್ತದೆ. ಆದರೆ ಈ ಔಷಧದಿಂ
ದ ನಾರು ಒಳಗಿಂದೊಳಗೆ ಸುಟ್ಟು ಹೋಗಿ, ನಾರು ಆದ
ವನಿಗೆ ಯಾವ ಪ್ರಕಾರದ ಉಪದ್ರವವು ಉಳಯುವದಿಲ್ಲ.

SELF HELP.

ತನಗೆ ತಾನೇ ನೆರವಾಗುವದು.

ಹಿಂದು ದೇಶದಲ್ಲಿ ಇತ್ತಲಾಗಿ ಉಂಟಾದ ಭಯಂಕರವಾದ ಜಗಳದಲ್ಲಿ ನಮ್ಮ ಇತಿಹಾಸದಲ್ಲಿ ವರ್ತಿಸಿದ ಹಿಂದಿನ ಯಾವದೊಂದು ಸಂಗತಿಗಿಂತ ಬಹುಶಃ ಹೆಚ್ಚು ಕ್ರೀಸ್ತ್ವದಿಂದ ನಮ್ಮ ದೇಶದವರ ಶಕ್ತಿಯೂ, ತಮ್ಮ ಸ್ವಂತ ಭರವಸವೂ ಪ್ರಗಟವಾಗುವದಕ್ಕೆ ಅನುಕೂಲವಾಯಿತು. ಇಂಗ್ಲಿಶರ ರಾಜ್ಯಕಾರಭಾರದ ರೀತಿಯಲ್ಲಿ ಮೇಲೆ ದೊಡ್ಡ ದೊಡ್ಡ ತಪ್ಪುಗಳು ಜಗಬಹುದಾದಾಗ್ಯೂ, ಆ ದೇಶದ ಜನರು ಅಂಥಾ ತಪ್ಪುಗಳೊಳಗಿಂದ ಪಾರಾಗುವ ಯುಕ್ತಿಗಳನ್ನು ಅತ್ಯಾಶ್ಚರ್ಯಕರವಾದ ಕೌಶಲ್ಯದಿಂದ ಸಾಧಾರಣವಾಗಿ ರಚಿಸುತ್ತಾರೆ. ಸನ್ನ ೧೮೫೭ನೇ ವರ್ಷ ಹಿಂದು ದೇಶದಲ್ಲಿ ದಂಗೆಯು ಮೇಘಗರ್ಜನೆಯಂತೆ ಗರ್ಜಿಸುತ್ತಿರುವ ಕಾಲದಲ್ಲಿ ಬ್ರಿಟಿಶ ಸೈನ್ಯವು ತೀರ ಸ್ವಲ್ಪ ಮಾತ್ರವಿದ್ದು, ಬಹು ದೂರ ದೂರಾದ ಪ್ರದೇಶಗಳಲ್ಲಿ ತುಂಡುತುಂಡಾಗಿ ವಾಸಿಸುತ್ತಿತ್ತು. ಬಂಗಾಲದ ಪಟಾಲಮುಗಳು ಒಂದರ ಹಿಂದೆ ಒಂದು ತಮ್ಮ ತಮ್ಮ ಅಧಿಕಾರಿಗಳ ಮೇಲೆ ತಿರುಗಿ ಬಿದ್ದು ಹೊರಹೊರಟು ದಿಲ್ಲಿಗೆ ನಡೆದವು—ಪ್ರಾಂತದ ಹಿಂದೆ ಪ್ರಾಂತವು ದಂಗೆಯಲ್ಲಿಯೂ, ದಾಳಿಯಲ್ಲಿಯೂ, ಪುಳುಗಿಹೋಯಿತು. ಪೂರ್ವ ತುದಿಯಿಂದ ಪಶ್ಚಿಮ ತುದಿವರಿಗೆ ಸಹಾಯ, ಸಹಾಯ, ಯೆಂಬದೊಂದೇ ಕೂಗುವುಂಟಾಯಿತು. ಎತ್ತನೋಡಿದತ್ತ ಇಂಗ್ಲಿಶರ, ಚಿಕ್ಕ ಚಿಕ್ಕ ಸಮುದಾಯಗಳು ಅಸ್ಥಿಯ

ಮೊಡಲು ಸಮರ್ಥರಾದವರಿಗಾಗಿ ಕಾಣಿಸುತ್ತ, ಕತ್ತುಗಳಿಂ
ದ ಸುತ್ತಗಟ್ಟಿ ಸಿಕೊಂಡು ಅವರಿಗೆ ಯೆದುರಾಗಿ ನಿಲ್ಲಬೇ
ಕಾಯಿತು ಆಡವರಿಂದ ಅವರು ಸ್ವಾರ್ಥವಾಗಿ ಅಪಜಯವ
ಡುತ್ತ್ಯಾರೆಂತಲೂ, ಹಿಂದುದೇಶದಲ್ಲಿ ಇಂಗ್ಲಿಷರ ಅಧಿಕಾರ
ವು ತೀರ ನಷ್ಟವಾಗುವದು ನಿಶ್ಚವೆಂತಲೂ, ತ್ರೋರಹತ್ತಿ
ಲು. ಮೊದಲು ಅನ್ನುತ್ತಿದ್ದಂತೆ ಆ ಕಾಲದಲ್ಲಿ ಸಹ
"ಇಂಗ್ಲಿಶರು ತಮಗೆ ಯಾವಾಗ ಅಪಜಯವುಂಟಾಗದೆಂಬ
ದನ್ನು ಯಿಷ್ಟವಾತ್ರವೂ ಅರಿಯರೆಂ"*ದೆನ್ನಬಹುದಾಗಿ
ತ್ತು. ಆದದರಿಂದ ವಾಡಿಕೆಯಂತೆ ಅವರು ಅಪೇಕ್ಷಣೆಯಲ್ಲಿ
ದುರ್ನಿವಾರ್ಯವಾದ ದೈವಕ್ಕೆ ವಶವಾಗುವದು ತಕ್ಕದ್ದಾ
ಗಿತ್ತು.

ದಂಗೆಯು ಅನ್ಯಾಯವಿರಲಾಗಿ ಪ್ರೋಳಕರನೆಂಬ ಆ
ದೇಶದ ಪ್ರೌಢ ಮಾಂಡಲೀಕ ರಾಜನು ಒಬ್ಬ ಜ್ಯೋತಿ
ಷಯನ್ನು ಕರಿಸಿ, ಈ ಜಗಳಾಟದ ಪರಿಣಾಮವು ಯೇ
ನಾಗುವದೆಂದು ಕೇಳಿದನು. ಅದಕ್ಕೆ ಜ್ಯೋತಿಷಿಯು,
"ಯೆಲ್ಲ ಯುರೋಪಿಯನ್ನರನ್ನು ಕೊಂದನಂತರ ಒಬ್ಬ
ನೇ ಅವರವನು ಉಳಿದಾಗ್ಯೂ, ಅವನೊಬ್ಬನೇ ಯುದ್ಧ
ಮಾಡಿ ದೇಶವನ್ನು ಪುನಃ ಗೆದ್ದುಕೊಳ್ಳುವನು." ಯೇ
ದು ಉತ್ತರ ಹೇಳಿದನು. ಲಖನೌವಟ್ಟಣದಲ್ಲಿ ವರ್ತಿಸಿ
ದಂತೆ ಬೇರೆ ಸ್ಥಳಗಳಲ್ಲಿ ಸಹ ತೀರ ಸ್ವಲ್ಪ ಜನರ
ಯುರೋಪಿಯನ್ ಶಿಪಾಯಿಗಳೂ, ದಂಡಿನವರಲ್ಲದಂಥ

---

* ಈ ವಾಕ್ಯಕ್ಕೆ ಯೆರಡು ಅರ್ಥಗಳುಂಟು. ಇಂಗ್ಲಿಷರಿಗೆ ಅಪಜ
ಯವೆಂಬ ಪದಾರ್ಥವೇ ಗೊತ್ತಿಲ್ಲ, ಯೆಂಬದೊಂದ; ಯಾವ ಪ್ರಸಂಗ
ದಲ್ಲಿ ಅಪಜಯ ಬರುವದೋ ಯೆಂದು ಭಯಭೀತರಾಗಿದ್ದರೆಂಬದು ಮ
ತೊಂದು.

ಉಪ್ಯೋಗಸ್ಥರೂ, ಹೆಂಗಸರೂ ಕೂಡಿ ಜೆತೆಯಾಗಿ ನಿಂತು ಕೊಂಡು, ತಮ್ಮ ಮೇಲೆ ಪಟ್ಟಣಕ್ಕೆ ಪಟ್ಟಣವು, ಪ್ರಾಂತಕ್ಕೆ ಪ್ರಾಂತವು ಕತ್ತಿಯು ಹಿರಿದಾಗ್ಯೆ, ಅಂಜಲಿಲ್ಲ—ಅಂಥಾ ಕಡುವಿಪತ್ತಿಯ ಪ್ರಸಂಗದಲ್ಲಿ ಸಹ ನಿರಾಶೆಯ ಶಬ್ದವು ಯಾರ ಮುಖದಿಂದಲೂ ಹೊರಡಲಿಲ್ಲ, ಶತ್ರುಗಳ ಕೈ ವಶವಾಗುವ ಆಲೋಚನೆಯು ಯಾರ ಮನಸ್ಸಿನಲ್ಲಿಯೂ ಬರಲಿಲ್ಲ. ಆ ಸಮಯದಲ್ಲಿ ಯೆಷ್ಟೋ ತಿಂಗಳುಗಳವರೆಗೆ ಒಬ್ಬರ ವರ್ತಮಾನವು ಒಬ್ಬರಿಗೆ ತಿಳಿಯದೆ ಇದ್ದಾಗ್ಯೂ: ಹಿಂದುದೇಶವು ತಮ್ಮ ಕೈಯಲ್ಲಿ ಉಳಿಯಿತ್ತೋ, ಹೋಯಿತ್ತೋ ಯೆಂಬದನ್ನು ಸಹ ಯಾರು ಅರಿಯದೆ ಇದ್ದಾಗ್ಯೂ, ತಮ್ಮ ದೇಶದವರ ಧೈರ್ಯದ ಬಗ್ಗೆ, ದೇಶಾಭಿಮಾನದಬಗ್ಗೆ ಅವರ ಪೂರ್ಣವಾದ ವಿಶ್ವಾಸವು, ಯಿಷ್ಟು ಮಾತ್ರವೂ ಭಂಗಪಡಲಿಲ್ಲ—ಇಂಗ್ಲಿಷಜನರ ಕೆಲವು ಧಮುದಾಯವು ಹಿಂದುದೇಶದಲ್ಲಿ ಒಕ್ಕಟ್ಟಿನಿಂದ ಉಳಿದಿರಲಾಗಿ, ಅವರು ಸಾಯಬ್ರೆಂದು ದುರ್ಲಕ್ಷ್ಯಮಾಡಿ ತಮ್ಮ ದೇಶದ ಜನರು ಬಿಡಲಿಕ್ಕಿಲ್ಲವೆಂದು ಅವರು ಅರಿತ್ತಿದ್ದರು ತಮ್ಮ ದುರ್ದೈವವು ಮೂರ್ಮಾರ್ಗವಾಗಿ, ಕಡೆಯಲ್ಲಿ ನಮಗೆ ಜಯವಾಪ್ತಿಯಾಗುವದೆಂಬದರಪೂರ್ತಿಗಾಗಿ ಬೇರೆ ಯಾವ ಆಲೋಚನೆಯೂ ಅವರ ಮನಸ್ಸಿನಲ್ಲಿ ಬರಲಿಲ್ಲ. ಕೊಗಾಲನೇ ಸೂರಿಬಂದರೆ, ಅವರು ತಾವಿದ್ದ ಸ್ಥಳದಲ್ಲಿಯೇ ತಾವು ನೇಮಿಸಿಕೊಂಡ ಕೆಲಸದೊಳಗೆ ಪ್ರಾಣಕೊಡುವರು ಸಾನೆಲಾಕ್, ಜಾಂಗ್ಲಿಸ್, ನೇಲ, ಟೌಟರವತ್, ಯೆಂಬ ಹೆಸರುಗಳನ್ನು ಇಲ್ಲಿ ನಾವು ಓದುವವರಿಗೆ ನೆನಪು ಮಾಡಿಕೊಡುವದು ಅವಶ್ಯಕವಿಲ್ಲ. ಇವರೆಲ್ಲರು ನಿಜವಾದ ಕೌ

ಯುದ್ಧವೆಳ್ಳವರಾಗಿ ಪ್ರತಿ ಒಬ್ಬನಲ್ಲಿ ಯುದ್ಧದೀಕ್ಷೆಯು ಪಟ್ಟವನಂಥ ಅಂತಃಕರುಣವೂ ಧಮನಕ್ರದ್ಧೆಯುಳ್ಳವಸಂ ಥ ಜೀವಾತ್ಮವೂ, ಧರ್ಮಾಭಿಮಾನಿಯಂಥ ಸ್ವಭಾವಲಕ್ಷ ಣವೂ ಇತ್ತೆಂದು ಸತ್ಯವಾಗಿ ಹೇಳಬಹುದು. ಮಾಂಟಾಲೆಂ ಬರ್ಟನೆಂಬವನು " ಅವರಿಂದ ಮನುಷ್ಯ ಜಾತಿಗೆ ಬಹು ಮಾನ ವುಂಟಾಗಿದೆ " ಯೆಂದು ಹೇಳಿದ್ದಾನೆ — ಅವರೆ ಆ ಭಯಂಕರವಾದ ಆಪತ್ಕಾಲದಲ್ಲಿ ಬಹುತರವಾಗಿ ಯೆಲ್ಲರೂ ಸರಿಯಾಗಿ ದೊಡ್ಡ ಸ್ಥಿತಿಯೆಯ ಪಡೆದರು. ಹೆಂಗಸರೂ ದಂಡಿನವರಲ್ಲದಂಥ ಉದ್ಯೋಗಸ್ಥರೂ, ಶಿಪಾಯಿಗಳೂ (ದಳವಾಯಿಗಳೊಡನೆ ಕೂಡಿ ತೀರ ಕಡಿಮೇತರದ ಶಿಪಾ ಯಿಗಳ ವರೆಗೂ) ಸರಿಯಾಗಿ ಯತ್ನಿಸಿದರು—ಆದರೆ ಈ ಮನುಷ್ಯರನ್ನು ಆರಿಸಿ ತೆಗೆದು ಹಿಂದುಮೇಕಕ್ಕೆ ಕಳುಹಿಸಿ ದ್ದಿಲ್ಲ. ನವ್ವ ಇಲ್ಲಿ * ಪ್ರತಿದಿವಸ ನೋಡುವ ಸಾಧಾರಣ ಜನರೊಳಗಿನವರೇ ಅವರಿದ್ದರು. ಆದರೆ ಅವರಿಗೆ ಅಕ ಸ್ಮಾತ್ತಾಗಿ ಕಷ್ಟವು ಒದಗಲಾಗಿ ಪ್ರತಿ ಒಬ್ಬ ಮನುಷ್ಯ ನು ತನ್ನ ಸ್ವಂತ ಸಿದ್ಧತೆಯನ್ನೂ, ಶಕ್ತಿಯನ್ನೂ ಪ್ರಗಟ ಮಾಡಿ ತನ್ನಷ್ಟಕ್ಕೆ ತಾನೇ ಕಾರನೆಂದೆನಿಸಿಕೊಂಡನು. ಮಾಂಟಾಲೆಂಬರ್ಟನು ಬರಿಯುವದೇನಂದರೆ " ಅವರಲ್ಲಿ ಒಬ್ಬರಾ ಬೆವರಲಿಲ್ಲ, ಅಳವಾ ನಡುಗಲಿಲ್ಲ. ದಂಡಿನವ ರಾ, ಆತಳಕ್ಕಿನ ಉದ್ಯೋಗಸ್ಥರೂ, ಪ್ರಾಯದವರೂ, ಮು ದುಕರೂ, ದಳವಾಯಿಗಳೂ, ಶಿಪಾಯಿಗಳೂ, ಯೆಲ್ಲರು ಸರಿಯಾಗಿ ಹಗೆಗಳನ್ನು ವಿರೋಧಿಸಿ, ಹಗೆಳಾಡಿ, ನಿಶ್ಚಲ ವಾದ ಕಾಂತಿಯಿಂದಲೂ, ಧೈರ್ಯದಿಂದಲೂ ಪ್ರಾಣಕೊಟ್ಟ

* ಇಂಗ್ಲಂಡದಲ್ಲಿ.

ಮು. ಇದೇ ಸಂಗತಿಯಲ್ಲಿ ಜನರ ವಿದ್ಯಾಭ್ಯಾಸದ ಮೇಲಾ
ನ ಬೆಲೆಯು ಹೊಳೆಯುತ್ತದೆ–ಈ ವಿದ್ಯಾಭ್ಯಾಸವು ಇಂಗ್ಲಿ
ಷಜನರಿಗೆ ಚಿಕ್ಕಂದಿನಿಂದ ತಮ್ಮ ಒಲ, ಸ್ವಾತಂತ್ರ್ಯಗಳ
ಉಪಯೋಗಮಾಡುವದಕ್ಕೂ, ಒಟ್ಟಾಗಿ ಕೂಡುವದಕ್ಕೂ,
ವಿರೋಧಿಸುವದಕ್ಕೂ ಯೇನು ಬಂದಾಗ್ಯೂ ಅಂಜದೆ ಇರು
ವದಕ್ಕೂ, ಯೇನು ನೋಡಿದಾಗ್ಯೂ ಆಶ್ಚರ್ಯಪಡದೆ ಇರು
ವದಕ್ಕೂ, ಯೆಷ್ಟು ಕಷ್ಟ ಬಂದಾಗ್ಯೂ ಸ್ವಂತ ಶ್ರಮದಿಂದ
ಲೇ ಅದನ್ನು ಪರಿಹರಿಸಿಕೊಳ್ಳುವದಕ್ಕೂ ಕಲಿಸುತ್ತದೆ.

ಸರ್‌ಜೋಸ್‌ಲಾರೆನ್ಸನೆಂಬ ಆಗಿದ್ದ ಗವರ್ನರಹುದ್ದೆಯಲ್ಲಿನ
ಸ್ವಂತ ಗುಣಗಳಿಂದಲೇ ದಿಲ್ಲಿಯು ತಿರಿಗಿ ತೆಗೆದುಕೊಳ್ಳ
ಲ್ಪಟ್ಟು, ಹಿಂದೂದೇಶವು ಇಂಗ್ಲಿಷರ ವಶದಲ್ಲಿ ಉಳಿಯಿ
ತೆಂದು ಹೇಳುತ್ತಾರೆ. ವಾಯವ್ಯ ಪ್ರಾಂತಗಳಲ್ಲಿ ,,ಲಾರೆ
ನ್ಸ್‌”ಯೆಂಬ ಹೆಸರಿನ ಅರ್ಥವೇ ಸಾಮರ್ಥ್ಯವೆಂದು ಜನರ
ನಂಬಿಕೆಯಾಗಿತ್ತು. ಅವನು ಕರ್ತವ್ಯಕರ್ಮ, ದೃಢನಿಶ್ಚ
ಯಪ್ರಯತ್ನ, ಯೆಂಬವುಗಳನ್ನು ಅತಿ ವಿಸ್ತಾರವಾದ ಅ
ರ್ಥದಿಂದ ಗ್ರಹಿಸುತ್ತಿದ್ದನು. ಅವನ ಕೈಕೆಳಗೆ ಕೆಲಸಮಾ
ಡಿದವರೆಲ್ಲರು ಅವನಿಂದಲೇ ಆವೇಶ ಪಟ್ಟು ಹಾಗೆ ತೋ
ರುತ್ತಿದ್ದರು. ಅವನ ಸ್ವಂತ ಗುಣಗಳೇ ಒಂದು ದೊಡ್ಡ
ಸೈನ್ಯಕ್ಕೆ ಸರಿಯಾಗಿದ್ದವೆಂದು ಹೇಳುತ್ತಾರೆ. ಅವನ ತ
ಮ್ಮನಾದ ಸರ ಹೆನರೀ ಯೆಂಬವನು ಸಹ ಅವನಂತೆಯೇ
ಇದ್ದನೆಂದು ಹೇಳಬಹುದು. ಇವನೇ ಪಂಜಾಬಿನ ದಳವ
ನ್ನು ಸಿದ್ಧಮಾಡಿದನು. ಮುಖ್ಯವಾಗಿ ಇವೇ ದಳದವರು
ದಿಲ್ಲಿಯನ್ನು ತಿರುಗಿ ತೆಗೆದುಕೊಂಡರು. ಇವರಿಬ್ಬರೂ ಅ
ನ್ನಾ ತಮ್ಮಂದಿರು ತಮ್ಮ ಸುತ್ತು ಮುತ್ತ ತಿರುಗುವ ಜನ

ಲ್ಲಿ ತನ್ನ ಬಗ್ಗೆ ಪೂರ್ಣವಾದ ವಿಶ್ವಾಸವನ್ನು ಪ್ರೀತಿಯನ್ನೂ ಉಂಟು ಮಾಡಿದರು. ಇವರಿಬ್ಬರೂ ದಯಾಳುಗಳಾಗಿದ್ದರು. ಇದೇ ಗುಣವು ಶೌರ್ಯದ ನಕ್ಷತ್ರಕ್ಕೆ ನಿಜವಾದ ಮೂಲತತ್ವವಾಗಿರುತ್ತದೆ. ಇವರಿಬ್ಬರೂ ಯಾವಾಗಲೂ ಇವರೊಳಗೆ ಕೂಡಿದ್ದ ಸತ್ಕೃತ್ಯಗಳ ಬಗ್ಗೆ ಅವರಲ್ಲಿ ಈರ್ಷ್ಯೆಯನ್ನುಂಟು ಮಾಡಿದರು. ಇವರ ಬಗ್ಗೆ ಕರ್ನಲ್ಲ ಎಸ್ವಾರ್ಥನು ಅಂದಮಾತ್ರ "ಎಲ್ಲಕ್ಕಿಂತ ಹೆಚ್ಚು ಯೋಚನೆಯೆಂದರೆ ಇವರಿಬ್ಬರೂ ವೃದ್ಧಾಪ್ಯವಯಸ್ಕರಾದ ಜನರ ಮನಸ್ಸುಗಳಲ್ಲಿ ತಮ್ಮ ಸ್ವಂತ ನಮೂನೆಗಳನ್ನುಂಟು ಮಾಡಿದರಿಂದ ಆ ಜನರು ತಮ್ಮ ಬೇರೆ ಬೇರೆ ಉದ್ಯೋಗಗಳಲ್ಲಿ ಅವುಗಳಂತೆಯೇ ಕೆಲಸ ನಡಿಸಿದರು. ಇವರು ಒಂದು ಹೊಸ ಪಂಥವ ರಚಿಸಿ ಒಂದು ವಿದ್ಯಾಲಯವನ್ನು ಸ್ಥಾಪಿಸಿದರು ಇವೆರಡು ಈ ಕಾಲದ ವರಿಗೂ ನಡಿಯುತ್ತಿವೆ, ಸ್ಪಾನ ಲಂರೆನ್ಸನ ಕೈಕೆಳಗೆ ಮಂಟಗಾಮರ್ರಿ, ನಿಕಲ್ಸನ್‌ಪಡಕಾಟೆನ್, ಎಡ್ವರ್ಡ್ಸ್, ಮುಂತ್ತಾದ ಜನರು ಅವನತಿಸೋತವಕವುಳ್ಳವರೂ, ನಿಶ್ಚಯದ ಮನಸ್ಸಿನವರೂ ಇದ್ದರು. ಜಾನನಿಕಲ್ಸನ್ನನು ಅತ್ಯುತ್ತಮ ಸ್ವಭಾವದವನೂ, ಅತ್ಯಂತ ಶೌರ್ಯವುಳ್ಳವನೂ, ಅತಿ ಮಾನ್ಯನಾದಿವನು ಇದ್ದನು. ಅವನ ಮೈಯಲ್ಲಿ ಯೆಳ್ಳಷ್ಟು ಸ್ಥಳ ಬಿಡದೆ ಬುದ್ಧಿವಂತಿಕೆಯು ತುಂಬಿಕೊಂಡಿತ್ತೆಂದು ಆ ದೇಶದ (ಹಿಂದು ದೇಶದ) ಜನರು ಅನ್ನುತ್ತಿದ್ದರು. ಲಾರ್ಡ್‌ದಾಹೌಸಿಯು† "ಅವನು ಸಾಮರ್ಥ್ಯದ ಕೋಟೆಯೇ" ಯೆಂದು ಅನ್ನುತ್ತಿದ್ದನು. ಅವನು ಯಾವ ವಿಧದ ಕೆಲಸದಲ್ಲಿ ಕೈಯಿದರೂ ದೊಡ್ಡವನೆಂ

† ಇವನು ಗವರ್ನರ ಜನರಲ್ಲನಿದ್ದನು.

ದೆನಿಸಿಕೊಳ್ಳುತ್ತಿದ್ದನು. ಯಾಕಂದರೆ ಅವನು ತನ್ನ ಪೂರ್ಣವಾದ ಸಾಮರ್ಥ್ಯದಿಂದಲೂ, ಅಂತಃಕರಣದಿಂದಲೂ ಕೆಲಸ ಮಾಡುವನು. ಕೆಲಜನ ಫಕೀರರು ಆ ಮನುಷ್ಯನ ಗುಣಗಳನ್ನು ನೋಡಿ, ಅಭಿಮಾನವುಳ್ಳ ಆಶ್ಚರ್ಯದಿಂದ ಅವನನ್ನು ಪೂಜಿಸಲಾರಂಭಿಸಿದನು. ಈ ಮೂರ್ಖತನಕ್ಕಾಗಿ ಅವರಲ್ಲಿ ಕೆಲವರನ್ನು ಅವನು ಶಿಕ್ಷಿಸಿದಾಗ್ಯೂ ಅವರು ತಮ್ಮ ಆರಾಧನೆಯನ್ನು ಬಿಡಲಿಲ್ಲ. ಹಿಡಿದದ್ದನ್ನು ಬಿಡಲಿಕ್ಕಿಲ್ಲವೆಂಬ ಆಗ್ರಹವೂ, ಶಕ್ತಿಯೂ, ಅವನಲ್ಲಿ ಯಿಷ್ಟು ಮಟ್ಟಿಗೆ ಬೆಳೆಯುತ್ತಿದ್ದವೆಂಬದರದೊಂದು ಉದಾಹರಣೆಯನ್ನು ಇಲ್ಲಿ ಬರಿಯಬಹುದು. ದಂಗೆಕಾರರಾದ ಸಿಖ್ಖರೇ ಪಟಾಲವಿನ ಶಿವಾಯಿಗಳನ್ನು ಬೆನ್ನಟ್ಟಿದಾಗ ಅವನು ಏಕಪ್ರಕಾರವಾಗಿ ಇಪ್ಪತ್ತು ತಾಸುಗಳವರೆಗೆ ಕುದುರೆಯ ಮೇಲೆ ಕೂತುಕೊಂಡು ಯಿಪ್ಪತ್ತು ಮೈಲುಗಳಿಗಿಂತ ಹೆಚ್ಚು ದೂರಿಯು ನಡಿದನು. ಕತ್ರಿಗಳು ಯಲ್ಲಿಯಲ್ಲಿ ತಮ್ಮ ಜಯಪತ್ರಾಕೆಯನ್ನು ನಿಲ್ಲಿಸಲಾಗಿ ಯಾರೆನ್ನನೂ ಮಾಂಟಗಮರೀಯೂ, ಪಂಜಾಬದ ಜನರ ಸಹಾಯದಲ್ಲಿ ನಂಬಿಕೆಯುಳ್ಳವರಾಗಿ ಆ ಜನರ ಮನಸ್ಸಿನಲ್ಲಿ ಆಶ್ಚರ್ಯವನ್ನೂ ವಿಶ್ವಾಸವನ್ನೂ ಉಂಟುಮಾಡಿದರು. ಅದರಿಂದ ಅವರು ತಮ್ಮ ಸ್ವಂತ ಪ್ರಾಂತವನ್ನು ತಳ್ಳೀ ವ್ಯವಸ್ಥೆಯಿಂದ ಕಾಯ್ದುಕೊಳ್ಳುವ ಹಾಗೆ ಕೈಯಾದ ಮುಟ್ಟಿಗೂ ವ್ಯವಸ್ಥೆಯು ಪಡಿಸಿ, ಆ ಪ್ರಾಂತದೊಳಗಿಂದ ಒಯ್ಯಬಹುದಾದಷ್ಟು ಶಿವಾಯಿಗಳನ್ನು (ಯುರೋಪಿಯನ್ನರನ್ನು *ಸೀಕರನ್ನು)ದಿಲ್ಲಿಗೆ ಒಯಿದರು.

---

* ಪಂಜಾಬದ ಜನರಿಗೆ ಈ ಹೆಸರುಂಟು.

ಆಗ ನಿಕಲ್ಸನ್ನನು ಅತಿ ತ್ವರೆಯಿಂದ ದಿಲ್ಲಿಗೆ ಹೊರಡಲಿ
ಗಿ, ಸರಜಾನಲಾರೆನ್ಸನು ದಿಲ್ಲಿಯಲ್ಲಿದ್ದ ಸೇನಾಧಿಪತಿ
,,ದಂಗೆಗಾರರ ಮೂಗನ್ನು ಒತ್ತಿ ಹಿಡಿಯುರೆಂ''ದು ಪತ್ರ
ರೆದನು. ನಿಕಲ್ಸನ್ನನ ಕಾಳಗ ಕುದುರೆಯು ಖುರಗಳ
ಸ್ಪಳವು ಯಿಪ್ಪೋ ಮೈಲುಗಳವರೆಗೆ ಕೇಳಿಸುತ್ತಿತ್ತೆಂ
ಒಬ್ಬ ಉದ್ಧಟನಾದ ಸೀಕನು ಅನ್ನುತ್ತಿದ್ದನು. ಅವನ
ನಿಕಲ್ಸನ್ನನ ಗೋರಿಯ ಹತ್ತರ ಕೂತು ಅತ್ತನು.

NOTICE.

ನೋಟೀಸು.

ಈ ನೋಡೀಸಿನಿಂದ ತಿಳಿಸುವದೇನಂದರೆ—ಕಾಳಾಖಾ
ಯು ನೌಕ್ಕರರಲ್ಲದೇ ಬೇರೆಯವರು ದಕ್ಷಣಭಾಗ
ಟ್ರೇನಿಂಗ ಕಾಲೇಜಿದ ಸರಟಿಫಿಕೇಟಿ ಪರೀಕ್ಷೆಯನ್ನು
ಕೊಡಬೇಕಾದರೆ ಕೆಳಗೆ ಬರೆದ ನಿಯಮಗಳಿಗೆ ಅನುಸ
ಸಿ ಮೆ. ಎಜ್ಯುಕೇಶನಲ ಇನಸ್ಪೇಕ್ಟರ ಸಾಹೇಬ ರ
ದಕ್ಷಣಭಾಗ ಇವರ ಕಡಿಗೆ ಪರವಾನಗೀಯು ಬ್ಯೆ ಅಜ
ಮಾಡಬೇಕು.

(ಅ) ಉಮೇದವಾರರು ಕ್ರಿಸ್ತನಡ ಮುಲಕೀ ಪರಿ
ಷ್ಠಾವಂತರಾಗಿರಬೇಕು.

(ಬ) ಅವರ ವಯಸ್ಸು ೨೫ ವರುಷಗಳಕಿಂತ ಹೆ
ಗೆ ಇರಬಾರದು.

(ಕ) ತಂವು ನಡತೆಯ ಬ್ಯೆ ತಂವು ಪೂರ್ವಪ ವ

ಸ್ತರನದಾಗಲಿ ಯೋಗ್ಯ ಸಂಭಾವಿತರದಾಗಲಿ ಸರಟಿಫಿಕೇಟಿಯನ್ನು ಕಳುಹಿಸಬೇಕು.

(ಡ) ತಂಪುನ್ನು ಬಲ್ಲಂಥ ಇಬ್ಬರ ಪ್ರಸಿದ್ಧ ವುನುಷ್ಯರ ಹೆಸರನ್ನು ತಂವು ಅಜಿರ್ಯಲ್ಲಿ ಕಾಣಿಸಬೇಕು. ತಿಳಿಯುವದು.

ತಾ. ೩೪ ನೇ ನವಂಬರ ೧೮೭೫ ಮುಕ್ಕಾವು ಕೊಲ್ಲಾಪೂರ

(Signed) W. A. Russell.
ಎಜ್ಯುಕೇಶನಲ ಇ. ದಕ್ಷಿಣಭಾಗ

CORRESPONDENCE.
ಪತ್ರವ್ಯವಹಾರವು.

ರಾ॥ ರಾ॥ ದಕ್ಷಿಣಭಾಗದ ಕೇನಡಶಾಲಾಪತ್ರಕದ ಎಡಿಟರರ ಸಂನಿಧಾನಕ್ಕೆ

ವಿ॥ ವಿ॥ ಐಯ್ಯಾ, ಪೂರ್ವಕಾಲದಲ್ಲಿ ಯಾವ ಸಂಗತಿಗಳು ತವುಗ ತಿಳಿಬರುವವೋ, ಅವಂನು, ಪ್ರಸಿದ್ಧ ಮಾಡದೇ ಹೂ॥ ಅನ್ಯರಿಗೆ ತಿಳಿಸದೇಯೂ, ಇರುವದು ರೂಢಿಯಾಗಿತ್ತು. ಇದರಿಂದ ಕಾನೆ ಉತ್ಕೃಷ್ಟ ಸ್ಥಿತಿಯಲ್ಲಿದ್ದ ಈ ನವ್ಮ ದೇಶವು ಗಾಢಾಂಧ ಕಾಲದಲ್ಲಿ ಮುಳುಗಿ, ಅವರವರಲ್ಲಿದ್ದ ಸಂಗ್ರಹವು ಅವರ ಸಂಗಡಲೇ ಹೋದ ಶ್ರೀ. ಇತ್ತಲಾಗಿ, ಇಂಗ್ಲಿಷರು ನವ್ಮ ದೇಶವನ್ನಾಳ ಹತ್ತಿದಂದಿನಿಂದ, ಹಾಗೂ ಅವರ ವಿದ್ಯಾ ಪ್ರಸಾರಣ ಶಕ್ತಿಯಿಂದ, ಇವರಲ್ಲಿದ್ದ ಮತ್ಸರ್ಯವು ಮೆಲ್ಲ ಮೆಲ್ಲನೇ ಡಿಮೆಯಾಗುತ್ತ ನಡೆದದೆ. ಇಮೊಂದು ಸುಚಿನ್ಹವೇ

ಸರಿ. ನನಗೆ ಕೆಲವು ಸಂಗತಿಗಳು ತಿಳಿದವೆ. ಅವನ್ನು ನ
ಮ್ಮ ಪ್ರಯಬಾಂಧವರಿಗೆ ತಿಳುಹಿಸುವದರ ಸಲುವಾಗಿ ತ
ಮ್ಮ ಸನ್ನಿಧಾನಕ್ಕೆ ಬರಬೇಕಾದಿತು.

ನಕ್ಷತ್ರ ತೆಗೆಯುವ ರೀತಿಯು.

೧. ನಡಿಯುವ ತಿಂಗಳಲ್ಲಿ ಎಷ್ಟು ತಿಥಿಗಳು ಸಂದಿರುವ
ವೋ, ಅಷ್ಟರಲ್ಲಿ (೧೪) ಕೂಡಿಸಿ, ಮೂಸ ನಕ್ಷತ್ರ
ದಿಂದ ಎಣಿಸಿ, ಬಂದದ್ದು ೪ ದಿವಸ ನಕ್ಷತ್ರ ವೆಂದು ಹೇ
ಳು. (೨೭) ರಕಿಂತಲೂ ಹೆಚ್ಚು ಬಂದರೆ, (೨೭)ರಿಂ
ದ ಭಾಗಿಸಬೇಕು.

೨. ಚೈತ್ರ ಹಿಡಿದು ನಡಿಯುವ ತಿಂಗಳತನಕ ಮೂಸಗಳ
ನ್ನು ಎಣಿಸಿ, ಎರಡಪಟ್ಟು ಮಾಡಿ, ಎಷ್ಟು ತಿಥಿಗಳು
ಸಂದಿರುವವೋ, ಅಷ್ಟು ಅದರಲ್ಲಿ ಕೂಡಿಸಿ, ಬಂದ
ಕಡಿಮೆ ನಕ್ಷತ್ರ ಹೇಳು.

ಯೋಗ ತೆಗೆಯುವ ರೀತಿಯು.

೧. ಪುಷ್ಯನಕ್ಷತ್ರದಿಂದ,ಸೂರ್ಯನಕ್ಷತ್ರ(ಮೇಷನಕ್ಷತ್ರ)
ದ ವರೆಗು, ಎಣಿಸಬೇಕು. ಮತ್ತು ಶ್ರವಣ ನಕ್ಷತ್ರದಿಂ
ದ ದಿವಸ ನಕ್ಷತ್ರ(ಚಂದ್ರ ನಕ್ಷತ್ರ)ದ ವರೆಗು ಎಣಿಸಿ
ಎರಡೂ ಸಂಖ್ಯೆಗಳ ಬೇರೀಜಿಗೆ, (೨೭)ರಿಂದ ಭಾಗಿ
ಸಿ ಕ್ಲೇಷ ಉಳದ್ದು, ಯೋಗವೆಂದು ಹೇಳಬೇಕು,

ಕರಣ ತೆಗೆಯುವ ರೀತಿಯು.

೧. ತಿಥಿ ಯುರಡಪಟ್ಟು ಮಾಡಿ, (೭)ರಿಂದ ಭಾಗಿಸಿ,
ಬಾಕಿ ಉಳದದ್ದು ಕರಣವೆಂದು ಹೇಳಿ ಮುಂದಕ್ಕೆ
ಸಾಗುವದು.

ಸಂವತ್ಸರ ತೆಗೆಯುವ ರೀತಿಯು.

೧. ಶಕದಲ್ಲಿ (೧೮೨) ಕೂಡಿಸಿ, (೬೦)ರಿಂದ ಭಾಗಿಸಬೇಕು. ಕ್ಷೇಪ ಉಳದ್ದಕ್ಕೆ, ಪ್ರಭವಾದಿಯಿಂದ ಎಣಿಸಿ ಬಂದದ್ದು, ಸಂವತ್ಸರವೆಂದು ಹೇಳು.

ಹಿದರಿ ಸನ ತೆಗೆಯುವ ರೀತಿಯು.

೧. ಶಕದಲ್ಲಿ (೫೦೯)ವಜಾ ಮಾಡಿ, ಬಾಕಿ ಉಳದ ಸಂಖೆಯು, ಹಿಜರಿ ಸನ್ನವೆಂದು ಹೇಳು ಇದರ ಪ್ರಾರಂಭ ಮೊಹರವು ತಿಂಗಳದ ಮೊದಲನೇ ತಾರೀಖು.

ಇಂಗ್ರಜ ಸನ ತೆಗೆಯುವ ರೀತಿಯು.

೧. ಶಕದಲ್ಲಿ (೭೮) ಕೂಡಿಸಿ, ಬಂದ ಬೇರೀಜ, ಇಸವಿ ಸನ್ನವಾಯಿತು. ಇದರ ಪ್ರಾರಂಭ ಜಾನೇವರಿ ತಿಂಗಳದ ಮೊದಲನೇ ತಾರೀಖು.

ವಿಕ್ರಮ ಶಕ ತೆಗೆಯುವ ರೀತಿಯು.

೧. ಶಕದಲ್ಲಿ(೧೯೩೫) ಕೂಡಿಸಿದರೆ, ವಿಕ್ರಮ ಶಕ ಹೊರಡುವದು. ಇದರ ಆರಂಭ, ಕಾರ್ತಿಕ ಶುದ್ಧ ಪ್ರತಿಪದವದೆ.

ಫಸಲಿ ತೆಗೆಯುವ ರೀತಿಯು.

೧. ಶಕದಲ್ಲಿ(೧೮೩೨)ವಜಾ ಮಾಡಿ, ಬಾಕಿ ಉಳದ ಸಂಖ್ಯೆ ಫಸಲೀ ಎಂದು ಹೇಳು. ಇದರ ಆರಂಭ ಮೃಗಸಾಲದಿಂದ.

ಅಧಿಕ ಮಾಸ ತೆಗೆಯುವ ರೀತಿಯು.

೧. ಶಕಕ್ಕೆ (೧೨)ರಿಂದ ಗುಣಿಸಿ ಬಂದ ಗುಣಾಕಾರಕ್ಕೆ (೧೯)ರಿಂದ ಭಾಗಿಸಬೇಕು. ಬಾಕೀ,(೧)ರಿಂದ(೫)

ಉಳಿದರೆ,ಒಂದು ವಜ್ರಾವಮಾಡಬೇಕು. (೫)ರಿಂದ, ೧೦ ಉಳಿದರೆ(೩)ವಜ್ರಾ ಮಾಡಿ, ಬಾಕೀ ಉಳಿದದ್ದಕ್ಕೆ, ಬೈತ್ರದಿಂದ ಹಿಡಿದು, ಎಣಿಸಿ, ಬಂದ ಮಾಸವು, ಅಧಿಕಮಾಸವೆಂದು ಹೇಳು.(೧೦)ರ ಮೇಲೆ ಉಳಿದರೆ, ಇಲ್ಲವೆಂದು ಹೇಳು.

ಗ್ರಹಣ ತೆಗೆಯುವ ರೀತಿಯು.

೧. ಪಕ್ಷ ತ್ರಿತೀಯದ ದಿವಸ ಯಾವ ನಕ್ಷತ್ರ, ಇರುತ್ತವೆಯೋ, ಅದು, ಹುಣ್ಣಿವಿ ದಿವಸ ಬಂದರೆ, ಚಂದ್ರಗ್ರಹಣವೆಂದು ಹೇಳು.

೨. ಶುದ್ಧ ತ್ರಿತೀಯದ ದಿವಸ, ಇದ್ದ ನಕ್ಷತ್ರವು ಅಮಾವಾಸೆಗೆ ಬಂದರೆ, ಸೂರ್ಯಗ್ರಹಣವೆಂದು, ಹೇಳು. ಕೆಲವು ಗ್ರಹಣಗಳು, ಕೆಲವು ದೇಶಗಳಲ್ಲಿ, ಮಾತ್ರ, ಕಾಣಿಸತಕ್ಕಂಥವುಗಳೆ.

ಮಳಿಯು ವಿಷಯಕ್ಕೆ

೧. (ಪಿಳಿಗಿಳಿಗಿಗಿಟಿ) ಇಂತಿಷ್ಟು ನಕ್ಷತ್ರಗಳಲ್ಲಿ, ಮೇಘ ನಕ್ಷತ್ರವು ಪ್ರವೇಶವಾದರೆ, ಸಮೃದ್ಧಿ ಮಳಯಾಗುವದೆಂದು ಹೇಳು.

ಸುಭಿಕ್ಷ ದುರ್ಭಿಕ್ಷ ಹೇಳುವದು.

೧. ಸಂದಿದ ಸಂವತ್ಸರ ದ್ವಿಗುಣಿಸಿ ಅದರಲ್ಲಿ ಮೂರು ವಜ್ರಾ ಮಾಡಿ, (೯) ರಿಂದ ಭಾಗಿಸಬೇಕು. (೧.೪) ಉಳಿದರೆ ದುರ್ಭಿಕ್ಷ (೫.೭) ಉಳಿದರೆ ಸುಭಿಕ್ಷ (೭.೪) ಉಳಿದರೆ, ಮಧ್ಯಮವೆಂದು ಹೇಳು.

ವೇಳೆ ನೋಡುವ ರೀತಿಯು.

ಶ್ಲೋಕ.

†೮ ಅಡಿಗಳಂ ಮಾಡಿ। ಡನೊಂದು ಒಳಗೂಡಿ॥ ಅನಂತ
ರಾಹತ್ತು ಇಟ್ಟು। ಭಾಗಿಸೆಬಂದದ್ದುಗಳಿಗೆ॥

ಎರಳೆ ಶಕುನವು.

೧. ದೃಷ್ಟ್ವಾ ಕುರಂಗಿ। ಕಶಿಬಾಣಲಾಭಂ॥ ಕೃಶಶ್ಚ ವೇ
ದಂ। ಸುಖಿಭೋಜನಂಚ॥ಸಪ್ತದ್ವಿತೀಯಾ। ಕಥ
ಯಂತಿವಾರ್ತಾ॥ ಅಷ್ಟತ್ರಿತೀಯಾ।ದುರಣಂತಥೈವಾ

ಮಳೆ ಆಗುವ ಲಕ್ಷಣವು.

ದೊಹರಾ.

೧. ಶುಕ್ರವಾರಕೀಬಾದಲ್। ಶನವಾರಕಾಛಾವ ॥ ಸಹದೇ
ವಬೋದೆಬಾದಲ್। ಬಿನ್ನಬರ್ಕೀಬಿನ್ನಜಾವ॥

ಇನ್ನು ಕೆಲವು ಉಂಟು. ಸಮಯಾನುಸಾರವಾಗಿ ಬ
ರೆಯುತ್ತೇನೆ. ಇತ್ತಬಿನ್ನಹಾ

ತಾ. ೫।೧೧।೭೫೫ ಇ. } ಸಹಿ ಜಗನ್ನಾಥ ಶ್ರೀಧರ ಹೆ.ಮೂ.
ಮು. ಬೊಂಮನಹಳ್ಳಿ } ಬೊಂಮನಹಳ್ಳಿ ತಾ. ಹಾ.

ರಾ॥ ಕನ್ನಡ ಕಾಲಾಪತ್ರಕದ ಎಡಿಟರ ಸಂನಿಧಾನಕ್ಕೆ
ವಿ. ವಿ. ಸನ್ನ ೧೮೭೫ಳಿ ಇ॥ ಮಾಚೆ೯ತಿಂಗಳ ಕಾಲಾಪತ್ರ
ಕದ ಸಂಚಿಕೆ (೧೭) ಪುಟ (೫೭೫ । ೭೬) ನೇದನಲ್ಲಿ
ತಿಗಡಿ ಮುದ್ದತನೀಸರು ಕೊಟ್ಟ ಚಕ್ರವಾಡಿವ್ಯಾಜಿನ ಲೆ
ಖ್ಖದ ಉತ್ತರವು ಕೈಲಾದಮಟ್ಟಿಗೆ ಬಿಡಿಸಿರುತ್ತೇನೆ. ಅ

† ಮುಂಜಾನೆಯಿಂದ ಮಧ್ಯಾನ್ಹದವರಿಗೂ ಹೊತ್ತು ಆಯಿತೆಂ
ದೂ, ಮಧ್ಯಾನ್ಹದಿಂದ ಸಾಯಂಕಾಲದ ತನಕ ಹೊತ್ತು ಉಳಿಯತೆಂ
ದೂ ತಿಳಿಯಬೇಕು.

ಅಚ್ಚು ಹಾಕಿ ಪ್ರಸಿದ್ಧ ಮಾಡಬೇಕೆಂದು ನಂಬಿರುತ್ತೇನೆ-

ಲೆಖ್ಖವು— ಒಬ್ಬ ಮನುಷ್ಯನು ತಿಂಗಳಿಗೆ (೫೦೦) ರೂ. ಗಳಿಗೆ (೪) ರೂ. ಗಳ ಬಡ್ಡಿಯಂತೆ ಗೊತ್ತು ಮಾಡಿ (೪೦೦) ರೂ. ಗಳನ್ನು ವೈದನು. ಮುಂದೆ ೯ ಷ್ಟೇ ವರುಷದ ಮೇಲೆ ಚಕ್ರವಾಡಿಯು ಬಡ್ಡಿಯುಪ್ರಕಾರ (೪೦೦ $\frac{೪}{೧೦೦}$ $\frac{೯}{೧}$)ರೂ. ರಾಸ ತಂದು ಕೊಟ್ಟನು. ಆಗ ಎಷ್ಟು ವರ್ಷದ ನಂತರ ತಂದು ಕೊಟ್ಟನು.

ರೀತಿಯು.

ರೂ. ಮು. ರಾಸ ದಕ್ಕಾಂಷದಲ್ಲಿ. ರೂ. ಮುದ್ದಲಿಗೆ ಏನಿಕೆ ಪೈ. ರಾಸು

೩೦೦ ೩೦.೬೫೩೦೫೫ ೧ = ೧. ೦೬೮೮೫೫೬೫೫

ರೂ. ಮು. ರೂ. ಬಡ್ಡಿ. ರೂ. ಮು. ಬಡ್ಡಿ. ರೂ. ಮು. ರೂ.

೧೦೦ . . ೩ . . ೧ = .೦೩ + ೧ = ೧ . ೦೩

ರೂ.

ರಾಸು— ೧ ತಿಂಗಳಕ್ಕೆ ೧ ೦೪ ಒಂದು ರೂ. ಒಂದು ತಿಂಗಳ ರಾಸು. ವರ್ಗ ಮಾಡಲಾಗಿ=೧.೦೬೦೯ ಎರಡು ತಿಂಗಳರಾಸು ಘನಮಾಡುತ್ತಿರಲು ೧.೦೯೨೭೭೭ ಮೂರ ತಿಂಗಳ ರಾಸು. ಅವನು ಕೊಟ್ಟ ಒಂದು ರೂ. ರಾಸು. ೧.೦೬೮೮೫೫೬೫೫ ಇದರಕಿಂತಲೂ ವರ್ಗ ಮಾಡಿದ ರಕಮು ಕಡಿಮಿ ಅದೆ. ಹಾಗು ಘನಮಾಡಿದ ರಕಮು ಹೆಚ್ಚಾಗಿ ಅದೆ. ಕಾರಣಾ .೫೧೪ ತಿಂಗಳ ನಡುವಿನ ಮುದ್ದತ್ತು ಇರಬೇಕು ಪುನಾಃ ಒಂದು ರೂ. ಮೂರು ತಿಂಗಳ ರಾಸು. ೧.೦೯೨೭೭೭—೧.೦೬೦೯ ಎರಡು ತಿಂಗಳ ರಾಸು. ವಜಾ = .೪೧೮೪೭೭ ಇದು ಎರಡು ತಿಂಗಳಲ್ಲದೆ. ಉಳಿದ ಮುದ್ದತ್ತಿನ ಶಕ್ತಿ ಬಡ್ಡಿ ಮತ್ತೇ ಒಂದು ರೂ. ಕೆಲವು ತಿಂಗಳದ ರಾಸು. ೧.೧೬೮೮೫೫೬೫೫ ಇದರ

ಲ್ಲಿ, ೧.೦೬೦೯ ತಿಂಗಳ ರಾಸು ವಜಾ ಮಾಡಿ ಬಾಕಿ .೦೦೭೯೫೬೭೫ ಭಕ್ತ ಬಡ್ತಿ ಎರಡು ತಿಂಗಳಲ್ಲಿ ಸೆಲವು ದಿವಸ ಬಡ್ತಿ ಅಲ್ಲಿಂದಾ.

೧ ತಿಂಗಳ ಬಡ್ತಿ ದಿವಸಗಳು. ಬಡ್ತಿ
.೩೦೪೭ = ೩೦ = .೦೦೭೯೫೬೭೫ ೧.೦೬೦೯ ಮು. ಸಂಹ್ಸೇ೭ಪ
೭ಸಂಹ್ಸೇಪ

ದಿವಸ. ತಿಂಗಳು. ತಿಂಗಳು.
= ೭.೫ + ೨ = ೨ ೪ ಉತ್ತರಾ ಮಾಯಿತು.

ತಾರೀಖು ೧೨ನೇ ಆಗ ಟಗಬರ ೧೪೭೫ ಇ. ಮುಕ್ಕಾಂ ಧಾರವಾಡ. } ಸಹಿ ಜಗನಾಥ ಶ್ರೀ ಧರ ಗೋಖಲೆ ಪೆಡ್ತಿಮಾಸ್ತರ.

ಮ. ರಾ. ರಾ. ಕನ್ನಡ ಮಿತ್ರಪತ್ರ ಕರ್ತರಿಗೆ—

ವಿಜ್ಞಾಪನೆ. ಕೆಳಗೆ ಬರೆವ ನಾಲ್ಕು ಪಂಕ್ತಿಗಳಿಗೆ ತಮ್ಮ ಸುಂದರವಾದ ಪತ್ರದಲ್ಲಿ ಸ್ಥಳ ದೊರೆಯುವದೆಂದು ತುಂಬಾ ಅನೇಕ್ಷೆ ಉಂಟು

ತಾರೀಖು ೧೨ ನೇ ಮಾಹೆ ಅಗಟುಂಬರ ದಿವಸ ಈ ಗ್ರಾಮಕ್ಕೆ ಮ. ರಾ. ರಾ. ಬಾಪೂರಾವು ಬಕಸ ಮಾಮಲೇದಾರ ತಾಲೂಕ ಚಿಕ್ಕೋಡಿ ಇವರ ಸ್ವಾರಿ ಬಂದುಊರಲ್ಲಿಯ ಸ್ವಚ್ಛತನವನ್ನು ಕಂಡು ಬಹು ಸಂತುಷ್ಟರಾಗಿ ಆ ಬಗ್ಗೆ ಗ್ರಾಮಸ್ಥರನ್ನು ಬಹಳ ಪ್ರಕಾರವಾಗಿ ಕೊಂಡಾಡಿದರು. ಮತ್ತು ಇಲ್ಲಿಯ ಹೊಸ ಶಾಲಾಗೃಹವನ್ನು ಕಟ್ಟಿಸತಕ್ಕದ್ದು ಅವಶ್ಯಕವಾಗಿ ಕಂಡು ಬಂದು ಕಾರಣ

ಆ ಪ್ರಕಾರ ಮಾಡುವದಕ್ಕೆ ಗ್ರಾಮಸ್ಥರಿಗೆ ಚನ್ನಾಗಿ ಬೋಧನೆ ಮಾಡಿದರು. ಕೂಡಲೇ ಗ್ರಾಮಸ್ಥರು ಊರೊಳಗಿನ ನಾಲ್ಕು ಮಂದಿಯನ್ನು ನೆರವಿ ಕೇಳಲಾಗಿ ಸರ್ವರು ಕೂಡಿ ೭೫೦ ರೂಪಾಯಿ ಕೊಡುವದಕ್ಕೆ ಒಪ್ಪಿಕೊಂಡರು. ಉಳಿದ ಹಣವು ಲೋಕಲಫಂಡನೊಳಗಿಂದ ದೊರೆದು ಶೀಘ್ರವೇ ಶಾಲಾಗೃಹವನ್ನು ಕಟ್ಟಿಸಲಿಕ್ಕೆ ಆರಂಭವಾದೀತು. ಇದೇ ಪ್ರಕಾರ ಸದರಿ ರಾವಸಾಹೇಬರು ಬೇರೆ ಕೆಲವು ಗ್ರಾಮಗಳಲ್ಲಿ ಶಾಲೆಯು ಕಡಿಗೆ ಅನಾವಸ್ಥೆಯು ಮಾಡಬಾರದೆಂತಲೂ, ಅದರಿಂದ ಬಹು ಉಪಯೋಗವಪಿಯುಂತಲೂ, ಜನರಿಗೆ ಬೋಧನಮಾಡಿದ ಸುದ್ದಿಯನ್ನು ಕೇಳುತ್ತೇನೆ. ಇಂತಿ ವಿಜ್ಞಾಪನೆ.

ಮು. ಚಿಂಚಣಿ ತಾ. Vಅ ಗಟಂಬರ ೧V೭೫ ಇ. } ಕೇಕವ ಕೃಷ್ಣ ಬೋಡಸ ಹ ಮಖಂಡಿಕರ ಸ್ಕೂ. ಮಾ.ಚಿ.

ಮಹಾರಾಜ ರಾ. ರಾ. ದಕ್ಷಿಣಭಾಗದ ಕನ್ನಡ ಶಾಲಾಪತ್ರಿಕದ ಎಡಿಟರರ ಚರಣಕಮಲಗಳಿಗೆ—

ಶೇವಕನು ವಿಜ್ಞಾನೆ ಮಾಡಿ ಬೇಡಿಕೊಳ್ಳುವದೇನಂದರೆ ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತನ್ಮ ಸುಂದರವಾದ ಮಹಪತ್ರಿಕೆಯಲ್ಲಿ ಛಾಪಿಸುವಿರೆಂಬ ಆಶೆಯುಳ್ಳವನಾಗಿದ್ದೇನೆ.

೧ ಲೆಕ್ಕವು. ೭ರುಪಾಯಿಗಳಿಗೆ Vಮಣ ಧಾನ್ಯವಿದ್ದಾಗ್ಯೆ ಒಬ್ಬ ಗೃಹಸ್ಥನು ತನ್ನ ೯ತಿಂಗಳ ಪಗಾರದ ಗೋಧಿಯನ್ನು ತಗೊಂಡು ೫೬ಮಣದ ಹಾಗೆದೊಳಗೆ ಹಾಕಲು ೫ಮಣ ಕಡಿಮೆಯಾಗುತ್ತವೆ. ಆದರೆ ಅವನು ೫೦

ರುಪಾಯಿಗಳಿಗೆ ಕ್ರಮಣವಿರುವಾಗ್ಯೆ ತನ್ನ ೪ತ್ರಂಗಳ ಪ
ಗಾರದ ಗೋಧಿಯನ್ನು ತುಂಬಿಪರೆ ಆ ಹಗೆಯು ತುಂಬು
ವದಕ್ಕೆ ಎಷ್ಟು ಮಣ ಕಡಿವೆಯಾಗುವವು ಹೇಳು?

೩ಲೆಕ್ಕವು. ೬೦ಘೂಟ ಉದ್ದ, ೪೦ಘೂಟ ಅಗಲು ಇಂ
ಥಾ ಅಂಗಳದ ಸುತ್ತಲೆ ಥರಸಬಂದಿ ೪ಘೂಟ ಅಗಲದ್ದು
ಆ ಅಂಗಳವನ್ನು ನಡುವೆ ಖುಲ್ಲೆ ಬಿಟ್ಟು ಮಾಡಿತು. ಅ
ದಕ್ಕೆ ಕಲ್ಲುಗಳು ೯ ಇಂಚು ಉದ್ದ; ೬ ಇಂಚ ಅಡ್ಡಗಲ
ವುತ್ತು ೬ ಇಂಚ ದಪ್ಪ ಇಂಥಾ ಕಲ್ಲುಗಳಿಂದ ಮಾಡಿತು.
ಆ ಕಲ್ಲುಗಳಿಗೆ ೫೪೦ರೂಪಾಯಿಗಳು ಹತ್ತಿದವು. ಆದರೆ
೪೦ಘೂಟ ಉದ್ದ ೬೦ಘೂಟು ಅಡ್ಡಗಲಾ ಇಂಥಾ ಅಂಗಳ
ಸುತ್ತಲು ೪ಘೂಟ ಅಡ್ಡಗಲದ ಥರಸಬಂದಿ ಆ ಅಂಗಳವ
ನ್ನು ನಡುವೆ ಖುಲ್ಲೆ ಬಿಟ್ಟು ಮಾಡುವದದೆ. ಅದಕ್ಕೆ ಕ
ಲ್ಲುಗಳು ೫ ಇಂಚ ಉದ್ದ ೪ ಇಂಚು ಅಡ್ಡಗಲಾ ಮತ್ತು
೪ ಇಂಚು ದಪ್ಪ ಇಂಥಾ ಕಲ್ಲುಗಳನ್ನು ಹಚ್ಚಿದರೆ ಎಷ್ಟು
ರೂಪಾಯಿಗಳು ಹಿಡಿಯುವವು ಹೇಳು?

ಈ ಲೆಕ್ಕಗಳ ರೀತಿಯನ್ನು ನಮ್ಮ ಬಂಧುಗಳಾದ ಶಾ
ಲಾದ ವಿದ್ಯಾರ್ಥಿಗಳು ಮಾಡಿ ಇದೇ ಪತ್ರದ್ವಾರದಿಂದ
ತಿಳಿಸುವರೆಂದು ಆಶೆಯು ಉಳ್ಳವನಾಗಿದ್ದೇನೆ.

ಮುಳಗುಂದ ತಾರೀಖು೫
ನೇ ಮಾಹೆ ಅಗಟೆಂಬರ
ಸನ್ನ ೧೮೭೫ ಇಸವಿ.

ಸಹಿ ಅಪ್ಪಾಜಿ ವಿಷ್ಣು ಸಕ್ರೆ
ಆರನೇ ಎತ್ತೀದವಿ. ಮು.
ಸಹಿ. ಚನ್ನಾಬಿನ್ನ ವರಪ್ಪ
ಕೋರಿ ಮುಳಗುಂದ ವಿ.

ಮೇಹಬೂನ ರಾವಸಾಹೇಬ ದಕ್ಷಿಣಭಾಗ ಕಂನಡಶಾ

ಲಾಪತ್ರಕ ಕರ್ತರ ಚರಣಕಮಲಗಳಿಗೆ–

ಆಜ್ಞಾಧಾರಕನು ಮಾಡುವಾ ವಿನಂತಿ ಏನಂದರೆ–ಕೆಳಗೆ ಬರೆದ ನಾಲ್ಕು ಪಂಗ್ತಿಗಳನ್ನು ತಮ್ಮ ಅಂದವಾದ ಮುತ್ತಪತ್ರಕದಲ್ಲಿ ಛಾಪಿಸಿ ಪ್ರಸಿದ್ಧಿಸುವರೆಂದು ಕಾಂಕ್ಷೆಯಂನು ಧರಿಸಿದ್ದೇನೆ.

ಪದವು॥ ಯೇನವಮಾನುಷೆನಂನೆ ತಾನ್ಯಾಕೆಬಾರಾನೆ। ನೀ ನೆವಿಚ್ಯಾರಿಸು ಬಲುನ್ಯಾಯಾವೇ ॥ ಪ ॥ ಪೈರಿಗೆ ಸುತನಾದಾ। ಪೈರಿಗೆ ಪಿತನಾದಾ॥ ಪೈರಿಸೂತಗೆ ತಂನ ಮಗಳಕೊಟ್ಟಾ। ಪೈರಿಸೂತಗೆ ತಂನಮಗಳಕೊಟ್ಟದ್ದು ನೋಡಿ। ನಾ ಬಂದೆನಿಂಮಬಳಗೆಶ್ರೀಹರಿಯೇ ॥ ಇ ॥ ಮಗನಿಗೆ ಸುತನಾದಾ। ಮಗನೀಗೆ ಪಿತನಾದಾ ॥ ಮಗಳಗಂಡಗೆ ಭಾವನೆನ್ನುನಾದಾ। ಮಗಳಗಂಡಗೆ ಭಾವವೆನ್ನುದುನಾದದ್ದು ಕೇಳಿ । ನಾ ಬಂದೆನಿಂಮಬಳಗೆ ಶ್ರೀಹರಿಯೇ ॥ ಉ ॥

ಇದು ಕಂಡ ಇದ್ದು ಇದರ ಅರ್ಥ ಅಂದರೆ ಭಾವ ಚನ್ನಾಗಿ ನನಗೆ ಗೃಹಿಕೆ ಆಗದ ಕಾರಣ, ನಂಮ ದೇಶಬಾಂಧವರಾದ ಹೆಚ್ಚು ಮಾಸ್ತರಾದವರು ಈ ಮೇಲೆ ಬರದಂಥ ಮೆರಡು ನುಡಿಗಳ ಅರ್ಥವನ್ನು ಚನ್ನಾಗಿ ತಿಳಿಯುವಂತೆ ಬರೆದು ನಂನ ಇಚ್ಛೆ ಪೂರ್ಣಮಾಡ್ಯಾರೆಂದು ಬಿನ್ನೈಸುತ್ತೇನೆ ಕ್ಷಮತವಿರಲಿ–ಪತ್ರವಿಸ್ತಾರವಾದಬಗ್ಗೆ ಕ್ಷಮೆವಿರಬೇಕು ಎಂದು ಬೇಡಿಕೊಳ್ಳುತ್ತೇನೆ ಇಂತಿಬಿನಹ.

ಮುಕ್ಕಾಮು ಅಂಜೋಟಿಗಿ ತಾ॥ ಇಂಡಿ.
ತಾ॥೧೯।೯।೨೫ ಇ.

} ಸಹಿ ಬಾಬಾಜಿರಾಮಚಂದ್ರ ಕಣ್ಣಾಲ ಸ್ಕೂಲ ಮಾಸ್ತರ ಅಂಜೋಟಿಗಿ.

ಶಾಲಾಪತ್ರಿಕೆ.

ಪುಸ್ತಕ ೧೧] [ಸಂಚಿಕೆ ೯

ತಾರೀಖು ೩೫ ನೇ ಮಾಹೆ ದಿಶೆಂಬರ ೧೮೩೫.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ಫಿಯರ್‌ಕಾಡ ಹಾಯಿಸ್ಕೂಲಿನಲ್ಲಿ, ವಾರ್ಷಿಕ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಇನಾಮು ಕೊಡುವ ಸಮಾರಂಭವು ತಾರೀಖು ೩೦ ಮಾಹೆ ಮಾರ್ಚಕೂರ ದಿವಸ ನಾಲ್ಕು ಘಂಟೆಗೆ ಆಯಿತು. ಆ ಸಮಾರಂಭಕ್ಕೆ ಬೆಲ್ ಸಾಹೇಬ ಸಿಹ್ವಿಲ ಸರ್ಜನ್ ಇವರು ಅಧ್ಯಕ್ಷರಾಗಿದ್ದು, ದೊಡ್ಡ ದೊಡ್ಡ ಯೂರೋಪಿಯನ್ ಮತ್ತು ನೇಟೀವ ಗೃಹಸ್ಥರು ಕೂಡಿದ್ದರು. ರಾವಸಾ॥ ವಿಠಲರಾವ ಮಾಧವ ಹೆಡ್ ಮಾಸ್ತರ ಇವರು ಶಾಲೆಯ ಸ್ಥಿತಿಯ ಸಂಬಂಧದಿಂದ ಆತಿ ಸುರಸ ಭಾಷಣ ಮಾಡಿದನು. ನಂತರ ಕೆಲವು ಹುಡುಗರು, ಇಂಗ್ರಜಿ ಕವಿತೆಗಳನ್ನು, ಕೆಲವರು ಸಂಸ್ಕೃತ ಕವಿತೆಗಳನ್ನು ಕೆಲವರು ಕನ್ನಡ ಕವಿತೆಗಳನ್ನು ಅಂದು ತ್ರೋರಿಸಿದರು. ಕಡೆಗೆ ಅಧ್ಯಕ್ಷರು ಕೆಲವು ಭಾಷಣ ಮಾಡಿಸುಮಾ

ರು ಶ್ರೀ॥ ಐದುವರೆ ಘಂಟೆಗೆ ಸಭಾ ಬರಖಾಸ್ತು ಮಾಡಿದರು

ಈ ವರ್ಷ ಧಾರವಾಡ ಟ್ರೇನಿಂಗಕಾಲೇಜ ಸರಟೀಫಿ
ಕೇಟಿ ಪರೀಕ್ಷೆಯಲ್ಲಿ ೪೬ ಜನರು ಪಾಸಾದರೆಂದು ತಿ
ಳುತ್ತೇವೆ. ಹಾಂಗು ೪೫ ಳಿಳಿ ಗುಣಿಗಳನ್ನು ಹೆಚ್ಚಿಗೆ ಕೊ
ಟ್ಟರೆ ಇನ್ನೂ ೬೦ ! ೬೫ ಜನರು ಪಾಸಾಗುವರೆಂದು
ಳಿದುಬರುತ್ತದೆ

ಈ ವರ್ಷ ಮುಂಬಯಿ ಯುನಿವರ್ಸಿಟಿಯ ಎಮ್.
(ವೈದ್ಯಕ) ಪರೀಕ್ಷೆಯಲ್ಲಿ ರಾ॥ ರಾ॥ ಅಣ್ಣಾ ಮೋಲಿ
ಕ್ವರಕುಂಟೆ ಬಿ. ಎ. ಎಲ್. ಎಮ್. ಎಂಬವರು ಪಾಸಾದರು
ಮುಂಬಯಿ ಇಲಾಖೆಯಲ್ಲಿ ಈ ಪರೀಕ್ಷೆಯಲ್ಲಿ ಇವರೆ
ಪ್ರಥಮ ಪಾಸಾದರು.

ಈ ವರ್ಷ ಮುಂಬಯಿ ಯುನಿವರ್ಸಿಟಿಯ ಎಮ್ಮೆ. ಏ
ಪರೀಕ್ಷೆಯಲ್ಲಿ ನಾಲ್ಕು ಜನರೂ ಮತ್ತು ಎಲಲ್. ಬಿ. ಕ
ರೀಕ್ಷೆಯಲ್ಲಿ ಐದು ಜನರು ಪಾಸಾಗಿರುತ್ತಾರೆ.

ಈ ವರ್ಷ ಮುಂಬಯಿ ಮ್ಯಾಟ್ರಿಕುಲೇಶನ್ ಪರೀಕ್ಷೆ
ಯಲ್ಲಿ ಒಟ್ಟಿಗೆ ೩೭೬ ಉಮೇದವಾರರು ಕೂಡಿದ್ದರು
ಅವರಲ್ಲಿ ಫಕ್ತ ಇಂಗ್ರಜಿಯಲ್ಲಿ ೯೪ ಜನರು ಪಾಸಾ
ಬೀಕೇ ಯೆಲ್ಲ ವಿಷಯುಗಳಲ್ಲಿ ಹೋಗಲಾಗಿ ೪೪೪ ಜನ
ರು ಪಾಸಾದರು. ಧಾರವಾಡ ಹಾಯಿಸ್ಕೂಲಿನಿಂದ ೩೩ ಜನ
ರುಹೋಗಿದ್ದರು ಅವರಲ್ಲಿ ೧೬ ಮಂದಿ ಪಾಸಾದರು. ಬೆಳ

ಗಾವ ಸಾಯಿಸ್ಕೂಲಿನಿಂದ ಅಲ್ಲಿ ಜನರು ಹೋಗಿದ್ದರು, ಅವರಲ್ಲಿ ೭ ಮಂದಿ ಬಾಸ್ಟಾದರು.

ಪುಣೆ ಶಹರದೊಳಗಿನ ಇಂಗ್ರಜಿ ಶಾಲೆಯು ವಿದ್ಯಾಖಾತೆಯ ಮೇಲಧಿಕಾರಿಗಳ ಅಪ್ಪಣೆಯ ಮೇಲಿಂದ ಅಲ್ಲಿಯ ಹಾಯಸ್ಕೂಲಿಗೆ ಕೂಡಿಸಲ್ಪಟ್ಟಿತು. ಈ ಶಾಲೆಯು ಸನ್ ೧೮೬೪ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತ್ತು.

ಧರ್ಮ— ಯುವರಾಜರಾದ ಪ್ರಿನ್ಸ ಆಫ್ ವೇಲ್ಸ ಇವರು ತಮ್ಮ ಸ್ವಾರಿಯು ಮುಬಯಿಗೂ ಪುಣೆಕ್ಕೂ ಬಂದ ಸ್ಮರಣ ಜನರಿಗೆ ನಿಲ್ಲುವದಕ್ಕಾಗಿ ಅಲ್ಲಿಯ ಸಾರ್ವಜನಿಕ ಧರ್ಮಕೃತ್ಯಗಳ ಬಗ್ಗೆ ಅನುಕ್ರಮದಿಂದ ೧೦೦೦, ೧೫೦೦ ರೂಪಾಯಿ ಕೊಟ್ಟರು.

ರೆ॥ ಡಾ॥ ನಿಲ್ಸನ್ ಇವರ ಮೃತ್ಯು.

ಈ ನಾಮಾಂಕಿತ, ಪರೋಪಕಾರೀ ಪಾದರೀ ಗೃಹಸ್ಥರು ಮಡಿದು ಹೋದದರಿಂದ ಸರ್ವರಿಗೂ, ವಿಶೇಷವಾಗಿ ನಮ್ಮ ಜನರಿಗೆ ಬಹಳ ದುಃಖವಾಗಿರುತ್ತದೆ. ಯಾಕಂದರೆ ಇವರು ಪರದೇಶಸ್ಥರಿದ್ದಾಗ್ಯೂ ಹಿಂದುಸ್ಥಾನದ ಜನರ ಮೇಲೆ ದೊಡ್ಡ ದೊಡ್ಡ ಉಪಕಾರಗಳನ್ನು ಮಾಡಿದ್ದಾರೆ. ಇವರು ಮಾಡಿದ ಮುಖ್ಯ ಕೃತ್ಯಗಳನ್ನು ತೋರಿಸುವದಕ್ಕಾಗಿ ಆರಂಭದಿಂದ ಕಡೆತನಕಾ ಇವರ ಚರಿತ್ರೆ ಕೆಳಗೆ ಬರದಿರುತ್ತೇವೆ.

ಸನ್ ೧೮೦೪ನೇ ಇಸ್ವೀ ಡಿಸೆಂಬರ ತಿಂಗಳಲ್ಲಿನೇ

ತಾರೀಖಿನಲ್ಲಿ ಇವನ ಜನ್ಮವಾಯಿತು. ಇವನ ವಿದ್ಯಾ
ಭ್ಯಾಸವು ವಿಲಾಯತಿಯಲ್ಲಿಯೇ ಆಯಿತು. ಸ್ವಲ್ಪ
ಪ್ರೌಢರಾದ ಬಳಿಕ ಅಂದರೆ ಸನ್ ೧೮೨೪ ನೇ ಇಸವಿ
ಯಲ್ಲಿ ಇವರು ಖ್ರಿಸ್ತಿ ಧರ್ಮೋಪದೇಶಕರಾದರು. ಆ
ದೇ ವರ್ಷ ತಮ್ಮನ್ನು ಲಗ್ನ ಮಾಡಿಕೊಂಡು, ಮರಿ ವರ್ಷ
ಕೇಪಆಫ್‌ಗುಡ್ ಹೋಪದ ಮಾರ್ಗದಿಂದ ಹಿಂದುಸ್ಥಾನಕ್ಕೆ
ಬಂದು ಸನ್ ೧೮೨೬ ನೇ ಇಸವಿಯ ಫೆಬ್ರುವಾರಿ ತಿಂಗ
ಳ ೩೫ ನೇ ತಾರೀಖಿಗೆ ಸಹ ಕುಟುಂಬ ಮುಂಬಯಿಗೆ
ಬಂದು ಶೇರಿದರು. ಆ ಮೇಲೆ ಅಲ್ಲಿರುವ ಕೆಲವು ಪಾ
ದಿರಿಗಳ ಸಂಗಡ ಕೊಂಕಣ ಪ್ರಾಂತಕ್ಕೆ ಹೋಗಿ ಅಲ್ಲಿ
ಉಪದೇಶ ಮಾಡುವದರಲ್ಲಿ ಕೆಲವು ಕಾಲ ಕಳೆದರು. ನಂ
ತರ ಮುಂಬಯಿಗೆ ತಿರಿಗಿ ಬಂದು ಸನ್ ೧೮೨೯ ನೇ ಇ
ಸವಿಯಲ್ಲಿ ಖಾಸಗಿ ಮರಾಠಿ, ಇಂಗ್ರಜಿ ಶಾಲೆಗಳನ್ನು ಸ್ಥಾ
ಪಿಸಿ ವಿದ್ಯಾ ಶಿಕ್ಷಣದಪದ್ಧತಿ ಹಾಕಿದರು. ಇವರ ಪತ್ನಿಗ
ಳಾದರು ಸಹ ಬಹು ಶ್ರಮದಿಂದ ಹೆಂಣು ಹುಡಿಗಿಯರ ಶಾ
ಲೆಗಳನ್ನು ಸ್ಥಾಪಿಸಿದರು. ಈ ಕಾಲದಲ್ಲಿ ಈ ಸಾಹೇಬರ
ನಮ್ಮಲ್ಲಿಯ ದೇಶಾಚಾರವನ್ನೂ ಸ್ಥಿತಿಯನ್ನೂ, ಜನರ
ನಡನುಡಿವಳಿಗಳನ್ನೂ, ಬೇರೆ ಬೇರೆ ಧರ್ಮಗಳನ್ನೂ ತಿ
ಳಿದುಕೊಂಡು ಅವುಗಳ ಮೇಲೆ ಅನೇಕ ಗ್ರಥಗಳನ್ನು
ಬರೆದದ್ದಲ್ಲದೆ, ಅನೇಕ ಸಾರಿ ಬೇರೆ ಬೇರೆ ಸ್ಥಳಗಳಲ್ಲಿ
ವ್ಯಾಖ್ಯಾನಗಳನ್ನು ಕೊಟ್ಟರು. ಮತ್ತು ರಜಪೂತ ಸಂ
ಸ್ಥಾನದಲ್ಲಿ ಹೆಂಣು ಹುಟ್ಟಿದ ಕೂಡಲೆ ಕೊಂದುಹಾಕುವ ಪಾ
ಪದ ದುಷ್ಟ ರೀತಿಯನ್ನು ಬಂದು ಮಾಡುವ ಕೆಲಸದಲ್ಲಿ ಬ
ಹಳ ಶ್ರಮತೆಕ್ಕೊಂಡರು. ಇವರು ಹಿಂದುಸ್ಥಾನಕ್ಕೆ ಬ

ದ ಮೇಲೆ ಯೆರಡೇ ಸಾರಿ ತಮ್ಮ ಸ್ವಜೇತಕ್ಕೆ ಹೋಗಿ ಬಂದರು. ಯುನಿವರ್ಸಿಟಿಗಳನ್ನು ಸ್ಥಾಪಿಸುವ ಕಾಲದಲ್ಲಿ ಅವುಗಳ ಸಂಬಂಧವಾಗಿ ನಿಯಮಗಳನ್ನು ಮಾಡುವದರಲ್ಲಿ ಇವರು ಬಹಳ ಶ್ರಮತೆಕ್ಕೊಂಡರು. ಇವರು ರಾಯಲ್ ಏಶಿಯಾಟಿಕ್ ಸೊಸಾಯಿಟಿಯ ಅಧ್ಯಕ್ಷರಾಗಿದ್ದರು. ಈ ಗೃಹಸ್ಥರು ಖ್ರಿಸ್ತೀ ಧರ್ಮೋಪದೇಶಕರಿದ್ದದರಿಂದಲೇ ಇವರಿಗೆ ಜನರು ಮಾನಕೊಡುತ್ತಿದ್ದರು ಇಷ್ಟೇ ಅಲ್ಲ. ಇವರು ಬಹು ಜಾಣರೂ ಧೂರ್ತರೂ, ರಾಜ್ಯಕಾರ್ಯದಲ್ಲಿ ನಿಷ್ಣಾತರೂ ಇದ್ದದರಿಂದ ಹಿಂದುಸ್ಥಾನದ ಸರಕಾರದವರು ತಮಗೆ ಅತಿಶಯ ವಿಚಾರದ ಪ್ರಸಂಗಗಳು ಎಂದಾಗ ಇವರ ಅನುಮತಿಯ ಕೇಳುತ್ತಿದ್ದರು. ಸನ್ ೧೮೫೭ನೇ ಇಸವಿಯ ಬಂಡಾಯದಲ್ಲಿ ಸರಕಾರಕ್ಕೂ ಹಿಂದುಸ್ಥಾನದ ಜನರಿಗೂ ಬಹಳ ಉಪಕಾರ ಮಾಡಿದರಿಂದ ಇವರು ಯೆಲ್ಲರಿಗೂ ಬೇಕಾಗಿದ್ದರು. ಇವರಿಗೆ ಮರಾಠಿ, ಗುಜರಾಥಿ, ಹಿಂದುಸ್ಥಾನಿ, ಫಾರ್ಸಿ, ಅರ್ಬಿ, ಯೇಹುದ್ದಿ, ಜೆಂದ, ಸಂಸ್ಕೃತ ಮುಂತಾದ ಯೆಶಿಯ ಖಂಡದೊಳಗಿನ ಭಾಷೆಗಳೂ ಯೂರೋಪದೊಳಗಿನ ಭಾಷೆಗಳೂ ಬರುತ್ತಿದ್ದವು. ಇವರು ಸಣ್ಣವರಿಂದ ದೊಡ್ಡವರವರೆಗೆ ಯೆಲ್ಲರಿಗೂ ಒಂಚೇ ಸ್ವಭಾವದವರಾಗಿದ್ದರು. ಇವರು ಸತ್ತಾಗ ಇವರ ವಯುಸ್ಸಿನ ೭೫ನೇ ವರ್ಷ ಮುಗಿಯಬಂದಿತ್ತು. ಇವರ ಪ್ರೇತ ಸ್ಮಶಾನಕ್ಕೆ ಒಯ್ಯುವಾಗ, ನೇಕನಾಮದಾರಗವರ್ನರ ಸಾಹೇಬರೂ, ಅವರ ಕೌನ್ಸಿಲ್ಲಿನವರೂ, ಹಾಯಕೋರ್ಟಿನ ಯಾವತ್ತೂ ಜಡ್ಜರೂ, ಸರಜೇವುಸೆಟಜಿ, ಅನ್. ರಾವಸಾ॥ ಮುಂಡಲಿಕ ಮುಂತಾದ

ಮಧ್ಯ ಭಾಗದ ಎ. ಇನಸ್ಪೆಕ್ಟರ ಕೆಲಸಕ್ಕೆ ಡಾ. ಕೇಲ ಹಾರ್ನರ ಸಾಹೇಬರವರನ್ನು ನೇಮಿಸಿ, ಪುಣೆ ಡೆಕ್ಕನ ಕಾಲೇಜದ ಪ್ರಿನ್ಸಿಪಾಲ ಕೆಲಸಕ್ಕೆ ಪ್ರೊಫೇಸರ ಕೇರೋಲಷ್ಕ್ರಣ ಭತ್ರೆ ಇವರನ್ನು ನೇಮಿಸಿರುತ್ತಾರೆ. ಪ್ರೊಫೇಸರ ಭತ್ರೆ ಅವರು ಡೆಕ್ಕನ ಕಾಲೇಜದಲ್ಲಿ ಗಣಿತದ ಕಾಯರು ವಿದ್ಯಾಗುರುಗಳಾಗಿರುತ್ತಾರೆ.

ಪೆ. ಎ. ಇನಸ್ಪೆಕ್ಟರ ಸಾಹೇಬ ದಕ್ಷಿಣಭಾಗ, ಇವರು ನಾತಾಳ ಸೂಟಿಯನ್ನು ಬೆಳಗಾವಿಯಲ್ಲಿ ಕಳೆದು ಬಳಿಕ ಧಾರವಾಡ ಜಿಲ್ಲೆಗೆ ಬರತಕ್ಕವರಿದ್ದಾರೆಂದು ಕೇಳುತ್ತೇವೆ.

ಧಾರವಾಡ ಹಾಯಿಸ್ಕೂಲದ ಎರಡನೆ ಅಸಿಷ್ಟಾಂಟ ಕೆಲಸಕ್ಕೆ ರಾ. ರಾ. ಇಂದೂಪೂರಕರ ಬಿ. ಎ. ಯೆಂಬವರ ಅಕ್ಟೆಂಗ ನೇಮಣೂಕ ಆಗಿರುತ್ತದೆ.

SELF HELP.

ತನಗೆ ತಾನೇ ನೆರವಾಗುವದು.

———000———

ಆ ದೊಡ್ಡ ಕದನದಲ್ಲಿ ದಿಲ್ಲಿಯನ್ನು ಸುತ್ತಗಟ್ಟಿ ಕೈವಶ ಮಾಡಿಕೊಂಡದ್ದು ಬಹು ಕೀರ್ತಿಯುಳ್ಳ ಸಂಗತಿಯಾಯಿತು. ಆದರೂ ಅಲ್ಲಿನೇ ಪಟಾಲಮಿನವರಲ್ಲಿ ತೀರ

ಸ್ವಲ್ಪ ಜನರು ಹೋಗಿ ಲಖನೌ ಪಟ್ಟಣವನ್ನು ಸುತ್ತ ಗಟ್ಟಿದ್ದು ಇದಕ್ಕೂ ಹೆಚ್ಚು ಆಶ್ಚರ್ಯಕರವಾದದ್ದೆಂದು ಹೇಳಬಹುದು; ಶೂರನಾದ ಇಂಗ್ಲಿಷನು ಈ ಜನರ ಮುಖ್ಯಸ್ಥನಿದ್ದು ಯಿರಡು ಲಕ್ಷಜನ ಶಸ್ತ್ರಧಾರಿಗಳಾದ ಶತ್ರುಗಳ ಸಂಗಡ ಆರು ತಿಂಗಳುಗಳವರೆಗ ಇವರು ಹೋರಾಡಿದರು. ದಿಲ್ಲಿಯಲ್ಲಿ ಸಹ ತ್ರೋರಿಕೆಯಲ್ಲಿ ಇಂಗ್ಲಿಷರು ಸುತ್ತುಗಟ್ಟಿದವರಾದಾಗ್ಯೂ, ನಿಜವಾಗಿ ನೋಡಿದರೆ, ಅವರನ್ನೇ ಶತ್ರುಗಳು ಸುತ್ತುಗಟ್ಟಿದ್ದರು. ಆ ದಂಡಿನಲ್ಲಿ ಯುರೋಪಿಯನ್ನರೂ, ಕಪ್ಪು ಜನರೂ ಕೂಡಿ ೨೨೦೦ಜನರು ಮಾತ್ರವಿದ್ದು, ಅವರು ಯೇನು ಆಶ್ರಯವಿಲ್ಲದಂಥ ಬೈಲಲ್ಲಿ ಡೇರೆ ಮಾಳ್ಕವನ್ನು ಹಾಕಿದ್ದರು. ಆದರೆ ಅವರನ್ನು ಸೀಡಿಸುತ್ತಿದ್ದ ಶತ್ರುಗಳ ಸೈನ್ಯವು ದಿನದಿನಕ್ಕೆ ಬೆಳೆಯುತ್ತಿತ್ತು; ಅದರಲ್ಲಿ ಒಂದು ಸಮಯದಲ್ಲಿ ಯುರೊಪಿಯನ್ನರ ಕೈಕೆಳಗೆ ಯುದ್ಧ ಕೌಶಲ್ಯವನ್ನು ಕಲಿತುಕೊಂಡಂಥವರೂ ಹಿಂಗದಂಥ ಯುದ್ಧದ ಸಾಹಿತ್ಯಗಳು ಸಹಿತವಾಗಿ ಯೆಲ್ಲ ಸಿದ್ಧತೆಯುಳ್ಳವರೂ ೨೫೦೦೦ ಮಂದಿ ಕೂಡಿದ್ದರು. ಅದರೂ ಪರಾಕ್ರಮಿಗಳಾದ ಆ ಚಿಕ್ಕ ದಂಡಿನವರು ಆ ಕೆಚ್ಚೆಯುಳ್ಳ ಶೀಮೆಯ ಸುತ್ತುವ ಕೆಚ್ಚಿನಂಥ ಬಿಸಲನ್ನು ಲಕ್ಷಿಸದೆ ಪಟ್ಟಣದ ಮುಂದೆ ಕೂತೇ ಇದ್ದರು. ಮರಣವೂ ಘಾಯಗಳೂ, ಉರಿಥಳಿಗಳೂ ಅವರನ್ನು ಹಿಂದಿರುಗಿಸಲಾರದೆ ಹೋದವು. ಮೂವತ್ತು ಸಾರಿ ಅವರ ಮೇಲೆ ಶತ್ರುಗಳ ದೊಡ್ಡ ಸೈನ್ಯವು ಯೇರಿಬಂದಾಗ್ಯೂ, ಮೂವತ್ತು ಸಾರೆ ಅವರು ಆ ಸೈನ್ಯವನ್ನು ಅದರ ಆಶ್ರಯಸ್ಥಾನದ ಮುಟ್ಟಿಗೂ ಹಿಂದಕ್ಕೆ ಪಡಿಸಿ

ದರು. ಕ್ಯಾಪ್ತನ್ ಹಾಡ್ಸನ್ನನೆಂಬವನು ತಾನು ಸ್ವತಃ ಇ
ಳ್ಳೀ ಕೂರನಾದಾಗ್ಯೂ, ಹೇಳಿದ್ದೇನಂದರೆ, ,,ನಾನು ಪ್ರ
ತಿಜ್ಞಾಪೂರ್ವಕವಾಗಿ ಹೇಳುತ್ತೇನೆ, ಅಂಥ ಸ್ಥಿತಿಯಲ್ಲಿ
ಭಾಷುಯು ಮೇಲಿನ ಯಾವ ದೇಶದವರಾದರೂ ಉಳ
ಯುತ್ತಿದ್ದಿಲ್ಲ, ಅಥವಾ ಪರಾಜಯವಾಗಬಾರದೆಂದು ಯು
ತ್ನಿಸಿದ್ದರೆ, ಅದು ಸಫಲವಾಗುತ್ತಿದ್ದಿಲ್ಲ" ಈ ಕೂರ ಪು
ರುಷರು ತನ್ನ್ಮ ಕೆಲಸದಲ್ಲಿ ಒಂದು ಕ್ಷಣ ಮಾತ್ರವಾದ
ರೂ ಆಲಸ್ಯ ಮಾಡಲಿಲ್ಲ. ಅತ್ಯಾಶ್ಚರ್ಯಕರವಾದ ಸ
ಹನ ಶಕ್ತಿಯಿಂದ ಅವರು ತಮ್ಮ ಮುತ್ತಿಗೆಯನ್ನು ಸ
ಡ್ಲಬಿಳಗೊಡದೆ, ಒಂದೇ ಪ್ರಕಾರ ಯುದ್ಧ ಮಾಡುತ್ತಿ
ದ್ದರು. ಕಡೆಯಲ್ಲಿ ಅವರು ಕೋಟೆಗೆ ಒಂದು ದೊಡ್ಡ
ಖಿಂಡಿ ಕೆಡಹಿ, ಅಲ್ಲಿಂದ ಒಳಗೆ ಶೇರಿ ಅದನ್ನು ತೆಗದು
ಕೊಂಡು, ಅದರ ಗೋಡೆಯ ಮೇಲೆ ಇಂಗ್ಲಿಶರ ಜಯ
ಪತಾಕೆಯನ್ನು ನಿಲ್ಲಿಸಿದರು. ಆ ಸಮಯದಲ್ಲಿ ಶಿಪಾ
ಯಿಗಳೂ, ದಂಡಿನ ಉದ್ಯೋಗಸ್ಥರೂ, ದಳವಾಯಿಗಳೂ
ಯೆಲ್ಲರೂ ದೊಡ್ಡವರೆಂದೆನಿಸಿಕೊಂಡರು. ಕಷ್ಟದಿಂದ
ಕಾಲ ಕಳೆಯುವ ಅಭ್ಯಾಸವುಳ್ಳ ಸಾಮಾನ್ಯ ಶಿಪಾಯಿಗ
ಳೂ, ಸುಖದಿಂದ ತಮ್ಮ ಮನೆಗಳಲ್ಲಿ ಬೆಳಿದಂಥ ಪ್ರಾ
ಯದವರಾದ ದಂಡಿನ ಉದ್ಯೋಗಸ್ಥರೂ, ಸರಿಯಾಗಿ ತ
ಮ್ಮ ಶೌರ್ಯವನ್ನು ತೋರಿಸಿ ಆ ಭಯಂಕರವಾದ ಪ
ರೀಕ್ಷೆಯ ಪ್ರಸಂಗದೊಳಗಿಂದ ಸಮಾನ ಕೀರ್ತಿಯುಳ್ಳ
ವರಾಗಿ ಪಾರಾದರು. ಹಿಂದು ದೇಶದವರ ಸಾಮರ್ಥ್ಯವೂ,
ಇಂಗ್ಲಿಶ ಜನರ ಶೌರ್ಯದ ಅಭ್ಯಾಸ, ಸಾಧನೆಗಳ ದೃ
ಢತ್ವವೂ, ಇದಕ್ಕಿಂತ ಹೆಚ್ಚು ಪ್ರಬಲವಾಗಿ ಯಿಂದೂ

ಪ್ರಕಟವಾಗಿದ್ದಿಲ್ಲ. ಈ ಪರೀಕ್ಷೆಯಿಂದ ಇಂಗ್ಲಾಂಡಿ
ನಲ್ಲಿ ಹುಟ್ಟುವ ಯೆಲ್ಲ ವಿಧದ ಸರಕುಗಳಲ್ಲಿ ಮುಸ್ಪೈ
ದೇ ಹೆಚ್ಚು ಬೆಲೆಯುಳ್ಳ ಸರಕೆಂದು ನಿಶ್ಚಯವಾಯಿತು
ನಮ್ಮ ಇತಿಹಾಸದೊಳಗಿನ ಈ ಭಾಗಕ್ಕೆ ಬಹು ಭಯಂ
ಕರವಾದ ಬೆಲೆಯು ಕೊಡಬೇಕಾಯಿತು. ಆದರೆ ಈ ಸಂಕ
ಟದನಂತರ ಉಳಿದವರೂ, ಮುಂದೆ ಹುಟ್ಟುವವರೂ, ಈ
ಉದಾಹರಣೆಯಿಂದ ತಮ್ಮ ಸ್ವಂತ ಲಾಭ ಸಾಧಿಸಿಕೊಂಡ
ರೆ ಈ ಬೆಲೆಯು ಬಹು ದೊಡ್ಡದಲ್ಲೆಂದು ಹೇಳಬಹುದು.

ಆದರೆ ಬೇರೆ ಹಲವು ದೇಶನಿವಾಸಿಗಳಿಂದ ಹಿಂದು
ದೇಶದಲ್ಲಿಯೂ ಇತರಪೂರ್ವದೇಶಗಳಲ್ಲಿಯೂ ಪ್ರಕ
ಟಿಸಲ್ಪಟ್ಟ ಶಕ್ತಿಯೂ ಧೈರ್ಯವೂ ಕಡಿಮೆಯಾದದ್ದಲ್ಲ.
ಅವರು ಯುದ್ಧಕ್ಕಿಂತ ಹೆಚ್ಚು ಶಾಂತಿ ಸುಖಗಳುಳ್ಳ ಬೇ
ರೆ ಕೃತ್ಯಗಳಲ್ಲಿ ತಮ್ಮ ಪರಾಕ್ರಮವನ್ನು ಪ್ರಕಟಿಸಿದ
ರು. ಕತ್ತಿಯು ಕೈಯುವರಾದ ಶೂರರನ್ನು ನೆನಸುತ್ತಿ
ರಲಾಗಿ, ನಾವು ಧರ್ಮೋಪದೇಶಕರಾದ ಶೂರರನ್ನು ಮ
ರಿಯ ಕೂಡದು. ಕ್ಸೇವಿಯರನೆಂಬವನನ್ನು ಮೊದಲೊಂ
ದು, ಮಾರ್ಟಿನ್ನನೂ, ಉಯಿಲಿಯಮ್ಸನೂ ಯೆಂಬವರವ
ರೆಗೆ ಕೀರ್ತಿವಂತರಾದ ಧರ್ಮ ಬೋಧಕರ ಮಾಲಿಕೆ
ಯುಂಟು. ಅವರು ಆಶ್ಚರ್ಯ ಪಡುವಂತೆ ಸ್ವಾಭಿಮಾ
ನರಹಿತರಾಗಿ, ಈ ಲೋಕದಲ್ಲಿ ಕೀರ್ತಿಯು ಸಂಪಾದಿಸು
ವ ಆಲೋಚನೆಯು ಯಿಷ್ಟು ಮಾತ್ರವೂ ಇಲ್ಲದೆ ಕೇವ
ಲ ಪತಿತರೂ, ನಷ್ಟರೂ ಆದಂಥವರನ್ನು ಹುಡುಕಿ ತೆಗೆದು
ಅವರಿಗೆ ಪರಮಾರ್ಥದ ಮಾರ್ಗವನ್ನು ತೋರಿಸಬೇಕೆಂಬ
ಆಶೆಯಿಂದಲೇ ಪ್ರೇರಿತರಾಗಿ ಕ್ರಮಪಟ್ಟರು. ಈ ಮನು

ವ್ಯಕ್ತಿಯಿಂದಿಗೂ ಕುಂದದಂಥ ತಾಳ್ಮೆಯಿಂದಲೂ ದುರ್ಧರವಾದ ಧೈರ್ಯದಿಂದಲೂ ಪ್ರೇರಣೆಯ ಪಟ್ಟವರಾಗಿ ದುಃಖಗಳನ್ನು ಸಹಿಸಿಕೊಂಡರು, ಕಷ್ಟಗಳಿಗೆ ಯೆದುರಾದರು, ರೋಗಗಳಲ್ಲಿ ಸಂಚರಿಸಿದರು, ಯೆಲ್ಲ ವಿಧದ ಶ್ರಮವನ್ನು, ದಣುವನ್ನು, ಕಷ್ಟವನ್ನು ತಾಳಿಕೊಂಡರು. ಆದರೂ ಧರ್ಮಾಭಿಮಾನದಲ್ಲಿ ಮರಣ ಒದಗಿದಾಗ್ಯೂ, ಅದರಲ್ಲಿ ಸಂತೋಷ ಪಟ್ಟು ತಮ್ಮ ಕ್ರಮವನ್ನು ಹಾಗೇ ನಡಿಸಿದರು. ಇವರಲ್ಲಿ ಮೊದಲಿನವನಾದ ಫ್ರಾನ್ಸಿಸ್ಕೋವಿಯೆರನೆಂಬವನು ಬಹು ಕೀರ್ತಿವಂತನಿದ್ದನು. ಇವನು ಮಾನಸ್ಥರ ಮನೆತನದಲ್ಲಿ ಹುಟ್ಟಿ, ತನಗೆ ಸುಖವೂ, ಅಧಿಕಾರವೂ, ಘನತೆಯೂ ಸುಲಭವಾಗಿ ದೊರಕುವ ಹಾಗಿದ್ದಾಗ್ಯೂ, ಅವುಗಳನ್ನು ಬಿಟ್ಟು, ತನ್ನ ನಡತೆಯಿಂದ ಈ ಲೋಕದಲ್ಲಿ ದೊಡ್ಡ ಸ್ಥಿತಿಗಿಂತ ಹೆಚ್ಚಿನ ವಿಷಯಗಳುಂಟೆಂತಲೂ, ಹಣಕೂಡಿಸುವದಕ್ಕಿಂತ ಹೆಚ್ಚಿನ ಅಭಿಲಾಷೆಯುಂಟೆಂತಲೂ, ತೋರಿಸಿದನು. ಅವನು ತನ್ನ ರೀತಿಗಳಿಂದಲೂ, ವಿಚಾರಗಳಿಂದಲೂ, ನಿಜವಾಗಿ ದೊಡ್ಡ ಮನುಷ್ಯನಿದ್ದನು. ಅವನು ಧೈರ್ಯಶಾಲಿಯೂ, ಸನ್ಮಾನಾರ್ಹನೂ, ಉದಾರ ಮನಸ್ಸಿನವನೂ ಇದ್ದು, ಸ್ವತಃ ಪರರಿಗೆ ಮಾರ್ಗ ತೋರಿಸ ಸಮರ್ಥನಾಗಿದ್ದಾಗ್ಯೂ, ಸುಲಭವಾಗಿ ಪರರನ್ನು ಹಿಂಬಾಲಿಸುವಂಥವನೂ, ಸ್ವತಃ ಪರರಿಗೆ ಆಗ್ರಹ ಮಾಡುವವನಿದ್ದಾಗ್ಯೂ, ಸುಲಭವಾಗಿ ಪರರ ಆಗ್ರಹವನ್ನು ನಡಿಸುವವನೂ, ಅತಿಶಯವಾಗಿ ತಾಳ್ಮೆಯುಳ್ಳವನೂ, ನಿಶ್ಚಯವುಳ್ಳವನೂ, ಶಕ್ತಿಯುಳ್ಳವನೂ ಇದ್ದನು. ಅವನು ಇಪ್ಪತ್ತೆರಡು ವರ್ಷದವನಾದಾಗ ಮಿರಿಸದೊಳಗಿ

ನ ಮಹಾ ವಿದ್ಯಾಲಯದಲ್ಲಿ ತತ್ವಜ್ಞಾನ ಕಲಿಸುವ ಶಿಕ್ಷಕ ನಾಗಿದ್ದನು. ಅಲ್ಲಿ ಕ್ನೇವಿಯರನು ಲಾಯೋಲಾ ಎಂಬವನ ಸ್ನೇಹಿತನೂ, ಜೆತೆಗಾರನೂ ಆದನು. ಮುಂಪೆ ಸ್ವಲ್ಪ ಕಾಲಬೊಳಗೆ ಅವನು ಹೊಸ ಮತಕ್ಕೆ ಕೇರಿದವರಾದ ಯೂತ್ರಸ್ಥರ ಮೊದಲಿನ ಚಿಕ್ಕ ಸಮುದಾಯವನ್ನು ರೋಮು ಪಟ್ಟಣಕ್ಕೆ ಕರೆಕೊಂಡು ಹೋದನು.

ಪೋರ್ತುಗೀಸ ದೇಶದ ಅರಸನಾದ ಜೆ ನೇ ಜಾನನು ತನ್ನ ವಶದಲ್ಲಿದ್ದ ಹಿಂದು ದೇಶದ ಭಾಗದಲ್ಲಿ ಖ್ರಿಸ್ತಿ ಧರ್ಮವನ್ನು ಸ್ಥಾಪಿಸಬೇಕೆಂದು ನಿಶ್ಚೈಸಿ, ಆ ಕೆಲಸಕ್ಕೆ ಮೊದಲು ಬೊಬಾಡಿಲ್ಲನೆಂಬವನನ್ನು ನೇಮಿಸಿದನು. ಆದರೆ ಅವನು ಬೇನೆಯಿಂದ ಆ ಕೆಲಸದ ಮೇಲೆ ಹೋಗುವದಕ್ಕೆ ಅಸಮರ್ಥನಾದದರಿಂದ ಅವನ ಸ್ಥಳದಲ್ಲಿ ಕ್ನೇವಿಯರನನ್ನು ನೇಮಿಸಿದನು. ಆದದರಿಂದ ಅವನು ತನ್ನ ಹರಕ ನಿಲುವಂಗಿಯನ್ನು ಹೊಲಿದು ಘಟ್ಟಿಮಾಡಿಕೊಂಡು ನಿತ್ಯದಲ್ಲಿ ನಡೆಯುವ ಪ್ರಾರ್ಥನೆಗಳ ಟಿಪ್ಪಣಿಯು ವಹಿಯು ಹೊತ್ತಾಗಿ ಜೇರೆ ಯೇನು ಸಾವಮಾನು ಸಂಗಡಲೆ ತೆಗೆದುಕೊಳ್ಳದೆ, ಶೀಘ್ರವಾಗಿ ಲಿಸಬನ ಪಟ್ಟಣಕ್ಕೆ ಹೋಗಿ, ಅಲ್ಲಿಂದ ಹಿಂದು ದೇಶಕ್ಕೆ ಹೊರಟನು. ಅವನು ಯೋರಿದ ಹಡಗದಲ್ಲಿ ಗೋವೆಯ ಗವರ್ನರನೂ, ಆ ಪಟ್ಟಣವನ್ನು ಕಾಪಾಡುವದಕ್ಕೋಸ್ಕರವಾಗಿ ಕಳುಹಿಸಲ್ಪಟ್ಟ ಹಿಂದು ಸಾವಿರ ಜನ ಶಿಪಾಯಿಗಳೂ ಇದ್ದರು. ಆ ಹಡಗದಲ್ಲಿ ಕ್ನೇವಿಯರನಿಗೆ ಒಂದು ಕೋಣೆಯನ್ನು ಕೊಟ್ಟಿದ್ದಾಗ್ಯೂ ಅವನು ಗೋವೆಗೆ ತಲಪುವ ವರೆಗೂ ಅಂಬಿಗರ ಸಂಗಡ ಊಟ ಮಾಡುತ್ತಲೂ ರಾತ್ರಿಯಲ್ಲಿ ಬೈಲೊ

ಳಗೆ ಹಗ್ಗದ ಸುರುಳಿಗಳಿಗೆ ತಲೆಕೊಟ್ಟು ಮಲಗುತ್ತಲೂ ಇದ್ದನು. ಇದಲ್ಲದೆ ಅವನು ಅಂಬಿಗರಿಗೆ ಅವಶ್ಯಕವಾಗಿದ್ದ ಒಡಿವೆಗಳನ್ನು ಕೊಡುತ್ತಲೂ, ಅವರ ಮನೋರಂಜನಕ್ಕೋಸ್ಕರವಾಗಿ ಹೊಸ ಹೊಸ ಆಟಗಳನ್ನು ತೆಗೆಯುತ್ತಲೂ ಅವರಲ್ಲಿ ಯಾರಿಗಾದರೂ ಆರೋಗ್ಯವಿಲ್ಲದಿದ್ದರೆ ಔಷಧೋಪಚಾರಗಳನ್ನು ಮಾಡುತ್ತಲೂ, ಇದ್ದ ಕಾರಣ ಅವರ ಅಂತಃಕರಣವನ್ನು ಪೂರ್ಣವಾಗಿ ಸಂಪಾದಿಸಿಕೊಂಡು, ತನ್ನ ಬಗ್ಗೆ ಅವರಲ್ಲಿ ಒಳ್ಳೇ ಪೂಜ್ಯಬುದ್ಧಿಯನ್ನು ಉಂಟು ಮಾಡಿದನು.

NOTICES.
ನೋಟೀಸುಗಳು.

———000———

ದಕ್ಷಿಣ ಭಾಗದೊಳಗಿನ ಡಿ. ಇನಸ್ಪೆಕ್ಟರರಿಗೆ—
ಸರಕ್ಯೂಲ್ಲರು.

ಯಾದಸ್ತ

ಟ್ರೇನಿಂಗ ಕಾಲೇಜಿಕ್ಕೆ ಹೋಗುವದಕ್ಕೆ ಅಥವಾ ಟ್ರೇನಿಂಗ ಕಾಲೇಜಿದ ಸರಟಿಫಿಕೇಟಿದ ಪರೀಕ್ಷೆ ಕೊಡುವದಕ್ಕೆ ಅಪೇಕ್ಷೆಯುಳ್ಳ ಅನ್‌ಟ್ರೇನ್‌ಡ ಮಾಸ್ತರರು ತಮ್ಮ ಹಿಪೂಡಿ ಇನಸ್ಪೆಕ್ಟರವರ ಮೂಖರ್ತು ನಮ್ಮ ಕಡಿಗೆ ಅರ್ಜಿಯು ಮಾಡಬೇಕು. ಟ್ರೇನಿಂಗಕಾಲೇಜಿಕ್ಕೆ ಹೋದದರಿಂದ ವಗಾರ ಮತ್ತು ಅಲಾವನ್ಸಗಳ ಬಗ್ಗೆ ಆಗುವಂಥ ಲಾಭಗಳನ್ನು ಅಪೇಕ್ಷಿಸದೆ ತಮಗೆ ಸದ್ಯಕ್ಕೆ ಇರುವ ಸಗಾರಕ್ಕೆ ಸಂತುಷ್ಟರಾಗಿದ್ದಂಥ ಮಾಸ್ತರರು ತಮ್ಮ ಕೆಲಸ ನಡಿಸಲಿಕ್ಕೆ ಯೋಗ್ಯರೆಂತಲೂ, ಒಳ್ಳೇ ನಡನುಡಾವಳಿ

ಯುಳ್ಳವರೆಂತಲೂ, ನಮಗೆ ಕಂಡು ಬಂದರೆ ಅವರನ್ನು ನಾವು ಟ್ರೇನಿಂಗ ಕಾಲೇಜಕ್ಕಾಗಲೀ ಅಲ್ಲಿ ಸರಟೀಫಿಕೇಟ ಪರೀಕ್ಷೆಗಾಗಲೀ, ಕಳಸಲಿಕ್ಕಿಲ್ಲ. ಬಿ. ಇನಸ್ಪೆಕ್ಟರರು ಮೇಲಿನವಕ್ಕೆ ಅನುಸರಿಸಿ ಮೂಸ್ತರ ಜನರ ಸಿಫಾರಸು ಮಾಡಬೇಕು.

ಮು. ಹಮುಬಂಡಿ
ದಿಕಂಬರಾವ್‌ಜಿ

(Signed) W. A. Russell.
ಎ. ಇ. ದಕ್ಷಿಣಭಾಗ.

ಧಾರವಾಡ ಜಿಲ್ಲೀದೊಳಗಿನ ಹೂವತ್ತು ಸ್ಕೂಲ ಮೂಸ್ತರರಿಗೆ—

ಧಾರವಾಡ ಜಿಲ್ಲೀದ ಡಿಪೂಟಿ ಎಜ್ಯುಕೇಶನಲ್ ಇನಸ್ಪೆಕಟರ ಇವರ ಕಡಿಂದ ಬರೆದು ತಿಳಿಸುವದೇನಂದರೆ;— ಈಗ ನೀವು ದರ ತಿಂಗಳಿಗ ಕಳುಹಿಸುವ ಮಾಶಿಕ ಪತ್ರಿಕೆಗಳು ಮತ್ತು ಹಜರೀ ರಿಜಿಷ್ಟ್ರರ ಇವುಗಳ ನಮೂನೆಗಳು ಧಾರವಾಡ ವೈತ್ತಳಾವಖಾನೆಯಲ್ಲಿ ಛಾಪಿಸಿದ್ದವು ಶಿಗುವವು. ಆದರೆ ನಿಮಗೆ ಬರೆಯುವ ಮುಂತಾದ ಶ್ರಮವಿಲ್ಲದೆ ಸ್ವಲ್ಪ ಕಿಮ್ಮತ್ತಿನಲ್ಲಿ ಈ ಪ್ರತಿಗಳು ಶಿಗುವವು. ಆದ್ದರಿಂದಾ ನೀವು ಧಾರವಾಡ ವೈತ್ತಳಾವಖಾನೇದ ಮ್ಯಾನೇಜರ ಇವರ ಕಡಿಗೆ ನಿಮ್ಮ ಸಾಲಿಯ ಸಾದೀಲವಾರ ಹಣದ ಪೈಕಿ ಹಣ ಕಳುಹಿಸಿ ಸದರಿ ನಮೂನೆಗಳನ್ನು ತರಸಿಕೊಳ್ಳುವ ತಜವೀಜು ಮಾಡರಿ. ತಿಳಿಯುವದು.

ತಾ. ೨೬ ನವಂಬರ
ಸನ್ನ ೧೮೭೫ ಇಸವಿ.

Chanbassappa B.
Dharwar.
ಬಿ. ಎ ಇ. ಜಿಲ್ಲಾ ಧಾರವಾಡ.

CORRESPONDENCE.

ಪತ್ರವ್ಯವಹಾರವು.

ಮೆಹೆಬೂಬನ ರಾವಸಾಹೇಬ ದಕ್ಷಿಣಭಾಗದ ಕನ್ನಡಶಾ
ಲಾಪತ್ರ ಕರ್ತರಾದ ಎಡಿಟರಸಚರಣಾರವಿಂದಗಳಿಗೆ—

ನೀವಕನು ಮಾಡುವ ವಿನ್ನಹವೇನಂದರೆ, ಕೆಳಗೆ ಬ
ರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಮನೋಹರವಾದ
ಮಾಸಪತ್ರಕದಲ್ಲಿ ಛಾಪಿಸಿ ಪ್ರಸಿದ್ಧಿಪಡಿಸಿರೆಂದು ಬಹು ವಿ
ಧಾತ್ಯಾಪೇಕ್ಷೆಯನ್ನು ಧರಿಸಿದ್ದೇನೆ.

ಲೆಕ್ಕವು.

೫ ಕೆಲಪು ಮನುಷ್ಯರು ಯೇಸಿಕೆ ದಿವಸಗಳಲ್ಲಿ ಒಂ
ದು ಕೆಲಸವನ್ನು ಮಾಡುತ್ತಾರೆ. ಅವರು ಕೆಲವು ದಿವ
ಸ ಮಾಡಿ ೩ ಮನುಷ್ಯರನ್ನು ಸಹಾಯಕ್ಕೆ ತೆಗೆದು
ಕೊಂಡರೆ ಆ ಕೆಲಸವನ್ನು ೪ ದಿವಸಗಳಲ್ಲಿ ಮುಗಿಸು
ತ್ತಾರೆ. ಮತ್ತು ಯಾವ ದಿವಸ ೩ ಮನುಷ್ಯರನ್ನು ಸ
ಹಾಯಕ್ಕೆ ತೆಗೆದುಕೊಂಡರೋ ಆ ದಿವಸದಕ್ಕಿಂತ ಹೆಚ್ಚು
೨ ದಿವಸ ಕೆಲಸವನ್ನು ಮಾಡಿ ೨೦ ಮನುಷ್ಯರನ್ನು ನಿ
ಟ್ಟರೆ ಆ ಕೆಲಸವು ೧೫ ದಿವಸಗಳಲ್ಲಿ ಮುಗಿಯುತ್ತದೆ.
ಮತ್ತು ಯಾವ ದಿವಸ ಬಿಟ್ಟರೋ ಆ ದಿವಸಕ್ಕಿಂತ ಹೆಚ್ಚು
೩ ದಿವಸ ಕೆಲಸ ಮಾಡಿ ೪ ಮನುಷ್ಯರನ್ನು ಸಹಾಯಕ್ಕೆ
ತೆಗೆದುಕೊಂಡರೆ ೧೪ ದಿವಸಗಳಲ್ಲಿ ಆ ಕೆಲಸವು ಮುಗಿ
ಯುತ್ತದೆ. ಆವರೆ ಮೊದಲಿನ ಮನುಷ್ಯರು ಯೆಷ್ಟು
ಮಂದಿ ಅವರು ಯೆಷ್ಟು ದಿವಸಗಳಲ್ಲಿ ಆ ಕೆಲಸವನ್ನು
ಮುಗಿಸುತ್ತಿದ್ದರು. ಹಾಂಗು ಯೆಷ್ಟು ದಿವಸದ ಮೇಲೆ

ತೆಗದುಕೊಂಡರು.

ಗೆ ಬಹು ಚಮತ್ಕಾರವಾಗಿ ಕಂಡು
ಪ್ರಿಯ ಬಾಂಧವರಾದ ಯಾವತ್ತು
ಅಸಿಷ್ಟಂಟರು ಇದನ್ನು ತ್ವರಾ
ಮಾಡಿ ಯಾವತ್ತು ಸಾಲಿಗಳೊಳಗಿ
ನ ವಿದ್ಯಾರ್ಥಿಗಳಿಗ ಸದಾ ಚನ್ನಾಗಿ ಜ್ಞಾನವಾಗುವಂತೆ ಬ
ಹು ಸರಸ ರೀತಿಯಿಂದಾ ಬರೆದು ಕಳುಹಿಸುವಿರೆಂದು
ತುಂಬಾ ಅಪೇಕ್ಷೆಯುಳ್ಳವನಾಗಿದ್ದೇನೆ ಇಂತಿ ವಿಂನಃ
ಮು. ಬಂಕಾಪೂರ } ಸಹಿ ಅಪ್ಪಯ್ಯಾ ಚನವೀರಯ್ಯಾ ಬ್ಯಾ
ತಾ. ೫।೩।೭೬ } ಗಲೇರಿ ಫ. ಅ. ಮಾ. ಶಾ. ಬ.

ರಾವ ಸಾಹೇಬ ಕನ್ನಡ ಶಾಲಾಪತ್ರ ಕರ್ತಾರಿಗಳಿಗೆ—

ಅತಿನಮ್ರತೆಯಿಂದೆರಗಿ ಬೇಡಿಕೊಳ್ಳುವದೇನಂದರೆ—
ನೋಜೆ ಹಾರಿಬೀಡಿ ಹೊಂಗಲದ ಶಾಲಾಪಂಚರಾದ ಹಣ
ಮಪ್ಪ ಸಾವಕಾರ, ಮಲ್ಲಪ್ಪ ಕುಲಕರ್ಣಿ, ಇರಸಂಗ
ಪ್ಪ ಪಾಟೀಲ, ಸಂಗಪ್ಪ ಪತ್ತಾರ ಇವರು ತಮ್ಮ ಖಾಸ
ಗಿ ಕೆಲಸದ್ದಶಿಯಿಂದ ಇಲ್ಲಿಗೆ ತಾರೀಖು ೫ ನೇ ಮಾ
ಡಿ ಅಗಟಂಬರ ಸನ್ನ ಇ೮೭೫ ಇಪ್ಪ ದಿವಸಾ ಬಂದು ತಾ
ರೀಖ ೬ ನೇ ದಿವಸಾ ಪ್ರಾತಃಕಾಲಕ್ಕೆ ಶಾಲಾ ನೋಡಬೇ
ಕೆಂಬುವಿತ್ಸುಕತಾ ಪುಟ್ಟಿ ಸದರಿ ಪಂಚ ಜನರು ಶಾಲೆಗೆ
ಬಂದು ಹುಡುಗರ ಪರೀಕ್ಷೆಯನ್ನು ತೆಗದುಕೊಂಡು ಮಾ
ಸ್ತರ ರಂಗೋ ಬಾಳಾಜಿ ಇವರು ಪುಷ್ಕಾರಿ ಇದ್ದು ಹುಡು
ಗರಿಗೆ ಚನ್ನಾಗಿ ಕಲಿಸಿದ್ದಾರೆಯೆಂದು ಹಾಜರಿ ರಿಜಿಷ್ಟರದ
ಲ್ಲಿ ಷರಾ ಬರದಿರುತ್ತಾರೆ.

ಹುಡುಗರ ಓದಬರಿಯೋಳ್ಗೆ ಕವಿತಾದರ್ಥ ಹೇಳೋಳ್ಗೆ ವ್ಯಾಕರ್ಣ ಲೆಕ್ಕ ಮುಂತಾದ್ದು ಮಾಡೋದು ನೋಡಿ, ಬಹಳ ಸಂತೋಷ ಪಟ್ಟು, ಆ ರೂಪಾಯಿದ ಬಾಳಿಹಣ್ಣು ತರಿಸಿ ಸ್ವಲ್ಪ ವೇಳೆ ಒಳ್ಳೇ ಉಪದೇಶದ ಸಂಭಾಷಣೆ ಮಾಡಿ, ದರ ಒಬ್ಬ ಹುಡುಗನಿಗೆ ಎರಡೆರಡು ಹಣ್ಣು ಭಕ್ಷೀಸ ಕೊಟ್ಟದ್ದು ಅಲ್ಲದೆ ಪರೀಕ್ಷೆ ನೋಡಲಿಕ್ಕೆ ಬಂದ ಜನರಿಗೆ ಸಹ ಕೊಟ್ಟರು. ಸದರೀ ಪಂಚ ಜನರಂತೆ ಎಲ್ಲಾ ಪಂಚ ಜನರು ತಮ್ಮ ತಮ್ಮ ಶಾಲೆಗೆ ದರ ತಿಂಗಳಿಗೆ ಡೋಗಿ ಹುಡುಗರ ಪರೀಕ್ಷೆ ತೆಗೆದುಕೊಂಡು, ಹುಡುಗರಿಗೂ, ಮಾಸ್ತರರಿಗೂ, ಉತ್ತೇಜನ ಕೊಟ್ಟು, ತಮ್ಮ ಪಾಲಿಗೆ ಕೀರ್ತಿ ತೆಗೆದುಕೊಳ್ಳಬೇಕೆಂದು ನನ್ನ ವಿನ್ನಪವದೆ.

ಎಡೀಟರ ಮಹಾರಾಯರೇ ಈ ಮೊದಲಾವರ್ತಿ ಮತಪತ್ರಕದಲ್ಲಿ ಸ್ಥಳಕೊಡದೀತೆಂದು ಪೂರ್ಣಾಶೆಯುಳ್ಳವನಾಗಿದ್ದೇನೆ ಇಂತಿ ವಿನ್ನಪ.

ತಾರೀಖು ೭ನೇ } ರಂಗೋ ಬಾಳಾಜಿ ಕು
ಮಾಹೆ ಅಗಟೋಬರ } ಲಕರ್ಣಿ ಹೆಡ್ಡ ಮಾಸ್ತರ
ಸನ ೧೮೮೫ನೇ ಇಸ್ವಿ. } ಇಟ್ಟಗಿ.

ರಾ. ರಾ. ಕನ್ನಡ ಶಾಲಾಪತ್ರಕರ್ತರಿಗೆ—

ವಿನಂತಿ ವಿಶೇಷ.

" ಹಿಂದೂ ಜನರ ಹುಚ್ಚುತನವು. "

ನಮ್ಮ ದೇಶೀಯ ಹಿಂದುಸ್ಥಾನದ ಹಿಂದೂ ಜನರ ನಡತೆಯು ಬಹು ಕೀಳಾಗಿರುವದು. ಅದು ಹ್ಯಾಗಂದರೆ—

ಹಿಂದೂ ಜನರಲ್ಲಿ ಮುಖ್ಯವಾಗಿ ಬ್ರಾಹ್ಮಣರೂ, ಮಾ

ಗೂ ಶೂದ್ರರೂ, ಎಂದು ಎರಡು ಭೇದದ ಜಾತಿಗಳುಂಟು. ಇವುಗಳಲ್ಲಿ ಅನೇಕ ವಿಧದ ಜಾತಿಗಳಾಗಿದ್ದಾವೆ. ಇರಲಿ; ಬ್ರಾಹ್ಮಣ ಜಾತಿಯಲ್ಲಿ ಕೋಕಣಸ್ಥರೂ, ದೇಶಸ್ಥರೆಂದು ಎರಡು ಭೇದಗಳುಂಟು. ಇವರೊಳಗೆ ದೇಶಸ್ಥ ಬ್ರಾಹ್ಮಣರಲ್ಲಿ ಬಹಳ ಹುಚ್ಚಾತನಗಳಿವೆ. ಇವರು ತಂದು ಸ್ವಾತ ಕಲ್ಯಾಣದಕಡಿಗೂ, ಹಾಗೂ ಧರ್ಮದಕಡಿಗೂ, ಬಹು ದುರ್ಲಕ್ಷ ಮಾಡುವರು. ಇವರು ತಮ್ಮ ತನ್ನು ಗಂಡು ಮಕ್ಕಳಿಗೂ, ಹೆಂಣು ಮಕ್ಕಳಿಗೂ, ವಿದ್ಯೆ ವರಿರುವಾಗ್ಯೆ ಚಂನಾಗಿ ಶಿಕ್ಷಿಸುವದಿಲ್ಲಾದ್ದರಿಂದ ಅವರು ಮೂರ್ಖರೂ, ದುರಾಚಾರಿಗಳೂ, ಆಗುತ್ತಾರೆ. ಗಂಡು ಹುಡುಗರನ್ನು ಕೀವ್ರವಾಗಿ ಮೊದಲು ಸಾಲಿಗೇ ಹಾಕುವದಿಲ್ಲಾ. ಕದಾಚಿತ್ ಹಾಕಿದರೆ ಎಂಟು ಹತ್ತು ವರ್ಷದವರಾದ ಮೇಲೆ ಹಾಕುತ್ತಾರೆ. ಆ ಹುಡುಗರು ಸಾಲಿಗೆ ಹೋಗಲಿಕ್ಕೆ ಮಲ್ಲಿಂದ ಹಟಮಾಡಿ ಅಳುತ್ತಾ ಕೂಡುತ್ತಾರೆ. ಆಗ ಅವರ ತಾಯಿ ತಂದೆಗಳು ಶಿಟ್ಟು ಮಾಡಿ ತಂದು ಸಾಲಿಗೆ ಹಾಕದೆ ಆ ಹುಡುಗರಿಗೆ ಪ್ರೀತಿಮಾಡಿ ಅವರು ಬೇಡಿದ್ದಂನು ತಂದು ಕೊಟ್ಟು; ಅಪ್ಪಾ? ವಲ್ಲದಿದ್ದರೆ ನುನ್ಯಾಗೆ ಇರು, ಅಥವಾ ಆಟಲಿಕ್ಕೆ ಹೋಗು ಎಂದು ಕಳುಹಿಸುತ್ತಾರೆ. ಸಂಣಹುಡುಗರಿಗೆ ನುಂಜಾನೆ ಎದ್ದು ಮಾರಿ ತೊಳಿಸದೆ, ಶಂಚಕ್ಕೆ ಕಳುಹಿಸದೆ ಹಾಸಿಕೆಯಿಂದ ಎಬ್ಬಿಸಿದೂಡಲೇ ಮೊದಲು ತಿನ್ನಲಿಕ್ಕೆ ಹಾಕುತ್ತಾರೆ. ಅಲ್ಲಿಂದ ತಾಸು ಎರಡು ತಾಸು ಹೊತ್ತು ಏರಿದ ಮೇಲೆ ತಾವೇ ಸಾಲಿಗೆ ಕರೆಕೊಂಡು ಬಂದು ಕಳುಹಿಸಿ ಪಂತೋಜಿಗೆ ನಮ್ಮ ಹುಡುಗರನ್ನು ಬಡಿಯಬೇಡಿರಿ. ಹಾಗೂ ಕಲಿಸುವ ತಸ್ದೀನೂ ಮಾಡ

ಬೇಡಿರಿ, ಕಲಿತಪ್ಪ ಕಲಿಯಲಿ.? ಎಂದು ಹೇಳಿ ಹೋಗು
ತ್ತಾರೆ. ಈ ಪ್ರಕಾರ ಆ ಪ್ರಾಣಿಗಳನ್ನು ದೊಡ್ಡವರಾಗು
ವವರೆಗೂ ಪ್ರೀತಿಯಿಂದ ಕಾಪಾಡಿ ಬೆಳಿಸುತ್ತಾರೆ. ಆ
ವರು ಹದಿನಾರು ವರ್ಷದವರಾದ ಮೇಲೆ ಸಾಲಿ ಬಿಟ್ಟು
ದುಷ್ಕರ್ಮಗಳಿಗೆ ಪ್ರವೃತ್ತರಾಗುತ್ತಾರೆ. ವಿದ್ಯಾವಂತರೂ
ಏನೂ ಬರುವದಿಲ್ಲಾ. ಅಲ್ಲದಂತ ತಾಯಿ ತಂದೆಗಳು ಅವ
ರಿಗೆ ದುಷ್ಟ ಬುದ್ಧಿಯನ್ನು ಬಿಡೆಂದು ಹೇಳಿದರೆ ಅವರಿಗೆ
ತಿರಿಗೆ ಕಡಕು ಮಾತುಗಳನ್ನಾಡಿ ಅಸ್ತಿಪ್ಪ ಮಾಡುತ್ತಾ
ರೆ. ಹೀಗೆ ಆಗಲಿಕ್ಕೆ ಕಾರಣಂಬೇನಂದರೆ ಚಿಕ್ಕತನದಲ್ಲಿ
ಶಿಕ್ಷಿಸಬೆ ಅಂಟ್ಟೀದಿಂದ ಬೆಳಸಿದ ಫಲವು.

ತಾ॥ ಇಪಿ ದಿಗಿಂಬರ ಸನ್
ಇಂಪಿಳಿಗೆ ಇಸ್ವಿ ೧೯೦೯
ತಾ॥ ಗದಗ"

"ಪ್ಲೇ"

ಶಾಲಾ ಅವಿಷ್ಕಾರ.

ಮೆ. ರಾ. ಪೋಲೀಸ ಇನಸ್ಪೆಕ್ಟರ ಜಿಲ್ಲಾ ಬೇಳಗಾ
ವ ಇವರು ಬಂದು ವಿದ್ಯಾರ್ಥಿಗಳ ಪರೀಕ್ಷೆ ತೆಗೆದುಕೊಂ
ಡು, ಸಾಲಿಯು ವಿಶೇಷ ಉತ್ತಮ ಸ್ಥಿತಿಯನ್ನು ಹೊಂದ
ಬೇಕೆಂದು ತುಂಬಾ ಆಪೇಕ್ಷೆಯಿಂದ ತಾ. ೫೦ ನವಂಬರ
ದಿವಸ ಸಭೆ ಮಾಡಿ ಮಕ್ಕಳನ್ನು ಸರಕಾರೀ ಶಾಲೆಯಲ್ಲಿ
ಹಾಕಿ ವಿದ್ಯೆಯನ್ನು ಕಲಿಸಿದರೆ ಅದರಿಂದುಂಟಾಗುವ ಲಾಭ
ಗಳವಿಷಯವಾಗಿ ಈ ಊರ ಗ್ರಾಮಸ್ಥರಿಗೆ ಬಹುಪ್ರಕಾರ
ವಾಗಿ ಹೇಳಿದರು. ಈ ಸದ್ಗುಣಗಳ ಕೋರಿಕೆಯು ಕಡೆ
ಗಾಣುವದೆಂದೋ ಎಂದು ಕೋರುತ್ತೇನೆ.

ಶಾಲಾಸುಧಾರಣೆಯ ವಿಷಯ ಅವರು ಯಾವ ಪ್ರಕಾರವಾಗಿ ಮೇಹನತ್ತು ತೆಗದುಕೊಳ್ಳುತ್ತಾರೋ ಹಾಗೆ ಅನ್ಯ ಧೋರಣಗಳು ತೆಗದುಕೊಂಡರೆ ಬಹು ಪ್ರಕಾರವಾಗಿ ಆ ದಯಾಳುಗಳ ಕೀರ್ತಿಯನ್ನು ಹೊಗಳಲಿಕ್ಕೆ ಎಷ್ಟ ಮಾತ್ರವೂ ಅಡ್ಡಿ ಇರಲಾಗದೆಂಬದು ಸ್ಪಷ್ಟವೇ.

ರಾವಸಾಹೇಬ ಪ. ಕರ್ತೆಯರಿಗೆ ವಿ. ವಿ. ಮೇಲೆ ಕಾಣಿಸಿದ್ದಕ್ಕೆ ಸ್ಥಳದೊರಿಯುವದು ತಮ್ಮ ಹಿತಾಧೀನವು.

ತಾ. ೭೬ ದಿಶೆಂಬರ ೧೮೮೫ ಇ. } ವಿಠಲ ನಾರಾಯಣ ಕಣಗಲಿ
ಸ್ಕೂಲ ಮಾಸ್ತರ.

ರಾ. ರಾ. ಕನ್ನಡ ಶಾಲಾಪತ್ರ ಕರ್ತರಿಗೆ—

ವಿ. ವಿ. ಕೆಳಗೆ ಬರೆದು ಕಳುಹಿಸಿರುವ ನಾಲ್ಕು ಪಂಕ್ತಿಗಳಿಗೆ ತಮ್ಮ ಸುಂದರವಾದ ಸಂಚಿಕೆಯಲ್ಲಿ ಮುದ್ರಿಸುವದಕ್ಕೆ ಸ್ವಲ್ಪ ಸ್ಥಳದೊರಿಯುವದೆಂದು ತುಂಬಾ ಕೋರುತ್ತೇನೆ.

ಸಂದಗಡದ ವರ್ಣನೆ

॥ವಾರ್ತಿಕವಪ್ಪದಿಯು॥

ಬೆಳಗಾವಿಜಿಲ್ಲೇದ ತೆಂಕಣದೆಶೆಯೊಳಪರ್ ಕಳೆಯುಳ್ಳನಂದಗಡವೆಂಬ ಮಹಪೇವಪುರ, ಪೊಲಗಳಿಂಬನಗಳಿಂಸವ್ವಾರಿಯಿಂಮನೆಗಳಿಂ ಪಕ್ಷುಪಕ್ಷಿಗಳಿಂದಲೂ ॥ ಫಲಗಳಿಂವೆಪಹಾರಮುಂತಾದ ಬಗೆಬಗೆಯ, ಕಲಾಕೌಶಲ್ಯಗಳಿಂಸಜ್ಜನರುಗಳಿಂದ, ನೆಲೆತೀವಿಪಡುವವೇಕೆಗೊಡಿಯನಾಪ್ರರದಂತೆ ಪೊರದುದೀನಂದಗಡಪ್ಪ॥೬॥

ಈ ಗ್ರಾಮವು ಬೆಳಗಾವಿಯಿಂದ ದಕ್ಷಿಣಕ್ಕೆ ಸುಮಾರು ಇಪ್ಪತ್ತೈರಡು ಮೈಲುಗಳ ಮೇಲೆ ಖಾನಾಪುರದಿಂದ

ಧಾರವಾಡಕ್ಕೆ ಹೋಗುವ ರಾಜಬೀದಿಯಲ್ಲಿ ಅದೆ. ಸಂನ
೧೮೦೫ ಇಸ್ವಿಯಲ್ಲಿ ಕೆತ್ತೂರ ದೇಶಕ್ಕೊಡೆಯರಾದ ಮ
ಹರಾಜ ರಾಜಶ್ರಿ ಮಲಸರ್ಜಾ ಯಂಬುವ ನೃಪರು ಈ ನಂ
ದಗಡವನ್ನು (ಮಹದೇವಪುರ) ವನ್ನು ಸ್ಥಾಪಿಸಿದ್ದಾರೆ.
ಈ ಭೂಪಾಲಕರ ಕಾಲದಲ್ಲಿ ಈಗಿನಂತೆ ಈ ನಂದಗಡವು
ಪ್ರಶಿದ್ಧವಾಗಿದ್ದಿಲ್ಲ. ಈಗಲೀ ಊರು ವಿಸ್ತಾರವಾಗಿಯೂ,
ಶೋಭಾಯಮಾನವಾಗಿಯೂ, ಈಕ್ಷಿಸುವವರ ಕಣ್ಣಿಗೆ ಬ
ಹಳ ಸಂಪಾಗಿಯೂ ಕಾಣುತ್ತದೆ. ಮತ್ತು ದಿನಾಲು ದೊ
ಡ್ಡ ಸಮಾರಂಭದ ಹಾಗೆ ವ್ಯಾಪಾರವು ನಡೆದಿರುತ್ತದೆ. ಅ
ದು ಹ್ಯಾಗಂದರೆ, ದಿನಂಪ್ರತಿಯಲ್ಲಿ ಪರಗ್ರಾಮದ ಸರಕು
ಗಳು ಗಣನೆಯಿಲ್ಲದೆ ಬರುತ್ತವೆ. ಇಲ್ಲಿಂದ ಪ್ರಶಿದ್ಧ
ಸ್ಥಳಗಳಿಗೆ ಕೊರತೆಯಿಲ್ಲದೆ ಸರಕುಗಳು ಹೋಗುತ್ತವೆ.
ಆದ್ದರಿಂದ ಬೆಳಗಾಂವಿ ಜಿಲ್ಲೆಯೊಳಗೆಲ್ಲ ಈ ನಂದಗಡದ
ವ್ಯಾಪಾರದ ಹಾಗೆ ಯಾವ ಗ್ರಾಮದಲ್ಲಿಯಾದರೂ, ಯಾವ
ತಾಲೂಕಿನಲ್ಲಿಯಾದರೂ ಇರಲಿಕ್ಕಿಲ್ಲವೆಂಬುವಂತೆ ತೋ
ರುತ್ತದೆ. ಇಲ್ಲಿಗೆ ಬರುವ ಸರಕುಗಳು ಯಾವವೆಂದರೆ,
ಉಪ್ಪು, ತೆಂಗು, ಅಡಕಿ, ಮೆಣಸಲಾವ ಫಲಗಳೂ, ಗೋ
ದಿ, ಕಡ್ಲಿ, ಮುಂಗ್ಯಾಜೋಳ (ಕೆಂಪು ಜೋಳ) ಮುಂತಾ
ದ ಧಾನ್ಯಗಳೂ, ನಾನಾತರದ ರೇಶ್ಮಿಯು ವಸ್ತ್ರಗಳು ಇ
ರುತ್ತವೆ. ಇಲ್ಲಿಂದ ಪರನಾಡುಗಳಿಗೆ ಹೋಗುವ ಪದಾ
ರ್ಥಗಳ್ಯಾವವೆಂದರೆ, ಅಕ್ಕಿ, ಮಂಡಕ್ಕಿ (ಚೂಮರಿ) ಅ
ವಲಕ್ಕಿ, ಕಾಚು, ಎಲೆಗಾಚು ಮುಂತಾದ ಜೀನಸುಗಳನ್ನು
ಹೋಗುತ್ತವೆ. ಈ ಪ್ರಕಾರವಾಗಿ ಅದಲು ಬದಲು ವ್ಯಾ
ಪಾರವು ನಿತ್ಯದಲ್ಲಿ ನಡೆದಿರುತ್ತದೆ. ಇಂತಿಪ್ಪ ವ್ಯಾಪಾ

ರದಿಂದ ನಂದಗಡದ ಸೀಮೆಯು ಬಹು ಸೊಗಸಾಗಿ ಕಾಣುತ್ತದೆ. ಈ ಪ್ಯಾಟೆಯು ಪೂರ್ವಕ್ಕೆ ಹೋದರೆ ಹೆಬ್ಬಾಗಿಲವು ಪ್ರಾಪ್ತವಾಗುತ್ತದೆ. ಈ ದ್ವಾರದ ಹೊರಮಗ್ಗಲಕ್ಕೆ ಹೋಗಲು ಎಡಭಾಗಕ್ಕೂ, ಬಲಭಾಗಕ್ಕೂ, ಕೆರೆಗಳು, ಛತ್ತಿದ ಗದ್ದೆಗಳು, ತೆಂಗು ಮುಂತಾದ ತೋಟಗಳು ಬಹು ರಮ್ಯವಾಗಿ ಕಾಣಿಸುತ್ತವೆ. ಅದು ಹ್ಯಾಗಂದರೆ—

ಕಂದ॥ ಕೆರೆಪಚ್ಚರತ್ನಜೋಲ್। ಕೆರೆತೀರಪೋಳ್ಮಾಮರಂ ತಣ್ಣೆರಲಿಂ॥ ನೆರೆದಬಳಾಕಗಿಳಿಗುಂಬಿನಿಂ।ನಿರಂತರಪೊಳ್ವಾರಿತೀವಿಕಣ್ಗೆಸೆಗುಂ॥೩॥

॥ಭಾವಿನಿಷಟ್ಪದಿ॥

ಅರಲಿಂಕಾಯ್ಗಳಿಂ ಪಣ್ಣಿಂ। ಮರಮುಂಜುಳಮೂದುದ್ಯಾನ।ನೆರಪಣ್ಗಳಿಯಿಂದಸಮ್ಮೃಂಗಾಳಿಯಿಂದಲೂ॥ ಪಿರಿದಲ್ಲಲ್ಲಿ ಕೇದಗಿಯಿಂದ। ಮೆರದಪುರ್ದುಕಮಲಜೆಸಳಿನಿಂ। ಕೆರೆತಟಿಯೋಳ್ತೀವಿತೋಪುರ್ದುದ್ಯಾನೆಸೆಗುಂ॥೪॥

ಈ ಪ್ರಕಾರವಾಗಿ, ಅಗಸಿಯ ಬಾಗಲಿನಿಂದಲೂ, ಶ್ರೀಮದ್ಭಾನಬಸವೇಶ್ವರ ದೇವರ ದೇವಾಲಯದಿಂದಲೂ, ವಸ್ತುಕಾರರ ಸಮೂಹದಿಂದಲೂ, ಅಂದವಾಗಿ ತೋರುವದು. ಇಲ್ಲಿಂದ ಮುಂದಕ್ಕೆ ಸ್ವಲ್ಪ ಪ್ರಯಾಣ ಮಾಡಿದರೆ ಒಂದು ಚಮತ್ಕಾರವಾದ ಸಂಗತಿಯು ಕಂಡುಬರುತ್ತದೆ. ಅದು ಯಾವದೆಂದರೆ, ಅಲ್ಲಿ ಸಂಗೊಳ್ಳಿ ರಾಯಣ್ಣನೆಂಬುವಂಥ ಒಬ್ಬ ಪ್ರಂಡಗೃಹಸ್ಥನಿದ್ದನು. ಈ ಪ್ರಂಡಗಾರನು ಸ್ವಾಮಿ ಭಕ್ತಿಯುಳ್ಳವನಾಗಿ ತನ್ನ ಯಜಮಾನನು ಸ್ಥಾಪಿಸಿದಂಥ ಊರುಗಳಂನು ಸುಲಿಗೆ ಮಾಡುವದು ಬಿಟ್ಟು, ಅನ್ಯ ಗ್ರಾಮಗಳಂನು ಸುಟ್ಟು ಸೂರೆ ಮಾಡುತ್ತಿದ್ದನು.

ಈ ವಿವರವನ್ನು ನಮ್ಮ ಓದಿಯರಾದಂಥ ಆಂಗ್ಲೀಷ್ ಸ
ರ್ಕಾರದವರು ಕೇಳಿ ಈ ಕೊಳ್ಳೆಗಾರನನ್ನು ಹಬ್ಬವು ಪ್ರ
ಯುತ್ನದಿಂದ ಹಿಡಿದು ಬಂಧಿಸಿದರು. ಈ ಪುಂಡನು ಯಮ
ನ ಗೃಹವನ್ನು ಕುರಿತು ತೆರಳುವ ಕಾಲದಲ್ಲಿ ತನ್ನ ಕ
ಳಯಲ್ಲಿರುವಂಥ ಜನರಿಗೆ ಹೀಗೆ ಹೇಳಿರುವನು. ನಾನು
ಮೃತವಾದ ಕೂಡ್ಲೆ ಇದೇ ಸ್ಥಳದಲ್ಲಿ ನನ್ನನ್ನು ಹೂಳ
ಮೇಲೊಂದು ಪಟೆವೃಕ್ಷದ ಕೊಂಬೆಯನ್ನು ಸಜ್ಜರಿ ಮುಂ
ದೆ ಆ ಕೊಂಬೆಯು ಬೆಳೆದು ದೊಡ್ಡ ಮರವಾಗುತ್ತದೆ. ಆ
ವೃಕ್ಷದ ಬುಡಭಾಗದಲ್ಲಿ ನನ್ನ ಹೆಸರಿನಿಂದಲೇ ಒಂದು
ದೇವಾಲಯವನ್ನು ಸ್ಥಾಪನೆ ಮಾಡಿ ದಿನಾಲು ಪೂಜೆಯಂ
ನು ಮಾಡುತ್ತಾ ನಡಿದರೆ ನಿಮ್ಮ ಬೈಕೆಗಳು ಶಿದ್ಧಿಗೆ ಹೋ
ಗುವವು. ಯಂದು ಹೇಳಿ ನರಲೋಕವನ್ನು ಬಿಟ್ಟು ದೇ
ವಲೋಕವನ್ನು ಕುರಿತು ಗಮಿಸಿದನು. ಅವನು ಮಡಿ
ದ ಮೇಲೆ ರಾಯಣ್ಣನು ಹೇಳಿದ ಹಾಗೆ ಆ ಜನರು ಮಾ
ಡಿದರು. ಕಡೆಯಲ್ಲಿ ಆವರವರ ಕಾಂಕ್ಷೆ ಕೈಗೂಡಿ ಬಂ
ದವೆಂದು ಇಲ್ಲಿಯ ವಯೋವೃದ್ಧರು ಹೇಳುತ್ತಾರೆ. ಈ
ಗಲಾದರು ಆತನನ್ನು ಪೂಜೆ ಮಾಡಿಕೊಳ್ಳುತ್ತಾ ನಾಲ್ಕೆಂ
ಟು ಮಂದಿ ಬೈರಾಗಿಗಳಿದ್ದಾರೆ. ಈ ಮಹಾತ್ಮನ ಮ
ಹಿಮೆಗಳ್ಳಾವವೆಂದರೆ ಸಂತಾನವಿಲ್ಲದವರು ಈ ಜಾಗ್ರತೆ
ಯುಳ್ಳವನೆಡೆಗೆ ಬಂದು ಬೇಡಿಕೊಂಡು ಈತನ ಭಸ್ಮವಂ
ನು ಹಚ್ಚಿಕೊಂಡರೆ ಮುಂದೆ ಒಂದು ಸಂವತ್ಸರದೊಳಗಾ
ಗಿ ಮಕ್ಕಳಾಗುತ್ತವೆ. ತಾತ್ಪರ್ಯವೇನಂದರೆ—ಮಕ್ಕ
ಳು ಇಲ್ಲದವರಿಗೆ ಮಕ್ಕಳನ್ನು, ಶಕ್ತಿ ಹೀನರಿಗೆ ಶಕ್ತಿಯು
ನ್ನು, ಯಾರ್ಯಾರ ಇಷ್ಟಗಳೇನುಂಟೋ, ಅವುಗಳಂತು ಶಿ

ದ್ದಿಗೆ ಮುಟ್ಟಿಸುವನು. ಈ ರಾಯಗೋಪುರದ ಮೇಲೆ ಹಬ್ಬಿರುವ ಕೊಂಬೆಯು ದೊಡ್ಡ ಮರವಾಗಿ ರಾಜಬೀದಿಯಲ್ಲಿರುತ್ತದೆ. ಇನ್ನೂ ಈತನ ಚರಿತ್ರೆಗಳು ಬಹಳಷ್ಟಿವೆ. ಅವುಗಳಲ್ಲೀ ಸಂಗತಿಯು ಬಹಳ ಕೌತುಕಾಂಡವಾದ್ದರಿಂದ ಪ್ರಕಟಿಸಿದ್ದೇನೆ. ಪತ್ರವಿಸ್ತಾರವಾದದ್ದಕ್ಕೆ ಕ್ಷಮವೂ ಇರಬೇಕು.

ತಾರೀಖು ೫೧ ನೇ ಅಗಟಂಬರ ಸನ್ನ ೧೮೩೫ ಇಸ್ವಿ. } ಕೃಷ್ಣಾಜಿ ಬಾಳಾಜಿ ಕಿತ್ತೂರ ಕನ್ನಡ ಶಾಲೆಯ ಹೆಡ್ ಮಾಸ್ತರ ನಂದಗಡ ತಾ॥ ಬೀಡಿ.

ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡಿಟರ ಇವರ ಸನ್ನಿಧಾನಕ್ಕೆ

ವಿ. ವಿ. ಏನಂದರೆ ತಮ್ಮ ಕರಪುಟದಲ್ಲಿ ಹುಟ್ಟುವ ಮತ್ತ ಪತ್ರಿಕದಲ್ಲಿ ಕೆಳಗೆ ಬರೆದ ಎರಡು ಶ್ಲೋಕಗಳಿಗೆ ಸ್ಥಳ ಜೊರಿಯುವದೆಂದು ಪೂರ್ಣವಾಗಿ ನಂಬುತ್ತೇನೆ.

॥ಶ್ಲೋ॥ಆರ್ಯಾಹರೇಮಲಯಪೂರುತಮಂದಮಂದಂ।ಕಾಂತಾರತಿಕ್ರಮಜವಾರಿವಿನಾಶಜೇತ್ರೋ॥ ನೋಚೇದಯಂಕಟಕಸೂತ್ರವಿಲೋಕನೇನ। ಘಸ್ಮಿಶ್ಚವಿಷ್ಯತಿಮೃಗಃಬಲುತತಕ್ಷಣೇನ॥೧॥ ಕಾಚಾರುಸ್ಮಿತವಾಖಿರೊವಹತಿಕಿಂಕಂಯಾಂತಿಪಾಪಪ್ರಜಾ। ಕಾದಗ್ಧಾಪವನಾತ್ಮಜೇನಬಲಿನಾಕಿಂಕಾವಸಂಯೋಧನಂ॥ ಕಾವಿಷ್ಣುಪ್ರಮುದಾಮುಪೇಶಪುರತಃಕಂಸಂತ್ಯಜಿಂತಿಸ್ಮಯೋ। ಆರೋಹಾದವರೋಹಣಾಚ್ಚನಿಪುಣೈರೇಕಂವ್ಯಯೋರುತ್ತರಂ ॥೨॥

ಈ ಶ್ಲೋಕದ ಅರ್ಥವು ಚಮತ್ಕಾರವಾಗಿ ತೋರಿದ

ರಿಂದ ತಮ್ಮ ಕಡಿಗೆ ಕಳುಹಿಸಿದ್ದೇನೆ ನಮ್ಮ ಶ್ರೇಷಬಂಧು ಬಾಂಧವರಾದ ಮಾಸ್ತರರೂ ಬೇರೆ ವಿದ್ಯಾರ್ಥಿಗಳೂ ಇದನ್ನು ಚನ್ನಾಗಿ ವಿಂಗಡಿಸಿ ಇದೇ ಪತ್ರದ್ವಾರದಿಂದ ಶಬ್ದಾರ್ಥ ಭಾವಾರ್ಥವನ್ನು ಬರೆದು ತಿಳಿಹಿಸುವರೆಂದು ಅಪೇಕ್ಷೆಯುತ್ತೇನೆ ಇಂತಿ ವಿನ್ನಹ.

ತಾರೀಖು ೫ಲಿ ಮಾಹೆ ಸಪಟಂಬರ ಸಂನ ೧೮೭೫ಗೆ ಇಸ್ವಿ.

ರಂಗೋ ವೆಂಕಟೇಶ ಹೆಡ ಮಾಸ್ತರ ಕುರ್ತಕೋಟೆ ತಾಲೂಕ ಗದಗ ಜಿಲ್ಲಾ ಧಾರವಾಡ.

—ಪತ್ರ ಕಳಿಸುವವರಿಗೆ ಸೂಚನೆ—

೧ ಜೋಂಭಿಕರ—ನಿಮ್ಮ ಪತ್ರ ಬಂದು ಮುಟ್ಟಿತು—ಆದ ಕಾಲಾವಧಿಕ್ಕಿಂತ ಮುಂಚಿತವಾಗಿ ಪತ್ರ ಬಂದಿದ್ದರಿಂದ ಹಾಕಲಿಕ್ಕೆ ಆಗದು.

೨ ಕಣಗಲಿ—ನಿಮ್ಮದೊಂದು ಪತ್ರ ಹಾಕಿರುತ್ತೀವೆ. ತೊಂದುಹಾಕಲಿಕ್ಕೆ ಲಾಯಖ ಇಲ್ಲ.

೩ ಸ್ಕೂಲಮಾಸ್ತರ ಕನ್ನೂರ—ನಿಮ್ಮ ಪತ್ರ ಬಂದು ಮುಟ್ಟಿತು. ಆದರೆ ನೀವು ಬರೆದಂತೆ ಹಾಕಬೇಕಾದ ಕಾಪ ಫಾಪಿಗೆ ಉಪಯೋಗವಿಲ್ಲ, ಅಂದರೆ ಅಂಥ ಅಕ್ಷರ ನಮ್ಮ ಫಾಪಖಾನೆಯಲ್ಲಿಲ್ಲ.